ಶನಿವಾರ, ಜೂನ್ 6, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸಂಭ್ರಮ
ವಿಶ್ವ ಪರಿಸರ ದಿನದ ಪ್ರಯುಕ್ತ ಹುಬ್ಬಳ್ಳಿಯಲ್ಲಿ ಬಾಲಕಿಯೊಬ್ಬಳು ಸಸಿಯೊಂದಿಗೆ ಸಂಭ್ರಮಿಸಿದ ಕ್ಷಣ



ಬೆಡಗು
ಮುಂಬೈನಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ನಟಿ ಶ್ರಿಯಾ ಶರಣ್ ಕಾಣಿಸಿಕೊಂಡಿದ್ದು ಹೀಗೆ...





ವಿಶ್ವ ಪರಿಸರ ದಿನದ ಅಂಗವಾಗಿ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಆವರಣದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಸಿ ನೆಟ್ಟರು. ಕುಲಪತಿ ಪ್ರೊ. ಬಿ.ರಮೇಶ್ ಇದ್ದರು(ಎಡಚಿತ್ರ), ಸದಾಶಿವನಗರದಲ್ಲಿ ನಡೆದ ವೃಕ್ಷಾರೋಪಣಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು

‘ಪರಿಸರ ಸಂರಕ್ಷಣೆ ಯುವ ಸಮೂಹದ ಹೊಣೆ’

ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭವಿಷ್ಯದ ಹಿತದೃಷ್ಟಿಯಿಂದ ವಿದ್ಯಾಸಂಸ್ಥೆಗಳು ಯುವ ಪೀಳಿಗೆಯಲ್ಲಿ ಪರಿಸರ ಜಾಗೃತಿ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಬೇಕಾದ ಅಗತ್ಯವಿದೆ’ ಎಂದು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಪರಿಸರ ಮತ್ತು ಹವಾಮಾನ ಬದಲಾವಣೆ ಅಧ್ಯಯನ ವಿಭಾಗದಿಂದ ಎನ್‌ಎಸ್‌ಎಸ್ ಸಹಯೋಗದಲ್ಲಿ ಸೆಂಟ್ರಲ್ ಕಾಲೇಜಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಉತ್ತಮ ಪರಿಸರ ಮತ್ತು ವಾತಾವರಣ, ಗುಣಮಟ್ಟದ ಶಿಕ್ಷಣ ಹಾಗೂ ಸನ್ನಡತೆಯ ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾಗುವುದೆಂದು ಅಭಿಪ್ರಾಯಪಟ್ಟ ಅವರು, ಪ್ರಕೃತಿ ಪ್ರೇಮದ ಗುಣವನ್ನು ರೂಢಿಸಿ ಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ.ಬಿ.ರಮೇಶ್ ಮಾತನಾಡಿ, ಜಾಗತಿಕ ತಾಪಮಾನ ಮತ್ತು ಹವಾಮಾನ ವೈಪರೀತ್ಯ ಹಾಗೂ ವಾಯು-ಜಲ ಮಾಲಿನ್ಯದ ಪರಿಣಾಮವಾಗಿ ಜೀವ ವೈವಿಧ್ಯತೆಗೆ ಅಪಾಯ ಬಂದೊದಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆಯನ್ನು ತಡೆಗಟ್ಟಿ ಪರಿಸರ ಸಮತೋಲನ ಕಾಯ್ದುಕೊಳ್ಳಲು ಪಣತೊಡುವ ಮೂಲಕ ಭವಿಷ್ಯದ ಬದುಕನ್ನು ಉತ್ತಮಗೊಳಿಸುವತ್ತ ಕಾರ್ಯೋನ್ಮುಖರಾಗುವಂತೆ ಅವರು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ವಿಧಾನ ಪರಿಷತ್ತಿನ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕುಲಸಚಿವರಾದ ಎ. ನವೀನ್ ಜೋಸೆಫ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ. ಬಿ.ಕುಡೇನಟ್ಟಿ, ವಿಭಾಗ ಮುಖ್ಯಸ್ಥರಾದ ಪ್ರೊ.ಪಿ.ಆರ್.ಚೇತನ, ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಲಯನ್ಸ್ ಕ್ಲಬ್ ನಿರ್ದೇಶಕರಾದ ಪ್ರಕೃತಿ ಪ್ರಸನ್ನ ಪರಿಸರ ದಿನಾಚರಣೆಯ ಪ್ರತಿಜ್ಞಾವಿಧಿ ಬೋಧಿಸಿದರು. ಬೇರು ಮತ್ತು ಬೆವರು ಸಾಂಸ್ಕೃತಿಕ ಬಳಗದವರು ಪರಿಸರ ಗೀತೆಗಳನ್ನು ಹಾಡಿದರು.

ಸ್ಯಾಂಕಿ ಕೆರೆ ಉಳಿಸಿ ಅಭಿಯಾನ

ಬೆಂಗಳೂರು: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ವಾಯ್ಸ್ ಆಫ್ ಸದಾಶಿವನಗರ, ಬಿಡಿಎ ಹಾಗೂ ಸಂಜಯ್ ಫೌಂಡೇಷನ್‌ನಿಂದ ಸ್ಯಾಂಕಿ ಕೆರೆ ಅಕ್ಕಪಕ್ಕದ ಜನರಿಗೆ ಸಹಸ್ರಾರು ಸಸಿಗಳನ್ನು ವಿತರಿಸಲಾಯಿತು.

ಸದಾಶಿವನಗರದ 13ನೇ ಮುಖ್ಯರಸ್ತೆ, ಸಾಯಿ ಸುಧಾ ಮೆಡಿಕಲ್ಸ್ ಹಾಗೂ ಲೋ-ಲೆವೆಲ್ ಪಾರ್ಕ್ ಸಮೀಪ ನಡೆದ ವೃಕ್ಷಾರೋಪಣಾ ಕಾರ್ಯಕ್ರಮದಲ್ಲಿ ಎನ್‌ಪಿಎಸ್ ಶಾಲೆ, ಸದಾಶಿವನಗರ ಹಾಗೂ ನಾಗಸೇನ ಶಾಲೆ, ಸದಾಶಿವನಗರ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಂಡರು. ‘ಸೇವ್ ಸ್ಯಾಂಕಿ ಟ್ಯಾಂಕ್ ಇನಿಶಿಯೇಟಿವ್’ ಕಾರ್ಯಕ್ರಮದಡಿ ವಾಯ್ಸ್ ಆಫ್ ಸದಾಶಿವನಗರ ಸದಸ್ಯೆ ಶಿಲ್ಪಾ ಜತ್ತಿ, ಪರಿಸರ ಪ್ರಸನ್ನ, ಡಾ. ಮನು, ಸಂಜಯ್ ಬೆಳ್ವಾಲ್ ಇದ್ದರು.

500 ಸಸಿಗಳ ನಾಟಿ

ಬೆಂಗಳೂರು: ವಿಶ್ವ ಪರಿಸರ ದಿನದ ಅಂಗವಾಗಿ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದಲ್ಲಿ ಔಷಧೀಯ ಮತ್ತು ವಿವಿಧ ಜಾತಿಯ ಹೂ ಬಿಡುವ ಸಸ್ಯಗಳು ಸೇರಿದಂತೆ ಸುಮಾರು 500 ಸಸಿಗಳನ್ನು ನೆಡಲಾಯಿತು.

ಕುಲಪತಿ ಪ್ರೊ.ವಿಶ್ವನಾಥ್ ಅವರ ನೇತೃತ್ವದಲ್ಲಿ ನಡೆದ ಅಭಿಯಾನದಲ್ಲಿ ಕುಲಸಚಿವೆ ಮಮತಾದೇವಿ ಜಿ.ಎಸ್., ಹಣಕಾಸು ಅಧಿಕಾರಿ ಪ್ರಶಾಂತ ಕುಮಾರ್ ವಿ.ಎಸ್. ಹಾಗೂ ಕಚೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.

ಪರಿಸರ ಸ್ನೇಹಿ ಕ್ಯಾಂಪಸ್ ಮತ್ತು ಆರೋಗ್ಯಕರ ಪರಿಸರ ನಿರ್ಮಾಣ ಮಾಡುವ ಉದ್ದೇಶದಿಂದ ಹಸಿರು ಸ್ಥಳಗಳ ನಿರ್ವಹಣೆಗೆ ವಿಶ್ವವಿದ್ಯಾಲಯ ಆದ್ಯತೆ ನೀಡುತ್ತಿದ್ದು, ಈ ಅಭಿಯಾನ ಮಹತ್ವದ ಹೆಜ್ಜೆ ಎಂದು ಕುಲಸಚಿವೆ ಮಮತಾದೇವಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ


ಭೋವಿ ಸಮಾಜಕ್ಕೆ ಸಚಿವ ಸ್ಥಾನ ನೀಡಲು ಆಗ್ರಹ

ಬೆಂಗಳೂರು: ಸಾಮಾಜಿಕ ನ್ಯಾಯದ ತತ್ವದಡಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಚಿವ ಸಂಪುಟದಲ್ಲಿ ಭೋವಿ ಸಮುದಾಯಕ್ಕೆ ಸಚಿವ ಸ್ಥಾನ ನೀಡಬೇಕು ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಆಗ್ರಹಿಸಿದ್ದಾರೆ.

‘ಶಾಸಕರಾದ ಶಿವರಾಜ್ ತಂಗಡಗಿ, ಎ.ಸಿ.ಶ್ರೀನಿವಾಸ್, ವೆಂಕಟೇಶ್ ಅವರು ಪಕ್ಷದ ಸಂಘಟನೆ ಹಾಗೂ ಸಾರ್ವಜನಿಕ ಜೀವನದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಇವರಲ್ಲಿ ಯಾರಿಗಾದರೂ ಸಚಿವ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯದ ಸಂದೇಶ ಸಾರಬೇಕು’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಭೋವಿ ಸಮುದಾಯವು ರಾಜ್ಯದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದು, ವಿಧಾನಸೌಧ ನಿರ್ಮಾಣದಿಂದ ಹಿಡಿದು ವಿವಿಧ ನೀರಾವರಿ ಯೋಜನೆಗಳ ಅಭಿವೃದ್ಧಿಯವರೆಗೆ ಸಮುದಾಯದ ಪಾತ್ರ ಪ್ರಮುಖವಾಗಿದೆ. ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಮುದಾಯಕ್ಕೆ ಸಚಿವ ಸ್ಥಾನ ನೀಡುವ ಕುರಿತು ಮನವಿ ಸಲ್ಲಿಸಲಾಗಿದೆ. ಇಬ್ಬರೂ ನಾಯಕರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ಸ್ವಾಮೀಜಿ ಮಾಹಿತಿ ನೀಡಿದರು.

ಮೊದಲ ಹಂತದ ಸಂಪುಟ ರಚನೆಯಲ್ಲಿ ಸಮುದಾಯಕ್ಕೆ ಅವಕಾಶ ದೊರಕದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ಸಮುದಾಯದ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಸಂಪುಟ ವಿಸ್ತರಣೆ ವೇಳೆ ಸಚಿವ ಸ್ಥಾನ ನೀಡಬೇಕು ಎಂದು ಅವರು ಒತ್ತಾಯಿಸಿದರು.



ವಿಧಾನ ಪರಿಷತ್‌ಗೆ ನಾಮನಿರ್ದೇಶನ ಹಾಗೂ ನಿಗಮ-ಮಂಡಳಿಗಳ ನೇಮಕಾತಿಗಳಲ್ಲಿಯೂ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಆನಂದಪ್ಪ, ತಿಪ್ಪಣ ಒಡೆಯರ್, ರವಿ ಪೂಜಾರ ಇದ್ದರು.

3,395 ಕಾನ್‌ಸ್ಟೆಬಲ್ ನೇಮಕಾತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಜಿಲ್ಲಾ, ನಗರ ಸೇರಿ ವಿವಿಧ ಘಟಕಗಳಲ್ಲಿ ಖಾಲಿಯಿರುವ 3,395 ಪೊಲೀಸ್ ಕಾನ್‌ಸ್ಟೆಬಲ್ (ಸಿವಿಲ್) ಹುದ್ದೆಗಳ ನೇಮಕಾತಿಗೆ ರಾಜ್ಯ ಸರ್ಕಾರವು ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪುರುಷರಿಗೆ 2,266, ಮಹಿಳೆಯರಿಗೆ 755, ಸೇವಾನಿರತ ಪುರುಷರಿಗೆ 257, ಸೇವಾನಿರತ ಮಹಿಳೆಯರಿಗೆ 82 ಹಾಗೂ ಲಿಂಗತ್ವ ಅಲ್ಪಸಂಖ್ಯಾರಿಗೆ 35 ಹುದ್ದೆಗಳನ್ನು ಮೀಸಲಿಡಲಾಗಿದೆ. ನೇಮಕಾತಿಗೆ ಅರ್ಹತೆ ಪಡೆಯಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳು ಹಾಜರಾಗಬೇಕು.

ಜೂನ್ 8ರಿಂದ ಆನ್‌ಲೈನ್ ಮೂಲಕ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಜುಲೈ 3ರಂದು ಅರ್ಜಿ ಸಲ್ಲಿಸಲು ಕೊನೇ ದಿನವಾಗಿದೆ. ಶುಲ್ಕ ಪಾವತಿಗೆ ಕಡೆಯ ದಿನ ಜುಲೈ 4 ಆಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಸಸಿ ನೆಡುವ ಯೋಜನೆಗೆ ಕೈಜೋಡಿಸಿ: ಬಿಡಿಎ ಅಧ್ಯಕ್ಷ ಎನ್‌.ಎ. ಹ್ಯಾರಿಸ್ ಕರೆ

‘ಗ್ರೀನ್ ಬೆಂಗಳೂರು’ ವೆಬ್‌ಸೈಟ್ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ವತಿಯಿಂದ ಜೂನ್ 27ರಂದು 15 ಲಕ್ಷ ಸಸಿ ನೆಡುವ ಕಾರ್ಯಕ್ರಮದ ಅಂಗವಾಗಿ ಹಸಿರು ಯೋಜನೆಯ ವೆಬ್‌ಸೈಟ್ ಅನಾವರಣಗೊಳಿಸಲಾಯಿತು.

ಪ್ರಾಧಿಕಾರದ ಆವರಣದಲ್ಲಿ ಶುಕ್ರವಾರ ನಡೆದ ಸರಳ ಸಮಾರಂಭದಲ್ಲಿ ವೆಬ್‌ಸೈಟ್ (https://greenbengalurubybda.in/) ಅನ್ನು ಅಧ್ಯಕ್ಷ ಎನ್.ಎ.ಹ್ಯಾರಿಸ್ ಅನಾವರಣಗೊಳಿಸಿದರು. ನಂತರ ವಿಶ್ವ ಪರಿಸರ ದಿನದ ಅಂಗವಾಗಿ ಸಸಿ ನೆಟ್ಟರು.

ಬಳಿಕ ಮಾತನಾಡಿದ ಹ್ಯಾರಿಸ್, ‘ಬೆಂಗಳೂರು ನಗರವನ್ನು ಹಸಿರುಮಯವಾಗಿಸುವ ಉದ್ದೇಶದೊಂದಿಗೆ ಪ್ರಾಧಿಕಾರದ ಅರಣ್ಯ ವಿಭಾಗದ ವತಿಯಿಂದ 15 ಲಕ್ಷ ಸಸಿ ನೆಡುವ ಯೋಜನೆ ರೂಪಿಸಲಾಗಿದೆ. ಪ್ರಾಧಿಕಾರದ ಬಡಾವಣೆಗಳಲ್ಲಿ ಸ್ಥಳೀಯ ಸಸಿಗಳನ್ನು ನೆಡಲಾಗುವುದು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಗಿನ್ನಿಸ್ ದಾಖಲೆ ನಿರ್ಮಿಸಲು ಉದ್ದೇಶಿಸಲಾಗಿದೆ’ ಎಂದರು.



ಪರಿಸರದ ದಿನದ ಅಂಗವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆವರಣದಲ್ಲಿ ಅಧ್ಯಕ್ಷ ಎನ್‌.ಎ.ಹ್ಯಾರಿಸ್ ಅವರು ಸಸಿ ನೆಟ್ಟರು. ಮಣಿವಣ್ಣನ್, ಜಯಗೋಪಾಲ್ ಗೌಡ, ಚರಣ್, ಶಿವಕುಮಾರ್ ಇದ್ದಾರೆ

> ನಾಡಪ್ರಭು ಕೆಂಪೇಗೌಡ ಜಯಂತಿ ಪ್ರಯುಕ್ತ (ಜೂನ್ 27) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಗರದಲ್ಲಿ 15 ಲಕ್ಷ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ
>
> **ಡಿ.ಕೆ. ಶಿವಕುಮಾರ್,** ಮುಖ್ಯಮಂತ್ರಿ

ಈ ಯೋಜನೆಗೆ 50 ಸಾವಿರ ಸ್ವಯಂ ಸೇವಕರ ಅಗತ್ಯವಿದೆ. ಪ್ರತಿಯೊಬ್ಬರಿಗೂ 30 ಸಸಿ ನೀಡಲಾಗುವುದು. ಪ್ರಾಧಿಕಾರದ ವ್ಯಾಪ್ತಿಯ ನಿವಾಸಿಗಳು, ಶಾಲಾ-ಕಾಲೇಜುಗಳು, ಐ.ಟಿ ಸಂಸ್ಥೆಗಳು ಮತ್ತು ಪರಿಸರ ಆಸಕ್ತರು ಜಾಲತಾಣದಲ್ಲಿ ಹೆಸರು ನೋಂದಾಯಿಸಬಹುದು. ಸರ್ಕಾರಿ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಬಿಲ್ಡರ್‌ಗಳು ಮತ್ತು ನಾಗರಿಕರು ಪಾಲ್ಗೊಳ್ಳುವಂತೆ ಕರೆ ನೀಡಿದರು.

‘ಈಗಾಗಲೇ 50 ಕಡೆ 50 ಸಾವಿರ ಸಸಿಗಳನ್ನು ಉಚಿತವಾಗಿ ಕೊಡಲಾಗಿದೆ. ಸ್ಥಳೀಯ ನಿವಾಸಿಗಳು ತಮ್ಮ ಬಡಾವಣೆಯ ಉದ್ಯಾನಗಳನ್ನು ದತ್ತು ಪಡೆದು ಪೋಷಿಸಲು ಹೆಸರು ನೋಂದಾಯಿಸಿಕೊಳ್ಳಬೇಕು’ ಎಂದರು.

‘ಪ್ರತಿಯೊಂದು ಸಸಿಯ ಬೆಳವಣಿಗೆಯನ್ನು ಜಿಯೋ-ಮ್ಯಾಪಿಂಗ್, ಡ್ರೋನ್ ಸಮೀಕ್ಷೆ ಹಾಗೂ 3 ವರ್ಷಗಳ ಸಮರ್ಪಿತ ನಿರ್ವಹಣಾ ಯೋಜನೆಯ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತದೆ. ಇದರಿಂದ ಸಸಿಗಳ ದೀರ್ಘಕಾಲೀನ ಬೆಳವಣಿಗೆ ಮತ್ತು ಸುಸ್ಥಿರತೆ ಖಚಿತಪಡಿಸಲಾಗುತ್ತದೆ’ ಎಂದರು.

ಆಯುಕ್ತ ಪಿ.ಮಣಿವಣ್ಣನ್, ಕಾರ್ಯದರ್ಶಿ ಶಿವಕುಮಾರ್, ಸದಸ್ಯರಾದ ಪುಟ್ಟಸ್ವಾಮಿಗೌಡ, ಜಯಗೋಪಾಲಗೌಡ, ಅರಣ್ಯ ವಿಭಾಗದ ಡಿಸಿಎಫ್ ಚರಣ್ ಇದ್ದರು.

ಬಾಯ್ಲರ್‌ಗೆ ಬಿದ್ದು ಅಣ್ಣ, ತಮ್ಮ ಸಾವು

ಆನೇಕಲ್: ಜಿಗಣಿಯ ಕುಮಾರ್ ಆರ್ಗ್ಯಾನಿಕ್ ಕಂಪನಿಯಲ್ಲಿ ಬಾಯ್ಲರ್‌ನ ಕೂಲಿಂಗ್ ವಾಟರ್ ಟ್ಯಾಂಕ್‌ನಲ್ಲಿ ಆಯ ತಪ್ಪಿ ಬಿದ್ದು ಉತ್ತರ ಪ್ರದೇಶದ ಮುನ್ನಾ ಸಿಂಗ್, ಲಾಲುಸಿಂಗ್ ಮೃತಪಟ್ಟಿದ್ದಾರೆ.

ಚುನಾವಣೆ ವಿಳಂಬಕ್ಕೆ ಕ್ಷಮೆಯಾಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವರ್ಷಗಳಿಂದ ನನೆಗುದಿಗೆ ಬಿದ್ದಿರುವ, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸುವಲ್ಲಿ ವಿಳಂಬ ಆಗಿರುವುದಕ್ಕೆ ಹೈಕೋರ್ಟ್‌ಗೆ ಕ್ಷಮೆಯಾಚಿಸಿರುವ ರಾಜ್ಯ ಸರ್ಕಾರ, ಜಿ.ಪಂ ಹಾಗೂ ತಾ.ಪಂ ಕ್ಷೇತ್ರಗಳಿಗೆ ಮೀಸಲಾತಿ ನಿಗದಿ ಪೂರ್ಣಗೊಳಿಸಲು ಪುನಃ 8 ವಾರಗಳ ಕಾಲಾವಕಾಶ ಬೇಡಿದೆ.

ರಾಜ್ಯ ಚುನಾವಣಾ ಆಯೋಗವು ಈ ಬಗ್ಗೆ ಸರ್ಕಾರದ ವಿರುದ್ಧ 2024ರಲ್ಲಿ ಹೂಡಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಪ್ರಕರಣಕ್ಕೆ ಸಂಬಂಧಿಸಿದ ಆಗುಹೋಗುಗಳ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ ಡಿ.ರಂದೀಪ್ ಅವರ ಪ್ರಮಾಣಪತ್ರವನ್ನು ಸರ್ಕಾರದ ಪರ ವಕೀಲರು ನ್ಯಾಯಪೀಠಕ್ಕೆ ಸಲ್ಲಿಸಿದರು.

ಪ್ರಮಾಣಪತ್ರದಲ್ಲಿ ಏನಿದೆ?: ‘ಸರ್ಕಾರ ಉದ್ದೇಶಪೂರ್ವಕವಾಗಿ ವಿಳಂಬ ಮಾಡಿಲ್ಲ. ಆದೇಶ ಪಾಲನೆಯಲ್ಲೂ ವಿಳಂಬವಾಗಿಲ್ಲ. ಆದಾಗ್ಯೂ, ವಿಳಂಬಕ್ಕೆ ಕ್ಷಮೆಯಾಚಿಸಲಾಗುವುದು’ ಎಂದು ಪ್ರಮಾಣಪತ್ರದಲ್ಲಿ ವಿವರಿಸಲಾಗಿದೆ.

‘ವಿಜಯಪುರ ಜಿಲ್ಲೆಯ ನಾಲ್ಕು ಹಾಗೂ ಬಾಗಲಕೋಟೆ ಜಿಲ್ಲೆಯ ತಾಲ್ಲೂಕುಗಳ ಗಡಿಗಳನ್ನು ಬದಲಾಯಿಸಿ ಕಂದಾಯ ಇಲಾಖೆ ಅಧಿಸೂಚನೆ ಹೊರಡಿಸಿತ್ತು. ಇದರನ್ವಯ ವಿಜಯಪುರ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ತಾ.ಪಂ, ಜಿ.ಪಂ ಕ್ಷೇತ್ರಗಳ ಗಡಿಗಳನ್ನು ಮರು ನಿಗದಿಪಡಿಸಲಾಗಿದೆ’ ಎಂದು ತಿಳಿಸಲಾಗಿದೆ.

‘ಬಾಗಲಕೋಟೆ ಜಿಲ್ಲೆಯ ಕ್ಷೇತ್ರಗಳ ಗಡಿಗಳ ಮರು ನಿಗದಿ ಹಾಗೂ ಮೀಸಲಾತಿ ನಿಗದಿಗೆ 12 ವಾರ ಕಾಲಾವಕಾಶ ಬೇಕಿದೆ. ಉಳಿದ ಜಿಲ್ಲೆಗಳ ತಾ.ಪಂ, ಜಿ.ಪಂ ಕ್ಷೇತ್ರ ಮರುವಿಂಗಡಣೆ ಆಗಿದ್ದು, ಮೀಸಲಾತಿ ನಿಗದಿಪಡಿಸಲು 8 ವಾರ ಬೇಕು’ ಎಂದು ವಿವರಿಸಲಾಗಿದೆ. ಪೀಠ ವಿಚಾರಣೆಯನ್ನು ಸೆಪ್ಟೆಂಬರ್ 11ಕ್ಕೆ ಮುಂದೂಡಿತು.

ಗ್ರಾ.ಪಂ ಸದಸ್ಯರ ಸಂಖ್ಯೆ ಅಖೈರು

ಪಂಚಾಯಿತಿ ಚುನಾವಣೆ

‘ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಸದಸ್ಯರ ಸಂಖ್ಯೆ ನಿರ್ಧರಿಸಲಾಗಿದ್ದು, ಮೀಸಲಾತಿ ನಿಗದಿಪಡಿಸುವ ಸಂಬಂಧ ಆಯಾ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಕಳುಹಿಸಲಾಗಿದೆ’ ಎಂದು ರಾಜ್ಯ ಸರ್ಕಾರ ಶುಕ್ರವಾರ ಹೈಕೋರ್ಟ್‌ಗೆ ತಿಳಿಸಿದೆ. ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, ‘ಮೂವತ್ತು ದಿನಗಳಲ್ಲಿ ಮೀಸಲಾತಿ ನಿಗದಿಗೆ ಸೂಚಿಸಿದ್ದು, ಸ್ಥಿತಿಗತಿ ವರದಿ ಸಲ್ಲಿಸಲಾಗಿದೆ’ ಎಂದರು.

ಶಿವಮೊಗ್ಗ ಪಾಲಿಕೆ: ಇದೇ ವೇಳೆ ಶಿವಮೊಗ್ಗ ಪಾಲಿಕೆಗೆ ಚುನಾವಣೆ ಕುರಿತು ಕೆ.ಇ.ಕಾಂತೇಶ್ ಸಲ್ಲಿಸಿದ್ದ ಅರ್ಜಿಯನ್ನೂ ಅವರ ಪರ ವಕೀಲ ಎಂ.ವಿನೋದ್ ಕುಮಾರ್ ನ್ಯಾಯಪೀಠದ ಗಮನಕ್ಕೆ ತಂದರು. ಈ ಅರ್ಜಿಯ ವಿಚಾರಣೆಯನ್ನು ಜುಲೈ 10ಕ್ಕೆ ಮುಂದೂಡಿತು.

ಬಿಜೆಪಿಯಿಂದ ವಿಭಾಗ ಪ್ರಮುಖರು, ಜಿಲ್ಲಾ ಸಂಯೋಜಕರ ನೇಮಕ

ಬೆಂಗಳೂರು: ಬಿಜೆಪಿಯು ಪ್ರಮುಖರ ಸಮಿತಿ ಸದಸ್ಯರನ್ನು ವಿವಿಧ ವಿಭಾಗಗಳಿಗೆ ಹಾಗೂ ರಾಜ್ಯ ಪದಾಧಿಕಾರಿಗಳನ್ನು ಜಿಲ್ಲೆಗಳಿಗೆ ಸಂಯೋಜಕರನ್ನಾಗಿ ನಿಯುಕ್ತಿಗೊಳಿಸಲಾಗಿದೆ.

ವಿಭಾಗ ಪ್ರಮುಖರು: ಮೈಸೂರು–ಆರ್.ಅಶೋಕ, ಮಂಗಳೂರು–ನಿರ್ಮಲ್ ಕುಮಾರ್ ಸುರಾನ, ಶಿವಮೊಗ್ಗ– ನಳಿನ್ ಕುಮಾರ್ ಕಟೀಲ್, ಧಾರವಾಡ– ಪ್ರಲ್ಹಾದ ಜೋಶಿ, ಬೆಳಗಾವಿ– ಸಿ.ಟಿ. ರವಿ, ಕಲಬುರಗಿ– ಗೋವಿಂದ ಕಾರಜೋಳ, ಬಳ್ಳಾರಿ– ಬಸವರಾಜ ಬೊಮ್ಮಾಯಿ, ದಾವಣಗೆರೆ– ಬಿ.ಶ್ರೀರಾಮುಲು, ಬೆಂಗಳೂರು ಗ್ರಾಮಾಂತರ– ಡಾ.ಸಿ.ಎನ್.ಅಶ್ವತ್ಥನಾರಾಯಣ, ಬೆಂಗಳೂರು–ಡಿ.ವಿ.ಸದಾನಂದಗೌಡ.

ಜಿಲ್ಲಾ ಪ್ರಮುಖರು: ಹಾಸನ, ಹಾವೇರಿ– ಎಸ್.ದತ್ತಾತ್ರಿ, ದಕ್ಷಿಣಕನ್ನಡ, ಶಿವಮೊಗ್ಗ– ರೂಪಾಲಿ ನಾಯಕ್, ಕೊಡಗು, ಉಡುಪಿ– ಕ್ಯಾ. ಬ್ರಿಜೇಶ್ ಚೌಟ, ಚಿಕ್ಕಮಗಳೂರು, ಉತ್ತರಕನ್ನಡ– ಹರತಾಳು ಹಾಲಪ್ಪ, ಮೈಸೂರು ನಗರ, ಚಾಮರಾಜನಗರ– ಲಕ್ಷ್ಮೀ ಅಶ್ವಿನ್ ಗೌಡ, ಮೈಸೂರು ಗ್ರಾಮಾಂತರ–ಶರಣು ತಳ್ಳೀಕೇರಿ, ಮಂಡ್ಯ– ಎನ್.ಮಹೇಶ್, ಹುಬ್ಬಳ್ಳಿ–ಧಾರವಾಡ, ಧಾರವಾಡ ಗ್ರಾಮಾಂತರ– ಅನಿಲ್ ಬೆನಕೆ, ಗದಗ,ಚಿಕ್ಕೋಡಿ– ಮುರುಗೇಶ್ ನಿರಾಣಿ, ಬೆಳಗಾವಿ ನಗರ, ಬೆಳಗಾವಿ ಗ್ರಾಮಾಂತರ– ಬೈರತಿ ಬಸವರಾಜು, ಬಾಗಲಕೋಟೆ,ಬಿಜಾಪುರ– ರಾಜುಗೌಡ ನಾಯಕ್, ಬೀದರ್, ಯಾದಗಿರಿ– ಬಸವರಾಜ ಮತ್ತಿಮೋಡ್, ಕಲಬುರಗಿ ನಗರ, ಕಲಬುರಗಿ ಗ್ರಾಮಾಂತರ– ಶೈಲೇಂದ್ರ ಬೆಲ್ದಾಳೆ, ರಾಯಚೂರು, ಕೊಪ್ಪಳ– ಲಲಿತಾ ಅನಾಪುರ, ಬಳ್ಳಾರಿ, ವಿಜಯನಗರ– ಬಸವರಾಜ ಕೇಲಗಾರ, ದಾವಣಗೆರೆ, ಚಿತ್ರದುರ್ಗ– ವಿನಯ್ ಬಿದರೆ, ತುಮಕೂರು, ಮಧುಗಿರಿ– ಸಿ.ಮುನಿರಾಜು, ರಾಮನಗರ, ಬೆಂಗಳೂರು ಗ್ರಾಮಾಂತರ– ಮಾಳವಿಕಾ ಅವಿನಾಶ್, ಚಿಕ್ಕಬಳ್ಳಾಪುರ, ಕೋಲಾರ– ಅಂಬಿಕಾ ಹುಲಿನಾಯ್ಕರ್, ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ– ಡಿ.ಎಸ್.ಅರುಣ್.

‘ಸುಸ್ಥಿರ ಅಭಿವೃದ್ಧಿಗೆ ಸಾಮೂಹಿಕ ಸಂಕಲ್ಪ’

ಬೆಂಗಳೂರು: ಕೈಗಾರಿಕಾ ಸಹಯೋಗವನ್ನು ಮತ್ತಷ್ಟು ಗಟ್ಟಿಗೊಳಿಸಲು ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ಸಾಮೂಹಿಕ ಸಂಕಲ್ಪದ ಅಗತ್ಯವಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅಭಿಪ್ರಾಯಪಟ್ಟರು.



ಎಚ್‌.ಡಿ. ಕುಮಾರಸ್ವಾಮಿ

ಕಿರ್ಗಿಜ್ ಗಣರಾಜ್ಯದ ಇಸ್ಸಿಕ್-ಕುಲ್‌ನಲ್ಲಿ ನಡೆದ ಶಾಂಘೈ ಸಹಕಾರ ಸಂಸ್ಥೆಯ (ಸಿಎಸ್‌ಒ) ಸದಸ್ಯ ರಾಷ್ಟ್ರಗಳ ಕೈಗಾರಿಕಾ ಸಚಿವರ 4ನೇ ಶೃಂಗಸಭೆಯಲ್ಲಿ ಅವರು ಮಾತನಾಡಿದರು.

‘ಕೈಗಾರಿಕಾ ಬೆಳವಣಿಗೆಯನ್ನು ಉತ್ತೇಜಿಸಲು, ಪರಿಣಾಮಕಾರಿ ಪೂರೈಕೆ ಸರಪಳಿಗಳನ್ನು ಬಲಪಡಿಸಲು, ಹೆಚ್ಚೆಚ್ಚು ಉತ್ಪಾದನೆ ಉತ್ತೇಜಿಸಲು ಮತ್ತು ಎಸ್‌ಸಿಒ ಸದಸ್ಯ ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರವನ್ನು ಹೆಚ್ಚಿಸಲು ಭಾರತದ ಬದ್ಧತೆಯ ಬಗ್ಗೆ ಹೇಳಿದರು.

ಶೃಂಗಸಭೆಯ ಹೊರತಾಗಿ, ಕೈಗಾರಿಕೆ, ಉತ್ಪಾದನೆ, ವ್ಯಾಪಾರ, ಹೂಡಿಕೆ ಮತ್ತು ತಂತ್ರಜ್ಞಾನದಲ್ಲಿ ಹೆಚ್ಚಿನ ಸಹಕಾರಕ್ಕಾಗಿ ಹೊಸ ಹೊಸ ಮಾರ್ಗಗಳನ್ನು ಅನ್ವೇಷಿಸಲು ಸದಸ್ಯ ರಾಷ್ಟ್ರಗಳ ತಮ್ಮ ಸಹವರ್ತಿಗಳೊಂದಿಗೆ ಕುಮಾರಸ್ವಾಮಿ ಅವರು ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಇರಾನ್ ಗಣರಾಜ್ಯದ ಕೈಗಾರಿಕೆ, ಗಣಿ ಮತ್ತು ವ್ಯಾಪಾರ ಸಚಿವ ಸಯ್ಯದ್ ಮೊಹಮ್ಮದ್ ಅಟಾಬೆಕ್, ತಜಿಕಿಸ್ತಾನ್ ಗಣರಾಜ್ಯದ ಕೈಗಾರಿಕೆ ಮತ್ತು ನವೀನ ತಂತ್ರಜ್ಞಾನಗಳ ಖಾತೆ ಮಂತ್ರಿ ಶೇರಾಲಿ ಕಬೀರ್, ಉಜ್ಬೇಕಿಸ್ತಾನ್ ಗಣರಾಜ್ಯದ ಹೂಡಿಕೆ, ಕೈಗಾರಿಕೆ ಮತ್ತು ವಾಣಿಜ್ಯ ಖಾತೆ ಸಚಿವರಾದ ಲಾಜಿಜ್ ಕುದ್ರಾಟೋವ್ ಅವರೊಂದಿಗೆ ಚರ್ಚಿಸಿದರು.

ಬೆಂಗಳೂರು ರೇಸ್

ಮ್ಯಾಂಡರಿನೊ ಗೆಲ್ಲುವ ನಿರೀಕ್ಷೆ

ನವಾಬ್ ಎಂ.ಅರ್ಶದ್ ಆಲಿ ಖಾನ್ ಮೆಮೋರಿಯಲ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮ್ಯಾಂಡರಿನೊ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:


1ನೇ ರೇಸ್: ಅವೆನರ್ 1, ಬ್ರ್ಯೂರೆವೆಸ್ಟ್‌ನಿಕ್ 2, ಶೈನಿಂಗ್ ಪಾತ್ 3
2ನೇ ರೇಸ್: ಲೈಟ್ನಿಂಗ್ ಬ್ಲಿಟ್ಜ್ 6, ಹಶ್ಡ್ 8, ವೈಬ್ರ್ಯಂಟ್ ಕ್ವೀನ್ 3
3ನೇ ರೇಸ್: ಸ್ಟೆಲ್ಲಾ ಮೇರಿಸ್ 2, ವಫದಾರ್ 4, ಎಸ್‌ಡಿ ಗುಡ್ ಸ್ಯಾಮ್ 1
4ನೇ ರೇಸ್: ಯುಆರ್ ಮ್ಯಾನ್ ಆರ್ ಬೋರ್ನ್ 4, ಕೆಚ್ಚಿನಿ 2, ಮಾನ 3
5ನೇ ರೇಸ್: ಮ್ಯಾಂಡರಿನೊ 3, ಗ್ಲೋಬಲ್ ಇನ್‌ಫ್ಲೂಯನ್ಸ್ 2, ಕಲಮಿಟ್ಸ 4
6ನೇ ರೇಸ್: ಸೋಲಾರ 3, ಸಪ್ಪೋರೊ 2, ಬ್ಲೈಂಡ್ ಫೈತ್ 8

ಉತ್ತಮ ಬೆಟ್: ಸ್ಟೆಲ್ಲಾ ಮೇರಿಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ನಗರದಲ್ಲಿ ಇಂದು

ನಾಗರಿಕ ಸೇವೆಗಳ ಸಾಧಕರಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ ಮತ್ತು ಆಶೀರ್ವಚನ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಅತಿಥಿಗಳು: ಎನ್. ಚಲುವರಾಯಸ್ವಾಮಿ, ಬಿ.ಸಿ. ಚಂದ್ರಶೇಖರ್, ಎಚ್‌.ಸಿ. ಬಾಲಕೃಷ್ಣ, ಎಚ್‌.ಡಿ. ರಂಗನಾಥ್, ಪ್ರಿಯಕೃಷ್ಣ, ಶರತ್ ಬಚ್ಚೇಗೌಡ, ಅಧ್ಯಕ್ಷತೆ: ಗಾ.ನಂ.ಶ್ರೀಕಂಠಯ್ಯ, ಆಯೋಜನೆ: ಚುಂಚಶ್ರೀ ಬಳಗ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಸಂಜೆ 4.30



ನಿರ್ಮಲಾನಂದ ನಾಥ ಸ್ವಾಮೀಜಿ

‘ನರ ವಿಜ್ಞಾನ ಕ್ಷೇತ್ರದಲ್ಲಿ ಆತ್ಮನಿರ್ಭರ ಭಾರತ’ ಕಾರ್ಯಾಗಾರ: ಮುಖ್ಯ ಭಾಷಣ: ಕೆ.ಎನ್. ಸುಬ್ರಹ್ಮಣ್ಯ, ಉದ್ಘಾಟನಾ ಭಾಷಣ: ಎಸ್.ಸಿ. ಪಾರಿಜಾ, ಅತಿಥಿ: ಡಾ.ಬಿ.ಎನ್. ಗಂಗಾಧರ್, ಉಪಸ್ಥಿತಿ: ಡಾ. ಪ್ರಭಾ ಎಸ್. ಚಂದ್ರ, ಆಯೋಜನೆ: ನಿಮ್ಹಾನ್ಸ್, ಸ್ಥಳ: ಪ್ಲಾಟಿನಂ ಜುಬಿಲಿ ಸಭಾಂಗಣ, ಪಿಜಿಡಬ್ಲ್ಯು ಕಟ್ಟಡ, ನಿಮ್ಹಾನ್ಸ್, ಬೆಳಿಗ್ಗೆ 9

ರಾಜ್ಯಮಟ್ಟದ ಚರ್ಮ ಪಾದರಕ್ಷೆ ತಯಾರಿಕಾ ಸ್ಪರ್ಧೆ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಮುಂಡರಗಿ ನಾಗರಾಜ, ಅತಿಥಿಗಳು: ಸಿದ್ದಲಿಂಗಪ್ಪ ಬಿ. ಪೂಜಾರ್, ಪಿ.ಎ.ಪ್ರಾಣೇಶ್, ಬಿ.ಎಸ್. ಗುರುದತ್, ರಾಜನ್ ಕೆ.ಜಿ., ಉಪಸ್ಥಿತಿ: ವಸುಂಧರಾ ಕೆ.ಎಂ., ಆಯೋಜನೆ: ಸಮಾಜ ಕಲ್ಯಾಣ ಇಲಾಖೆ, ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ, ಸ್ಥಳ: ಕರ್ನಾಟಕ ಚರ್ಮ ಮತ್ತು ಫ್ಯಾಷನ್ ತಾಂತ್ರಿಕ ಸಂಸ್ಥೆ, ಉಲ್ಲಾಳು ಉಪನಗರ ಬಸ್ ನಿಲ್ದಾಣದ ಹತ್ತಿರ, ಸರ್.ಎಂ. ವಿಶ್ವೇಶ್ವರಯ್ಯ ಲೇಔಟ್, ಬೆಳಿಗ್ಗೆ 9.30



ಪುರುಷೋತ್ತಮ ಬಿಳಿಮಲೆ

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಹಾಗೂ ಬಿ.ಸಿ. ರಾಮಚಂದ್ರಶರ್ಮ ಶತಮಾನೋತ್ಸವ, ವಿಚಾರ ಸಂಕಿರಣ, ಕವಿಗೋಷ್ಠಿ: ಉದ್ಘಾಟನೆ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿ: ಕೆ.ವೈ. ನಾರಾಯಣಸ್ವಾಮಿ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಆರ್. ಲಕ್ಷ್ಮೀನಾರಾಯಣ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ. ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್. ಆರ್. ಕಾಲೊನಿ, ಬೆಳಿಗ್ಗೆ 10.30

‘ಮಾಸ್ತಿ ವೆಂಕಟೇಶ್ ಅಯ್ಯಂಗಾರ್’ ಬದುಕು ಬರಹದ ಬಗ್ಗೆ ಉಪನ್ಯಾಸ: ಅತಿಥಿ: ಎಸ್. ಆರ್. ವಿಜಯಶಂಕರ, ಅಧ್ಯಕ್ಷತೆ: ಟಿ.ಎನ್. ಸೀತಾರಾಮ್, ಅತಿಥಿ: ಎಚ್‌.ಎಸ್. ಶಶಿಧರ್ ಕುಮಾರ್, ಆಯೋಜನೆ: ಕನ್ನಡ ಕಸ್ತೂರಿ ಸಂಘ, ಸ್ವಾಮಿ ವಿವೇಕಾನಂದ ಅಭ್ಯುದಯ ಪ್ರತಿಷ್ಠಾನ, ಸ್ಥಳ: ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಕಟ್ಟಡ, 8ನೇ ಮುಖ್ಯರಸ್ತೆ, ನ್ಯಾಯಾಂಗ ಬಡಾವಣೆ, ಬೆಳಿಗ್ಗೆ 9.50

ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪುರಸ್ಕೃತರು: ಸುಧೀರ್ ಕೆ. ಜೈನ್, ಅತಿಥಿಗಳು: ಕೆ.ಜಿ.ರಂಗರಾಜು, ವಿ.ಕೆ. ಆತ್ರೆ, ಎಚ್‌.ಪಿ. ಖಿಂಚ, ಚಿತ್ರಕಲಾ ನಾಗರಾಜ್, ಸಿ.ಎನ್. ಶಶಿಕಿರಣ್, ಆಯೋಜನೆ: ಸಿಎಂಎನ್ ಫೌಂಡೇಷನ್ ಟ್ರಸ್ಟ್, ಸ್ಥಳ: ದಿ ಲಲಿತ್ ಅಶೋಕ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಪಿಟಿಸಿಎಲ್ ಕಾಯ್ದೆಯ 1978 ಅನುಷ್ಠಾನದಲ್ಲಿರುವ ಸಮಸ್ಯೆಗಳ ಕುರಿತು ಸಾರ್ವಜನಿಕ ಅಹವಾಲು ಕಾರ್ಯಕ್ರಮ: ಸಂತ್ರಸ್ತರ ಅಹವಾಲು ಮಂಡನೆ, ಕಾಯ್ದೆಯ ಅನುಷ್ಠಾನದಲ್ಲಿ ಕಾನೂನಾತ್ಮಕ ಸಮಸ್ಯೆಗಳ ಕುರಿತು ಮಂಡನೆ: ಕ್ಲಿಫ್ಟನ್ ಡಿ ರೋಜಾರಿಯೊ, ಸಮುದಾಯದ ಮುಖಂಡರ ಅಭಿಪ್ರಾಯ ಹಾಗೂ ಸರ್ಕಾರದ ಪ್ರತಿಕ್ರಿಯೆ, ತೀರ್ಪುಗಾರರ ಮಂಡಳಿಯ ಮಂಡನೆ, ತೀರ್ಪುಗಾರರು: ಗೋಪಾಲ ಗೌಡ, ಸಿ.ಎಸ್. ದ್ವಾರಕಾನಾಥ್, ಎಸ್.ಎಂ. ಜಾಮದಾರ್, ಡಿ. ತಂಗರಾಜ್, ಜ್ಯೋತಿ ರಾಜ್, ಎಚ್‌.ಎಲ್. ವೆಂಕಟೇಶ್ , ಆಯೋಜನೆ: ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್, ಮಂಥನ್ ಲಾ, ಆಲ್ಟರ್ನೇಟಿವ್ ಲಾ ಫೋರಂ, ಸ್ಥಳ: ಗಾಂಧಿ ಭವನ, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

ಧ್ರುವ ಕುಮಾರ್ ಟಿ.ಎನ್. ಅವರ ‘ಗ್ಲಿಂಪ್ಸಸ್ ಆಫ್ ಪಾರ್ಲಿಮೆಂಟರಿ ಪ್ರಿವಿಲೇಜಸ್’ ಪುಸ್ತಕ ಬಿಡುಗಡೆ ಹಾಗೂ ಸಂವಾದ: ಅಧ್ಯಕ್ಷತೆ: ರಾಜೇಂದ್ರ ಅರ್ಲೇಕರ್, ಅತಿಥಿಗಳು: ರವಿ ಹೆಗಡೆ, ಕೆ.ವಿ. ಧನಂಜಯ, ಕೆ.ಎಂ. ಶ್ರೀನಿವಾಸಮೂರ್ತಿ, ಸಿ.ಎಸ್. ಷಡಾಕ್ಷರಿ, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

‘ಅನಾಟಮಿ ಆಫ್ ವಿ ಸುಯಿಸೈಡ್’ ನಾಟಕ ಪ್ರದರ್ಶನ, ನಿರ್ದೇಶನ: ಮೋಹಿತ್ ಟಾಕಾಲ್ಕರ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಮಧ್ಯಾಹ್ನ 3.30

ಪದವಿ ಪ್ರದಾನ ಸಮಾರಂಭ: ಅತಿಥಿ: ಜೋಸೆಫ್ ಸಿ., ಆಯೋಜನೆ ಹಾಗೂ ಸ್ಥಳ: ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಕೋರಮಂಗಲ, ಮಧ್ಯಾಹ್ನ 3

ಪೌರಾಣಿಕ ನಾಟಕೋತ್ಸವ: ರಾಜಧಾನಿ ಕಲಾ ವೇದಿಕೆ ತಂಡದಿಂದ ಎಚ್‌.ಎಂ. ನಾಯರ್ ಐತಿಹಾಸಿಕ ನಾಟಕ ಪ್ರದರ್ಶನ, ಆಯೋಜನೆ: ಪುಟ್ಟಿ ಕಲಾವೇದಿಕೆ, ಸ್ಥಳ: ಸಂಸ ಬಯಲು ರಂಗ ಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 4

ವನ್ಯಜೀವಿ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ಈಶ್ವರ ಖಂಡ್ರೆ, ವೆಂಕಟೇಶ್ ಪ್ರಸಾದ್, ಪ್ರಶಸ್ತಿ ಪುರಸ್ಕೃತರು: ಇ.ವಿನಯ್ ಕುಮಾರ್, ವೆಂಕಟೇಶ್, ಸುನಿಲ್ ವಿ. ಬೆಳವಿ, ಶರಣಪ್ಪ, ಆಯೋಜನೆ: ಟೈಗರ್ ಕಪ್ ಕ್ರಿಕೆಟರ್ಸ್ ಫಾರ್ ವೈಲ್ಡ್‌ಲೈಫ್ ಕನ್ಸರ್ವೇಷನ್ ಸಂಸ್ಥೆ, ಸ್ಥಳ: ಎಂ.ಚಿನ್ನಸ್ವಾಮಿ ಕ್ರೀಡಾಂಗಣ, ಸಂಜೆ 4

ಮಾಸದ ಮಾತು–1: ಚರ್ಯಾಪದ ಮತ್ತು ತತ್ವಪದಗಳ ಜುಗಲ್‌ಬಂದಿ ಗಾಯನ: ಬರ್ಟಿ ಎಫ್. ಒಲಿವೆರಾ, ಚಂದ್ರಶೇಖರಾಚಾರ್ ಹೆಗ್ಗೋಟಾರ, ಉಪಸ್ಥಿತಿ: ಬಿ.ಎಸ್. ಮಂಜುನಾಥಸ್ವಾಮಿ, ಕೆ.ಎಂ. ಗಾಯಿತಿ, ಅತಿಥಿಗಳು: ಪುರುಷೋತ್ತಮ ಬಿಳಿಮಲೆ, ಚೆನ್ನಪ್ಪ ಕಟ್ಟಿ, ಎಸ್.ಜಿ. ಸಿದ್ಧರಾಮಯ್ಯ, ಬಿ.ಟಿ. ಲಲಿತಾ ನಾಯಕ್, ಕೆ.ವಿ. ನಾಗರಾಜಮೂರ್ತಿ, ಪ.ಸ. ಕುಮಾರ್, ಹಿ.ಚಿ. ಬೋರಲಿಂಗಯ್ಯ, ಶೂದ್ರ ಶ್ರೀನಿವಾಸ, ಜಾಣಗೆರೆ ವೆಂಕಟರಾಮಯ್ಯ, ಆರ್. ಸುನಂದಮ್ಮ, ಬೈರಮಂಗಲ ರಾಮೇಗೌಡ, ಎಂ.ಎಸ್. ಆಶಾದೇವಿ, ಸರ್ವಮಂಗಳ, ಆಯೋಜನೆ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಕಚೇರಿಯ ಮುಂಭಾಗ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.30

ನನ್ನ ನಡೆ -ಶಿಕ್ಷಣದೆಡೆಗೆ ಕಲಾಜಾತ - 2026-27: ಶಿಕ್ಷಣದ ಪ್ರಾಮುಖ್ಯತೆ ಮತ್ತು ಮಕ್ಕಳನ್ನು ಶಾಲೆಗಳಲ್ಲಿ ಹಾಗೂ ಅಂಗನವಾಡಿಗಳಲ್ಲಿ ದಾಖಲಿಸುವುದರ ಬಗ್ಗೆ ಜಾಗೃತಿ ಮೂಡಿಸುವ ಸಮುದಾಯ ಸಂಪರ್ಕ ಅಭಿಯಾನ, ಉದ್ಘಾಟನೆ: ಸಂತೋಷ್ ಹಿಪ್ಪರಗಿ, ಶಶಿಕಲಾ ಡಿ.ಜಿ., ಮಂಜುನಾಥ್, ಷರೀಫ್ ಕೆ.ಕೆ., ಅಧ್ಯಕ್ಷತೆ: ಗೋಪಿನಾಥ್ ಆರ್., ಉಪಸ್ಥಿತಿ: ನೀಲಿಮಾ, ಆಯೋಜನೆ: ಸಾಮೂಹಿಕ ಶಕ್ತಿ, ಸ್ಪರ್ಶ, ಸ್ಥಳ: ಲುಲು ಮಾಲ್, ಸಂಜೆ 4.30

ಮೌಂಟ್ ಎವರೆಸ್ಟ್ ಶಿಖರವನ್ನು ಯಶಸ್ವಿಯಾಗಿ ಆರೋಹಣ ಮಾಡಿದ ಸಂತೋಷ್ ದೇವರಾಜಪ್ಪ ಮತ್ತು ಚಿನ್ಮಯಿ ತ್ರಿಶೂಲಮೂರ್ತಿ ಅವರಿಗೆ ಸನ್ಮಾನ ಹಾಗೂ ಸಂಭ್ರಮಾಚರಣೆ ಸಮಾರಂಭ: ಉದ್ಘಾಟನೆ: ಕೃಷ್ಣ ಬೈರೇಗೌಡ, ಅಧ್ಯಕ್ಷತೆ: ಬಿ.ಎಂ.ದೇವರಾಜಪ್ಪ, ಅತಿಥಿಗಳು: ಮೀನಾಕ್ಷಿ ಕೃಷ್ಣಬೈರೇಗೌಡ, ತುಳಸಿ ಮದ್ದಿನೇನಿ, ಮಂಜುನಾಥ, ಎಸ್.ಕೆ. ಮೆಹತಾ, ಸ್ಥಳ: ರಾಧಾಕೃಷ್ಣ ಕಲ್ಯಾಣ ಮಂಟಪ, ಸಹಕಾರ ನಗರ, ಸಂಜೆ 5

ಎಚ್‌.ನರಸಿಂಹಯ್ಯ ಅವರ ಜನ್ಮದಿನದ ಅಂಗವಾಗಿ ಭರತನಾಟ್ಯ ಪ್ರಸ್ತುತಿ: ಅತಿಥಿಗಳು: ಶ್ರೀನಿವಾಸ ಜಿ. ಕಪ್ಪಣ್ಣ, ಸತ್ಯನಾರಾಯಣ ರಾಜು, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್, ಸ್ಥಳ: ಮಲ್ಟಿ ಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಜಯನಗರ, ಸಂಜೆ 5

‘ರಂಗಹಸಿರು’ ಹಾಸ್ಯೋತ್ಸವ ಹಾಗೂ ಪರಿಸರ ಗೀತೆಗಳು: ಸಾನ್ನಿಧ್ಯ: ಶಿವಕುಮಾರ ಸ್ವಾಮೀಜಿ, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಉದ್ಘಾಟನೆ: ಮೋಹನ್ ಕೊಂಡಜ್ಜಿ, ಅತಿಥಿಗಳು: ರೋಹಿತ್ ಕೆ.ಎಸ್., ನರೇಂದ್ರ ಬಾಬು ಆರ್., ಕೆ.ವಿ. ನಾಗರಾಜಮೂರ್ತಿ, ನೀಲಮ್ಮ, ಲಕ್ಷ್ಮೀಪತಯ್ಯ, ಸೋಮಶೇಖರ್, ರವಿಶಂಕರ್, ಪದ್ಮಿನಿ ನಂದಾ, ಆಯೋಜನೆ: ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 5.30

ವಾರ್ಷಿಕ ಪ್ರಶಸ್ತಿಗಳ ಪ್ರದಾನ, ಮಹಿಳಾ ಮುನ್ನಡೆ ಪುಸ್ತಕ ಸರಣಿ ಮತ್ತು ಪಂಚಮ ಪತ್ರಿಕೆ ಸಂಪುಟಗಳ ಬಿಡುಗಡೆ ಸಮಾರಂಭ: ಅಧ್ಯಕ್ಷತೆ: ಉದಯ್ ಗರುಡಾಚಾರ್, ಅತಿಥಿ: ತೇಜಸ್ವಿ ಸೂರ್ಯ, ಪ್ರಾಸ್ತಾವಿಕ ನುಡಿ: ಎಲ್.ಎನ್.ಮುಕುಂದರಾಜ್, ಅಭಿನಂದನಾ ನುಡಿ: ಕೆ. ಮರುಳಸಿದ್ದಪ್ಪ, ಉಪಸ್ಥಿತಿ: ಜೆ.ಮಂಜುನಾಥ್, ಬಿ.ಎಸ್. ಮಂಜುನಾಥ ಸ್ವಾಮಿ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5.30

ಊಂಜಲ್ ಸಂಗೀತೋತ್ಸವ: ಗಾಯನ: ಪ್ರಾಣೇಶ್ ಭಾರಧ್ವಾಜ್, ಕೀಬೋರ್ಡ್: ಅಮಿತ್ ಶರ್ಮಾ, ತಬಲಾ: ಚಿರಾಗ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16 ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

26ನೇ ವರ್ಷದ ಪ್ರವಚನ ವಾಹಿನಿ: ನೃತ್ಯಾನಂದ ಅಕಾಡೆಮಿಯಿಂದ ಭರತನಾಟ್ಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಬೀಜ–ಭೂಮಿ: ಮಾಳವಿಕಾ ಸುರಕ್ಕಾಯ ಅವರಿಂದ ನೃತ್ಯ ಪ್ರಯೋಗ, ಆಯೋಜನೆ: ಭೂಮಿಜಾ ಸಂಸ್ಥೆ, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಶನಿವಾರ, ಜೂನ್ 6, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 156 | ಪುಟ 18
prajavani.net prajavani
www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಜ್ವರೇವ್ ಜಯದ ಓಟ



ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಜೆಕ್ ಗಣರಾಜ್ಯದ ಯಾಕೂಬ್ ಮೆನ್ಸಿಕ್ ಅವರನ್ನು ಸೋಲಿಸಿ ಫೈನಲ್ ಪ್ರವೇಶಿಸಿದರು

ಸೆನ್ಸೆಕ್ಸ್ 74,243 | ನಿಫ್ಟಿ 23,366 | $/₹ 95.18 | ಚಿನ್ನ (Std. 10g) ₹1,60,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,73,500 (ಬೆಂಗಳೂರು)


ಡಿ.ಕೆ.ಸರ್ಕಾರಕ್ಕೆ ‘ಖಾತೆ’ ಸಂಕಟ

ಬೆಂಗಳೂರು ಅಭಿವೃದ್ಧಿ ಖಾತೆ ಕೊಡದಿದ್ದಕ್ಕೆ ರಾಮಲಿಂಗಾರೆಡ್ಡಿ ರಾಜೀನಾಮೆ • ಮನವೊಲಿಕೆ ಯತ್ನ • ಹಿರಿಯರ ಮುನಿಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಎರಡೇ ದಿನದಲ್ಲಿ ಭಿನ್ನಮತ ಸ್ಫೋಟವಾಗಿದ್ದು, ಖಾತೆ ಹಂಚಿಕೆ ಬಗ್ಗೆ ಅಸಮಾಧಾನಗೊಂಡ ರಾಮಲಿಂಗಾರೆಡ್ಡಿ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಜೂನ್ 3ರಂದು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ, ರಾಮಲಿಂಗಾರೆಡ್ಡಿ ಸೇರಿದಂತೆ 13 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಸಂಪುಟದ ಸಚಿವರಿಗೆ ಜೂನ್ 4ರಂದು ಖಾತೆ ಹಂಚಿಕೆ ಮಾಡಲಾಗಿತ್ತು. ತಮಗೆ ನೀಡಿದ ಜಲಸಂಪನ್ಮೂಲ ಖಾತೆಯ ಬಗ್ಗೆ ಅಂದೇ ಬಹಿರಂಗವಾಗಿ ಆಕ್ಷೇಪ ವ್ಯಕ್ತಪಡಿಸಿದ್ದ ರಾಮಲಿಂಗಾರೆಡ್ಡಿ ತಮ್ಮ ಆಪ್ತರ ಮೂಲಕ ಮುಖ್ಯಮಂತ್ರಿ ಕಚೇರಿಗೆ ಶುಕ್ರವಾರ ರಾಜೀನಾಮೆ ಪತ್ರ ರವಾನಿಸಿದ್ದಾರೆ.



> ರಾಮಲಿಂಗಾರೆಡ್ಡಿ ರಾಜೀನಾಮೆ ಎಚ್ಚರಿಕೆ ಗಂಟೆ. ಈ ವಿಷಯವನ್ನು ನ್ಯಾಯಯುತವಾಗಿ ಬಗೆಹರಿಸಲು ಹೈಕಮಾಂಡ್ ನಾಯಕರು ಗಂಭೀರವಾಗಿ ಪರಿಗಣಿಸಬೇಕು. ರೆಡ್ಡಿ ಅವರು ರಾಜೀನಾಮೆ ನಿರ್ಧಾರವನ್ನು ಪುನರ್ ಪರಿಶೀಲಿಸಬೇಕು
>
> **ಎಚ್.ಕೆ.ಪಾಟೀಲ,** ಹಿರಿಯ ಶಾಸಕ

ಸಿ.ಎಂ ಬಗೆಹರಿಸಿಕೊಳ್ಳುತ್ತಾರೆ: ಖರ್ಗೆ

‘ಖಾತೆ ಹಂಚಿಕೆಗೂ ನನಗೂ ಸಂಬಂಧವಿಲ್ಲ. ಯಾರಿಗೆ ಯಾವ ಖಾತೆ ನೀಡಬೇಕು ಎನ್ನುವುದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸಂಬಂಧಿಸಿದ ವಿಷಯ. ಗೊಂದಲಗಳನ್ನು ಅವರೇ ಸರಿಪಡಿಸಿಕೊಳ್ಳುತ್ತಾರೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಹೊಸ ಸಂಪುಟ ರಚನೆಯಾದಾಗ ಖಾತೆಗಳ ಬಗ್ಗೆ ಬೇಡಿಕೆ ಸಲ್ಲಿಸುವುದು, ಬದಲಾವಣೆ ಕೋರುವುದು ಸಹಜ ಪ್ರಕ್ರಿಯೆ. ಎಲ್ಲ ಸರ್ಕಾರಗಳ ಅವಧಿಯಲ್ಲೂ ಇಂತಹ ಘಟನೆಗಳು ನಡೆಯುತ್ತವೆ. ಸ್ವಲ್ಪ ದಿನಗಳಲ್ಲಿ ಎಲ್ಲವೂ ಸರಿಹೋಗುತ್ತವೆ. ಎಲ್ಲದಕ್ಕೂ ನಾನು ಮಾತನಾಡಲು ಆಗುವುದಿಲ್ಲ’ ಎಂದರು.

ರಾಜೀನಾಮೆ ವಾಪಸ್ ತೆಗೆದುಕೊಳ್ಳುವಂತೆ ರೆಡ್ಡಿ ಅವರ ಮನವೊಲಿಸುವ ಯತ್ನವನ್ನು ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ವರಿಷ್ಠರು ನಡೆಸಿದ್ದಾರೆ. ‘ಮಾತು ಕೊಟ್ಟಂತೆ ಬೆಂಗಳೂರು ಅಭಿವೃದ್ಧಿ ಕೊಡುವುದಾದರೆ ಕೊಡಿ, ಇಲ್ಲದಿದ್ದರೆ ಎರಡು ವರ್ಷ ಶಾಸಕನಾಗಿಯೇ ಮುಂದುವರಿಯುತ್ತೇನೆ’ ಎಂದು ರಾಮಲಿಂಗಾರೆಡ್ಡಿ ನಿಷ್ಠುರವಾಗಿಯೇ ಹೇಳಿದ್ದಾರೆ.

5

ರೆಡ್ಡಿ ಮನವೊಲಿಕೆಗೆ ಸಿ.ಎಂ ಯತ್ನ



ಸಚಿವ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ವಾಪಸ್ ಪಡೆಯುವಂತೆ ರಾಮಲಿಂಗಾರೆಡ್ಡಿ ಅವರನ್ನು ಮನವೊಲಿಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದಾಗಿದ್ದಾರೆ.

ರಾಜೀನಾಮೆ ನೀಡಿ ತಮಿಳುನಾಡಿನ ಧರ್ಮಪುರಿಗೆ ತೆರಳಿದ್ದ ರಾಮಲಿಂಗಾರೆಡ್ಡಿ ಅವರು ರಾತ್ರಿಯ ವೇಳೆಗೆ ನಗರಕ್ಕೆ ವಾಪಸಾದರು. ಜಯನಗರದ ಹೋಟೆಲ್ ಒಂದರಲ್ಲಿ ಅವರು ಇರುವ ಬಗ್ಗೆ ಮಾಹಿತಿ ಪಡೆದುಕೊಂಡ ಶಿವಕುಮಾರ್ ಅವರು, ತಕ್ಷಣವೇ ಅಲ್ಲಿಗೆ ದೌಡಾಯಿಸಿದರು. ಅಲ್ಲಿಯೇ ರಾಮಲಿಂಗಾರೆಡ್ಡಿ ಅವರನ್ನು ಭೇಟಿ ಮಾಡಿ, ಹೈಕಮಾಂಡ್‌ನ ನಿಲುವನ್ನು ತಿಳಿಸಿದರು ಮತ್ತು ರಾಜೀನಾಮೆ ವಾಪಸ್ ಪಡೆಯುವಂತೆ ಒಪ್ಪಿಸಲು ಯತ್ನಿಸಿದರು. ಮನವೊಲಿಕೆ ಯತ್ನದ ಫಲ ಏನಾಗಿದೆ ಎಂಬ ಮಾಹಿತಿ ಲಭ್ಯವಾಗಿಲ್ಲ.

‘ಮಾತು ಕೊಟ್ಟಿದ್ದು ನಿಜ’: ‘ಬೆಂಗಳೂರು ಅಭಿವೃದ್ಧಿ ಖಾತೆ ನೀಡುವುದಾಗಿ ನಾನು, ನನ್ನ ತಮ್ಮ ಭೇಟಿಯಾಗಿದ್ದಾಗ ರಾಮಲಿಂಗಾರೆಡ್ಡಿ ಅವರಿಗೆ ಮಾತು ಕೊಟ್ಟಿದ್ದು ನಿಜ’ ಎಂದು ಶಿವಕುಮಾರ್ ಅವರು ಶುಕ್ರವಾರ ಬೆಳಿಗ್ಗೆ ಹೇಳಿದ್ದರು.

ಮುನಿಯಪ್ಪ ಪಟ್ಟು, ಬಗೆಹರಿದ ಬಿಕ್ಕಟ್ಟು



ರಾಮಲಿಂಗಾರೆಡ್ಡಿ ರಾಜೀನಾಮೆ ಬೆನ್ನಲ್ಲೇ ಮತ್ತೊಬ್ಬ ಹಿರಿಯ ಸಚಿವ ಕೆ.ಎಚ್.ಮುನಿಯಪ್ಪ ಖಾತೆ ಬದಲಾವಣೆಗೆ ಪಟ್ಟು ಹಿಡಿದು, ಸಮಾಜ ಕಲ್ಯಾಣ ಅಥವಾ ಕೃಷಿ ಖಾತೆಗೆ ನೀಡುವಂತೆ ಒತ್ತಡ ಹಾಕಿದ್ದರು. ಕಾಂಗ್ರೆಸ್ ಹೈಕಮಾಂಡ್ ನಾಯಕರ ಭರವಸೆಯ ನಂತರ ಮಂದಹಾಸ ಬೀರಿದರು.

ಶುಕ್ರವಾರ ಬೆಳಿಗ್ಗೆ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸುಮಾರು 50 ವರ್ಷ ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿಯಾಗಿ ಕೆಲಸ ಮಾಡಿದ್ದೇನೆ. ಖಾತೆಗಳ ಹಂಚಿಕೆಯಲ್ಲಿ ಹಿರಿತನ ಕಾಪಾಡಬೇಕು. ಸಮಾಜಕ್ಕೆ ಉಪಯೋಗವಾಗುವ ಖಾತೆಗಳ ಹಂಚಿಕೆ ಆಗಬೇಕು’ ಎಂದರು.

5

ಮಳೆ ಬಂತು...

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್



ಮಂಗಳೂರಿನಲ್ಲಿ ಶುಕ್ರವಾರ ಮುಂಗಾರು ಆರಂಭವಾಗಿದ್ದು, ವಾಹನ ಸವಾರರು ಹಾಗೂ ಪಾದಚಾರಿಗಳು ಮಳೆಯಲ್ಲೇ ಸಾಗಿದರು

ಕೇರಳಂಗೆ ಮುಂಗಾರು ಪ್ರವೇಶ

ವಿವಿಧೆಡೆ ಬಿರುಗಾಳಿ ಸಹಿತ ಭಾರಿ ಮಳೆ: ಆಸ್ತಿಗೆ ಹಾನಿ

ತಿರುವನಂತಪುರ (ಪಿಟಿಐ): ಕೇರಳಂ ರಾಜ್ಯಕ್ಕೆ ಮುಂಗಾರು ಪ್ರವೇಶಿಸಿದ್ದು, ವಿವಿಧ ಭಾಗಗಳಲ್ಲಿ ಶುಕ್ರವಾರ ಬಿರುಗಾಳಿ ಸಹಿತ ಭಾರಿ ಮಳೆಯಾಗಿದೆ.

ಮಳೆ ಹೆಚ್ಚುತ್ತಿರುವ ಕಾರಣ ರಾಜ್ಯದ 8 ಜಿಲ್ಲೆಗಳಿಗೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ‘ಆರೆಂಜ್ ಅಲರ್ಟ್’ ಘೋಷಿಸಿದೆ.

ವಾರಾಂತ್ಯದಲ್ಲಿ ಮಳೆ ಮತ್ತಷ್ಟು ಬಿರುಸು ಪಡೆಯುವ ಸಾಧ್ಯತೆ ಇದ್ದು, ಶನಿವಾರದ ಮಟ್ಟಿಗೆ ಮಲಪ್ಪುರಂ, ಕೋಯಿಕ್ಕೋಡ್, ವಯನಾಡ್, ಕಣ್ಣೂರು, ಕಾಸರಗೋಡು ಜಿಲ್ಲೆಗಳಲ್ಲಿ ‘ರೆಡ್ ಅಲರ್ಟ್’ ಘೋಷಿಸಲಾಗಿದೆ. ಮೂರು ಜಿಲ್ಲೆಗಳಲ್ಲಿ ಭಾನುವಾರವೂ ರೆಡ್ ಅಲರ್ಟ್ ಘೋಷಿಸಲಾಗಿದೆ.

ಈ ಜಿಲ್ಲೆಗಳಲ್ಲಿ ಗಂಟೆಗೆ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದ್ದು, ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಐಎಂಡಿ ಎಚ್ಚರಿಕೆ ನೀಡಿದೆ.

ವಯನಾಡ್, ಕೋಯಿಕ್ಕೋಡ್ ಹಾಗೂ ಕಾಸರಗೋಡು ಜಿಲ್ಲೆಗಳ ಪ್ರವಾಸಿ ತಾಣಗಳಿಗೆ ಪ್ರವಾಸಿಗರ ಪ್ರವೇಶ, ಬೆಟ್ಟ ಪ್ರದೇಶಗಳ ರಸ್ತೆಗಳಲ್ಲಿ ರಾತ್ರಿ ಪ್ರಯಾಣ ಹಾಗೂ ಕಲ್ಲು ಗಣಿಗಾರಿಕೆಯನ್ನು ನಿಷೇಧಿಸಲಾಗಿದೆ.

ವಯನಾಡ್, ಕಾಸರಗೋಡು ಜಿಲ್ಲೆಗಳಲ್ಲಿ ಜೂನ್ 6ರಂದು ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಎರ್ನಾಕುಲಂ, ತ್ರಿಶ್ಯೂರ್, ಪಾಲಕ್ಕಾಡ್, ಮಲಪ್ಪುರಂ, ಕೋಯಿಕ್ಕೋಡ್, ಕಣ್ಣೂರು ಹಾಗೂ ಕಾಸರಗೋಡು ಜಿಲ್ಲೆಗಳಲ್ಲಿ ಶುಕ್ರವಾರವೇ ‘ಆರೆಂಜ್ ಅಲರ್ಟ್’ ಘೋಷಿಸಲಾಗಿತ್ತು. ಉಳಿದ ಆರು ಜಿಲ್ಲೆಗಳಲ್ಲಿ ‘ಯೆಲ್ಲೋ ಅಲರ್ಟ್’ ಘೋಷಿಸಿತ್ತು.

ಭಾರಿ ಮಳೆಯಿಂದ ಕೊಚ್ಚಿ ಮಹಾನಗರ ಪಾಲಿಕೆ ವ್ಯಾಪ್ತಿಯ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿತ್ತು, ಇದರಿಂದ ರೊಚ್ಚಿಗೆದ್ದ ನಿವಾಸಿಗಳು ಪಾಲಿಕೆಯ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದರು. ಕೋಯಿಕ್ಕೋಡ್‌ನಲ್ಲಿ ಭಾರಿ ಮಳೆ ಹಾಗೂ ಬಿರುಗಾಳಿಯಿಂದ ಹಲವು ಕಟ್ಟಡಗಳ ಗೋಡೆ ಹಾಗೂ ಚಾವಣಿಗಳು ಕುಸಿದಿವೆ. ಮರಗಳು ಉರುಳಿ ಹಲವು ವಾಹನಗಳಿಗೆ ಹಾನಿಯಾಗಿದೆ.

ಮುಖ್ಯಾಂಶಗಳು

- 8 ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಘೋಷಿಸಿದ ಐಎಂಡಿ
- ವಾರಾಂತ್ಯದಲ್ಲಿ ಮಳೆ ಮತ್ತಷ್ಟು ಬಿರುಸು ಪಡೆಯುವ ಸಾಧ್ಯತೆ
- ಪ್ರವಾಸಿ ತಾಣಗಳಿಗೆ ಪ್ರವಾಸಿಗರ ಪ್ರವೇಶ ನಿಷೇಧ

ರಾಜ್ಯದ ವಿವಿಧೆಡೆ ಬಿರುಸಿನ ಮಳೆ

ಮಂಗಳೂರು: ಕೇರಳಂಗೆ ಮುಂಗಾರು ಪ್ರವೇಶಿಸಿದ ಒಂದೇ ದಿನದಲ್ಲಿ ದಕ್ಷಿಣ ಕನ್ನಡದಲ್ಲಿ ಮಳೆ ಬಿರುಸುಗೊಂಡಿದ್ದು ಹಲವು ಕಡೆ ಹಾನಿಯಾಗಿದೆ. ಮೂಡುಬಿದಿರೆಯ ಮಿಜಾರಿನಲ್ಲಿ ರಾಷ್ಟ್ರೀಯ ಹೆದ್ದಾರಿಯ ರಸ್ತೆಯ ಒಂದು ಬದಿ ಕೊಚ್ಚಿಹೋಗಿದೆ.

ವಿವರ ಪುಟ 5

ಚಿನಕುರುಳಿ ಪ್ರಕಾಶ್ ಶೆಟ್ಟಿ



ಮಲ್ಲಿಕಾರ್ಜುನ ಖರ್ಗೆ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆಗೆ ಇದೇ 18ರಂದು ನಡೆಯಲಿರುವ ಚುನಾವಣೆಗೆ ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಎಂ.ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಈ ವೇಳೆ ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್‌ಗಾಂಧಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಕಾಂಗ್ರೆಸ್ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಪಕ್ಷದ ಮುಖಂಡ ಜೈರಾಂ ರಮೇಶ್ ಮತ್ತು ಇತರರಿದ್ದರು.

5

ಸಿಇಟಿ: ಇಂದು ಫಲಿತಾಂಶ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ್ದ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಶನಿವಾರ (ಜೂನ್ 6) ಪ್ರಕಟವಾಗಲಿದೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಮಧ್ಯಾಹ್ನ 12ಕ್ಕೆ ಫಲಿತಾಂಶವನ್ನು ಪ್ರಕಟಿಸಲಿದ್ದಾರೆ. ರಾಜ್ಯದ 745 ಪರೀಕ್ಷಾ ಕೇಂದ್ರಗಳಲ್ಲಿ ಏ.23 ಮತ್ತು 24ರಂದು ಸಿಇಟಿ ನಡೆಸಲಾಗಿತ್ತು. 23ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ಹಾಗೂ 24ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆಗಳು ನಡೆದಿದ್ದವು. ಹೊರನಾಡು ಮತ್ತು ಗಡಿನಾಡು ಕನ್ನಡಿಗರಿಗೆ 22ರಂದು ಕನ್ನಡ ಭಾಷಾ ಪರೀಕ್ಷೆ ಬೆಂಗಳೂರು, ಮಂಗಳೂರು, ವಿಜಯಪುರ ಮತ್ತು ಬೆಳಗಾವಿ ನಗರಗಳ ಒಟ್ಟು ಐದು ಕೇಂದ್ರಗಳಲ್ಲಿ ಆಯೋಜಿಸಲಾಗಿತ್ತು. 3.30 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಆರ್ಥಿಕ ವರ್ಷ 2025–26 ಜಿಡಿಪಿ ಶೇ 7.7 ಪ್ರಗತಿ

ನವದೆಹಲಿ (ಪಿಟಿಐ): ದೇಶದ ಒಟ್ಟಾರೆ ಆಂತರಿಕ ಉತ್ಪನ್ನ (ಜಿಡಿಪಿ) 2025–26ನೇ ಸಾಲಿನ ನಾಲ್ಕನೆಯ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ಶೇ 7.8ರಷ್ಟು ಬೆಳವಣಿಗೆ ಕಂಡಿದ್ದು, ಪೂರ್ಣ ಆರ್ಥಿಕ ವರ್ಷದಲ್ಲಿ ಶೇ 7.7ರಷ್ಟು ಬೆಳವಣಿಗೆ ದರ ದಾಖಲಾಗಿದೆ.



ಕಚ್ಚಾತೈಲದ ಬೆಲೆ ಏರಿಕೆ, ಪೂರೈಕೆ ಸರಪಳಿ ಅಡಚಣೆ ಸೇರಿದಂತೆ ಹಲವು ಅಂಶಗಳು ದೇಶದ ಆರ್ಥಿಕತೆ ಮೇಲೆ ನಕಾರಾತ್ಮಕ ಪರಿಣಾಮ ಬೀರಿದರೂ, ಬೇಡಿಕೆಯಲ್ಲಿನ ಸುಸ್ಥಿರತೆ ಮತ್ತು ಸದೃಢವಾದ ಹೂಡಿಕೆಯಿಂದ ‘ಜಿಡಿಪಿ’ ದರ ಬೆಳವಣಿಗೆ ಕಂಡಿದೆ. 2024–25ರ ಪೂರ್ಣ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇ 7.1ರಷ್ಟಿತ್ತು.

10

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆ ಬೀಳುವ ಸಾಧ್ಯತೆ ಇದೆ

ಹೋಟೆಲ್‌ನಲ್ಲಿ ಗಲಾಟೆ: ಬಾಟಲಿಯಿಂದ ಹಲ್ಲೆ

ಅಪರಿಚಿತರ ವಿರುದ್ಧ ಪ್ರಕರಣ ದಾಖಲು • ನ್ಯೂ ಬಿ.ಇ.ಎಲ್ ಬಳಿಯ ಪಬ್‌ನಲ್ಲಿ ನಡೆದ ಗಲಾಟೆಯಲ್ಲಿ ವ್ಯಕ್ತಿಗೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರೆಸಿಡೆನ್ಸಿ ರಸ್ತೆಯ 'ವಿ-ನೇಬರ್‌ಹುಡ್ ಕಮ್ಯುನಿಟಿ' ಹೋಟೆಲ್‌ನಲ್ಲಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಚ್‌ಎಸ್‌ಆರ್ ಲೇಔಟ್‌ನ ನಿವಾಸಿ ಕುಶ್ವಂತ್ ಶಂಕ್ಲಾ ನೀಡಿದ ದೂರಿನ ಮೇಲೆ ಹಲ್ಲೆ ನಡೆಸಿದ ಅಪರಿಚಿತರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೇ 31ರಂದು ಕುಶ್ವಂತ್ ಶಂಕ್ಲಾ ಅವರು ತಮ್ಮ ಸ್ನೇಹಿತರೊಂದಿಗೆ ಊಟಕ್ಕೆಂದು ಹೋಟೆಲ್‌ಗೆ ಬಂದಿದ್ದರು. ರಾತ್ರಿ 10.30ರ ಸಂದರ್ಭದಲ್ಲಿ ಆರ್‌ಸಿಬಿ ಹಾಗೂ ಗುಜರಾತ್ ಟೈಟನ್ಸ್ ತಂಡಗಳ ನಡುವೆ ನಡೆದ ಐಪಿಎಲ್ ಟೂರ್ನಿ ಫೈನಲ್ ಪಂದ್ಯವನ್ನು ವೀಕ್ಷಣೆ ಮಾಡುತ್ತಿದ್ದರು. ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ಜಯಗಳಿಸಿದ ಬಳಿಕ, ಹೋಟೆಲ್‌ನಲ್ಲಿ ನಡೆದ ವಿಜಯೋತ್ಸವದಲ್ಲಿ ಕುಶ್ವಂತ್ ಹಾಗೂ ಅವರ ಸ್ನೇಹಿತರು ಪಾಲ್ಗೊಂಡಿದ್ದರು. ಪಕ್ಕದ ಟೇಬಲ್‌ನಲ್ಲಿದ್ದ ವ್ಯಕ್ತಿಗಳು ಗಲಾಟೆ ಮಾಡುತ್ತಾ ಬಾಟಲಿಯಿಂದ ಕುಶ್ವಂತ್ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ತೀವ್ರ ಹಲ್ಲೆಯಿಂದ ಕುಶ್ವಂತ್ ಶಂಕ್ಲಾ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದರು. ಆಸ್ಪತ್ರೆಯಿಂದ ಬಿಡುಗಡೆಯಾದ ಮೇಲೆ ಠಾಣೆಗೆ ಬಂದು ದೂರು ನೀಡಿದ್ದಾರೆ. ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಹೋಟೆಲ್‌ನಲ್ಲಿ ಇರುವ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ನಿಂದಿಸಿ ಹಲ್ಲೆ: ಮತ್ತೊಂದು ಪ್ರಕರಣದಲ್ಲಿ ಐಪಿಎಲ್ ಫೈನಲ್ ಪಂದ್ಯ ವೀಕ್ಷಣೆ ಮಾಡುತ್ತಿದ್ದ ಯುವಕನ ಮೇಲೆ ನಾಲ್ವರು ಹಲ್ಲೆ ನಡೆಸಿದ್ದು, ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮೇ 31ರಂದು ಕೆವಿಆರ್ ನಾಯ್ಡು ಲೇಔಟ್ ನಿವಾಸಿ ಎ.ಎ.ಸುಹಾಸ್ ತಮ್ಮ ಸ್ನೇಹಿತರಾದ ಶೇಖರ್, ಮಣಿಕಂಠನ್, ಮಂಜುನಾಥ್, ಗಗನ್ ಅವರ ಜತೆಗೆ ನ್ಯೂ ಬಿ.ಇ.ಎಲ್ ರಸ್ತೆಯ ಕೋಕೋ ಬೋಲೊ ಪಬ್‌ಗೆ ಊಟಕ್ಕೆಂದು ತೆರಳಿದ್ದರು. ಟೇಬಲ್ ಸಿಗದೇ ನಿಂತು ಕ್ರಿಕೆಟ್ ಪಂದ್ಯ ವೀಕ್ಷಣೆ ಮಾಡುತ್ತಿದ್ದರು. ಅಷ್ಟರಲ್ಲಿ ಸ್ಥಳಕ್ಕೆ ಬಂದ ನಾಲ್ವರು ಆರೋಪಿಗಳು, ಸುಹಾಸ್ ಅವರನ್ನು ಅವಾಚ್ಯ ಶಬ್ದದಿಂದ ನಿಂದಿಸಿ ಹಲ್ಲೆ ನಡೆಸಿದ್ದರು. ಬಳಿಕ ನೆಲಕ್ಕೆ ಬೀಳಿಸಿ ಕುತ್ತಿಗೆ ಮೇಲೆ ಕುಳಿತು ಬೆದರಿಕೆ ಹಾಕಿದ್ದರು ಎಂದು ಮೂಲಗಳು ಹೇಳಿವೆ.

ಸುಹಾಸ್ ಅವರನ್ನು ಸ್ನೇಹಿತರೇ ಕೆ.ಸಿ ಜನರಲ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ ಮನೆಗೆ ಬಿಟ್ಟಿದ್ದರು. ಸುಹಾಸ್ ಗಾಯಗೊಂಡಿದ್ದರಿಂದ ತಡವಾಗಿ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದಾರೆ. ದೂರು ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಕೇರಳಂ ಲಾಟರಿ ಹೆಸರಿನಲ್ಲಿ ₹13.71 ಲಕ್ಷ ವಂಚನೆ

ಬೆಂಗಳೂರು: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ವಾಟ್ಸ್‌ಆ್ಯಪ್ ಮೂಲಕ ಕರೆ ಮಾಡಿದ ಸೈಬರ್ ವಂಚಕರು, 'ಕೇರಳಂ ಲಾಟರಿಯಲ್ಲಿ ಬಹುಮಾನ ಬಂದಿದೆ' ಎಂದು ನಂಬಿಸಿ ಒಟ್ಟು ₹13.71 ಲಕ್ಷ ದೋಚಿದ್ದಾರೆ.

60 ವರ್ಷದ ಉದ್ಯೋಗಿಯಿಂದ ₹7.45 ಲಕ್ಷ ಹಾಗೂ ಮಾರುತಿನಗರದ ನಿವಾಸಿಯಿಂದ ₹6.26 ಲಕ್ಷವನ್ನು ಸೈಬರ್ ವಂಚಕರು ದೋಚಿದ್ದಾರೆ ಎಂದು ಸೈಬರ್ ಅಪರಾಧ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ವಾಟ್ಸ್‌ಆ್ಯಪ್ ಮೂಲಕ ಕರೆ ಮಾಡಿದ ವಂಚಕರು, 'ಕೇರಳಂ ಲಾಟರಿಯಲ್ಲಿ ಬಹುಮಾನ ಬಂದಿದೆ' ಎಂದು ದೂರುದಾರರನ್ನು ನಂಬಿಸಿದ್ದರು. ಲಾಟರಿ ಬಂದಿರುವುದನ್ನು ಖಚಿತ ಪಡಿಸಿಕೊಳ್ಳಲು ನಕಲಿ ವೆಬ್‌ಸೈಟ್ ವಿಳಾಸವನ್ನು ಸೈಬರ್ ಕಳ್ಳರು ಕಳುಹಿಸಿದ್ದರು. ಇಬ್ಬರೂ ಲಿಂಕ್ ತೆರೆದಾಗ ಲಾಟರಿ ಗೆದ್ದಿರುವಂತೆ ತೋರಿಸುವ ಫೋಟೊವೊಂದು ಕಾಣ ಬಂದಿತ್ತು. ಇಬ್ಬರ ನಂಬಿಕೆ ಗಿಟ್ಟಿಸಿಕೊಳ್ಳಲು ಆರೋಪಿಯ ಹೆಸರಿನ ನಕಲಿ ಪತ್ರಗಳನ್ನು ಕಳುಹಿಸಿದ್ದರು. ನಂತರ, ಜಿಎಸ್‌ಟಿ, ಟಿಡಿಎಸ್, ಆದಾಯ ತೆರಿಗೆ ಪಾವತಿಸುವಂತೆ ತಿಳಿಸಿ, ಹಂತ ಹಂತವಾಗಿ ಇಬ್ಬರಿಂದ ₹13.71 ಲಕ್ಷವನ್ನು ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದಾರೆ ಎಂದು ಸೈಬರ್ ಠಾಣೆಯ ಮೂಲಗಳು ತಿಳಿಸಿವೆ.

ಹಣ ವರ್ಗಾವಣೆಯಾದ ಮೇಲೆ ದೂರುದಾರರು, ಆರೋಪಿಗಳ ಮೊಬೈಲ್‌ಗಳಿಗೆ ಕರೆ ಮಾಡಿದಾಗ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಆದಾದ ಮೇಲೆ ವಂಚನೆಗೆ ಒಳಗಾಗಿರುವುದನ್ನು ಅರಿತ ಇಬ್ಬರೂ ಠಾಣೆಗೆ ದೂರು ನೀಡಿದ್ದಾರೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಆಟೊ ಪಲ್ಟಿಯಾಗಿ ಇಬ್ಬರು ಸಾವು

ಕೊಳ್ಳೇಗಾಲ: ತಾಲ್ಲೂಕಿನ ಮಧುವನ ಹಳ್ಳಿ- ನರೀಪುರದ ಬೈಪಾಸ್ ರಸ್ತೆಯಲ್ಲಿ ಶುಕ್ರವಾರ ಆಟೊ ರಿಕ್ಷಾ ಮಗುಚಿಬಿದ್ದು ಇಬ್ಬರು ಮೃತಪಟ್ಟು, ಒಬ್ಬರು ಗಾಯಗೊಂಡಿದ್ದಾರೆ.


ಬೆಂಗಳೂರಿನ ಕೀರ್ತಿರಾಜ್ ಹಾಗೂ ಮನೋಜ್ ಮೃತರು. ಕಲಬುರಗಿಯ ಲಕ್ಷ್ಮೀಕಾಂತ್ ಗಾಯಗೊಂಡಿದ್ದಾರೆ.

ವರದಕ್ಷಿಣೆ ಕಿರುಕುಳದ ಆರೋಪ • ಕುಂಬಳಗೋಡು ಠಾಣೆಯಲ್ಲಿ ಪ್ರಕರಣ ದಾಖಲು

ಕೆರೆಯಲ್ಲಿ ಮಹಿಳೆ ಶವ ಪತ್ತೆ, ಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ದಿನಗಳ ಹಿಂದೆ ನಾಪತ್ತೆಯಾಗಿದ್ದ ಮಹಿಳೆಯ ಮೃತದೇಹ ಕುಂಬಳಗೋಡು ಪೊಲೀಸ್ ಠಾಣಾ ವ್ಯಾಪ್ತಿಯ ಕೆರೆಯಲ್ಲಿ ಶುಕ್ರವಾರ ಬೆಳಿಗ್ಗೆ ಪತ್ತೆಯಾಗಿದ್ದು, ಆತ್ಮಹತ್ಯೆಯ ಶಂಕೆ ವ್ಯಕ್ತವಾಗಿದೆ.



ಚೈತ್ರಾ

ಕೊಮ್ಮಘಟ್ಟದ ನಿವಾಸಿ ಚೈತ್ರಾ (29) ಮೃತ ಮಹಿಳೆ.

ಕೆರೆಯಲ್ಲಿ ಮೃತದೇಹ ತೇಲುತ್ತಿರುವುದನ್ನು ಗಮನಿಸಿದ್ದ ಸ್ಥಳೀಯರು, ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು, ಅಗ್ನಿಶಾಮಕ ಹಾಗೂ ತುರ್ತು ಸೇವಾ ದಳದ ಸಿಬ್ಬಂದಿ ನೆರವು ಪಡೆದು ಮೃತದೇಹವನ್ನು ಹೊರಕ್ಕೆ ತೆಗೆದರು ಎಂದು ಮೂಲಗಳು ಹೇಳಿವೆ.

'ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಪತಿ ಶರತ್ ಕುಮಾರ್ ಅವರನ್ನು ಬಂಧಿಸಲಾಗಿದೆ. ಶರತ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 80ರ ಅಡಿ ಪ್ರಕರಣ ದಾಖಲು ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಶರತ್ ಅವರು ಆರು ವರ್ಷದ ಹಿಂದೆ ಚೈತ್ರಾ ಅವರನ್ನು ಮದುವೆ ಆಗಿದ್ದರು. ಶರತ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಕೊಮ್ಮಘಟ್ಟದ ಬಾಡಿಗೆ ಮನೆಯಲ್ಲಿ ದಂಪತಿ ನೆಲಸಿದ್ದರು. ವರದಕ್ಷಿಣೆ ತರುವಂತೆ ಶರತ್ ಕಿರುಕುಳ ನೀಡುತ್ತಿದ್ದರು. ಪತಿಯ ವರ್ತನೆಯಿಂದ ಬೇಸತ್ತಿದ್ದ ಚೈತ್ರಾ ನಾಲ್ಕು ದಿನಗಳ ಹಿಂದೆ ಮನೆ ಬಿಟ್ಟು ತೆರಳಿದ್ದರು. ಬಳಿಕ, ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.


ಕುಂಬಳಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರದಿಂದ ಬಿದ್ದು ಎಂಎಸ್‌ಸಿ ವಿದ್ಯಾರ್ಥಿ ಸಾವು

ಬೆಂಗಳೂರು: ಯಲಹಂಕದ ಜಿ.ಕೆ.ವಿ.ಕೆ ಆವರಣದಲ್ಲಿ ಹಲಸಿನ ಹಣ್ಣು ಕೀಳಲು ಹೋಗಿ ಮರದಿಂದ ಬಿದ್ದು ವಿದ್ಯಾರ್ಥಿ ಮೃತಪಟ್ಟಿದ್ದಾರೆ.

ಆಕಾಶ್ (23) ಮೃತ ವಿದ್ಯಾರ್ಥಿ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯ ಆಕಾಶ್ ಅವರು ಜಿಕೆವಿಕೆ ಆವರಣದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಎಂಎಸ್‌ಸಿ (ಕೃಷಿ) ಓದುತ್ತಿದ್ದು ಜಿಕೆವಿಕೆ ಆವರಣದಲ್ಲಿರುವ ಹಾಸ್ಟೆಲ್‌ನಲ್ಲಿ ನೆಲಸಿದ್ದರು. ಗುರುವಾರ ರಾತ್ರಿ, ಹಾಸ್ಟೆಲ್ ಎದುರಿದ್ದ ಮರಕ್ಕೆ ಹತ್ತಿ ಹಲಸಿನ ಹಣ್ಣು ಕೀಳುತ್ತಿದ್ದರು. ಆಗ ನಿಯಂತ್ರಣ ತಪ್ಪಿ ಮರದಿಂದ ಕೆಳಕ್ಕೆ ಬಿದ್ದು, ಗಂಭೀರವಾಗಿ ಗಾಯಗೊಂಡಿದ್ದರು. ಆಕಾಶ ಅವರನ್ನು ಸ್ನೇಹಿತರು ಆಸ್ಪತ್ರೆಗೆ ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ಶುಕ್ರವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.



ಆಕಾಶ್

ಘಟನಾ ಸ್ಥಳಕ್ಕೆ ಯಲಹಂಕ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಎನ್‌ಎಸ್‌ಎಸ್‌ನಲ್ಲಿ ರಾಷ್ಟ್ರಪತಿ ಅವರಿಂದ ಆಕಾಶ್ ಅವರು ಉತ್ತಮ ಸ್ವಯಂ ಸೇವಕ ಪ್ರಶಸ್ತಿ ಪಡೆದಿದ್ದರು. 2024ರಲ್ಲಿ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದರು ಎಂದು ಮೂಲಗಳು ಹೇಳಿವೆ.

ರೈಲಿನಿಂದ ಬಿದ್ದು ವ್ಯಕ್ತಿ ಸಾವು

ಬೆಂಗಳೂರು: ನಗರದ ಜ್ಞಾನಭಾರತಿ ರೈಲು ನಿಲ್ದಾಣದ ಬಳಿ ಚಲಿಸುತ್ತಿದ್ದ ರೈಲಿನಿಂದ ಬಿದ್ದು ಪ್ರಯಾಣಿಕರೊಬ್ಬರು ಸ್ಥಳದಲ್ಲೇ ಶುಕ್ರವಾರ ಮೃತಪಟ್ಟಿದ್ದಾರೆ.

ಕೆ.ಹೊಸೂರು ನಿವಾಸಿ ಗಿರೀಶ್ (37) ಮೃತರು. ಶುಕ್ರವಾರ ಬೆಳಿಗ್ಗೆ 7.45ರ ಸುಮಾರಿಗೆ ಬೆಂಗಳೂರು-ಮೈಸೂರು ಪ್ಯಾಸೆಂಜರ್ ರೈಲು ಜ್ಞಾನಭಾರತಿ ರೈಲು ನಿಲ್ದಾಣದ ಬಳಿ ನಿಧಾನವಾಗಿ ಚಲಿಸುತ್ತಿತ್ತು. ಬಾಗಿಲು ಬಳಿಯೇ ನಿಂತಿದ್ದ ಗಿರೀಶ್ ಅವರು ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದು ಮೃತಪಟ್ಟಿದ್ದಾರೆ ಎಂದು ರೈಲ್ವೆ ಪೊಲೀಸರು ಹೇಳಿದರು.

'ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ಬಾಗಿಲು ಬಳಿ ನಿಂತಿದ್ದಾಗ ನಿಯಂತ್ರಣ ತಪ್ಪಿ ಕೆಳಕ್ಕೆ ಬಿದ್ದಿದ್ದೇ ಘಟನೆಗೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದ್ದು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಗರ್ಭಿಣಿ ಸೇರಿ ಮೂವರ ಹತ್ಯೆ

ಗುವಾಹಟಿ: ಅಪರಿಚಿತ ದುಷ್ಕರ್ಮಿಗಳು ಶುಕ್ರವಾರ ಬೆಳಗಿನ ಜಾವ ಕುಕಿ ಸಮುದಾಯದ ಗರ್ಭಿಣಿ ಸೇರಿ ಮೂವರನ್ನು ಹತ್ಯೆ ಮಾಡಿದ್ದಾರೆ.

ಮಣಿಪುರದ ಕಾಂಗ್ಪೋಕ್ಪಿ ಜಿಲ್ಲೆಯಲ್ಲಿ ಕುಕಿ ಹಾಗೂ ಮೈತೇಯಿ ಸಮುದಾಯಗಳ ನಡುವೆ ಸಂಘರ್ಷ ನಡೆಯುತ್ತಲೇ ಇದ್ದು, ಲಾಯಿಬೋಲ್ ಖುಲ್ಲೆನ್ ಗ್ರಾಮದಲ್ಲಿ ಶುಕ್ರವಾರ ಬೆಳಗಿನ ಜಾವ 4 ಗಂಟೆ ಸುಮಾರಿಗೆ ದಾಳಿ ನಡೆಸಿ, ಮೂವರನ್ನು ಹತ್ಯೆ ಮಾಡಲಾಗಿದೆ. ಏಳು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ. ತಿನ್ಮೇರಿ ಎಂಬ ಏಳು ತಿಂಗಳ ಗರ್ಭಿಣಿಯನ್ನೂ ಕೊಂದಿದ್ದಾರೆ ಎಂದು ಕುಕಿ ಇನ್ಪಿ ಮಣಿಪುರದ (ಕೆಐಎಂ) ವಕ್ತಾರ ಜಾಂಘಾವೊಲುನ್ ಹವೋಕಿಪ್ ತಿಳಿಸಿದ್ದಾರೆ.

'ಈ ದುಷ್ಕೃತ್ಯದ ಹಿಂದೆ ಎನ್‌ಎಸ್‌ಸಿಎನ್-ಐಎಂ, ಜೆಲಿಯಾಂಗ್ರೋಂಗ್ ಒಕ್ಕೂಟದ ಕೈವಾಡ ಇದೆ' ಎಂದು ಕೆಐಎಂ ಶಂಕೆ ವ್ಯಕ್ತಪಡಿಸಿದೆ. ಹತ್ಯೆ ಮಾಡಿದವರನ್ನು ಪತ್ತೆ ಮಾಡಲು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಅಮಾಯಕ ಜನರ ಮೇಲಿನ ದಾಳಿಯು ಅಕ್ಷಮ್ಯ' ಎಂದು ಮುಖ್ಯಮಂತ್ರಿ ಯುಮ್‌ನಾಮ್ ಖೇಮ್‌ಚಂದ್ ಸಿಂಗ್ ಹೇಳಿದ್ದಾರೆ.

ಕಬ್ಬಿಣ ಅಕ್ರಮ ಮಾರಾಟ ಲಾರಿ ಚಾಲಕ ಬಂಧನ

ಶಿರಾ: ತಾಲ್ಲೂಕಿನ ಜೋಡಿದೇವರಹಳ್ಳಿಯಲ್ಲಿನ 'ಸನ್‌ವಿಕ್' ಫ್ಯಾಕ್ಟರಿಯಿಂದ ಲಾರಿಯಲ್ಲಿ ಕಬ್ಬಿಣ ತುಂಬಿಕೊಂಡು ಹೋಗಿ ಬೇರೆಡೆ ಮಾರಾಟ ಮಾಡಿದ್ದ ಲಾರಿ ಚಾಲಕನನ್ನು ಕಳ್ಳಂಬೆಳ್ಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ರಾಮಿನ್ ಕೊಪ್ಪ ಗ್ರಾಮದ ಲಾರಿ ಚಾಲಕ ಮಹಮದ್ ಅಕ್ತರ್ ಹಾಗೂ ಶಿವಮೊಗ್ಗ ಜಿಲ್ಲೆಯ ರಾಮನಗರ ಗ್ರಾಮದ ಶೇಕ್ ಇಮ್ರಾನ್ ಬಂಧಿತರು.

ಆರೋಪಿಗಳು ಬೆಂಗಳೂರಿನ ಯಲಹಂಕದ 'ಶ್ರೀಸಿದ್ಧಿ ವಿನಾಯಕ ಟ್ರೇಡರ್ಸ್'ಗೆ ತಲುಪಿಸಬೇಕಿದ್ದ 20 ಟನ್ ಕಬ್ಬಿಣವನ್ನು ಬೇರೆಡೆ ಮಾರಾಟ ಮಾಡಿಕೊಂಡಿದ್ದರು. ಲಾರಿ ಚಾಲಕನಿಗೆ ಕರೆ ಮಾಡಿದರೆ ಮೊಬೈಲ್ ಸ್ವಿಚ್ಡ್ ಆಫ್ ಆಗಿದ್ದು, ಈ ಬಗ್ಗೆ ತನಿಖೆ ನಡೆಸುವಂತೆ ಕಳ್ಳಂಬೆಳ್ಳ ಪೊಲೀಸರಿಗೆ 'ಸನ್‌ವಿಕ್' ಕಂಪನಿಯ ಜಾರ್ಜ್ ವಿಲ್ಸನ್ ದೂರು ನೀಡಿದ್ದರು.

30ರಿಂದ ಮನೆ–ಮನೆಗೆ ಅಧಿಕಾರಿಗಳ ಭೇಟಿ

ಎಸ್‌ಐಆರ್: ಬೆಂಗಳೂರು ನಗರ ಜಿಲ್ಲೆಯಲ್ಲಿ ಶೇ 80 ಮ್ಯಾಪಿಂಗ್ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಸಕಲ ಸಿದ್ಧತೆ ಮಾಡಿಕೊಂಡಿದ್ದು, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಶೇಕಡ 80ರಷ್ಟು ಮ್ಯಾಪಿಂಗ್ ಪೂರ್ಣಗೊಂಡಿದೆ. ಮತಗಟ್ಟೆ ಮಟ್ಟದ ಅಧಿಕಾರಿಗಳು ಜೂನ್ 30 ರಿಂದ ಜುಲೈ 29ರೊಳಗೆ ಮನೆಮನೆಗೆ ಭೇಟಿ ನೀಡಲಿದ್ದಾರೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ತಿಳಿಸಿದರು.


ಜಿ. ಜಗದೀಶ್

ಜೂನ್ 20 ರಿಂದ 29ರವರೆಗೆ ಪರಿಷ್ಕರಣೆ ಕಾರ್ಯದ ಸಿದ್ಧತೆ, ತರಬೇತಿ ಮತ್ತು ಮುದ್ರಣ ಕಾರ್ಯಗಳು ನಡೆಯಲಿದ್ದು, ಜೂನ್ 30 ರಿಂದ ಜುಲೈ 29 ರವರೆಗೆ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ-ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿ ಸಂಗ್ರಹ ಸಮೀಕ್ಷೆ ನಡೆಸಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಹೇಳಿದರು.

ಉಳಿದಿರುವ ಮ್ಯಾಪಿಂಗ್ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲಾಗುವುದು. ಬೂತ್ ಮಟ್ಟದ ಅಧಿಕಾರಿಗಳು ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ನಮೂನೆಗಳ ಮೂಲಕ ಮಾಹಿತಿ ಸಂಗ್ರಹಿಸಲಿದ್ದಾರೆ. ನಾಗರಿಕರು ಸಹಕಾರ ನೀಡಬೇಕು. ಬಳಿಕ ದತ್ತಾಂಶವನ್ನು ಪರಿಶೀಲಿಸಿ, ತಾಳೆ ಮಾಡಿ ಮತದಾರರ ಕರಡು ಪಟ್ಟಿಯನ್ನು ಅಕ್ಟೋಬರ್ 7ರಂದು ಪ್ರಕಟಿಸಲಾಗುವುದು ಎಂದು ಹೇಳಿದರು.

ಅರ್ಹ ಮತದಾರರು, ಮತದಾನದ ಹಕ್ಕಿನಿಂದ ವಂಚಿತರಾಗಬಾರದು. ಅನರ್ಹರ ಹೆಸರು ಮತದಾರರ ಪಟ್ಟಿಯಲ್ಲಿ ಉಳಿಯಬಾರದು. ಮ್ಯಾಪಿಂಗ್ ಆಗದ ಮತದಾರರು ಸರ್ಕಾರ ಗುರುತಿಸಿರುವ 12 ದಾಖಲೆಗಳ ಪೈಕಿ ಯಾವುದಾದರೂ ಒಂದು ದಾಖಲೆಯನ್ನು ಸಲ್ಲಿಸಬಹುದು ಎಂದರು.

ಬೆಂಗಳೂರು ನಗರ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 40,17,275 ಮತದಾರರಿದ್ದು, ವಿಶೇಷ ಸಮಗ್ರ ಪರಿಷ್ಕರಣೆಗಾಗಿ 3,320 ಬಿಎಲ್‌ಒಗಳನ್ನು ನಿಯೋಜಿಸಲಾಗಿದೆ. ಪ್ರತಿಯೊಬ್ಬರಿಗೂ 200ರಿಂದ 250 ಮನೆ ಜವಾಬ್ದಾರಿ ನೀಡಲಾಗಿದೆ. ಈಗಾಗಲೇ 5 ಸಾವಿರ ಬೂತ್ ಮಟ್ಟದ ಏಜೆಂಟರನ್ನು (ಬಿಎಲ್‌ಎ) ನೇಮಕ ಮಾಡಲಾಗಿದೆ. ಇನ್ನೂ ಕೆಲವು ಕ್ಷೇತ್ರಗಳಿಗೆ ಬಿಎಲ್‌ಎ ನೇಮಕ ಮಾಡುವಂತೆ ರಾಜಕೀಯ ಪಕ್ಷಗಳಿಗೆ ಮನವಿ ಮಾಡುವ ಮೂಲಕ ಪರಿಷ್ಕರಣೆ ಕಾರ್ಯಕ್ಕೆ ಸಹಕಾರ ನೀಡುವಂತೆ ಕೋರಲಾಗಿದೆ ಎಂದು ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ಕೆ.ನಾಯ್ಕ್ ಮಾತನಾಡಿ, 'ಅರ್ಹ ನಾಗರಿಕರು ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಹಾಗೂ ಒಬ್ಬ ಮತದಾರರು ಒಂದೇ ಸ್ಥಳದಲ್ಲಿ ಮತದಾನದ ಹಕ್ಕು ಹೊಂದಿರುವಂತೆ ಪಾರದರ್ಶಕವಾಗಿ ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ಅಗತ್ಯ ಪರಿಶೀಲನೆ ಮತ್ತು ದಾಖಲೆಗಳ ಆಧಾರದ ಮೇಲೆ ಮಾತ್ರ ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲಾಗುವುದು' ಎಂದು ಸ್ಪಷ್ಟಪಡಿಸಿದರು.

ವೇಳಾಪಟ್ಟಿ	ವಿವಿಧ ಪ್ರಕ್ರಿಯೆ
ಜುಲೈ 29ರೊಳಗೆ	ಮತಗಟ್ಟೆಗಳ ಪುನರ್ ವಿಂಗಡಣೆ
ಆಗಸ್ಟ್ 5	ಕರಡು ಮತದಾರರ ಪಟ್ಟಿ ಪ್ರಕಟ
ಆಗಸ್ಟ್ 5 ರಿಂದ ಸೆಪ್ಟೆಂಬರ್ 4	ಹಕ್ಕು, ಆಕ್ಷೇಪಣೆ ಸಲ್ಲಿಸುವ ಅವಧಿ
ಆಗಸ್ಟ್ 5 ರಿಂದ ಅಕ್ಟೋಬರ್3	ನೋಟಿಸ್ ಹಂತ, ಹಕ್ಕು, ಆಕ್ಷೇಪಣೆ ವಿಲೇವಾರಿ ಹಂತ
ಅಕ್ಟೋಬರ್ 7	ಮತದಾರರ ಅಂತಿಮ ಪಟ್ಟಿ ಪ್ರಕಟ

ಕ್ರ.ಸಂ	ವಿಧಾನಸಭಾ ಕ್ಷೇತ್ರದ ಸಂಖ್ಯೆ-ಹೆಸರು	ಗಂಡು	ಹೆಣ್ಣು	ಇತರೆ	ಒಟ್ಟು
1	150–ಯಲಹಂಕ	240756	235719	82	476557
2	152-ಬ್ಯಾಟರಾಯನಪುರ	281014	266319	127	547460
3	153-ಯಶವಂತಪುರ	315553	308082	89	623724
4	155–ದಾಸರಹಳ್ಳಿ	249420	221977	77	471474
5	174–ಮಹದೇವಪುರ	366639	320931	116	687686
6	176–ಬೆಂಗಳೂರು ದಕ್ಷಿಣ	409748	374759	103	784610
7	177–ಆನೇಕಲ್	221413	204276	75	425764
	ಒಟ್ಟು	2084543	1932063	669	4017275

ಮತದಾರರ ಸಹಾಯ ಕೇಂದ್ರ ಸ್ಥಾಪನೆ

ಗಣತಿ ನಮೂನೆಗಳನ್ನು ಭರ್ತಿ ಮಾಡಲು ನೆರವಾಗುವ ಉದ್ದೇಶದಿಂದ ಜಿಲ್ಲೆಯ ಗ್ರಾಮ ಪಂಚಾಯಿತಿ ಕಟ್ಟಡಗಳು ಹಾಗೂ ವಾರ್ಡ್ ಕಚೇರಿಗಳಲ್ಲಿ 250 ಮತದಾರರ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಜಗದೀಶ್ ಕೆ.ನಾಯ್ಕ್ ಹೇಳಿದರು.

ಬಿಎಲ್‌ಒಗಳು ಕನಿಷ್ಠ ಮೂರು ಬಾರಿ ಮನೆಗಳಿಗೆ ಭೇಟಿ ನೀಡಿ ನಮೂನೆ ವಿತರಿಸಿ, ಮತದಾರರಿಂದ ಸಹಿ ಪಡೆಯಲಿದ್ದಾರೆ. ಸಾರ್ವಜನಿಕರು ನಮೂನೆಗಳನ್ನು ಕಡ್ಡಾಯವಾಗಿ ಭರ್ತಿ ಮಾಡಿ ಬಿಎಲ್‌ಒಗಳಿಗೆ ಹಿಂತಿರುಗಿಸಬೇಕು. ಇಲ್ಲದಿದ್ದರೆ ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವ ಸಾಧ್ಯತೆ ಇದೆ ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ವಿಶೇಷ ಜಿಲ್ಲಾಧಿಕಾರಿ ಜಯಮಾಧವ್ ಪಿ, ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿ ವಿಶ್ವನಾಥ್ ಆರ್. ಹಾಜರಿದ್ದರು.

ಗಾಣಿಗ ಸಮುದಾಯದ ಶಾಸಕರಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಣಿಗ ಸಮುದಾಯದ ಕಾಂಗ್ರೆಸ್ ಶಾಸಕರಾದ ಲಕ್ಷ್ಮಣ ಸವದಿ, ಬಿ. ಕೆ. ಸಂಗಮೇಶ್ ಮತ್ತು ಕೆ.ಸಿ. ವೀರೇಂದ್ರ ಪಪ್ಪಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಅಖಿಲ ಭಾರತ ಗಾಣಿಗ ಸಮಾಜ ಸಂಘ ಆಗ್ರಹಿಸಿದೆ.

ಈ ಸಂಬಂಧ ಜೂನ್ 15ರಂದು 10 ಸಾವಿರ ಯುವಕರೊಂದಿಗೆ ವಿಧಾನ ಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಸಂಘದ ಗೌರವ ಅಧ್ಯಕ್ಷ ಡಾ.ಶೇಖರ್ ಸಜ್ಜನ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸಮುದಾಯದ ಮೂವರಲ್ಲಿ ಕನಿಷ್ಠ ಇಬ್ಬರಿಗೆ ಸಂಪುಟ ದರ್ಜೆ ಸ್ಥಾನ ಮತ್ತು ಒಂದು ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು. ರಾಜ್ಯದಲ್ಲಿ 45 ರಿಂದ 50 ಲಕ್ಷ ಜನಸಂಖ್ಯೆ ಹೊಂದಿರುವ ಗಾಣಿಗ ಸಮುದಾಯವು ಪ್ರತಿ ಚುನಾವಣೆಯಲ್ಲಿ ಹತ್ತಾರು ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಇಲ್ಲದಿದ್ದರೆ 2028 ಚುನಾವಣೆಯಲ್ಲಿ ಗಾಣಿಗ ಸಮುದಾಯ ಕಾಂಗ್ರೆಸ್ ಪಕ್ಷವನ್ನು ಬಹಿಷ್ಕರಿಸಲಿದೆ' ಎಂದು ಎಚ್ಚರಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರಿಗೂ ಮನವಿ ಸಲ್ಲಿಸಲಾಗಿದೆ. ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಗಾಣಿಗ ಸಮುದಾಯದ ಪರವಾಗಿ ಧ್ವನಿ ಎತ್ತಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಗುರಣ್ಣ ಗೋಡಿ, ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಲೋಣಿ, ಅಖಿಲ ಕರ್ನಾಟಕ ಗಾಣಿಗರ ಸಂಘದ ಅಧ್ಯಕ್ಷ ಎಂ.ಆರ್. ರಾಜಶೇಖರ್, ಮುಖಂಡರಾದ ಜಿ.ಎಸ್. ಅಮರನಾಥ್, ಅಶೋಕ್ ಕುಮಾರ್, ಯೋಗೇಶ್, ನರಸಿಂಹಯ್ಯ, ವಿಶ್ವಾಸ್ ದಾಸ್, ಆರ್. ಶಂಕರ್, ಆನಂದ ಕೆ., ಟಿ.ವೆಂಕಟೇಶ್, ಬಿ.ಕೆ.ಮುರಳಿಕೃಷ್ಣ ಹಾಜರಿದ್ದರು.

ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸಭೆ

'ಸಾಮಾಜಿಕ ಜಾಲತಾಣ: ಇನ್ನಷ್ಟು ನಿಗಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಂದನೆ, ಸುಳ್ಳು ಸುದ್ದಿ ಹಾಗೂ ದ್ವೇಷ ಭಾಷಣದಂತಹ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಶುಕ್ರವಾರ ಸಭೆ ನಡೆಸಿದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

'ಈಗಾಗಲೇ ಸಾಮಾಜಿಕ ಜಾಲತಾಣದ ಮೇಲೆ ಪೊಲೀಸ್ ಇಲಾಖೆ ನಿಗಾ ಇಟ್ಟಿದೆ. ಇನ್ನೂ ಹೆಚ್ಚಿನ ನಿಗಾ ವಹಿಸಿ, ದ್ವೇಷ ಬಿತ್ತುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ಡ್ರಗ್ ಪೆಡ್ಲರ್‌ಗಳ ವಿರುದ್ಧವೂ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡಿದ್ದೇನೆ. ಬೆಂಗಳೂರು ನಗರವೂ ಸೇರಿದಂತೆ ರಾಜ್ಯದಲ್ಲಿ ಮಹಿಳೆಯರು, ಮಕ್ಕಳ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗುವುದು' ಎಂದು ಹೇಳಿದರು.


ನಗರದಲ್ಲಿ ಶುಕ್ರವಾರ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಭಾಗಿಯಾದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಸ್ವಾಗತಿಸಿದರು

'ಪ್ರತಿ ತಾಲ್ಲೂಕಿನಲ್ಲೂ 'ರೌಡಿ ನಿಗ್ರಹ ಪಡೆ'ಗಳನ್ನು ಅಸ್ತಿತ್ವಕ್ಕೆ ತರಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ. ರೌಡಿ ನಿಗ್ರಹ ಪಡೆ ರಚನೆಯ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಅಂತಿಮ ರೂಪ ನೀಡಲಾಗುವುದು' ಎಂದರು.

'ನನಗೆ ಒಂದು ದೊಡ್ಡ ಜವಾಬ್ದಾರಿ ವಹಿಸಲಾಗಿದೆ. ಇಲಾಖೆ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯುತ್ತಿದ್ದೇನೆ. ಜಿ.ಪರಮೇಶ್ವರ ಅವರ ಅವಧಿಯಲ್ಲಿ ಜಾರಿಯಾಗಿದ್ದ ಯಾವೆಲ್ಲಾ ಯೋಜನೆಗಳನ್ನು ಮುಂದುವರಿಸಬಹುದು ಎಂಬುದರ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೇನೆ. ಕಾನೂನು ಎಲ್ಲರಿಗೂ ಒಂದೇ. ಕಾನೂನು ಉಲ್ಲಂಘಿಸಿದವರು ಎಷ್ಟೇ ಪ್ರಭಾವಿ ಆಗಿದ್ದರೂ ಕ್ರಮ ಖಚಿತ' ಎಂದರು.

ಅತಿಗಣ್ಯ ವ್ಯಕ್ತಿಗಳು ಸಂಚರಿಸುವಾಗ 'ಜೀರೊ ಟ್ರಾಫಿಕ್' ಮಾಡಲಾಗುತ್ತಿದೆ. ಇದರಿಂದ ಜನರಿಗೆ ಸಮಸ್ಯೆ ಉಂಟಾಗುತ್ತಿದೆ. ಈ ವಿಚಾರವನ್ನೂ ಸಭೆಯಲ್ಲಿ ಚರ್ಚಿಸಲಾಗಿದೆ. ಪರ್ಯಾಯ ವ್ಯವಸ್ಥೆಯ ಬಗ್ಗೆ ಯೋಚಿಸಿ, ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ರಾಮ್ ಪ್ರಸಾತ್ ಮನೋಹರ್ ಕೆಪಿಟಿಸಿಎಲ್ ಎಂ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲ ಮಂಡಳಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ಅವರನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ರಾಮ್ ಪ್ರಸಾತ್ ಕೆಲವು ತಿಂಗಳಿಂದ ಹೆಚ್ಚುವರಿಯಾಗಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯನ್ನು ನಿರ್ವಹಿಸುತ್ತಿದ್ದರು.


ರಾಮ್ ಪ್ರಸಾತ್ ಮನೋಹರ್

ಮಂಜುಳಾ ಎನ್. ಅವರನ್ನು ಬೆಂಗಳೂರು ಜಲ ಮಂಡಳಿ ಅಧ್ಯಕ್ಷೆಯಾಗಿ ವರ್ಗಾವಣೆ ಮಾಡಲಾಗಿದೆ. ಬೆಂಗಳೂರು ಜಿಲ್ಲಾಧಿಕಾರಿ ಹುದ್ದೆಯಲ್ಲಿದ್ದ ಜಿ.ಜಗದೀಶ್ ಅವರನ್ನು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತರಾಗಿ, ಸಹಕಾರ ಸೊಸೈಟಿಗಳ ರಿಜಿಸ್ಟ್ರಾರ್ ಆಗಿದ್ದ ಕಾಂತರಾಜು ಪಿ.ಎಸ್. ಅವರನ್ನು ಬೆಂಗಳೂರು ಜಿಲ್ಲಾಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.


ಸಂಸದ ಬಸವರಾಜ ಬೊಮ್ಮಾಯಿ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ದೆಹಲಿಯಲ್ಲಿ ಶುಕ್ರವಾರ ಭೇಟಿ ಮಾಡಿ ಚರ್ಚಿಸಿದರು

ತಂತ್ರಜ್ಞಾನ, ಕೌಶಲ: ಜರ್ಮನಿ ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಶಲ, ಪ್ರತಿಭಾ ವಿನಿಮಯ ಹಾಗೂ ತಂತ್ರಜ್ಞಾನ ವರ್ಗಾವಣೆ ವಿಷಯಗಳಲ್ಲಿ ಪರಸ್ಪರ ಸಹಕಾರಕ್ಕೆ ಕರ್ನಾಟಕದ ಜತೆ ಜರ್ಮನಿ ಕೈಜೋಡಿಸಲಿದೆ.

ತುರಿಂಜಿಯಾ ಪ್ರಾಂತ್ಯದ ಮಂತ್ರಿ ಮಂಡಲದ ಮುಖ್ಯಸ್ಥ (ಮಿನಿಸ್ಟರ್ ಪ್ರೆಸಿಡೆಂಟ್) ಮಾರಿಯೊ ವಾಯ್ಟ್ ನೇತೃತ್ವದ ಉನ್ನತ ಮಟ್ಟದ ನಿಯೋಗದ ಜತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಶುಕ್ರವಾರ ಮಾತುಕತೆ ನಡೆಸಿದರು.

ಈ ಕುರಿತು ಮಾಹಿತಿ ನೀಡಿದ ಶಿವಕುಮಾರ್, 'ಅತ್ಯುತ್ತಮ ಅವಕಾಶಗಳನ್ನು ಗುರುತಿಸಲು ಜರ್ಮನಿ ಜತೆ ನಿಕಟವಾಗಿ ಕೆಲಸ ಮಾಡಲಿದ್ದೇವೆ. ಜಂಟಿ ಸಹಭಾಗಿತ್ವ, ಆರ್ಥಿಕ ಸಹಕಾರವೂ ಸೇರಿದೆ. ನಾವೀನ್ಯ ಮತ್ತು ಮುಂದಿನ ತಲೆಮಾರಿನ ತಂತ್ರಜ್ಞಾನ ಬಳಕೆಯತ್ತ ಗಮನ ಹರಿಸಲಿದ್ದೇವೆ' ಎಂದರು.


ಜರ್ಮನಿಯ ತುರಿಂಜಿಯಾ ಪ್ರಾಂತ್ಯದ ಮಂತ್ರಿ ಮಂಡಲದ ಮುಖ್ಯಸ್ಥ ಮಾರಿಯೊ ವಾಯ್ಟ್ ಜತೆ ಡಿ.ಕೆ.ಶಿವಕುಮಾರ್, ಎಂ.ಬಿ.ಪಾಟೀಲ ಮಾತುಕತೆ ನಡೆಸಿದರು

ಸಚಿವ ಎಂ.ಬಿ.ಪಾಟೀಲ ಮಾತನಾಡಿ, 'ಕರ್ನಾಟಕ ಮತ್ತು ತುರಿಂಜಿಯಾ ನಡುವೆ ಆಪ್ಟಿಕ್ಸ್, ಫೋಟಾನಿಕ್ಸ್, ಸೆಮಿಕಂಡಕ್ಟರ್, ಬಯೋಟೆಕ್, ವಿದ್ಯುತ್‌ಚಾಲಿತ ವಾಹನ ತಯಾರಿಕೆ, ಮರುಬಳಕೆ ಇಂಧನ, ಆಧುನಿಕ ತಯಾರಿಕಾ ಕ್ಷೇತ್ರಗಳಲ್ಲಿ ಉಜ್ವಲ ಅವಕಾಶಗಳಿವೆ. ತುರಿಂಜಿಯಾ ಪ್ರಾಂತ್ಯದ ಕಂಪನಿಗಳು ಈ ಎಲ್ಲ ವಲಯಗಳಲ್ಲೂ ಹೂಡಿಕೆ ಮಾಡಲು ಮಾತುಕತೆ ನಡೆಸಲಾಗಿದೆ' ಎಂದು ಮಾಹಿತಿ ನೀಡಿದರು.

ಮಾರಿಯೊ ವಾಯ್ಟ್, 'ರಾಜ್ಯದಲ್ಲಿರುವ ಆರ್ ಆ್ಯಂಡ್ ಡಿ ಕಾರ್ಯಪರಿಸರ, ಡಿಜಿಟಲ್ ಪ್ರತಿಭಾ ಸಂಪನ್ಮೂಲ, ಎಂಜಿನಿಯರಿಂಗ್, ವಿಶ್ವ ದರ್ಜೆಯ ನವೋದ್ಯಮ ಕಾರ್ಯ ಪರಿಸರ, ಕ್ವಾಂಟಂ ತಂತ್ರಜ್ಞಾನ, ವೈಮಾನಿಕ ವಲಯಗಳಲ್ಲಿ ಕರ್ನಾಟಕ ಅಗತ್ಯ ಮೂಲಸೌಕರ್ಯ ಕಲ್ಪಿಸಿರುವುದು ಭವಿಷ್ಯದ ಕೈಗಾರಿಕಾ ಅಭಿವೃದ್ಧಿಗೆ ಸಹಕಾರಿಯಾಗಲಿದೆ' ಎಂದು ಹೇಳಿದರು.

ಬಿಜಿಎಸ್ ಸೂಪರ್ ಸ್ಪೆಷಾಲಿಟಿ ಕೇಂದ್ರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಯುವಶಕ್ತಿ ಭವಿಷ್ಯದ ಹರಿಕಾರರಾಗಬೇಕು. ವೈದ್ಯವೃತ್ತಿ ಶ್ರೇಷ್ಠವಾದದ್ದು, ಕೊರೊನಾ ಸಂದರ್ಭದಲ್ಲಿ ಜಗತ್ತಿಗೆ ಮಾದರಿಯಾದ ಸೇವೆ ಸಲ್ಲಿಸಿದ ಕೀರ್ತಿ ದೇಶದ ವೈದ್ಯಕೀಯ ಕ್ಷೇತ್ರಕ್ಕೆ ಸಲ್ಲುತ್ತದೆ' ಎಂದು ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಗಜೇಂದ್ರ ಶೇಖಾವತ್ ಹೇಳಿದರು.

'ರಾಷ್ಟ್ರ ರಕ್ಷಕರಾದ ನಾವು 2047ರ ದೃಷ್ಟಿಯಿಂದ ರಾಷ್ಟ್ರಾಭಿವೃದ್ಧಿಗೆ ತಂತ್ರಜ್ಞಾನ ಬಳಸಿಕೊಂಡು ಪ್ರಾಮಾಣಿಕ ಸೇವೆ ಸಲ್ಲಿಸಬೇಕು' ಎಂದು ನಗರೂರಿನ ಬಿಜಿಎಸ್ ವೈದ್ಯಕೀಯ ಕಾಲೇಜು ಸೂಪರ್ ಸ್ಪೆಷಾಲಿಟಿ ಕೇಂದ್ರ, ಪರಿಸರ ದಿನಾಚರಣೆ, ಸಾಂಸ್ಕೃತಿಕ ಹಬ್ಬ 2026 'ಸಂಭ್ರಮ' ಉದ್ಘಾಟಿಸಿ ಮಾತನಾಡಿದರು.

'ಮಾನಸಿಕ ಆರೋಗ್ಯಕ್ಕೆ ಪರಿಸರ ಮುಖ್ಯವಾಗುವುದರಿಂದ ಅದರ ಪರಿಣಾಮಗಳು ನಮ್ಮ ಮನೆಯ ಬಾಗಿಲಿಗೆ ಬಂದಿವೆ. ವೈದ್ಯ ವಿದ್ಯಾರ್ಥಿಗಳಾದ ನೀವು ದೈಹಿಕ, ಸಾಮಾಜಿಕ ಆರೋಗ್ಯದ ಕಡೆಗೂ ಗಮನಹರಿಸಬೇಕು' ಎಂದರು.

ಎಂಆರ್‌ಐ ಮತ್ತು ಸೂಪರ್ ಸ್ಪೆಷಾಲಿಟಿ ಕೇಂದ್ರಕ್ಕೂ ಚಾಲನೆ ನೀಡಿದ ಅವರು, 'ಬಿಜಿಎಸ್ ಗ್ರಾಮೀಣ ಬಡವರಿಗೆ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ವೈದ್ಯ ವಿದ್ಯಾರ್ಥಿಗಳು ಶಿಕ್ಷಣ ಪೂರೈಸಿದ ನಂತರವೂ ನಿರಂತರ ವಿದ್ಯಾರ್ಥಿಗಳಾಗಿರಬೇಕು' ಎಂದರು.

ಆದಿಚುಂಚನಗಿರಿ ವಿಶ್ವ ವಿದ್ಯಾಲಯದ ಕುಲಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ, 'ಭೌತಿಕ, ಮಾನಸಿಕ, ಆಧ್ಯಾತ್ಮಿಕ, ದೈಹಿಕ ಆರೋಗ್ಯ ರಕ್ಷಣೆಯೇ ನಮ್ಮ ಸಂಸ್ಕೃತಿ. ಅವುಗಳ ರಕ್ಷಣೆಗಾಗಿ ಶ್ರಮಿಸಬೇಕು' ಎಂದರು.

ಶಾಸಕ ಶರತ್ ಬಚ್ಚೇಗೌಡ ಬಿಜಿಎಸ್ ಸಂಸ್ಥೆಯ ಸೇವೆಯನ್ನು ಪ್ರಶಂಸಿಸಿ, 'ಶ್ರೀಗಳಿಗೆ ಮತ್ತಷ್ಟು ಶಕ್ತಿಯನ್ನು ಸಮಾಜ ನೀಡಬೇಕು. ವಿಶ್ವಕ್ಕೆ ಕೊರೊನಾ ಲಸಿಕೆ ಕೊಟ್ಟ ದೇಶದ ಕೀರ್ತಿಗೆ ಎಲ್ಲರೂ ಭಾಜನರು' ಎಂದರು.

ಸಚಿವ ಶೇಖಾವತ್ ಅವರೊಂದಿಗೆ ಸಂವಾದ ಹಮ್ಮಿಕೊಳ್ಳಲಾಗಿತ್ತು. ಶಾಸಕ ಕೆ.ಗೋವಿಂದರಾಜು, ಪ್ರಾಂಶುಪಾಲ ಡಾ.ಕೆ.ಎಸ್.ಗಂಗಾಧರ್, ಉಪ ಕುಲಾಧಿಪತಿ ಡಾ.ಎನ್.ಎಸ್.ಶ್ರೀಧರ್, ಕುಲಸಚಿವ ಡಾ.ಸಿ.ಕೆ.ಸುಬ್ಬರಾಯ, ಆಸ್ಪತ್ರೆಯ ಮುಖ್ಯಸ್ಥ ಡಾ.ವಿ. ಆರ್.ಕೃಷ್ಣಮೂರ್ತಿ, ಸುಜಾತಾ ರಾಥೋಡ್ ಉಪಸ್ಥಿತರಿದ್ದರು.


ಗಜೇಂದ್ರ ಶೇಖಾವತ್, ನಿರ್ಮಲಾನಂದನಾಥ ಸ್ವಾಮೀಜಿ, ಕೆ.ಗೋವಿಂದರಾಜು ಅವರು ಬಿಜಿಎಸ್ ಸೂಪರ್ ಸ್ಪೆಷಾಲಿಟಿ ಕೇಂದ್ರವನ್ನು ವೀಕ್ಷಿಸಿದರು

'ಹವಾಮಾನ ವೈಪರೀತ್ಯ ತಡೆಗೆ ಗಮನ ಕೊಡಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ತಂತ್ರಜ್ಞಾನ ಕ್ಷೇತ್ರ ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಯಾಗಿದ್ದು, ಉದ್ಯಮಶೀಲತೆಯನ್ನು ಬಳಸಿಕೊಂಡು ಹವಾಮಾನ ವೈಪರೀತ್ಯದ ಕಡೆಗೂ ಗಮನಹರಿಸಬೇಕಿದೆ' ಎಂದು ನಬಾರ್ಡ್‌ನ ಕರ್ನಾಟಕ ವಲಯ ಪ್ರಧಾನ ವ್ಯವಸ್ಥಾಪಕ ಪ್ರಕಾಶ್ ಸಿ. ದಾಸ್ ಹೇಳಿದರು.

ಮಹದೇವಪುರ ಕ್ಷೇತ್ರದ ಐಟಿಪಿಎಲ್ ಬಡಾವಣೆಯಲ್ಲಿ ಸಿಎಂಆರ್ ಕಾಲೇಜಿನಲ್ಲಿ ವಿ-ಮೂವ್ ಫೌಂಡೇಶನ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಬೆಂಗಳೂರು ಹವಾಮಾನ ಶೃಂಗಸಭೆ ಉದ್ಘಾಟಿಸಿ ಅವರು ಮಾತನಾಡಿದರು.

'ಕೃಷಿ ಮತ್ತು ಪರಿಸರಕ್ಕೆ ಸಂಬಂಧಪಟ್ಟಂತೆ ನಬಾರ್ಡ್ ಕೂಡ ಹಲವಾರು ಯೋಜನೆಗಳನ್ನು ರೂಪಿಸಿ ಅನುದಾನ ನೀಡುತ್ತ ಬರುತ್ತಿದೆ. ಜನರ ಸಹಕಾರದೊಂದಿಗೆ ನಬಾರ್ಡ್ ಕೃಷಿ ಮತ್ತು ಪರಿಸರ ಅಭಿವೃದ್ಧಿ ಪರ ಚಟುವಟಿಕೆಗಳನ್ನು ಮಾಡುತ್ತ ಬರುತ್ತಿದೆ. ತಂತ್ರಜ್ಞಾನವನ್ನು ಬಳಸಿಕೊಂಡು ಹವಾಮಾನ ವೈಪರೀತ್ಯದ ಬಗ್ಗೆ ಕೆಲಸ ಮಾಡಿದೆ' ಎಂದರು.



ಬೆಂಗಳೂರು ಹವಾಮಾನ ಶೃಂಗಸಭೆಯನ್ನು ಪ್ರಕಾಶ್ ಸಿ. ದಾಸ್, ಪ್ರೊ.ಉದಯ್ ರಘುನಾಥ್ ಬಿರ್ಜೆ, ಎ.ಎನ್.ನಟರಾಜ್ ಗೌಡ, ಅಜಿತ್ ಹನುಮಕ್ಕನವರ್, ವಿನಯ್ ಶಿಂಧೆ ಉದ್ಘಾಟಿಸಿದರು

ಥಿಂಕ್ ಸ್ಟ್ರೀಟ್ ಟೆಕ್ನಾಲಜೀಸ್ ನ ಸಹ ಸಂಸ್ಥಾಪಕ ಪ್ರೊ.ಉದಯ್ ರಘುನಾಥ್ ಬಿರ್ಜೆ, 'ಪ್ರತಿಯೊಂದು ಜಾಗವು ಕಲುಷಿತಗೊಂಡಿದೆ. ಸಾಕಷ್ಟು ಪ್ರಮಾಣದಲ್ಲಿದ್ದ ಅರಣ್ಯ ಪ್ರದೇಶವು ಬೆರಳೆಣಿಕೆಯಷ್ಟು ಮಾತ್ರ ಉಳಿದಿದೆ. ಪರಿಸರದಲ್ಲಿ ಪ್ರಾಣಿ, ಪಕ್ಷಿಗಳು, ಕೀಟಗಳಂತೆ ಪ್ರತಿಯೊಂದು ಜೀವಿಯನ್ನು ಕಾಪಾಡಿದರೆ ಸಮತೋಲನ ಕಾಪಾಡಲು ಸಾಧ್ಯವಾಗುತ್ತದೆ. ಮುಂದಾಲೋಚನೆ ಮಾಡದೆ ಅಭಿವೃದ್ಧಿ ಕಡೆಗೆ ದೃಷ್ಟಿ ನೆಟ್ಟು ನಮ್ಮ ಸುತ್ತಮುತ್ತಲಿನ ಪ್ರದೇಶ ಕಲುಷಿತಗೊಳಿಸಿದ್ದೇವೆ' ಎಂದರು.

ಬಾಲ್ಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎ.ಎನ್.ನಟರಾಜ್ ಗೌಡ, 'ಸಾಮಾಜಿಕ ಪ್ರಜ್ಞೆಯಿಲ್ಲದೆ ಅಭಿವೃದ್ಧಿಗಾಗಿ ಪರಿಸರ ನಾಶ ಮಾಡಲು ಹೊರಟಿರುವ ನಾವೆಲ್ಲರೂ ಆತ್ಮವಲೋಕನ ಮಾಡಿಕೊಳ್ಳಬೇಕಿದೆ. ನಮ್ಮ ಮನೆಯನ್ನು ಮಾತ್ರ ನೋಡಿಕೊಂಡು ಭವಿಷ್ಯದ ಬೆಂಗಳೂರು ಬಗ್ಗೆ ಗಮನಹರಿಸಬೇಕಿದೆ. ವಾಯು ಮಾಲಿನ್ಯದಿಂದ ಭೂಮಿಯನ್ನು ಕಾಪಾಡಲು ಸಣ್ಣ ಸಣ್ಣ ಬದಲಾವಣೆಗೆ ತೊಡಗಿಸಿಕೊಳ್ಳಬೇಕು' ಎಂದು ಅವರು ಹೇಳಿದರು.

ಪತ್ರಕರ್ತ ಅಜಿತ್ ಹನುಮಕ್ಕನವರ್, ಬೆಂಗಳೂರು ಹವಾಮಾನ ಶೃಂಗಸಭೆ ಮೇಲ್ವಿಚಾರಕ ಹಾಗೂ ವಿ ಮೂವ್ ಫೌಂಡೇಶನ್ ಸಂಸ್ಥಾಪಕ ವಿನಯ್ ಶಿಂಧೆ ಉಪಸ್ಥಿತರಿದ್ದರು.

ಪ್ರಜಾವಾಣಿ
ಶನಿವಾರ
ಜೂನ್ 6, 2026

ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ

ಆಕಾರ, ಮೈಬಣ್ಣದಂತಹ ದೇಹಸ್ಥಿತಿಯನ್ನು ಗುರಿಯಾಗಿಸಿ ನಡೆಸುವ ಟೀಕೆಗಳಿಂದ ಬಹುಶಃ ಯಾವ ಹೆಣ್ಣುಮಗಳೂ ತಪ್ಪಿಸಿಕೊಳ್ಳಲಾರಳೇನೊ. ಅವಳು ನಮ್ಮ ನಡುವಿನ 'ಕಪ್ಪು ಸುಂದರಿ'ಯಾದರೂ ಸರಿ, 'ವಿಶ್ವ ಸುಂದರಿ'ಯಾದರೂ ಸರಿ. ಎಲುಬಿಲ್ಲದ ನಾಲಿಗೆಗೆ, ಎಗ್ಗಿಲ್ಲದ ಸಾಮಾಜಿಕ ಮಾಧ್ಯಮಗಳಿಗೆ ಮೇವು ಒದಗಿಸುವ ಈ 'ಬಾಡಿ ಶೇಮಿಂಗ್' ಪಿಡುಗನ್ನು ಎದುರಿಸುವುದಾದರೂ ಹೇಗೆ?

ಹೌದು ಸ್ವಾಮಿ ನಾವಿರೋದೆ ಹೀಗೆ!



• ಸಂಯುಕ್ತಾ ಪುಲಿಗಲ್



ಚಿಕ್ಕವಳಿದ್ದಾಗ ಅಮ್ಮ ಕೊಡಿಸಿದ ಹೊಸ ಬಟ್ಟೆಯನ್ನು ಹೊಲಿಸಲು ಏನೋ ಹುರುಪು. ನನಗೆ ಒಪ್ಪುವ ಹೊಲಿಗೆಯ ಬಗೆಯನ್ನು ನಾನು ಉತ್ಸುಕಳಾಗಿ ಡಿಸೈನ್ ಪುಸ್ತಕದಲ್ಲಿ ಹುಡುಕುತ್ತಿದ್ದರೆ, 'ಒಂದು ಲಂಗ ಹೊಲಿದು ಲಾಡಿ ಕೊಡುತ್ತೇನೆ. ಚೆನ್ನಾಗಿ ಬಿಗಿದು ಕಟ್ಟಿದರೆ ನಿಮ್ಮ ಮಗಳ ಸೊಂಟ ದೊಡ್ಡದಾಗುವುದಿಲ್ಲ' ಎಂದ ಆ ಟೈಲರ್ ಮುಖ ಈಗ ಮರೆತಿದೆ. ಆದರೆ ಆ ಮಾತು, ದನಿ, ಒಳದನಿ ಎಲ್ಲವೂ ಚೆನ್ನಾಗಿ ನೆನಪಿದೆ.

ಶಾಲೆಗೆ ಸಾರ್ವಜನಿಕ ಬಸ್ಸಿನಲ್ಲಿ ಹೋಗುತ್ತಿದ್ದೆ. ಬೆನ್ನಿಗೇರಿಸಿಕೊಂಡ ಬ್ಯಾಗಿನೊಂದಿಗೆ, ತುಂಬಿ ತುಳುಕುತ್ತಿದ್ದ ಬಸ್ಸೇರಿ ನುಸುಳಿಕೊಂಡು ಒಳ ಹೋಗುವಾಗ 'ಯಾವ ಅಕ್ಕಿ ತಿಂತಾರೊ' ಎಂಬ ಮುಸಿನಗೆಯ ಕುಹಕ. ಪರಿಚಿತರು ಕೆಲವರು ತುಂಬಾ ದಯೆಯಿಟ್ಟು 'ನೀನು ಸ್ವಲ್ಪ ಸಣ್ಣಗಾಗಿದ್ದೀಯ. ತುಂಬಾ ಚೆನ್ನಾಗಿ ಕಾಣ್ತಿದ್ದೀಯ' ಎಂದು ಕೈಂಕರ್ಯ ತೋರುವುದು, ನಡೆದಾಡುತ್ತಿದ್ದರೆ ಸುತ್ತಮುತ್ತಲಿನವರ ಹುಸಿನಗೆ, ಗುಸುಗುಸುವಿನಲ್ಲಿ ನಾನಿಲ್ಲದ ಸಂದರ್ಭವೇ ಇರುತ್ತಿರಲಿಲ್ಲ.

ಇವೆಲ್ಲವೂ ಭೂತಕಾಲದ ಸಂಗತಿಗಳೇ ಆಗಿದ್ದರೂ ಇಂದಿಗೂ ನನ್ನ ಸುತ್ತಮುತ್ತ ಸುಳಿವ ಗಾಳಿಯೇ. ಆದರೆ ಎಲ್ಲವೂ ಕಳೆದು, ನಾನೂ ಬೆಳೆದು, ಈಗ ಕಿವಿಯು ಗೋರ್ಕಲ್ಲಾಗಿ, ಆ ಮಾತುಗಳನ್ನು ಪದ-ವಾಕ್ಯಗಳನ್ನಷ್ಟೇ ಆಗಿಸಿ ಮನಸ್ಸು ಪ್ರತಿಕ್ರಿಯೆ ತೋರುತ್ತದೆ. ವ್ಯಕ್ತಿತ್ವ ರೂಪುಗೊಳ್ಳುವ ಆರಂಭಿಕ ಹಂತವಾದ ಬಾಲ್ಯದಲ್ಲಿ ಆ ಮಾತುಗಳು ಮತ್ತು ಅಂತಹ ಅಗಣ್ಯ ಪ್ರತಿಕ್ರಿಯೆಗಳು, ಪ್ರಚೋದನೆಗಳು ಮನಸ್ಸಿನಾಳದಲ್ಲಿ ನಮಗೇ ಅರಿವಿಲ್ಲದಂತೆ ಗಾಯವನ್ನು ಉಂಟುಮಾಡುತ್ತವೆ. ಆ ಗಾಯ ಆರಿಹೋದರೂ ಅದರ ಗುರುತು ಮಾತ್ರ ಪ್ರಖರವಾಗಿ ಉಳಿದುಬಿಡುತ್ತದೆ. ಅದು ನಾವು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರದ ಮೇಲೂ ನಮ್ಮ ನಡವಳಿಕೆಯ ಮೇಲೂ ಮೌನವಾಗಿ ಪರಿಣಾಮ ಬೀರುತ್ತಿರುತ್ತದೆ.

ಮನೋವಿಜ್ಞಾನವು ಹೇಳುವಂತೆ, ಬಾಲ್ಯದಲ್ಲಿ ಪದೇಪದೇ ತಮ್ಮ ದೇಹದ ಬಗ್ಗೆ ನಿಂದನೆಗಳನ್ನು ಕೇಳುವ ಮಕ್ಕಳಲ್ಲಿ 'ನಾನು ಪ್ರೀತಿಗೆ ಅರ್ಹವಾಗಿಲ್ಲ' ಎಂಬ ನಂಬಿಕೆ ಆಳವಾಗಿ ನಾಟುತ್ತದೆ. ತಮ್ಮ ಬಗ್ಗೆ ತಮಗೇ ಕಸಿವಿಸಿ ಎನಿಸುತ್ತದೆ. ವಯಸ್ಸು ಹೆಚ್ಚಾದಂತೆ ಭಾಸವಾಗುತ್ತದೆ. ಮುಗ್ಧ ಮನಸ್ಸು ಸುಲಲಿತವಾಗಿ ಅರಳದೆ, ಮುಳ್ಳುಗಳು ರಾಚಿಕೊಂಡು ಒರಟಾಗುತ್ತದೆ. ಅಂತಹ ಮಕ್ಕಳು ಕನ್ನಡಿ ನೋಡುವುದನ್ನೇ ನಿಲ್ಲಿಸುತ್ತಾರೆ. ಫೋಟೊ ತೆಗೆಸಿಕೊಳ್ಳಲು ನಿರಾಕರಿಸುತ್ತಾರೆ. ಹೊಸ ಬಟ್ಟೆ ತೊಡಲು ಹೆದರುತ್ತಾರೆ. ಸಾರ್ವಜನಿಕ ಸ್ಥಳಕ್ಕೆ ಹೋಗಲು ಮನಸ್ಸು ಮಾಡದೆ ಮನೆಯಲ್ಲೇ ಉಳಿಯುತ್ತಾರೆ. ಪರಿಣಾಮವಾಗಿ, ಇದು ಒಂದು 'ವಿತ್‌ಡ್ರಾವಲ್ ಸಿಂಡ್ರೋಮ್' ಆಗಿ ಬದಲಾಗಿ, ತಮ್ಮನ್ನು ತಾವು ಎಲ್ಲದರಿಂದ ದೂರ ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದು ಖಿನ್ನತೆ, ಆತಂಕ, ಏಕಾಂತ ಮತ್ತು ಕೆಲವೊಮ್ಮೆ ಅನುರೆಕ್ಸಿಯಾ ನರ್ವೋಸಾ, ಬುಲಿಮಿಯಾದಂತಹ ಕಾಯಿಲೆಗಳಿಗೂ ದಾರಿ ಮಾಡುತ್ತದೆ. ಅವಕಾಶಗಳು ಕೈಗೆ ಬಂದರೂ ಬೇಡ ಎನ್ನಿಸುತ್ತದೆ. ಪ್ರತಿಭೆ ಇದ್ದರೂ ಹೊರಬರಲು ಭಯವೆನಿಸುತ್ತದೆ. ಸ್ನೇಹ ಬೇಕೆನಿಸಿದರೂ ತಿರಸ್ಕಾರ ಎದುರಾಗಬಹುದು ಎಂಬ ಹಿಂಜರಿಕೆಯಾಗುತ್ತದೆ. ಇದು ಒಬ್ಬಿಬ್ಬರ ಕಥೆಯಲ್ಲ. ಬಾಲ್ಯದಿಂದ 'ಪರ್ಫೆಕ್ಟ್ ಬಾಡಿ' ಎಂಬ ಸಮಾಜದ ಸಿದ್ಧ ಚೌಕಟ್ಟುಗಳ ಉಸಿರುಗಟ್ಟುವಿಕೆಗೆ ಬಲಿಯಾಗುವ ಹಲವರ ಕಥೆ.

ವಿಶ್ವಸುಂದರಿಯಾಗಿದ್ದ ಐಶ್ವರ್ಯಾ ರೈ ಈ ಬಾರಿಯ 'ಕಾನ್' ಚಿತ್ರೋತ್ಸವದ ಕೆಂಪುಹಾಸಿನ ಮೇಲೆ ನಡೆದಾಗ ಜಗತ್ತು ಆಕೆಯ ದೇಹತೂಕದ ಬಗ್ಗೆ ಕೆಡುನುಡಿಯಿತು. ಐವತ್ತು ದಾಟಿದ ಮಹಿಳೆಯಲ್ಲೂ ಶಿಲಾಬಾಲಿಕೆಯನ್ನು ಹುಡುಕುವ ಚಪಲವು ನಮ್ಮ ವಿಕೃತಿಯನ್ನೇ ತೋರುತ್ತದೆ.

ವಿದ್ಯಾ ಬಾಲನ್ ಪ್ರತಿ ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲೂ ದೇಹತೂಕದ ಬಗ್ಗೆ ಪ್ರಶ್ನೆ ಎದುರಿಸಬೇಕಾಗುತ್ತದೆ. ನಮ್ಮ ಕನ್ನಡ ತಾರೆಯರೇ ಆದ ರಕ್ಷಿತಾ, ನೀತು ಶೆಟ್ಟಿ, ಕೀರ್ತಿ ಸುರೇಶ್, ಸುದೀಪ್ ಪುತ್ರಿ ಸಾನ್ವಿ ಮುಂತಾದವರ ದೇಹಸ್ಥಿತಿಯನ್ನು ಸಾಮಾಜಿಕ ಜಾಲತಾಣಗಳು ಹರಿದು ಹಂಚಿ ಮುಕ್ಕಿರುವುದನ್ನು ನಾವೇ ನೋಡಿದ್ದೇವೆ. ಇದು ಬರೀ ತೋರವಾಗಿ ಇರುವವರ ಸಮಸ್ಯೆಯಲ್ಲ. ವ್ಯಕ್ತಿಗಳು, ಅದರಲ್ಲೂ ಹೆಣ್ಣುಮಕ್ಕಳು ಹೇಗಿದ್ದರೂ ಅವರನ್ನು ಒಂದು 'ವಸ್ತು'ವನ್ನಾಗಿಸಿ, ಯಾವುದೋ ಒಂದು ಕೊಂಕು ತೆಗೆಯುತ್ತಾರೆ. 'ಮಿನುಗುತಾರೆ' ಕಲ್ಪನಾಗೆ ಕತ್ತು ಉದ್ದವಾಗಿತ್ತು ಎಂಬ ಕಾರಣಕ್ಕೆ ಎಷ್ಟೋ ದಿನ ಸಿನಿಮಾ ನಟನೆಗೆ ಆಯ್ಕೆಯಾಗಲು ಸಾಧ್ಯವಾಗಿರಲಿಲ್ಲವಂತೆ. ಸೋನಂ ಕಪೂರ್ ಅವರನ್ನು ತೆಳ್ಳಗಿರುವ ಕಾರಣಕ್ಕೆ ನಿಂದಿಸಲಾಯಿತು. ಪ್ರಿಯಾಂಕಾ ಚೋಪ್ರಾ ಅವರ ಮೈಬಣ್ಣದ ಬಗ್ಗೆ ಕಾಮೆಂಟ್ ಬಂತು. ಇವರೆಲ್ಲ ಜಗತ್ತಿನ ಯಶಸ್ವಿ ಮಹಿಳೆಯರು. ಆದರೂ ಸಮಾಜ ಅವರ ಸಾಧನೆಗಿಂತ ಮೊದಲು ಅವರ ದೇಹವನ್ನು ನೋಡಿತು. ಎಷ್ಟೋ ಜನ ಚೆನ್ನಾಗಿ ಕಾಣಬೇಕೆಂಬ ಸಾಮಾಜಿಕ ಒತ್ತಡದಿಂದಾಗಿ ಮೇಲಿಂದ ಮೇಲೆ ಶಸ್ತ್ರಚಿಕಿತ್ಸೆ, ಔಷಧಿಗಳ ಮೊರೆ ಹೋಗಿ ಆರೋಗ್ಯಕ್ಕೆ ಸಂಚಕಾರ ತಂದುಕೊಂಡಿರುವುದೂ ಉಂಟು.

ಹೀಗೆ 'ಬಾಡಿ ಶೇಮಿಂಗ್' ಅನ್ನುವ ಮನೋವ್ಯಾಧಿ ಶತಮಾನಗಳಿಂದ ಜಗತ್ತಿನಾದ್ಯಂತ ಬೇರೂರಿಬಿಟ್ಟಿದೆ. ಅದನ್ನು ನಮ್ಮಿಂದ ಬೇರ್ಪಡಿಸುವುದು ಬಹಳ ಕಷ್ಟ. ಚಿಕ್ಕವರಾಗಿದ್ದಾಗ 'ಡುಮ್ಮಡುಮ್ಮಿ ಡೂಪ್ಲಿಕೇಟ್, ಡೋರ್ ನಂಬರ್ 88' ಎಂದು ಆಡದ ಯಾರಾದರೂ ಇದ್ದರೆ ದಯವಿಟ್ಟು ತಿಳಿಸಿಬಿಡಿ. ಒಬ್ಬ ವ್ಯಕ್ತಿ ಸತ್ತಾಗಲೂ ಅವರ ದೈಹಿಕ ರೂಪವು ಚರ್ಚೆಗೆ ಒಳಗಾಗುವುದನ್ನು ಗಮನಿಸಿದ್ದೀರಾ? 'ಅವಳು ಸತ್ತುಹೋದಳಂತೆ, ಪಾಪ ಎಷ್ಟು ಚೆನ್ನಾಗಿದ್ದಳು'!

ಸಮಾಜದ ಇಂತಹ ಮನಃಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ಈಗಿನ ಹಲಕೆಲವು ಬೆಳವಣಿಗೆಗಳು ಮುಂದಿನ ದಿನಗಳನ್ನು ಸ್ವಲ್ಪ ಮಟ್ಟಿಗೆ ಆಶಾದಾಯಕ ಆಗಿಸುವಂತಿವೆ. ಐಶ್ವರ್ಯಾ ರೈ ಕಾನ್‌ನಲ್ಲಿ ತೋರಿದ್ದು ಏನು ಗೊತ್ತೇ? ಟ್ರೋಲ್‌ಗೆ ತಲೆಬಾಗದೆ, ತನ್ನ ದೈಹಿಕ ಸ್ಥಿತಿಯ ಬಗ್ಗೆ ಅಳುಕದೆ ಧೀಮಂತಿಕೆಯನ್ನು ಉಳಿಸಿಕೊಂಡ ಧೈರ್ಯ. ಅದೇ ನಿಜವಾದ ಸೌಂದರ್ಯ.

ಸಾಮಾಜಿಕ ಮಾಧ್ಯಮದಲ್ಲಿ ಸಿಕ್ಕಾಪಟ್ಟೆ ಟ್ರೋಲ್‌ಗೆ ಒಳಗಾಗುವ ನಿವೇದಿತಾ ಗೌಡ ಅವರ ಮಾತನ್ನು ಕೇಳುತ್ತಿದ್ದೆ. ಅದರಲ್ಲಿದ್ದ ನಿಖರತೆ, ಸ್ಪಷ್ಟತೆ ಎಲ್ಲರೂ ದಂಗಾಗುವಂತೆ ಇತ್ತು. ಐಶ್ವರ್ಯಾ, ನಿವೇದಿತಾ ಅವರಂತೆ ನಮ್ಮ ನಿಲುವಿನ ಬಗ್ಗೆ ನಮಗೆ ಸ್ಪಷ್ಟತೆ ಇದ್ದರೆ ಯಾವ ನಿಂದನೆಗಳೂ ನಮ್ಮನ್ನು ಕುಂದಿಸುವುದಿಲ್ಲ. ಇವು ಒಂದೆರಡು ಉದಾಹರಣೆಗಳಷ್ಟೆ. ಇಂತಹ ಹಲವರು ತಮ್ಮನ್ನು ತಾವು ಕಂಡುಕೊಂಡು ಎತ್ತರಕ್ಕೆ ಏರುತ್ತಿದ್ದಾರೆ, ಸಾಮಾಜಿಕ ಜಾಲತಾಣಗಳ ಫೇಕ್ ಪ್ರೊಫೈಲುಗಳ ಹಿಂದೆ ಮುಖ ಮರೆಸಿಕೊಂಡು ತಮ್ಮ ವಿಕೃತಿಯನ್ನು ಕಕ್ಕುವ ಅಥವಾ ಮುಖೇನ ನಿಂದಿಸಿ, ಹಂಗಿಸಿ ಸುಖಿಸುವ ಜನ ಮಾತ್ರ ಕಂದಕಕ್ಕೆ ಇಳಿಯುತ್ತಲೇ ಇರುತ್ತಾರೆ.

ಸ್ವಲ್ಪ ಶಿಸ್ತಿನಿಂದ ಪ್ರಯತ್ನಿಸಿದರೆ ದೇಹದ ಆಕಾರ ಬದಲಾಗಬಹುದು, ನಿಜ. ಆದರೆ ನಮ್ಮ ದೇಹವು ಬಹುಪಾಲು ಆನುವಂಶಿಕ ಕೊಡುಗೆ. ತಲೆಮಾರುಗಳಿಂದ ಬಂದ ಆ ಗುಣಲಕ್ಷಣಗಳನ್ನು ಬರೀ ಇಚ್ಛಾಶಕ್ತಿಯಿಂದ ಮಾರ್ಪಡಿಸುವುದು ಅಷ್ಟು ಸರಳವಲ್ಲ. ದೈಹಿಕ ಮಿತಿಗಳು, ಮಾನಸಿಕ ಸಂಘರ್ಷಗಳು, ಹಾರ್ಮೋನುಗಳ ಏರಿಳಿತ–ಇವೆಲ್ಲವೂ ನಡುವೆ ನಿಂತು ಅಡ್ಡಿಪಡಿಸುತ್ತವೆ.

ಇದು ನಾವು ಊಹಿಸಿದಷ್ಟು ಸುಲಭ ಸಾಧ್ಯವಲ್ಲ ಎನ್ನುವುದನ್ನು ಗ್ರಹಿಸುವುದು ತುಂಬಾ ಮುಖ್ಯವಾಗುತ್ತದೆ. ಹಾಗಾಗಿ, 'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ, ಮಳೆ ಸುರಿಸಿ ಹಗುರಾದ ಮುಗಿಲಿನಂತೆ...' ಎಂಬ ಕವಿವಾಣಿಯಂತೆ ಬದುಕುವುದು ಲೇಸು.

ಆದರ್ಶ ನಾಯಕಿ!

ಭಾರತೀಯ ಕಾವ್ಯಶಾಸ್ತ್ರದಲ್ಲಿ, ಭರತಮುನಿಯ ನಾಟ್ಯಶಾಸ್ತ್ರದಲ್ಲಿ, ಸಂಸ್ಕೃತ ಕಾವ್ಯಗಳಲ್ಲಿ, ಒಬ್ಬ 'ಆದರ್ಶ ನಾಯಕಿ' ಹೇಗಿರಬೇಕು ಎಂಬ ವಿವರಗಳು ಹೇರಳವಾಗಿ ಬಂದುಹೋಗಿವೆ. ಅವಳ ಕೂದಲು ಹೇಗಿರಬೇಕು, ಕಣ್ಣು ಯಾವ ಆಕಾರದಲ್ಲಿ ಇರಬೇಕು, ಸ್ತನ ಎಷ್ಟು ಘನವಾಗಿ ಇರಬೇಕು, ನಡು ಎಷ್ಟು ಸಣ್ಣದಿರಬೇಕು, ನಿತಂಬ ಎಷ್ಟು ತುಂಬಿರಬೇಕು, ತೊಡೆ ಹೇಗಿರಬೇಕು ಎಂದೆಲ್ಲ ಒಂದೊಂದು ಅಂಗವನ್ನೂ ಅಳೆದೂ ತೂಗಿ ವ್ಯಾಖ್ಯಾನಿಸಲಾಗಿದೆ. ಷೇಕ್ಸ್‌ಪಿಯರ್ ತನ್ನ ಸಾನೆಟ್ 130ರಲ್ಲಿ ಹೆಣ್ಣಿನ ದೇಹದ ಬಗೆಗಿನ ಈ ರೀತಿಯ ವ್ಯಾಖ್ಯಾನಗಳಿಗೆ ಖಡಕ್ಕಾಗಿ ಉತ್ತರಿಸಿದ್ದಾನೆ (ಅದಕ್ಕೇ ಕವಿಯನ್ನು ಮನೋವಿಜ್ಞಾನಿಗೆ ಹೋಲಿಸುವುದು).

ಚೀನಾದ ರಾಜಪ್ರಭುತ್ವದ ಕಾಲದಲ್ಲಿ ಚಿಕ್ಕ ಹುಡುಗಿಯರ ಪಾದದ ಮೂಳೆಗಳ ಬೆಳವಣಿಗೆ ನಿಲ್ಲಿಸಿ, ಬರೀ ಮೂರು ಇಂಚಿನ 'ಚಿನ್ನದ ತಾವರೆ' ಪಾದ ಮಾಡುವ 'ಫುಟ್ ಬೈಂಡಿಂಗ್' ಎಂಬ ಕ್ರೂರ ಸಂಪ್ರದಾಯ ಆಚರಣೆಯಲ್ಲಿತ್ತು. ಈ ಜೀವಮಾನದ ಯಾತನೆಯನ್ನು ಸ್ತ್ರೀ ಸೌಂದರ್ಯದ, ಉನ್ನತ ಕುಲದ ಮತ್ತು ವಿಧೇಯತೆಯ ಸಂಕೇತವೆಂದು ಪರಿಗಣಿಸಲಾಗುತ್ತಿತ್ತು.

ದೇಹ ನೋಡಿ ಅಳೆಯುವ ಮುನ್ನ...

ಯಾರದೇ ದೇಹದ ಬಗ್ಗೆ ಅಪಹಾಸ್ಯ ಮಾಡುವುದು ಸರಿಯಲ್ಲ. ಇದು ಭಾವನಾತ್ಮಕವಾಗಿ, ಮಾನಸಿಕವಾಗಿ ಆ ವ್ಯಕ್ತಿಯ ಮೇಲೆ ಪರಿಣಾಮ ಬೀರುತ್ತದೆ, ಅವರ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ, ಕೀಳರಿಮೆ ಹುಟ್ಟುಹಾಕುತ್ತದೆ. ಸಾಮಾಜಿಕ ಜಾಲತಾಣಗಳಲ್ಲಂತೂ 'ಬಾಡಿ ಶೇಮಿಂಗ್' ಹಾವಳಿ ಮಿತಿ ಮೀರಿದೆ.

ಮತ್ತೊಬ್ಬರನ್ನು ಹೀಯಾಳಿಸುವ ಮುನ್ನ ಜನ ಯೋಚಿಸಬೇಕು. ಯಾರೂ ಪರಿಪೂರ್ಣರಲ್ಲ, 'ಇದೇ ಪರಿಪೂರ್ಣ' ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೂ ಆಗುವುದಿಲ್ಲ ಎಂಬುದನ್ನು ಅರಿಯಬೇಕು. ದೇಹವನ್ನು ನೋಡಿ ವ್ಯಕ್ತಿಯ ಮೌಲ್ಯವನ್ನು ನಿರ್ಧರಿಸಬಾರದು.

ನಾನೂ 'ಬಾಡಿ ಶೇಮಿಂಗ್' ಅನುಭವಿಸಿದ್ದೇನೆ. ನಾನು ದಪ್ಪ ಆದಾಗ ನನಗೂ ಕಾಮೆಂಟ್ ಮಾಡುತ್ತಿದ್ದರು, 'ಏನ್ ಮೇಡಂ ಇಷ್ಟು ದಪ್ಪ ಆಗಿದ್ದೀರಿ, ಸಿನಿಮಾ ಇಲ್ಲವಾ, ಅದಕ್ಕೇ ಡಯಟ್ ಮಾಡುತ್ತಿಲ್ಲವಾ, ಯಾಕೆ ಸಣ್ಣ ಆಗುವ ಪ್ರಯತ್ನ ಮಾಡುತ್ತಿಲ್ಲ' ಎಂದೆಲ್ಲ ಕೇಳುತ್ತಿದ್ದರು. ನಾನೂ ಅಷ್ಟೇ ನಾಜೂಕಾಗಿ ಉತ್ತರಿಸುತ್ತಿದ್ದೆ. 'ನಾನು ತುಂಬಾ ಚೆನ್ನಾಗಿ ಬದುಕುತ್ತಿದ್ದೇನೆ, ಓಡಾಡಿಕೊಂಡು ಆರಾಮಾಗಿದ್ದೇನೆ. ಖುಷಿಯಿಂದ ದಪ್ಪ ಆಗಿದ್ದೇನೆ' ಅನ್ನುತ್ತಿದ್ದೆ. ಈಗ ನನ್ನ ಆರೋಗ್ಯದ ಕಾಳಜಿ ಕಾರಣವಾಗಿ ಸಣ್ಣ ಆಗಿದ್ದೀನಿ. ಈಗ ಮತ್ತೆ ಕೇಳುತ್ತಾರೆ, 'ಯಾಕೆ ಸಣ್ಣ ಆಗಿದ್ದೀರ' ಅಂತ. ನಾನು ಇಂತಹ ಕಾಮೆಂಟ್‌ಗಳನ್ನು ತಲೆಗೆ ತೆಗೆದುಕೊಂಡಿಲ್ಲ. ನನ್ನ ಖುಷಿಗೆ ಏನು ಬೇಕೋ ಅದನ್ನು ಮಾಡುತ್ತಲೇ ಇರುತ್ತೇನೆ.

ಇಂಥ ನಡೆಯನ್ನು ಸಮಾಧಾನಚಿತ್ತದಿಂದ ಎದುರಿಸಬೇಕು. ನಾವು ನಮ್ಮ ಬಗ್ಗೆ ಆತ್ಮವಿಶ್ವಾಸ ಇಟ್ಟುಕೊಳ್ಳಬೇಕು. ಕುಟುಂಬಗಳಲ್ಲಿ 'ಬಾಡಿ ಶೇಮಿಂಗ್' ಆಗುವುದು ಮೊದಲು ನಿಲ್ಲಬೇಕು. ತಂದೆ–ತಾಯಿ, ಸಂಗಾತಿ, ಒಡಹುಟ್ಟಿದವರು ವಿಶ್ವಾಸ ತುಂಬಬೇಕು.

ಮತ್ತೂ ಒಂದು ಪ್ರಮುಖ ಅಂಶ ಎಂದರೆ, ಬಾಡಿ ಶೇಮಿಂಗ್ ಮಾಡುವವರಲ್ಲಿ ಏನೋ ಕೊರತೆ ಅಥವಾ ಅಭದ್ರತೆಯ ಸಮಸ್ಯೆ ಇರುತ್ತದೆ. ಹೀಗಾಗಿ, ಅವರು ಬೇರೊಬ್ಬರಲ್ಲಿ ಕೊರತೆಯನ್ನು ಹುಡುಕಿ ಅದನ್ನು ಮುನ್ನೆಲೆಗೆ ತರುತ್ತಾರೆ.



ಪೂಜಾ ಗಾಂಧಿ, ಚಿತ್ರನಟಿ

ಹೊಳ್ಳಿ ಹೊಳ್ಳಿ ನೋಡಿ... ಹೊಳ್ಳರ ಅಡುಗೆ

• ಸುಮಾ ಬಿ.

ರಸಾಸ್ವಾದ

ಮಲೆನಾಡಿನ ಖಾದ್ಯ ಎಂದೊಡನೆ ಅಪ್ಪೆಹುಳಿ, ಬಗೆ ಬಗೆ ತಂಬುಳಿ, ನಿಂಬೆಹಣ್ಣಿನ ಸಾರು, ಮಾವಿನಕಾಯಿ ಮಂಗೀರಸ, ಕಾಯಿರಸ, ನುಚ್ಚಿನುಂಡೆ, ಉಂಡೆಕಡುಬು, ಗುಡನ್ನ, ವಿವಿಧ ಬಗೆಯ ಕೂಟು, ಸೊಪ್ಪಿನ ಹಸಿ ಮಸಾಲೆ ಹುಳಿ... ಹೀಗೆ ಹೆಚ್ಚು ಮಸಾಲೆ ಬಳಸದ, ಆರೋಗ್ಯವರ್ಧಕ, ಬಾಯಲ್ಲಿ ನೀರೂರಿಸುವ ಖಾದ್ಯಗಳು ಸ್ಮೃತಿಪಟಲದಲ್ಲಿ ಸುಳಿಯುತ್ತವೆ. ಹೆಸರು ಕೇಳಿದರೂ ತಿನ್ನಬೇಕೆನ್ನಿಸುವ ಇಂತಹ ವಿಶೇಷ ಖಾದ್ಯಗಳ ಸುಲಭ ತಯಾರಿಯ ಪಾಠ ಹೇಳಿಕೊಡುತ್ತಾರೆ ಲತಾ ಹೊಳ್ಳ ತಮ್ಮ 'ವೆಜ್ ರೆಸಿಪೀಸ್ ಆಫ್ ಕರ್ನಾಟಕ' ಯೂಟ್ಯೂಬ್ ಚಾನೆಲ್ ಮೂಲಕ.

ಅತಿ ಕಡಿಮೆ ಸಮಯದಲ್ಲೂ ಪೌಷ್ಟಿಕಾಂಶಯುಕ್ತ, ರುಚಿಕರ ಖಾದ್ಯವನ್ನು ತಯಾರಿಸಿ ಸವಿಯಿರಿ ಎನ್ನುತ್ತ ಮಲೆನಾಡು ಮಾತ್ರವಲ್ಲದೆ ಕರಾವಳಿ, ಉತ್ತರ ಕರ್ನಾಟಕ ಹಾಗೂ ಮೈಸೂರು ಸೀಮೆಯ ಖಾದ್ಯಗಳನ್ನೂ ತಮ್ಮ ಚಾನೆಲ್‌ನ ಅಂಗಳದಲ್ಲಿ ಹರವಿದ್ದಾರೆ ಲತಾ. ಹಬ್ಬದ ಸಮಯದಲ್ಲಿ ಮಾಡುವ ಸಾಂಪ್ರದಾಯಿಕ ಖಾದ್ಯವಿರಲಿ, ನಿತ್ಯದ ಅನ್ನಕ್ಕೆ ಜೊತೆಯಾಗುವ ಸಂಗಾತಿಯಾಗಲಿ (ಸಾಂಬಾರು, ಕೂಟು, ತಂಬುಳಿ...), ಸಂಜೆ ಬಾಯಿರುಚಿಗೆ ಸವಿಯುವ ಸ್ನ್ಯಾಕ್ಸ್ ಆಗಿರಲಿ ಎಲ್ಲದರಲ್ಲೂ ಆರೋಗ್ಯದ ಗುಟ್ಟು ಅಡಗಿರುವ ಖಾದ್ಯಗಳಿಗೇ ಅವರ ಆದ್ಯತೆ. ಲತಾ ಅವರ ಚಾನೆಲ್ 5.79 ಲಕ್ಷ ಸಬ್‌ಸ್ಕ್ರೈಬರ್‌ಗಳನ್ನು ಹೊಂದಿದ್ದು, ಅವರ ವಿಡಿಯೊಗಳು ಈವರೆಗೆ 19 ಕೋಟಿಗೂ ಹೆಚ್ಚು ವೀಕ್ಷಣೆ ಕಂಡಿವೆ.

ಬಹುತೇಕ ಯೂಟ್ಯೂಬ್ ಕನ್ನಡ ಅಡುಗೆ ಚಾನೆಲ್‌ಗಳು ಕೋವಿಡ್ ಲಾಕ್‌ಡೌನ್ ಅಥವಾ ಆನಂತರದ ದಿನಗಳಲ್ಲಿ ಅಸ್ತಿತ್ವಕ್ಕೆ ಬಂದಿದ್ದರೆ, ಲತಾ ಅವರ ಚಾನೆಲ್ ಅದಕ್ಕೂ ಹಿಂದೆ 2015ರಲ್ಲೇ ಉದಯಿಸಿದೆ. ಕುಟುಂಬದ ಅಗತ್ಯಗಳನ್ನು ಪೂರೈಸಲು, ಕೈತುಂಬಾ ಸಂಬಳವಿದ್ದ ತಮ್ಮ ಇಷ್ಟದ ಎಲೆಕ್ಟ್ರಾನಿಕ್ಸ್ ಡಿಸೈನ್ ಎಂಜಿನಿಯರ್ ಹುದ್ದೆಗೆ ಅನಿವಾರ್ಯವಾಗಿ ಗುಡ್‌ಬೈ ಹೇಳಿದ ಲತಾ ಅವರು ಹೊರಳಿದ್ದು ವೆಬ್‌ಸೈಟ್ ಡಿಸೈನ್‌ನತ್ತ. ಹೀಗೆ 'ವೆಬ್‌ಸೈಟ್' ಪಯಣದಲ್ಲಿ ಶುರುವಾದದ್ದು ಅಡುಗೆ ರೆಸಿಪಿಯ ಲೇಖನ ಬರೆಯುವ ಕಾಯಕ. ಇವರ ಅಡುಗೆ ಲೇಖನಗಳನ್ನು ಬಹುವಾಗಿ ಮೆಚ್ಚಿಕೊಂಡ ಖಾದ್ಯಪ್ರಿಯ ಓದುಗ ವಲಯ, ಅಡುಗೆ ತಯಾರಿಯ ವಿಡಿಯೊ ಮಾಡಲು ಪ್ರೇರೇಪಿಸಿತು. ಹೀಗೆ ಶುರುವಾದ ಅವರ ಯೂಟ್ಯೂಬ್ ಪಯಣ ಈಗ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದೆ. ಮೂಲತಃ ಶೃಂಗೇರಿಯವರಾದ ಲತಾ ಅವರಿಗೆ ಪತಿಯ ವರ್ಗಾವಣೆ ಕಾಯಕದಿಂದ ದೇಶದ ಹಲವೆಡೆ ಸುತ್ತಬೇಕಾಗಿ ಬಂದದ್ದು, ಅಲ್ಲಿಯ ಆಹಾರ ಸಂಸ್ಕೃತಿಯನ್ನೂ ಅರಿಯಲು ನೆರವಾಯಿತು. ಅವರು ಸದ್ಯಕ್ಕೆ ಪೂನಾದಲ್ಲಿ ನೆಲಸಿದ್ದಾರೆ.

'ಅಮ್ಮ, ಚಿಕ್ಕಮ್ಮಂದಿರ ರುಚಿಕರ ಅಡುಗೆಯನ್ನು ಮೆಲ್ಲುತ್ತ ಬೆಳೆದ ನನಗೆ ಅವರ ಅಡುಗೆ ಸ್ವಾದ ಬೆರಗು ಮೂಡಿಸುತ್ತದೆ. ಕೇಳಿದೊಡನೆ ಈಗಲೂ ಥಟ್ಟಂತ ತಯಾರಿಯ ವಿಧಾನವನ್ನು ಅವರು ಹೇಳುವ ರೀತಿ ಸೋಜಿಗವೇ ಸರಿ. ಅವರ ರೆಸಿಪಿಗಳೇ ನನ್ನ ಚಾನೆಲ್‌ನ ಜೀವಾಳ' ಎನ್ನುತ್ತ ಆತ್ಮವಿಶ್ವಾಸದ ನಗೆ ಬೀರುತ್ತಾರೆ ಲತಾ. ಫಾಸ್ಟ್‌ಫುಡ್, ಕೇಕ್, ಎಣ್ಣೆಯಲ್ಲಿ ಕರಿದ ಪದಾರ್ಥಗಳಿಂದ ಆದಷ್ಟೂ ದೂರವಿರುವ ಈ ಚಾನೆಲ್, ಸಾಂಪ್ರದಾಯಿಕ ರೆಸಿಪಿಗಳೊಟ್ಟಿಗೆ, ನಿತ್ಯ ಬಳಸುವ ಸಾಂಬಾರ್, ಸಾರು, ರಸಂ, ತಂಬುಳಿಗೆ ಆದ್ಯತೆ ನೀಡಿದೆ. ಆರೋಗ್ಯಕ್ಕೆ ಪೂರಕವಾದ ವಿವಿಧ ಬಗೆಯ ಸಿಹಿ ಖಾದ್ಯಗಳ ರಸಪಾಕವೂ ಇಲ್ಲಿದೆ. ಅಲ್ಲದೆ, ಅಡುಗೆಯ ಜೊತೆಗೆ ಆರೋಗ್ಯ ಸಲಹೆಗಳನ್ನೂ ನೀಡುವುದು ಈ ಚಾನೆಲ್‌ನ ವಿಶೇಷ. ಇದರ ಭಾಗವಾಗಿ ಇವರು ತಯಾರಿಸಿರುವ 'ಎಬಿಸಿ' ಜ್ಯೂಸ್ 30 ಲಕ್ಷಕ್ಕೂ ಹೆಚ್ಚು ವೀಕ್ಷಣೆ ಪಡೆದಿದೆ.



ಲತಾ ಹೊಳ್ಳ

ಪುಂಡಿಗಟ್ಟಿ ಎಂಬ ಆರೋಗ್ಯಕರ ಕಡುಬು

ಇಡ್ಲಿ ರವೆಯಲ್ಲಿ ಇಡ್ಲಿಯನ್ನೇ ಮಾಡಬೇಕೆಂದೇನೂ ಇಲ್ಲ. ರುಚಿರುಚಿಯಾದ ಉಂಡೆ ಕಡುಬನ್ನೂ ಮಾಡಬಹುದು. ಮಲೆನಾಡು ಭಾಗದಲ್ಲಿ 'ಪುಂಡಿಗಟ್ಟಿ' ಎಂದು ಕರೆಸಿಕೊಳ್ಳುವ ಈ ಆರೋಗ್ಯಯುತ ಕಡುಬನ್ನು ಹೀಗೆ ಮಾಡಿ:



ಪಾತ್ರೆಯಲ್ಲಿ ಒಂದು ಚಮಚ ಎಣ್ಣೆ ಬಿಸಿ ಮಾಡಿ ಅದರಲ್ಲಿ ತಲಾ ಒಂದು ಚಮಚ ಸಾಸಿವೆ, ಉದ್ದಿನಬೇಳೆ, ಕಡಲೆಬೇಳೆ ಹಾಕಿ ಒಂದು ನಿಮಿಷ ಬಾಡಿಸಿ. ಬಳಿಕ ಎರಡು ಮಜ್ಜಿಗೆ ಮೆಣಸು, ಸಣ್ಣಗೆ ಹೆಚ್ಚಿರುವ ಶುಂಠಿ ಸ್ವಲ್ಪ, ಸಣ್ಣದಾಗಿ ಕತ್ತರಿಸಿದ ಕರಿಬೇವು ಹಾಕಿ ಎರಡು ನಿಮಿಷ ಬಾಡಿಸಿ, ಎರಡು ಕಪ್ ನೀರು ಹಾಕಿ. ಬಳಿಕ ರುಚಿಗೆ ತಕ್ಕಷ್ಟು ಉಪ್ಪು, ಅರ್ಧ ಕಪ್ ತೆಂಗಿನತುರಿ, ಸಣ್ಣಗೆ ಹೆಚ್ಚಿರುವ ಕೊತ್ತಂಬರಿಸೊಪ್ಪು ಹಾಕಬೇಕು. ಈ ಮಸಾಲೆ ಮಿಶ್ರಿತ ನೀರು ಕುದಿಯಲು ಆರಂಭವಾದ ಬಳಿಕ ಒಂದು ಬಟ್ಟಲು ಇಡ್ಲಿ ರವೆಯನ್ನು ಸ್ವಲ್ಪ ಸ್ವಲ್ಪವೇ ಹಾಕುತ್ತ, ಬಿಡದಂತೆ ಕೈಯಾಡಿಸುತ್ತ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು. ಅದು ಸ್ವಲ್ಪ ಗಟ್ಟಿಯಾದ ಬಳಿಕ ಗ್ಯಾಸ್ ಆಫ್ ಮಾಡಿ ತಣಿಯಲು ಬಿಡಬೇಕು.

ಕೈಯಲ್ಲಿ ಮುಟ್ಟುವಷ್ಟು ತಣಿದಾದ ಬಳಿಕ ಕೈಗೆ ಎಣ್ಣೆ ಸವರಿಕೊಂಡು, ಸ್ವಲ್ಪ ಸ್ವಲ್ಪವೇ ಹಿಟ್ಟನ್ನು ತೆಗೆದುಕೊಂಡು ಉಂಡೆಗಳನ್ನಾಗಿ ಮಾಡಬೇಕು. ಮಧ್ಯದಲ್ಲಿ ಗುಂಡಿಯಂತೆ ಮಾಡಿ ಇಡ್ಲಿ ಪಾತ್ರೆಯಲ್ಲಿ ಇಟ್ಟು 15 ನಿಮಿಷ ಹಬೆಯಲ್ಲಿ ಬೇಯಿಸಿದರೆ ಉಂಡೆ ಕಡುಬು ಸವಿಯಲು ಸಿದ್ಧ. ತೆಳುವಾಗಿ ಮಾಡಿದ ಕಾಯಿಚಟ್ನಿ ಜೊತೆ ಬಿಸಿ ಇರುವಾಗಲೇ ಮೇಲೊಂದಿಷ್ಟು ತುಪ್ಪ ಹಾಕಿ ಸವಿದರೆ ಆಹಾ... ರುಚಿಗೆ ಸಾಟಿಯೇ ಇಲ್ಲ.

ದೊಡ್ಡಮ್ಮನ ದೊಡ್ಡತನ

• ಬಿ.ಎಸ್.ಭಗವಾನ್

ಭಾವಯಾನ

ಆರೇಳು ದಶಕಗಳ ಹಿಂದಿನ ಮಾತು. ನಾವಾಗ ಮೈಸೂರಿನ ಅಗ್ರಹಾರದಲ್ಲಿ ವಾಸಿಸುತ್ತಿದ್ದೆವು. ನಾನು ಪ್ರೌಢಶಾಲೆಯ ವಿದ್ಯಾರ್ಥಿ. ನಮ್ಮ ದೊಡ್ಡಮ್ಮ ರಂಗನಾಯಕಮ್ಮ ಪ್ರತಿವರ್ಷ ಬೇಸಿಗೆಯಲ್ಲಿ ತುಮಕೂರು ಜಿಲ್ಲೆಯ ವರದನಹಳ್ಳಿಯಿಂದ ನಮ್ಮ ಮನೆಗೆ ಬಂದು ಕನಿಷ್ಠ ಒಂದು ವಾರವಿರುತ್ತಿದ್ದರು. ತಂಗಿ ಮಹಾಲಕ್ಷ್ಮಮ್ಮ, ಅಂದರೆ ನಮ್ಮ ಅಮ್ಮನಿಗೆ ಹೊಸದಾಗಿ ಸೌದೆ ಒಲೆ ಹಾಕಿಕೊಡುವುದೇ ಅವರ ಉದ್ದೇಶವಾಗಿರುತ್ತಿತ್ತು.

ಜೋಡಿ ಒಲೆಗೆ ಜಾಲರಿ ಅಳವಡಿಸುವುದರಲ್ಲಿ ದೊಡ್ಡಮ್ಮನಿಗೆ ವಿಶೇಷ ಪರಿಣತಿಯಿತ್ತು. ಅಕ್ಕಪಕ್ಕದ ಮನೆಯವರೂ ಒಲೆಗಾಗಿ ಅವರನ್ನು ಗೋಗರೆಯುತ್ತಿದ್ದರು. ನಾವು ಹುಡುಗರು ದೊಡ್ಡಕೆರೆಯ ಅಂಗಳದಿಂದ ಮೊರಗಟ್ಟಲೆ ಜೇಡಿಮಣ್ಣನ್ನು ತಂದುಕೊಡುತ್ತಿದ್ದೆವು. ಅಮ್ಮ ಬಾವಿಯಿಂದ ನೀರು ಸೇದಿ ತರುತ್ತಿದ್ದರು. ದೊಡ್ಡಮ್ಮ ಜೇಡಿಮಣ್ಣನ್ನು ಹದವಾಗಿ ಕಲೆಸಿ, ಉಂಡೆಗಳನ್ನು ಮಾಡಿ, ಅವು ಹಸಿಯಾಗಿದ್ದಾಗಲೆ ಗುರಿ ತಪ್ಪದೆ ರಭಸದಿಂದ ರಪರಪನೆ ಒಗೆಯುತ್ತಿದ್ದರು. ಜೋಡಿ ಒಲೆ ಅದ್ಯಾವುದೋ ಮುಹೂರ್ತದಲ್ಲಿ ರೂಪ ತಳೆಯುತ್ತಿತ್ತು.

ಆ ಬೇಸಿಗೆಯಲ್ಲಿ ಅಂದು ನಂಜನಮಳಿಗೆಯ ಹತ್ತಿರದ ಕಬ್ಬಿಣದ ಅಂಗಡಿಗೆ ಹೋಗಿ ಎರಡು ಜಾಲರಿಗಳನ್ನು ತರುವಂತೆ ದೊಡ್ಡಮ್ಮ ಬೆಳಿಗ್ಗೆಯೇ ನನಗೆ ಹೇಳಿದ್ದರು. ಆದರೆ ನಾನು ಪಠ್ಯಪುಸ್ತಕಗಳನ್ನು ಖರೀದಿಸುವ ಭರದಲ್ಲಿ ಜಾಲರಿ ತರುವುದನ್ನು ಮರೆತಿದ್ದೆ. ಮಧ್ಯಾಹ್ನ ಪುಸ್ತಕದ ಅಂಗಡಿಯಿಂದ ವಾಪಸ್ ಬಂದಾಗ ಮನೆಯಲ್ಲಿ ದೊಡ್ಡಮ್ಮನ ಸುಳಿವಿರಲಿಲ್ಲ. ಸಣ್ಣ ನಿದ್ದೆಯಿಂದ ಎದ್ದ ಅಮ್ಮ 'ನಂಗೂ ಗೊತ್ತಿಲ್ಲ' ಅಂತ ಆತಂಕದಿಂದ ಹೇಳಿದ್ದರು.

ಏನಾಯ್ತು? ಹಾಗೆ ಮಕ್ಕಳಿಗೂ ಹೇಳದೆ ದೊಡ್ಡಮ್ಮ ಪ್ರಯಾಣ ಬೆಳೆಸುವವರಲ್ಲ. ಅಪ್ಪ, ಅಮ್ಮ ಏನಾದರೂ ಅಂದಿರಬಹುದಾ ಅಂದರೆ ಛೇ! ಅವರು ಎಂದೂ ಹಾಗೆ ವರ್ತಿಸುವವರಲ್ಲ. ದೊಡ್ಡಮ್ಮ ಜಾಲರಿಗಳನ್ನು ತರಲು ಅಣ್ಣಂದಿರಿಗೆ ಹೇಳಬಹುದಿತ್ತು. ಬಹುಶಃ ಓದುತ್ತಿದ್ದವರಿಗೇಕೆ ತೊಂದರೆ ಕೊಡುವುದು ಅಂದುಕೊಂಡರೇನೋ ಪಾಪ. ನನಗಂತೂ ವಿಪರೀತ ಅಪರಾಧ ಪ್ರಜ್ಞೆ ಕಾಡತೊಡಗಿತು. ಹೊತ್ತು ಮೀರತೊಡಗಿದಂತೆ ಮನೆಯವರಿಗೂ ಆತಂಕ ಶುರುವಾಯಿತು.

ಎಲ್ಲಿ ಹೋಗಿರಬಹುದು, ಎಲ್ಲಿ ಹುಡುಕುವುದು ಎಂಬ ಚಿಂತೆ, ಚಡಪಡಿಕೆಯಲ್ಲಿ ಎಲ್ಲರೂ ಇದ್ದಾಗಲೇ ಗೇಟು ಕಿರ್ ಅಂದಿತು. ಯಾರೆಂದು ನೋಡಿದರೆ, ಜಾಲರಿಗಳನ್ನು ಹಿಡಿದುಕೊಂಡಿದ್ದ ದೊಡ್ಡಮ್ಮ ಮೆಲ್ಲನೆ ಒಳಬರುತ್ತಿದ್ದರು. ನಮ್ಮ ಕಣ್ಣುಗಳನ್ನು ನಾವೇ ನಂಬಲಾಗಲಿಲ್ಲ. ಯಾರೂ ಏನನ್ನೂ ಮಾತನಾಡಲಾಗದೆ ಕಂಬದಂತೆ ನಿಂತಿದ್ದೆವು. ಏನು ನಿಂದಿಸುತ್ತಾರೊ ಎನ್ನುವ ಭಯದ ಕಟ್ಟೆ ತುಂಬಿತ್ತು.


'ಲೇ ಲಕ್ಷ್ಮೀ, ಮೊದ್ಲು ನಂಗೆ ಬಾಳೆಲೆಲಿ ಬಡಿಸು. ಆಮೇಲೆ ಒಲೆ ಕೆಲ್ಸ. ಹೇಳಿದ ಕೆಲಸ ಮಾಡದ ತುಂಟರಿಗೆ ಖಾಲಿ ಹೊಟ್ಟೆಯೇ ಶಿಕ್ಷೆ. ಅಬ್ಬಬ್ಬಾ, ಬಿಸಿಲು ಜೊತೆಗೆ ಹಸಿವು. ನಂಜನಮಳಿಗೆ ನೋಡಿ ಶಾನೇ ದಿನ ಆಗಿತ್ತು' ಎನ್ನುತ್ತಾ ಕೈಕಾಲು ತೊಳೆದುಕೊಂಡರು.

ಮನೆಯವರೆಲ್ಲರೂ ಸರಿಯಾದ ಸಮಯಕ್ಕೆ ಕೈಜೋಡಿಸಿದರಷ್ಟೇ ಮನೆಗೆಲಸಗಳು ಸರಾಗವಾಗಿ ಸಾಗುವುದು ಎಂಬ ಬದುಕಿನ ಪಾಠವನ್ನು ದೊಡ್ಡಮ್ಮ ಸದ್ದಿಲ್ಲದೇ ನಮಗೆ ಕಲಿಸಿದ್ದರು.

ರಂಗಿನ ರಂಗೋಲಿ ಮೇಳೈಸಿದೆ ನೋಡಿಲ್ಲಿ



ಅರೆರೆ ಕಾಂತಾರ... ಹೊಸ ಅವತಾರ



ಕಂಡಿರಾ ಮೋದಿಯ? ಅರಳಿದ ಕೈಚಳಕದ ಮೋಡಿಯ?



ಸುಶ್ರಾವ್ಯ ಕಂಠಸಿರಿಯ ಸುಂದರಿ ಆಶಾ

• ಕೆ.ಲೀಲಾ ಶ್ರೀನಿವಾಸ್

ತಂಗಿಯ ಗೃಹಪ್ರವೇಶ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇತ್ತೀಚೆಗೆ ಕುಂದಾಪುರಕ್ಕೆ ಹೋಗಿದ್ದೆ. ಹಾಲ್‌ನ ಒಂದು ಬದಿಯಲ್ಲಿ ಮಹಿಳೆಯೊಬ್ಬರು ಮೊಣಕಾಲೂರಿ ಕುಳಿತು ರಂಗೋಲಿ ಬಿಡಿಸುತ್ತಿದ್ದರು. ಪಕ್ಕದಲ್ಲಿ ನಾನಾ ಬಣ್ಣಗಳ ರಂಗೋಲಿ ಪುಡಿ ಇತ್ತು. ಸುತ್ತಲಿನ ಪರಿವೆಯೇ ಇಲ್ಲದೆ ತದೇಕಚಿತ್ತದಿಂದ ಚಿತ್ರಕ್ಕೆ ಪುಡಿ ಹಾಕುತ್ತಿದ್ದರು. ಕೆಲ ಹೊತ್ತಿನಲ್ಲಿ ನೋಡನೋಡುತ್ತಿದ್ದಂತೆಯೇ 'ವ್ಹಾವ್, ಅದ್ಭುತ' ಎನಿಸುವಂತಹ ಚಿತ್ರವೊಂದು ತಯಾರಾಯಿತು. ಆ ಮನೆಯ ಹೆಸರು 'ಗಂಗೆ'. ಕೇವಲ ಎರಡು ಗಂಟೆಗಳ ಅವಧಿಯಲ್ಲಿ 'ಕೊಡದಲ್ಲಿ ನೀರು ಸುರಿಸುತ್ತಿದ್ದ ಗಂಗಾಮಾತೆ' ಅಲ್ಲಿ ಆವಿರ್ಭವಿಸಿದ್ದಳು!

ಹೀಗೆ ನೆಲವನ್ನೇ ಕ್ಯಾನ್ವಾಸ್ ಮಾಡಿಕೊಂಡು, ರಂಗುರಂಗಿನ ಚಿತ್ರಗಳ ಮೂಲಕ ರಂಗೋಲಿಯ ಬಣ್ಣಗಳಿಗೇ ಮೆರುಗು ತುಂಬುವವರು ವೀಣಾ ಐತಾಳ್. ಮೂಲತಃ ಉಡುಪಿಯವರು. ಸರ್ಕಾರಿ ಉದ್ಯೋಗದ ನಿಮಿತ್ತ ದೆಹಲಿ ನಂತರ ಇದೀಗ ಮಂಗಳೂರಿನಲ್ಲಿ ವಾಸ. ಐಸಿಐಸಿಐ ಬ್ಯಾಂಕ್‌ನ ಜೀವವಿಮಾ ವಿಭಾಗದ ಸಲಹೆಗಾರ್ತಿ. ಪತಿ ಯೂನಿಯನ್ ಬ್ಯಾಂಕ್ ಉದ್ಯೋಗಿ, ಇಬ್ಬರು ಮಕ್ಕಳ ಸುಖಿ ಸಂಸಾರ.

ವೀಣಾ ಅವರು ಬಾಲ್ಯದಲ್ಲಿ ರಂಗೋಲಿಯನ್ನು ಮುಟ್ಟಿಯೂ ನೋಡಿದವರಲ್ಲ. 2018ರಲ್ಲಿ, ಏನನ್ನಾದರೂ ಸಾಧಿಸಬೇಕೆಂಬ ಅದಮ್ಯ ತುಡಿತದಿಂದ ರಂಗೋಲಿ ಪುಡಿಯಲ್ಲಿ ದಶಾವತಾರದ ವಾಮನನನ್ನು ರಚಿಸಿ ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡುತ್ತಾರೆ. ಆಪ್ತೇಷ್ಟರಿಂದ ಪ್ರಶಂಸೆಯ ಸುರಿಮಳೆಯಾಗುತ್ತದೆ. ಅಂದಿನಿಂದಲೇ ವೀಣಾ ಅವರ ರಂಗೋಲಿ ಜೈತ್ರಯಾತ್ರೆ ಆರಂಭವಾಗುತ್ತದೆ! ಮೊದಲೆಲ್ಲ ಚಿತ್ರನಟರ ಚಿತ್ರಗಳನ್ನು ರಚಿಸುತ್ತಿದ್ದವರು ನಂತರ ದೇವರು, ಮಹಾಪುರುಷರು, ರಾಜಕೀಯ ದುರಂಧರರು, ಸ್ವಾಮೀಜಿಗಳ ಚಿತ್ರಗಳನ್ನು ಬಿಡಿಸಲಾರಂಭಿಸಿದರು. ನಿತ್ಯ ಕಾಯಕದ ಮಧ್ಯೆ ಬಿಡುವು ಮಾಡಿಕೊಂಡು ರಾತ್ರಿ 11ರ ನಂತರ ಮನೆಯ ಮೂಲೆಯ ನೆಲದಲ್ಲಿ ರಂಗೋಲಿಯ ಚಿತ್ತಾರ. 2ರಿಂದ 11 ಅಡಿ ಎತ್ತರದವರೆಗಿನ ಭವ್ಯ ಚಿತ್ರಗಳನ್ನು ಚಿತ್ರಿಸಲು 4ರಿಂದ 35 ಗಂಟೆಗಳವರೆಗೂ ಸಮಯ ವಿನಿಯೋಗ. ಚಿತ್ರ ಮುಗಿದ ನಂತರ ಅದನ್ನು ಗುಡಿಸಿಹಾಕಿ, ಅದೇ ಜಾಗದಲ್ಲಿ ಮತ್ತೊಂದು ಚಿತ್ರ ರಚನೆ ಆರಂಭ!

ಅತ್ಯಾಪ್ತರು ಕರೆದರೆ ಮಾತ್ರ ಹೋಗಿ ರಂಗೋಲಿ ಚಿತ್ರ ಬಿಡಿಸುವ ವೀಣಾ, ಹಲವು ದೇಗುಲ, ಉತ್ಸವಗಳಿಗೆ ಖುದ್ದಾಗಿ ಹೋಗಿ ರಂಗೋಲಿ ಚಿತ್ರ ರಚಿಸಿ ಭಕ್ತಿಪಾರಮ್ಯ ಮೆರೆದಿದ್ದಾರೆ, ವೀಕ್ಷಕರ ಮೆಚ್ಚುಗೆ ಗಳಿಸಿದ್ದಾರೆ. ಈ ರೀತಿ ಅವರು ರಚಿಸಿದ ಚಿತ್ರಗಳ ಸಂಖ್ಯೆ 400 ದಾಟಿದೆ! ಈ ಸಾಧನೆ ಗುರುತಿಸಿ ಹಲವು ಪ್ರಶಸ್ತಿಗಳು ಇವರ ಉಡಿ ತುಂಬಿವೆ. ಓದಿದ ಪೂರ್ಣಪ್ರಜ್ಞ ಕಾಲೇಜು, ಉಡುಪಿ ಪರ್ಯಾಯ, ಧರ್ಮಸ್ಥಳ ದೇವಾಲಯ, ಕೆನರಾ ಬ್ಯಾಂಕ್, ಕುಂದಾಪುರ ಗ್ರೂಪ್ ಮತ್ತು ಹಲವಾರು ಸಂಘ ಸಂಸ್ಥೆಗಳ ವತಿಯಿಂದ ಸನ್ಮಾನ ಸಂದಿದೆ.

ವೀಣಾ ಅವರಿಗೆ ತಮ್ಮ ರಚನೆಗಳಲ್ಲೆಲ್ಲ ಕಟೀಲು ದುರ್ಗಾಪರಮೇಶ್ವರಿ, ಮಾರಣಕಟ್ಟೆ ಬ್ರಹ್ಮಲಿಂಗೇಶ್ವರ, ಸಾಲುಮರದ ತಿಮ್ಮಕ್ಕ, ಶಿವಾಜಿ, ಆಶಾ ಭೋಸ್ಲೆ, ಕಮಲಶಿಲೆ ದುರ್ಗಾಮಾತೆಯ ಚಿತ್ರಗಳು ಅಚ್ಚುಮೆಚ್ಚು. ಕಾಂತಾರ ದೈವದ ರಂಗೋಲಿ ಚಿತ್ತಾರವನ್ನು ನೋಡಿದ ರಿಷಬ್ ಶೆಟ್ಟಿ ಮೆಚ್ಚಿ ನಮಸ್ಕರಿಸಿದರಂತೆ.

ಇತ್ತೀಚೆಗೆ ಉಡುಪಿಗೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ, ರಂಗೋಲಿಯಲ್ಲಿ ಬಿಡಿಸಿದ್ದ ತಮ್ಮ ಚಿತ್ರದ ಫೋಟೊವನ್ನು ಸ್ವೀಕರಿಸಿ, ನಂತರ ಪ್ರಶಂಸಾ ಪತ್ರ ಕಳುಹಿಸಿಕೊಟ್ಟಿದ್ದನ್ನು ವೀಣಾ ಹೆಮ್ಮೆಯಿಂದ ಸ್ಮರಿಸುತ್ತಾರೆ. ವೀಣಾ ಅವರ ಇನ್ನೊಂದು ಪ್ರತಿಭೆ ಬಹಳಷ್ಟು ಜನರಿಗೆ ತಿಳಿದಿಲ್ಲ. ಕಪ್ಪುಹಲಗೆಯಲ್ಲಿ ಎರಡೂ ಕೈಗಳಿಂದ ಏಕಕಾಲದಲ್ಲಿ ಸಾಲು ಅಕ್ಷರಗಳನ್ನು ಅವರು ಬರೆಯಬಲ್ಲರು. ಜೊತೆಗೆ ಉಲ್ಟಾ ಅಕ್ಷರಗಳನ್ನು ಸಹ ಹೀಗೇ ಬರೆಯಬಲ್ಲರು.

ರಂಗೋಲಿ ಚಿತ್ರಕಲೆಯಲ್ಲಿ ಆಸಕ್ತಿ ಇರುವವರಿಗೆ ಉಚಿತವಾಗಿ ಕಲಿಸುವ ಇರಾದೆ ವೀಣಾ ಅವರಿಗಿದೆ.

> ಈ ಕಲೆಯನ್ನು ಯಾರು ಬೇಕಾದರೂ ಕಲಿಯಬಹುದು. ನಮ್ಮ ಸನಾತನ ಧರ್ಮದಲ್ಲಿ ಆಸಕ್ತಿ, ದೈವಭಕ್ತಿ, ಅಪಾರ ಸಹನೆ, ಸಮಯ, ಏಕಾಗ್ರಚಿತ್ತ ಇದ್ದರೆ ಸಾಕು. ಮೊದಲ ಸೋಲನ್ನು ಸಾಧನೆಯ ಮೆಟ್ಟಿಲಾಗಿಸಿ ಪುನರಪಿ ಪ್ರಯತ್ನಿಸಿದರೆ ಯಶಸ್ಸು ಖಂಡಿತ. ಆತ್ಮಸ್ಥೈರ್ಯದಿಂದ ಕಾರ್ಯಶೀಲರಾಗಬೇಕು.
>
> ವೀಣಾ ಐತಾಳ್



ವೀರರಸವನ್ನೂ ರಂಗೋಲಿಯಲ್ಲಿ ಉಕ್ಕಿಸಿದ ವೀಣಾ ಐತಾಳ್

ಬಾಲಗರ್ಭಿಣಿ: 45 ಪ್ರಕರಣ ದಾಖಲು

ಎರಡು ವರ್ಷಗಳ ಸ್ಕ್ಯಾನಿಂಗ್ ವರದಿ ನೀಡಲು ಉಪಲೋಕಾಯುಕ್ತ ಆದೇಶ

• ಸಿದ್ದು ಆರ್.ಜಿ.ಹಳ್ಳಿ



ಮಂಡ್ಯ: ಜಿಲ್ಲೆಯಲ್ಲಿ ಬಾಲ ಗರ್ಭಿಣಿ ಪ್ರಕರಣಗಳು ಪತ್ತೆಯಾದ ಬೆನ್ನಲ್ಲೇ ತಹಶೀಲ್ದಾರ್ ನೇತೃತ್ವದ ಏಳು ತಾಲ್ಲೂಕು ಜಾಗೃತಿ ಸಮಿತಿ 63 ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ತಪಾಸಣೆ ನಡೆಸಿ 45 ಎಫ್‌ಐಆರ್ ದಾಖಲಿಸಿವೆ.

ಜಿಲ್ಲೆಯ ಕೆ.ಆರ್. ಪೇಟೆಯ ಎರಡು ಖಾಸಗಿ ಡಯಾಗ್ನಸ್ಟಿಕ್ ಸೆಂಟರ್‌ಗಳಲ್ಲಿ 31 ಬಾಲ ಗರ್ಭಿಣಿಯರಿಗೆ ಭ್ರೂಣಲಿಂಗ ಪತ್ತೆಗೆ ಸ್ಕ್ಯಾನಿಂಗ್ ಮಾಡಿದ್ದಾರೆ ಎಂಬ ಆರೋಪದ ಮೇರೆಗೆ ಲೋಕಾಯುಕ್ತ ಪೊಲೀಸರು ಏ.18ರಂದು ದಾಳಿ ನಡೆಸಿದ್ದರು.

18 ವರ್ಷದ ಒಳಗಿನ ಬಾಲಕಿಯರು ಸ್ಕ್ಯಾನಿಂಗ್‌ಗೆ ಬಂದರೆ ಪೋಕ್ಸೊ ಕಾಯ್ದೆ ಪ್ರಕಾರ ಸ್ಥಳೀಯ ಪೊಲೀಸ್ ಠಾಣೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ವರದಿ ಮಾಡಬೇಕು ಎಂಬ ಕಾನೂನು ಇದೆ. ಆದರೆ, ಈ ಕಾನೂನು ಉಲ್ಲಂಘನೆ ಮಾಡಲಾಗಿದೆ ಎಂಬ ಆರೋಪದ ಮೇರೆಗೆ ಉಪಲೋಕಾಯುಕ್ತ ಬಿ. ವೀರಪ್ಪ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು.

ಕಳೆದ 2 ವರ್ಷಗಳ ಸ್ಕ್ಯಾನಿಂಗ್ ವರದಿಗಳನ್ನು ಒದಗಿಸುವಂತೆ ಉಪಲೋಕಾಯುಕ್ತರು ಆದೇಶಿಸಿದ್ದು, ಸಮಗ್ರ ವರದಿಯನ್ನು ಸಲ್ಲಿಸಲಾಗುವುದು
ಡಾ.ಕೆ.ಮೋಹನ್, ಡಿಎಚ್‌ಒ, ಮಂಡ್ಯ

ಈ ಬೆಳವಣಿಗೆ ನಂತರ ಜಿಲ್ಲಾಧಿಕಾರಿ ಕುಮಾರ ಸಭೆ ನಡೆಸಿ ಜಿಲ್ಲೆಯಲ್ಲಿರುವ 63 ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಕಳೆದ ಆರು ತಿಂಗಳಲ್ಲಿ ನಡೆದ ಸ್ಕ್ಯಾನಿಂಗ್ ವರದಿ ಪರಿಶೀಲಿಸಿ ಮಾಹಿತಿ ನೀಡಲು ಸೂಚಿಸಿದ್ದರು. ಗರ್ಭಧಾರಣೆಯ ಪೂರ್ವ ಮತ್ತು ಪ್ರಸವಪೂರ್ವ ರೋಗನಿರ್ಣಯ ತಂತ್ರಗಳ (ಲಿಂಗ ಆಯ್ಕೆ ನಿಷೇಧ) ಕಾಯ್ದೆ-1994 (ಪಿಸಿಪಿಎನ್‌ಡಿಟಿ) ಅನುಸಾರ 45 ಎಫ್‌ಐಆರ್ ದಾಖಲಾಗಿವೆ.

ಡಿಎಚ್‌ಒಗೆ ನೋಟಿಸ್: ಪ್ರಕರಣದ ವಿಚಾರಣೆ ನಡೆಸಿದ ಉಪಲೋಕಾಯುಕ್ತ ಮತ್ತೆ ಚಾಟಿ ಬೀಸಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಜಿಲ್ಲೆಯ 63 ಸೆಂಟರ್‌ಗಳಲ್ಲಿ ನಡೆದಿರುವ ಸ್ಕ್ಯಾನಿಂಗ್ ವರದಿ ಕಲೆ ಹಾಕಬೇಕು. ಕಾನೂನು ಉಲ್ಲಂಘನೆಯಾಗಿದ್ದರೆ ಕೈಗೊಂಡ ಕ್ರಮಗಳ ಸಮಗ್ರ ವರದಿಯನ್ನು ಜುಲೈ 2ರಂದು ಸಲ್ಲಿಸಬೇಕು ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಕೆ.ಮೋಹನ್ ಮತ್ತು ಏಳು ತಾಲ್ಲೂಕು ಆರೋಗ್ಯ ಅಧಿಕಾರಿಗಳಿಗೆ ನೋಟಿಸ್ ನೀಡಿದ್ದಾರೆ.

ಸ್ಕ್ಯಾನಿಂಗ್ ಶುಲ್ಕದ ಮೇಲೆ ನಿಗಾ: ಜಿಲ್ಲೆಯ ಏಳು ತಾಲ್ಲೂಕು ಆಸ್ಪತ್ರೆಗಳಲ್ಲಿರುವ ಸ್ಕ್ಯಾನಿಂಗ್ ಯಂತ್ರಗಳ ವಿವರ ಮತ್ತು ರೇಡಿಯಾಲಾಜಿಸ್ಟ್ ಲಭ್ಯತೆ ಕುರಿತು ವರದಿ ನೀಡಬೇಕು. ಸ್ಕ್ಯಾನಿಂಗ್ ಮಾಡಲು ಸರ್ಕಾರ ನಿಗದಿಪಡಿಸಿರುವ ದರ ಮತ್ತು ಖಾಸಗಿ ಸೆಂಟರ್‌ಗಳಲ್ಲಿ ತೆಗೆದುಕೊಳ್ಳುತ್ತಿರುವ ಶುಲ್ಕ ಎಷ್ಟು ಎಂಬ ಬಗ್ಗೆಯೂ ಮಾಹಿತಿ ನೀಡುವಂತೆ ಆದೇಶಿಸಿದ್ದಾರೆ.

ಸಾರ್ವಜನಿಕರಿಗೆ ಸಕಾಲದಲ್ಲಿ ಉತ್ತಮ ಚಿಕಿತ್ಸೆ ಸಿಗದೆ ಇರುವುದಕ್ಕೆ ವೈದ್ಯರು ಲಭ್ಯ ಇಲ್ಲದಿರುವುದು ಕಾರಣ ಎಂಬ ದೂರು ಕೇಳಿಬಂದಿದೆ. ಹೀಗಾಗಿ ಎಷ್ಟು ಸರ್ಕಾರಿ ವೈದ್ಯರು ನಿಯೋಜಿತ ತಾಲ್ಲೂಕು ಕೇಂದ್ರಗಳಲ್ಲಿ ವಾಸಿಸುತ್ತಿದ್ದಾರೆ? ಎಷ್ಟು ವೈದ್ಯರು ವಾಸಿಸುತ್ತಿಲ್ಲ ಎಂಬ ಬಗ್ಗೆ ವರದಿ ನೀಡುವಂತೆ ಸೂಚಿಸಿದ್ದಾರೆ.

ಖಾಸಗಿ ಸೆಂಟರ್‌ಗಳಿಗೆ ಪ್ರೋತ್ಸಾಹ: ಆರೋಪ

'ಕೆ.ಆರ್.ಪೇಟೆ ತಾಲ್ಲೂಕು ಆಸ್ಪತ್ರೆಯಲ್ಲಿ 2014ರಿಂದ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರವಿದ್ದರೂ, ಅದನ್ನು ಬಳಕೆಗೆ ಹಾಳು ಮಾಡಲಾಗಿದೆ. ಖಾಸಗಿ ಸೆಂಟರ್‌ಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶ ದಿಂದಲೇ ರೇಡಿಯಾಲಜಿಸ್ಟ್ ನೇಮಕ ಮಾಡಿಲ್ಲ' ಎಂದು ಉಪಲೋಕಾಯುಕ್ತ ಬಿ.ವೀರಪ್ಪ ಅವರು ಆದೇಶದಲ್ಲಿ ಕಟುವಾಗಿ ಟೀಕಿಸಿದ್ದಾರೆ. 15 ದಿನದೊಳಗೆ ಯಂತ್ರ ಚಾಲನೆಗೊಳಿಸುವಂತೆ ತಾಕೀತು ಮಾಡಿದ್ದಾರೆ.



'ಚಿತ್ರಮಂದಿರಗಳತ್ತ ಪ್ರೇಕ್ಷಕರು ಸುಳಿಯುತ್ತಿಲ್ಲ ಏಕೆ?' ಸಂವಾದದಲ್ಲಿ ಕೆ.ಎಂ.ಚೈತನ್ಯ, ಥಾಮಸ್ ಡಿಸೋಜ, ಶ್ರೀನಿಧಿ ಬೆಂಗಳೂರು, ಸಿಂಧು ಶ್ರೀನಿವಾಸಮೂರ್ತಿ, ರವಿಚಂದ್ರ, ನಿರಂಜನ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಪ್ರೇಕ್ಷಕರ ಕುರಿತ ಸಂವಾದದಲ್ಲಿ ತಜ್ಞರ ಅಭಿಮತ

ಕಥೆ ಗಟ್ಟಿ ಇಲ್ಲದಿದ್ದರೆ ಚಿತ್ರ ಓಡಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಥೆ ಗಟ್ಟಿ ಇಲ್ಲದೇ ಇದ್ದರೆ ದೊಡ್ಡ ಕಲಾವಿದರಲ್ಲ, ದೇವರೇ ನಟಿಸಿದರೂ ಸಿನಿಮಾ ಓಡಲ್ಲ. ಜನರು ಮೊಬೈಲ್‌ನಿಂದ ಹೊರಬಂದು ಚಿತ್ರ ಮಂದಿರಕ್ಕೆ ಬರುವಂತೆ ಮಾಡದಿದ್ದರೆ ಚಿತ್ರಮಂದಿರಗಳು ಉಳಿಯಲ್ಲ...'

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' 4ನೇ ಆವೃತ್ತಿಯ ಜ್ಯೂರಿ ಮೀಟ್ ಸಂದರ್ಭದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಚಿತ್ರಮಂದಿರಗಳತ್ತ ಪ್ರೇಕ್ಷಕರು ಸುಳಿಯುತ್ತಿಲ್ಲ ಏಕೆ?' ಸಂವಾದದಲ್ಲಿ ಮೂಡಿಬಂದ ಅಭಿಪ್ರಾಯ ಇದು.

ಸಂವಾದದಲ್ಲಿ ನಟಿ–ನಿರ್ದೇಶಕಿ ಸಿಂಧು ಶ್ರೀನಿವಾಸಮೂರ್ತಿ, ಒಟಿಟಿ ಮಾರ್ಕೆಟಿಂಗ್ ತಜ್ಞ–ನಿರ್ಮಾಪಕ ನಿರಂಜನ್, ರಾಬಿನ್ ಚಿತ್ರಮಂದಿರದ ಮಾಲೀಕ ಥಾಮಸ್ ಡಿಸೋಜ, ನಿರ್ದೇಶಕ ಶ್ರೀನಿಧಿ ಬೆಂಗಳೂರು, ನಿರ್ಮಾಪಕ–ವಿತರಕ ರವಿಚಂದ್ರ ಭಾಗವಹಿಸಿದ್ದರು. ನಿರ್ದೇಶಕ ಕೆ.ಎಂ.ಚೈತನ್ಯ ಸಂವಾದ ನಡೆಸಿಕೊಟ್ಟರು.

ಚಿತ್ರಮಂದಿರಕ್ಕೆ ಪ್ರೇಕ್ಷಕರು ಬಾರದಿರಲು ಕಾರಣಗಳೇನು ಎಂಬುದಷ್ಟೇ ಅಲ್ಲದೇ, ಪ್ರೇಕ್ಷಕರನ್ನು ಸೆಳೆಯಲು ಏನು ಮಾಡಬಹುದು ಎಂಬುದರ ಬಗ್ಗೆಯೂ ಗುಣಮಟ್ಟದ ಚರ್ಚೆಗಳು ಈ ಸಂವಾದದಲ್ಲಿ ನಡೆದವು.

ಕೌಟುಂಬಿಕ ಸಂಬಂಧದ ಎಳೆ ಇರುವ, ಕುಟುಂಬದ ಸದಸ್ಯರು ಒಟ್ಟಿಗೆ ಕುಳಿತು ನೋಡುವ ಚಿತ್ರಗಳ ಸಂಖ್ಯೆ ಕಡಿಮೆ ಆಗಿದೆ. ನಟ–ನಟಿಯರು, ನಿರ್ದೇಶಕರ ಸಹಿತ ಯಾರೂ ಕಥೆಗಿಂತ ದೊಡ್ಡವರಲ್ಲ. ಕಥೆ ದುರ್ಬಲವಾಗಿದ್ದರೆ ಯಶಸ್ಸು ಸಾಧಿಸಲು ಸಾಧ್ಯವಿಲ್ಲ. ಉತ್ತಮ ಕಥೆ ಇದ್ದಾಗ ಜನ ನೋಡುತ್ತಾರೆ ಎಂಬ ಅಭಿಪ್ರಾಯಗಳು ಬಂದವು.

ಹಿಂದೆ ನಟ, ನಟಿಯರು ಸಾರ್ವಜನಿಕರಿಗೆ ಸುಲಭದಲ್ಲಿ ಸಿಗುತ್ತಿರಲಿಲ್ಲ. ಸಿನೆಮಾದಲ್ಲೇ ನೋಡಬೇಕಿತ್ತು. ಇಂದು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ, ಧಾರಾವಾಹಿಗಳಲ್ಲಿ, ಯೂಟ್ಯೂಬ್‌ನಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಹೀಗೆ ಎಲ್ಲ ಕಡೆ ಸಿಗುತ್ತಾರೆ. ಹಾಗಾಗಿ ಅವರ ಬಗ್ಗೆ ಪ್ರೇಕ್ಷಕರಿಗೆ ಕುತೂಹಲ ಉಳಿದಿಲ್ಲ. ಚಿತ್ರೀಕರಣವನ್ನು ನೋಡಿದವರಿಗೆ ಸಿನಿಮಾದಲ್ಲಿ ನಡೆಯುವ ಫೈಟಿಂಗ್ ನಿಜವಲ್ಲ ಎಂಬುದು ಗೊತ್ತಾಗಿ ಫೈಟಿಂಗ್ ದೃಶ್ಯಗಳೂ ಪ್ರೇಕ್ಷಕರನ್ನು ಸೆಳೆಯುತ್ತಿಲ್ಲ. ಸಿನಿಮಾಗಳು ಚೆನ್ನಾಗಿದ್ದರೆ ಸಾಲದು ಚಿತ್ರಮಂದಿರವೂ ಚೆನ್ನಾಗಿರಬೇಕು. ಉತ್ತಮ ಧ್ವನಿ ವ್ಯವಸ್ಥೆ, ಆಸನ ವ್ಯವಸ್ಥೆ, ಪಾರ್ಕಿಂಗ್ ವ್ಯವಸ್ಥೆಗಳು ಇದ್ದಾಗ ಬರುತ್ತಾರೆ ಎಂಬುದು ಚರ್ಚೆಯಾಯಿತು.

ಹೆಣ್ಣುಮಕ್ಕಳ ಸಿನಿಮಾ ಅಂದರೆ ಹೀಗೇ ಇರುತ್ತದೆ ಅಥವಾ ಹೀಗೇ ಇರಬೇಕು ಎಂಬ ಮನಃಸ್ಥಿತಿಯನ್ನು ಬದಲಾಯಿಸಿ, ಹೆಣ್ಣುಮಕ್ಕಳು ನಿಜ ಜೀವನದಲ್ಲಿ ಹೇಗಿರುತ್ತಾರೆ? ಅವರ ಸಂಭ್ರಮ, ಎಲ್ಲರಂತೆ ಅವರಿಗೂ ಇರುವ ಸ್ವಾರ್ಥ, ಬಯಕೆಗಳನ್ನೇ ಇಟ್ಟುಕೊಂಡು ಸಿನಿಮಾ ಮಾಡಿದ್ದರಿಂದ 'ಆಚಾರ್ ಆ್ಯಂಡ್ ಕೋ' ಸಿನಿಮಾ ಯಶಸ್ವಿಯಾಯಿತು. ಅದೇ ರೀತಿ ಎಲ್ಲದರ ಬಗ್ಗೆ ಇರುವ ಮಿತಿಗಳನ್ನು ಮೀರಬೇಕು ಎಂಬ ಸಲಹೆಗಳು ಬಂದವು.

'ಬ್ಲಿಂಕ್'ನಂಥ ಸಿನಿಮಾವನ್ನು ಮೊದಲು ಒಂದಷ್ಟು ಪ್ರೇಕ್ಷಕರಿಗೆ ತೋರಿಸಿ ಅವರಿಂದ ಸಲಹೆಗಳನ್ನು ಪಡೆಯಲಾಯಿತು. ಅದಕ್ಕಿಂತಲೂ ಮೊದಲು ತಂತ್ರಜ್ಞರಿಗೆ ತೋರಿಸಲಾಗಿತ್ತು. ಅವರು ತಾಂತ್ರಿಕ ಸಲಹೆಗಳನ್ನಷ್ಟೇ ನೀಡಿದರು. ಆದರೆ, ಜನ ನೋಡುವಂತಾಗಬೇಕಿದ್ದರೆ ಏನು ಇರಬೇಕು ಎಂಬ ಸಲಹೆಗಳು ಸಾಮಾನ್ಯ ಪ್ರೇಕ್ಷಕರಿಂದಲೇ ಬಂದಿದ್ದವು. ಅವೆಲ್ಲವನ್ನು ಪಡೆದು ಕೆಲವೊಂದಷ್ಟು ಕತ್ತರಿಸಿ, ಇನ್ನೊಂದಷ್ಟು ದೃಶ್ಯಗಳನ್ನು ಸೇರಿಸಿ ಚಿತ್ರ ಬಿಡುಗಡೆ ಮಾಡಿದ್ದರಿಂದ ಯಶಸ್ವಿಯಾಗಿರುವುದು ನಮ್ಮ ಕಣ್ಣ ಮುಂದೆ ಇದೆ. ಇಂಥ ಪ್ರಯೋಗಗಳಿಂದ ಪ್ರೇಕ್ಷಕರು ಖಂಡಿತ ಚಿತ್ರಗಳನ್ನು ನೋಡುತ್ತಾರೆ ಎಂಬ ಭರವಸೆಯ ಮಾತುಗಳು ಮೂಡಿದವು.

'ಚಿತ್ರಮಂದಿರಗಳಲ್ಲಿ ಸಿನಿಮಾ ತೋರಿಸಬೇಕು. ಅದಕ್ಕೆ ಅದರದ್ದೇ ಆದ ಮಾರುಕಟ್ಟೆ ಇದೆ. ಅದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಜೊತೆಗೆ ಒಟಿಟಿಯಂಥ ಪ್ಲಾಟ್‌ಫಾರ್ಮ್‌ಗಳಿಗೆ ನುಗ್ಗುವುದು ಹೇಗೆ ಎಂಬುದನ್ನು ತಿಳಿದುಕೊಳ್ಳಬೇಕು. ಏಕೆಂದರೆ ಒಟಿಟಿ ನಡೆಸುವವರಿಗೆ ಕನ್ನಡ ಬರುವುದಿಲ್ಲ' ಎಂದು ತಜ್ಞರು ತಿಳಿಸಿದರು.

ಸಿನಿಮಾ ಮಾಡುವಾಗ, ಜನರಿಗೆ ತಲುಪಿಸುವಾಗ ಇರುವ ದಾರಿಗೆ ಸೀಮಿತವಾಗಿ ಯೋಚಿಸುವ ಮನಃಸ್ಥಿತಿಯನ್ನು ಬದಲಾಯಿಸಿ, ಎಲ್ಲ ಅವಕಾಶ ಬಳಸಿಕೊಳ್ಳಬೇಕು
ಸಿಂಧು ಶ್ರೀನಿವಾಸಮೂರ್ತಿ, ನಟಿ, ನಿರ್ದೇಶಕಿ

ಹೊಸಬರ ಚಿತ್ರಗಳು ಬರುತ್ತಿರುವುದರಿಂದ ಚಿತ್ರಮಂದಿರಗಳು ಇನ್ನೂ ಉಳಿದಿವೆ. ಇಲ್ಲದೇ ಇದ್ದರೆ ಚಿತ್ರಮಂದಿರಗಳು ಇಷ್ಟು ಹೊತ್ತಿಗೆ ಮುಚ್ಚಿ ಹೋಗುತ್ತಿದ್ದವು
ಥಾಮಸ್ ಡಿಸೋಜ, ಚಿತ್ರಮಂದಿರ ಮಾಲೀಕ

ಸಿನಿಮಾಗಳನ್ನು ಮೊದಲು ಸೀಮಿತ ಪ್ರೇಕ್ಷಕರಿಗೆ ತೋರಿಸಿ, ಅವರು ಹೇಳಿದ ಬದಲಾವಣೆ ಮಾಡಿ, ಬಿಡುಗಡೆ ಮಾಡಿದರೆ ಯಶಸ್ವಿಯಾಗಲು ಸಾಧ್ಯ
ಶ್ರೀನಿಧಿ ಬೆಂಗಳೂರು, ನಿರ್ದೇಶಕ


ನಾವು ಮಾಡಿದ ಚಿತ್ರ 25 ದಿನ ಓಡಿದರೆ ಸಂತೃಪ್ತಿ ಪಡಬಾರದು. ಅದರ ಬದಲು ನೂರು ದಿನ ಓಡುವವರೆಗೆ ನಾವು ಪ್ರಯತ್ನ ಮುಂದುವರಿಸಬೇಕು
ನಿರಂಜನ್, ನಿರ್ಮಾಪಕ

ಪ್ರೇಕ್ಷಕರಿಂದ ಹೊಗಳಿಕೆ ಮಾತ್ರವಲ್ಲ, ನಕಾರಾತ್ಮಕ ಅಂಶಗಳನ್ನೂ ಪಡೆದು ಸಿನಿಮಾಗಳನ್ನು ರೂಪಿಸಿದರೆ ಜನ ಮೆಚ್ಚುವ ಚಿತ್ರ ನೀಡಲು ಸಾಧ್ಯವಾಗುತ್ತದೆ
ರವಿಚಂದ್ರ, ನಿರ್ಮಾಪಕ–ವಿತರಕ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'

ಉದಯಕುಮಾರ್‌ಗೆ 'ಖಾದ್ರಿ ಶಾಮಣ್ಣ ಪ್ರಶಸ್ತಿ'

ಬೆಂಗಳೂರು: ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ನೀಡುವ 'ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ'ಗೆ ಪತ್ರಕರ್ತ ಎನ್. ಉದಯಕುಮಾರ್ ಆಯ್ಕೆಯಾಗಿದ್ದಾರೆ.



ಎನ್. ಉದಯ ಕುಮಾರ್

ಪ್ರಶಸ್ತಿಯು ₹ 15 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

ಉದಯಕುಮಾರ್ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಅಂಕಾಲಮಡುಗು ಗ್ರಾಮದವರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಮಾಜಕಾರ್ಯ (ಎಂಎಸ್‌ಡಬ್ಲ್ಯು) ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪತ್ರಿಕೋದ್ಯಮದಲ್ಲಿ ಬಿ.ಎಸ್. ಕಮ್ಯೂನಿಕೇಶನ್ ಪದವಿ ಪಡೆದ ಅವರು, 1992ರಲ್ಲಿ 'ಪ್ರಜಾವಾಣಿ' ಪತ್ರಿಕೆಯಲ್ಲಿ ವರದಿಗಾರರಾಗಿ ವೃತ್ತಿ ಆರಂಭಿಸಿದರು.

ರಾಜಕೀಯ, ಸಿನಿಮಾ, ಸಾಹಿತ್ಯ, ಸಂಸ್ಕೃತಿ ಹಾಗೂ ಸಮಕಾಲೀನ ವಿದ್ಯಮಾನದಲ್ಲಿ ಆಸಕ್ತಿ ಹೊಂದಿರುವ ಅವರು, 'ಪ್ರಜಾವಾಣಿ'ಯಲ್ಲಿ ಸಹಾಯಕ ಸಂಪಾದಕ ಹುದ್ದೆಯವರೆಗೆ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. 'ಸುಧಾ' ವಾರಪತ್ರಿಕೆ ಹಾಗೂ 'ಮಯೂರ' ಮಾಸಿಕದಲ್ಲಿಯೂ ಕಾರ್ಯನಿರ್ವಹಿಸಿದ್ದರು.

33 ವರ್ಷ ಕಾರ್ಯನಿರ್ವಹಿಸಿದ ಅವರು, 2025ರ ಜೂನ್‌ನಲ್ಲಿ ನಿವೃತ್ತರಾಗಿದ್ದಾರೆ. ಈ ವರ್ಷ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಟ್ರಸ್ಟ್ ಪರವಾಗಿ ಪತ್ರಕರ್ತ ಎಚ್.ಆರ್. ಶ್ರೀಶ ತಿಳಿಸಿದ್ದಾರೆ.

'ವಿಧಾನಸಭೆ ವಿಸರ್ಜಿಸಿ ಚುನಾವಣೆ ಎದುರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜನಸ್ನೇಹಿ ಮತ್ತು ಭ್ರಷ್ಟಾಚಾರ ರಹಿತ ಆಡಳಿತ ನೀಡಲು ಸಾಧ್ಯವಾಗದಿದ್ದರೆ, ವಿಧಾನಸಭೆಯನ್ನು ವಿಸರ್ಜಿಸಿ ಚುನಾವಣೆ ಎದುರಿಸಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸವಾಲು ಹಾಕಿದರು.



ಬಿ.ವೈ. ವಿಜಯೇಂದ್ರ

'ಸಚಿವ ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿದ್ದಾರೆ. ಈ ಬೆಳವಣಿಗೆಗಳು ಆಡಳಿತದ ಮೇಲೆ ದುಷ್ಪರಿಣಾಮ ಬೀರುತ್ತವೆ. ಜಿಬಿಎ ವ್ಯಾಪ್ತಿಯ ಪಾಲಿಕೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸದ್ಯವೇ ಚುನಾವಣೆ ನಡೆಯಲಿದೆ. ಅದರ ಜತೆ ವಿಧಾನಸಭೆಗೂ ಚುನಾವಣೆ ನಡೆಸುವುದು ಸೂಕ್ತ ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

ಮೂರು ವರ್ಷಗಳಿಂದ ಅಧಿಕಾರಕ್ಕಾಗಿ ಕಚ್ಚಾಟ ನಡೆಯುತ್ತಾ ಬಂದಿದೆ. ಅದರಿಂದ ಹೊರಗೆ ಬರುವ ಲಕ್ಷಣ ಕಾಣುತ್ತಿಲ್ಲ. ಬಡವರು, ರೈತರು ಮತ್ತು ಜನ ಸಾಮಾನ್ಯರಿಗಾಗಿ ಏನೂ ಒಳಿತು ಮಾಡಲು ಆಗದ ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಗಾಂಧಿ ಕುಟುಂಬಕ್ಕೆ ಮಾರುವ, ಅಡ ಇಡುವ ಕೆಲಸ ಮಾಡಿದೆ ಎಂದು ಟೀಕಿಸಿದರು.


ಸಚಿವರಿಗೆ ಅಭಿವೃದ್ಧಿಗಿಂತ ಅಧಿಕಾರದ ಹಪಾಹಪಿ ಹೆಚ್ಚಾಗಿದೆ. ಇದರಿಂದ ಬೇಸತ್ತ ಜನ ವಿಧಾನಸಭಾ ಚುನಾವಣೆ ನಡೆದು, ದರಿದ್ರ ಕಾಂಗ್ರೆಸ್ ಸರ್ಕಾರ ತೊಲಗಬೇಕು ಎಂದು ಜನ ಬಯಸಿದ್ದಾರೆ ಎಂದು ಹೇಳಿದರು.

'ಕಾಂಗ್ರೆಸ್ ದಂಗೆ ಜ್ವಾಲಾಮುಖಿಯಾಗಲಿದೆ'

'ಕನ್ನಡಿಗರು ಬಹುಶಃ ಸೂರ್ಯನೇ ಹುಟ್ಟದ ದಿನ ನೋಡಬಹುದೇನೊ, ಆದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಒಳ ಜಗಳ ಇಲ್ಲದ ದಿನ ನೋಡಲು ಸಾಧ್ಯವೇ ಇಲ್ಲ' ಎಂದು ವಿರೋಧಪಕ್ಷದ ನಾಯಕ ಆರ್. ಅಶೋಕ ವ್ಯಂಗ್ಯವಾಡಿದರು.

'ಇನ್ನು ಎರಡು ವರ್ಷ ನಡೆಯಲಿರುವ ಕಾಂಗ್ರೆಸ್ ಸರ್ಕಾರದ ನಿತ್ಯದ ಕಚ್ಚಾಟಕ್ಕೆ ತೇಪೆ ಹಚ್ಚಲು ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ಸುರ್ಜೇವಾಲಾ ಅವರು ಬೆಂಗಳೂರಿನಲ್ಲಿ ಒಂದು ಮನೆ ಮಾಡಿಕೊಂಡು ಇಲ್ಲೇ ಇದ್ದುಬಿಟ್ಟರೆ ಒಳ್ಳೆಯದು' ಎಂದು ಹೇಳಿದರು.

'ರಾಮಲಿಂಗಾರೆಡ್ಡಿಯವರಿಗೆ ಬೆಂಗಳೂರು ಅಭಿವೃದ್ಧಿಯ ಹೊಣೆ ನೀಡುವುದಾಗಿ ಭರವಸೆ ನೀಡಿದ್ದ ಶಿವಕುಮಾರ್, ಈಗ ಮಾತು ತಪ್ಪಿದ್ದಾರೆ. ಅದಕ್ಕಾಗಿ ಅವರು ರಾಜೀನಾಮೆ ನೀಡಿದ್ದಾರೆ. ಬೆಂಗಳೂರಿನ ಅನುಭವ ಇರುವ ಹಿರಿಯ ನಾಯಕ ರಾಮಲಿಂಗಾರೆಡ್ಡಿ ಹೀಗೆ ಕೇಳುವುದರಲ್ಲಿ ತಪ್ಪಿಲ್ಲ. ಆದರೆ ಶಿವಕುಮಾರ್ ಅವರು ಆರಂಭದಲ್ಲೇ ಕೊಟ್ಟ ಮಾತಿಗೆ ತಪ್ಪಿ ನಡೆಯುವ ಚಾಳಿ ತೋರಿಸಿದ್ದಾರೆ' ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.



ಆರ್. ಅಶೋಕ

'ಸತೀಶ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಮಾಡುತ್ತೇನೆ ಎಂದು ಮಾತು ಕೊಟ್ಟಿದ್ದರು. ಎಚ್.ಕೆ.ಪಾಟೀಲ ಕೂಡ ಈ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ. ಕೆ. ಎಚ್. ಮುನಿಯಪ್ಪ ಕೂಡ ಅಸಮಾಧಾನ ಹೊರಹಾಕಿದ್ದಾರೆ. ಎಲ್ಲರೂ ಖಾತೆ ಹಂಚಿಕೆಯಲ್ಲಿ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ' ಎಂದರು.

'ಇನ್ನು ಒಂದೂವರೆ ವರ್ಷದಲ್ಲಿ ಚುನಾವಣೆ ಬರಲಿದೆ. ಅದಕ್ಕೆ ಮುನ್ನವೇ ದಂಗೆ ಆರಂಭವಾಗಿದ್ದು, ಮುಂದೆ ಇದು ಜ್ವಾಲಾಮುಖಿ ಯಾಗಲಿದೆ. ಮುಂದೆ ಎಷ್ಟು ಸಚಿವರು ಈ ರೀತಿ ಧಮಕಿ ಹಾಕುತ್ತಾರೋ ಎಂದು ತಿಳಿದಿಲ್ಲ' ಎಂದು ಹೇಳಿದರು.

'ಡಿ.ಕೆ. ಶಿವಕುಮಾರ್ ಅವರು ಸಿಎಂ ಆಗಿರುವ ಸಮಯ ಸರಿಯಾದ ಸಂದರ್ಭವಲ್ಲ ಎನ್ನಿಸುತ್ತಿದೆ. ಈಗ ಅವರು ಮುಳ್ಳಿನ ಹಾಸಿಗೆಯಲ್ಲಿ ಮಲಗಿದ್ದಾರೆ. ಅವರು ಮೂರು ವರ್ಷ ನಡೆದು ಬಂದ ಹಾದಿಯನ್ನು ಮೀರಿ ಹೋದರೆ ಯಶಸ್ವಿಯಾಗುತ್ತಾರೆ
ಡಿ.ವಿ.ಸದಾನಂದಗೌಡ, ಬಿಜೆಪಿ ಮುಖಂಡ

'ಟಿಕೆಟ್ ಅಪೇಕ್ಷಿತ, ಲಾಬಿ ಮಾಡಲ್ಲ'

ಪುತ್ತೂರು (ದಕ್ಷಿಣ ಕನ್ನಡ): 'ಚುನಾವಣಾ ವಿಚಾರದಲ್ಲಿ ನಾನು ಸ್ಪರ್ಧಿಯಲ್ಲ. ಆದರೆ, ರಾಜ್ಯಸಭಾ ಚುನಾವಣೆಯಲ್ಲಿ ಟಿಕೆಟ್ ಅಪೇಕ್ಷಿತ. ಹಾಗೆಂದು ಲಾಬಿ ಮಾಡುವುದಿಲ್ಲ' ಎಂದು ಬಿಜೆಪಿ ಮುಖಂಡ ಡಿ.ವಿ. ಸದಾನಂದ ಗೌಡ ಹೇಳಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊನ್ನೆ ನಡೆದ ಕೋರ್ ಕಮಿಟಿ ಸಭೆಯಲ್ಲಿ 13 ಮಂದಿ ನನ್ನ ಹೆಸರನ್ನೇ ಉಲ್ಲೇಖಿಸಿದ್ದು, ರಾಷ್ಟ್ರೀಯ ನಾಯಕರ ತೀರ್ಮಾನಕ್ಕೆ ನಾನು ಬದ್ಧ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ವಿಚಾರದಲ್ಲಿ ಕೇಂದ್ರದ ತೀರ್ಮಾನವೇ ಅಂತಿಮ' ಎಂದರು.

'ಕಸದ ರಸ'ಕ್ಕಾಗಿ ರಾಜೀನಾಮೆ'

'ಸಚಿವ ರಾಮಲಿಂಗಾರೆಡ್ಡಿ ಮುನಿಸು ಮತ್ತು ರಾಜೀನಾಮೆಗೆ ಬೆಂಗಳೂರಿನ 'ಕಸದ ರಸ' ತಮಗೆ ಸಿಗುತ್ತಿಲ್ಲ ಎಂಬುದೇ ಕಾರಣ' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಹೇಳಿದ್ದಾರೆ.

'ಮಂತ್ರಿಮಂಡಲದಲ್ಲಿ ಜಿಬಿಎ ವಶಕ್ಕೆ ತೆಗೆದುಕೊಳ್ಳಲು ಪೈಪೋಟಿ ನಡೆದಿದೆ. ಜನರ ಕಲ್ಯಾಣಕ್ಕಾಗಿ ಈ ಪೈಪೋಟಿ ಅಲ್ಲ. ಇವರ ಉದ್ದೇಶವೇ ಬೇರೆಯೇ ಇದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬೆಂಗಳೂರಿನಲ್ಲಿ ಕಸದಿಂದ ರಸ ತೆಗೆಯಲಾಗುತ್ತಿದೆ. ಈ ಕಸ ಎತ್ತುವುದರಲ್ಲಿ ಇರುವ ಮಜಾ ಬೇರೆ ಯಾವುದರಲ್ಲೂ ಇಲ್ಲ. 30 ವರ್ಷಗಳ ಕಾಲಕ್ಕೆ ಟೆಂಡರ್ ಕೊಡಲು ಮುಂದಾಗಿದ್ದಾರೆ. ಇದಕ್ಕಾಗಿಯೇ ಇಷ್ಟೊಂದು ಒದ್ದಾಟ ನಡೆಯುತ್ತಿದೆ. ಕಸದ ಕರಾಮತ್ತಿನಿಂದ ಇಷ್ಟೊಂದು ಗೊಂದಲ ಉಂಟಾಗಿದೆ' ಎಂದರು.

ಡಿ.ಕೆ.ಸರ್ಕಾರಕ್ಕೆ 'ಖಾತೆ' ಸಂಕಟ

ಒಂದನೇ ಪುಟದಿಂದ...

'ಗುರುವಾರ ರಾಜೀನಾಮೆ ನಿರ್ಧಾರ ಪ್ರಕಟಿಸಿದ ಬಳಿಕ ತಮ್ಮ ಆಪ್ತರ ಜತೆ ಮಾತನಾಡಿದ ರಾಮಲಿಂಗಾರೆಡ್ಡಿ ಅವರು, ಇಂದು ಒಂದು ಶಾಕ್ ಕೊಟ್ಟಿದ್ದೇನೆ. ನಾಳೆ (ಶನಿವಾರ) ಮತ್ತೊಂದು ಶಾಕ್ ನೀಡಲಿದ್ದೇನೆ ಎಂದು ಹೇಳಿದ್ದಾರೆ. ಹೀಗೆ ಹೇಳುವ ಮೂಲಕ ತಮ್ಮ ಮುಂದಿನ ನಡೆಯನ್ನು ಅವರು ನಿಗೂಢವಾಗಿಯೇ ಇರಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ರಾಜೀನಾಮೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಮಲಿಂಗಾರೆಡ್ಡಿ ಅವರು 'ಸಚಿವ ಸಂಪುಟದಲ್ಲಿ ತಾವು ನಿರೀಕ್ಷಿಸಿದ್ದ ಬೆಂಗಳೂರು ಅಭಿವೃದ್ಧಿ ಖಾತೆ ಸಿಕ್ಕಿಲ್ಲ. 2023ರ ವಿಧಾನಸಭಾ ಚುನಾವಣೆಯ ನಂತರ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದಾಗ ಬೆಂಗಳೂರು ಅಭಿವೃದ್ಧಿ ಖಾತೆ ಕೇಳಿದ್ದೆ. ಖಾತೆ ಹಂಚಿಕೆ ಪಟ್ಟಿಯಲ್ಲಿ ಬೆಂಗಳೂರು ಅಭಿವೃದ್ಧಿ ಖಾತೆಗೆ ನನ್ನ ಹೆಸರಿತ್ತು. ಆಗ ಶಿವಕುಮಾರ್ ಹಾಗೂ ಅವರ ಸಹೋದರ ಡಿ.ಕೆ.ಸುರೇಶ್ ಮುಂದಿನ ದಿನಗಳಲ್ಲಿ ಖಾತೆ ಬಿಟ್ಟುಕೊಡುವ ಭರವಸೆ ನೀಡಿದ್ದರು. ಈಗ ಮಾತು ತಪ್ಪಿದ್ದಾರೆ. ಜಲಸಂಪನ್ಮೂಲ ಖಾತೆ ಬೇಡ' ಎಂದರು.

'ಸಚಿವ ಸಂಪುಟದಲ್ಲಿ ಸ್ಥಾನ ನೀಡಿದ್ದಕ್ಕೆ ಮುಖ್ಯಮಂತ್ರಿಗೆ, ಕಾಂಗ್ರೆಸ್ ಪಕ್ಷಕ್ಕೆ ಧನ್ಯವಾದ ಹೇಳುವೆ. ಆತ್ಮಸಾಕ್ಷಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದ ಕಾರಣ ನೀಡಿರುವ ರಾಜೀನಾಮೆಯನ್ನು ಅಂಗೀಕರಿಸಬೇಕೆಂದು ಕೋರುತ್ತಿದ್ದೇನೆ. ಶಾಸಕ ಸ್ಥಾನ, ಪಕ್ಷಕ್ಕೆ ರಾಜೀನಾಮೆ ನೀಡುವುದಿಲ್ಲ. ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಮುಂದುವರಿಯುತ್ತೇನೆ' ಎಂದು ಹೇಳಿದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ರಾಮಲಿಂಗಾರೆಡ್ಡಿ ಅವರ ಜತೆ ಮಾತುಕತೆ ನಡೆಸಿದರೂ ಫಲ ಸಿಗಲಿಲ್ಲ.

ಮುನಿಯಪ್ಪ ಪಟ್ಟು, ಬಗೆಹರಿದ ಬಿಕ್ಕಟ್ಟು

ಒಂದನೇ ಪುಟದಿಂದ...

ಅಲ್ಲದೇ 'ಈಗಾಗಲೇ ಮೂರು ವರ್ಷ ಆಹಾರ ಖಾತೆಯನ್ನು ನಿಭಾಯಿಸಿದ್ದು, ಬದಲಾವಣೆ ಕೋರಿದ್ದೇನೆ' ಎಂದರು.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಾಯಿ ಸ್ಥಾನದಲ್ಲಿದ್ದು, ಎಲ್ಲರನ್ನೂ ಸಮಾನವಾಗಿ ನೋಡಬೇಕು. ಈ ವಿಷಯವನ್ನು ಸೋನಿಯಾಗಾಂಧಿ ಗಮನಕ್ಕೂ ತಂದಿದ್ದೇನೆ' ಎಂದು ಹೇಳಿದರು.

ಬೆಂಗಳೂರಿಗೆ ಬಂದಿದ್ದ ರಾಹುಲ್ ಗಾಂಧಿ, ವೇಣುಗೋಪಾಲ್, ಸುರ್ಜೇವಾಲಾ ಅವರ ಜತೆ ಮಾತನಾಡಿದ ಮುನಿಯಪ್ಪ 'ಬೇಡಿಕೆ ಪರಿಶೀಲಿಸುವ ಭರವಸೆ ಸಿಕ್ಕಿದೆ. ಈಗ ಹ್ಯಾಪಿ' ಎಂದರು.

ಖರ್ಗೆ ಕುಟುಂಬದ ಆಸ್ತಿ ₹38.97 ಕೋಟಿ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಕುಟುಂಬದ ಒಟ್ಟು ಆಸ್ತಿ ₹38.97 ಕೋಟಿ ಎಂದು ಘೋಷಿಸಿಕೊಂಡಿದ್ದಾರೆ. ರಾಜ್ಯಸಭಾ ಚುನಾವಣೆಗೆ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದರು.

2024ರಲ್ಲಿ ಒಟ್ಟು ₹20.12 ಕೋಟಿ ಮೌಲ್ಯದ ಆಸ್ತಿ ಘೋಷಿಸಿಕೊಂಡಿದ್ದರು.

ಖರ್ಗೆ ಹೆಸರಿನಲ್ಲಿ ₹6.59 ಕೋಟಿ ಮೌಲ್ಯದ ಮತ್ತು ಅವರ ಪತ್ನಿ ರಾಧಾಬಾಯಿ ಹೆಸರಿನಲ್ಲಿ ₹4.41 ಕೋಟಿ ಮೌಲ್ಯದ ಚರಾಸ್ತಿ ಇದೆ. ಖರ್ಗೆ ಅವರ ಬಳಿ ₹5.25 ಕೋಟಿ ಮೊತ್ತದ ಠೇವಣಿಗಳು, ₹54.15 ಲಕ್ಷ ಮೌಲ್ಯದ ಚಿನ್ನಾಭರಣ, ರಾಧಾಬಾಯಿ ಅವರ ಬಳಿ ₹2.84 ಕೋಟಿ ಠೇವಣಿ ಮತ್ತು ₹1.50 ಕೋಟಿ ಮೌಲ್ಯದ ಚಿನ್ನಾಭರಣ ಇದೆ. ಖರ್ಗೆ ಹೆಸರಿನಲ್ಲಿ ₹8.90 ಕೋಟಿ, ಪತ್ನಿ ಹೆಸರಿನಲ್ಲಿ ₹9.85 ಕೋಟಿ, ಕುಟುಂಬದ ಒಡೆತನದಲ್ಲಿ ₹9.22 ಕೋಟಿ ಮೌಲ್ಯದ ಸ್ಥಿರಾಸ್ತಿ ಇದೆ. ತಾವು ₹10 ಲಕ್ಷ ಮತ್ತು ಪತ್ನಿ ₹17.50 ಲಕ್ಷ ಸಾಲ ಇರುವುದಾಗಿ ತಿಳಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ನಾಮಪತ್ರ ಸಲ್ಲಿಕೆ

ಒಂದನೇ ಪುಟದಿಂದ...

ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಖರ್ಗೆ, 'ನಾನು ನಾಮಪತ್ರ ಸಲ್ಲಿಸಿದ್ದೇನೆ, ಎಲ್ಲ ಶಾಸಕರೂ ನನಗೆ ಮತ ನೀಡುತ್ತಾರೆ' ಎಂದರು.

ಇದೇ 30ಕ್ಕೆ ನಾಲ್ಕು ರಾಜ್ಯಸಭಾ ಸ್ಥಾನಗಳು ತೆರವಾಗಲಿದ್ದು, ಕಾಂಗ್ರೆಸ್‌ಗೆ ಮೂರು ಮತ್ತು ಬಿಜೆಪಿಗೆ ಒಂದು ಸ್ಥಾನ ಸಿಗಲಿವೆ. ಕಾಂಗ್ರೆಸ್‌ನಿಂದ ಎಐಸಿಸಿ ಮಾಧ್ಯಮ ವಿಭಾಗದ ಉಸ್ತುವಾರಿ ಪವನ್ ಖೇರಾ ಮತ್ತು ಮನ್ಸೂರ್ ಅಲಿಖಾನ್ ಅವರಿಗೆ ಟಿಕೆಟ್ ನೀಡಲಾಗಿದೆ. ನಾಮಪತ್ರ ಸಲ್ಲಿಕೆಗೆ ಇದೇ 8 ಕೊನೆಯ ದಿನವಾಗಿದೆ.

ವಿಧಾನಸಭೆ ಸಭಾಂಗಣ ವೀಕ್ಷಿಸಿದ ರಾಹುಲ್ ಗಾಂಧಿ

ರಾಹುಲ್‌ಗಾಂಧಿ ಅವರು ವಿಧಾನಸಭೆ ಸಭಾಂಗಣವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಡಿ.ಕೆ.ಶಿವಕುಮಾರ್, ಯು.ಟಿ.ಖಾದರ್, ಪ್ರಿಯಾಂಕ್ ಖರ್ಗೆ, ಬಿ.ಕೆ.ಹರಿಪ್ರಸಾದ್ ಮತ್ತು ಇತರರು ಜತೆಗಿದ್ದರು.

ಪ್ರಿಯಾಂಕ್ ಮತ್ತು ಯು.ಟಿ.ಖಾದರ್ ಅವರು ವಿಧಾನಸೌಧ ಹಾಗೂ ವಿಧಾನ ಸಭೆ ಸಭಾಂಗಣದ ವೈಶಿಷ್ಟ್ಯ, ವಿವರಗಳನ್ನು ನೀಡಿದರು. 'ವೆಲ್ ಮೇಡ್' ಎಂದು ರಾಹುಲ್ ಉದ್ಗರಿಸಿದರು. ರೈತರು, ಕೂಲಿ ಕಾರ್ಮಿಕರು ಇದನ್ನು ನಿರ್ಮಾಣ ಮಾಡಿದ್ದಾಗಿ ಪ್ರಿಯಾಂಕ್ ವಿವರಿಸುವಾಗ, 'ವಾಟ್ ಈಸ್ ದೇರ್' ಎಂದು ರಾಹುಲ್ ಕೈ ತೋರಿಸಿ ಪ್ರಶ್ನಿಸಿದರು, 'ಲಾಂಜ್' ಎಂದು ಖಾದರ್ ವಿವರಣೆ ನೀಡಿದರು.

ಸಭಾಂಗಣದ ಎರಡೂ ಕಡೆ ಬೊಟ್ಟು ಮಾಡಿ, 'ಈ ಕಡೆ ಆಡಳಿತ ಪಕ್ಷದ ಆಸನಗಳ ಸಾಲು, ಆ ಕಡೆ ವಿರೋಧ ಪಕ್ಷಗಳ ಆಸನಗಳು' ಎಂದು ಶಿವಕುಮಾರ್ ವಿವರಣೆ ನೀಡಿದರು. ಖಾದರ್ ಅವರು ಸಭಾಧ್ಯಕ್ಷರ ಪೀಠದ ವಿವರಣೆ ನೀಡಿ, ಬೀಟೆ ಮರದಿಂದ ನಿರ್ಮಾಣ ಮಾಡಿದ್ದೂ ಸೇರಿ ಇತರ ವಿವರಗಳನ್ನು ನೀಡಿದರು.



ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಲು ಶುಕ್ರವಾರ ಬೆಂಗಳೂರಿನ ವಿಧಾನ ಸೌಧದ ಕಾರಿಡಾರ್‌ನಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಅಭ್ಯರ್ಥಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಡಿ ಕೆ ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಚುನಾವಣಾ ಅಧಿಕಾರಿ ಕೊಠಡಿಗೆ ಬಂದರು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಮೂಡುಬಿದಿರೆ ಮಿಜಾರಿನಲ್ಲಿ ಕೊಚ್ಚಿಹೋದ ಹೆದ್ದಾರಿಯ ಅಂಚು

ರಾಜ್ಯದ ವಿವಿಧೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೇರಳಕ್ಕೆ ಮುಂಗಾರು ಪ್ರವೇಶಿಸಿದ ಒಂದೇ ದಿನದಲ್ಲಿ ದಕ್ಷಿಣ ಕನ್ನಡದಲ್ಲಿ ಮಳೆ ಬಿರುಸುಗೊಂಡಿದ್ದು ಹಲವು ಕಡೆ ಹಾನಿಯಾಗಿದೆ. ಬೆಳ್ತಂಗಡಿ ಸಮೀಪದ ಕುದುರೆಮುಖ ವನ್ಯಜೀವಿ ವಿಭಾಗದ ಬಂಡಾಜೆ ಕಾಡಿನಲ್ಲಿ ಗುಡ್ಡ ಕುಸಿದಿದೆ. ಮೂಡುಬಿದಿರೆಯ ಮಿಜಾರಿನಲ್ಲಿ ರಾಷ್ಟ್ರೀಯ ಹೆದ್ದಾರಿಯ ರಸ್ತೆಯ ಒಂದು ಬದಿ ಕೊಚ್ಚಿಹೋಗಿದೆ.

ಮಂಗಳೂರು ನಗರದಲ್ಲಿ ಗುರುವಾರ ರಾತ್ರಿ ಆರಂಭವಾದ ಮಳೆ ಶುಕ್ರವಾರ ಮಧ್ಯಾಹ್ನದವರೆಗೆ ಸುರಿಯಿತು. ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ತಾಸುಗಳಲ್ಲಿ ಸುರತ್ಕಲ್‌ನಲ್ಲಿ ಅತಿ ಹೆಚ್ಚು 7.32 ಸೆಂಟಿ ಮೀಟರ್ ಮತ್ತು ಮಂಗಳೂರು ಸಮೀಪದ ಉಳ್ಳಾಲದಲ್ಲಿ 7.16 ಸೆಂಟಿಮೀಟರ್ ಮಳೆಯಾಗಿದೆ.

ಬಂಡಾಜೆ ಕಾಡಿನಲ್ಲಿ ಗುರುವಾರ ಗುಡ್ಡ ಕುಸಿತವಾಗಿದ್ದು ಅರಣ್ಯದಲ್ಲಿ ಗುಡ್ಡ ಹಾಗೂ ಕಲ್ಲುಗಳು ಜರಿದು ಬೀಳುವುದನ್ನು ಒಂದು ಕಿಲೊಮೀಟರ್ ದೂರದಲ್ಲಿದ್ದವರು ನೋಡಿದ್ದಾರೆ. 'ಮಳೆಗಾಲದಲ್ಲಿ ಇಂತಹ ಸಣ್ಣ ಪ್ರಮಾಣದ ಜರಿತ ಸಾಮಾನ್ಯ. ಬಂಡಾಜೆ ಕಾಡಿನಲ್ಲಿ ಉಂಟಾದ ಘಟನೆಯಿಂದ ಯಾವುದೇ ಅಪಾಯ ಆಗಿಲ್ಲ' ಎಂದು ವನ್ಯಜೀವಿ ವಿಭಾಗದ ಅಧಿಕಾರಿ ತಿಳಿಸಿದ್ದಾರೆ.

ದಕ್ಷಿಣ ಕನ್ನಡದ ಮೂಡುಬಿದಿರೆಯಲ್ಲಿ ಮಂಗಳೂರು-ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಿಜಾರಿನಲ್ಲಿ ಸರ್ವೀಸ್ ರಸ್ತೆಯ ಒಂದು ಬದಿ ಕೊಚ್ಚಿಕೊಂಡು ಹೋಗಿದೆ. ತೆಂಕ ಮಿಜಾರಿನ ಮೂರು ಕಡೆಗಳಲ್ಲಿ ಇದೇ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ.

ಉಡುಪಿ ಜಿಲ್ಲೆಯಲ್ಲಿ ಶುಕ್ರವಾರ ಬೆಳಿಗ್ಗೆಯಿಂದ ಮಳೆಯಾಗಿದೆ. ಕಾಪು ಪಲಿಮಾರುವಿನಲ್ಲಿ 7 ಸೆಂ.ಮೀ ಮತ್ತು ಕಾಪು ಹೆಜಮಾಡಿಯಲ್ಲಿ 6.85 ಸೆಂ.ಮೀ, ಕುಂದಾಪುರದ ತ್ರಾಸಿಯಲ್ಲಿ 6.75 ಸೆಂ.ಮೀ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.



ಮೂಡುಬಿದಿರೆ ಮಿಜಾರಿನ ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಯ ಒಂದು ಬದಿ ಕೊಚ್ಚಿಕೊಂಡು ಹೋಗಿರುವುದು

ಗುಡುಗು, ಮಳೆ

ಕಲಬುರಗಿ: ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಯ ಹಲವೆಡೆ ಶುಕ್ರವಾರ ಗುಡುಗು ಸಹಿತ ಮಳೆಯಾಗಿದೆ.

ಕಲಬುರಗಿ ನಗರದಲ್ಲಿ ಸಂಜೆ ಸುಮಾರು ಅರ್ಧ ಗಂಟೆಯವರೆಗೆ ಬಿರುಸಿನಿಂದ ಮಳೆ ಸುರಿಯಿತು. ಕಾಳಗಿ ಪಟ್ಟಣದಲ್ಲಿಯೂ ಕೆಲ ಕಾಲ ಮಳೆಯಾಗಿದೆ. ಯಾದಗಿರಿ ನಗರ, ಗುರುಮಠಕಲ್, ವಡಗೇರಾ, ಸೈದಾಪುರ, ಚಪೆಟ್ಲಾ, ಕಾಳಬೆಳಗುಂದಿ ವ್ಯಾಪ್ತಿಯಲ್ಲಿ ಉತ್ತಮ ಮಳೆ ಬಿದ್ದಿದೆ. ರಾಯಚೂರು ನಗರದಲ್ಲಿ ಕೆಲ ಕಾಲ ಜಿಟಿ ಜಿಟಿ ಮಳೆಯಾಗಿದೆ.

ಉತ್ತರ ಕನ್ನಡ: ಮಳೆ ಬಿರುಸು

ಕಾರವಾರ: ಕರಾವಳಿ ಭಾಗದಲ್ಲಷ್ಟೆ ಚುರುಕುಗೊಂಡಿದ್ದ ಮಳೆ ಶುಕ್ರವಾರ ಜಿಲ್ಲೆಯಾದ್ಯಂತ ಬಿರುಸು ಪಡೆಯಿತು. ಬಹುತೇಕ ಕಡೆ ಮಳೆ ಅಬ್ಬರಿಸಿತು.

ಭಟ್ಕಳ, ಹೊನ್ನಾವರ, ಕಾರವಾರದಲ್ಲಿ ದಿನದ ಕೆಲ ಹೊತ್ತು ವ್ಯಾಪಕ ಮಳೆ ಸುರಿಯಿತು. ಉಳಿದೆಡೆ ಕೆಲ ಹೊತ್ತು ಸುರಿದು, ನಂತರ ಬಿಡುವು ನೀಡಿತು. ಮುಂದಿನ ಐದು ದಿನ ಜಿಲ್ಲೆಯಲ್ಲಿ ವ್ಯಾಪಕ ಮಳೆ ಸುರಿಯುಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ದುಬಾರಿ ಒಎಸ್‌ಎಂ ಏಕೆ?: ಕಾಂಗ್ರೆಸ್

'ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಷ್ಟೇ ಉತ್ತರಿಸಲು ಸಾಧ್ಯ'

ನವದೆಹಲಿ (ಪಿಟಿಐ): ಸಾಮಾನ್ಯಕ್ಕಿಂತ ಹೆಚ್ಚಿನ ದರದ ಒಎಸ್‌ಎಂ (ಆನ್ ಸ್ಕ್ರೀನ್ ಮಾರ್ಕಿಂಗ್) ವ್ಯವಸ್ಥೆಯನ್ನು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಅಳವಡಿಸಿಕೊಂಡಿದ್ದೇಕೆ ಎಂಬುದಕ್ಕೆ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಷ್ಟೇ ಉತ್ತರಿಸಲು ಸಾಧ್ಯ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.



ಜೈರಾಮ್ ರಮೇಶ್

'ಸದ್ಯ ಅಳವಡಿಸಿಕೊಂಡಿರುವ ವ್ಯವಸ್ಥೆಗಿಂತ ಒಎಸ್‌ಎಂ ವ್ಯವಸ್ಥೆ ಅತಿ ದುಬಾರಿಯಾಗಿದೆ ಎಂದು ಸಿಬಿಎಸ್‌ಇ ಆಡಳಿತ ಮಂಡಳಿಯು 2024ರ ಡಿಸೆಂಬರ್‌ನಲ್ಲಿಯೇ ಗಮನ ಸೆಳೆದಿತ್ತು' ಎಂದು ಅವರು ಶುಕ್ರವಾರ ತಿಳಿಸಿದ್ದಾರೆ.

'ಒಎಸ್‌ಎಂ ಅಳವಡಿಸಿಕೊಳ್ಳಲು ಮೊದಲೆರಡು ಬಾರಿಯೂ ₹28 ಕೋಟಿಗೆ ಸಿಬಿಎಸ್‌ಇ ಟೆಂಡರ್ ಕರೆದಿತ್ತು. ಆದರೆ, ಅಂತಿಮ ಕಾರ್ಯಾದೇಶ ನೀಡುವಾಗ ಈ ಮೊತ್ತವನ್ನು ₹38.46 ಕೋಟಿಗೆ ಹೆಚ್ಚಿಸಲಾಗಿದೆ. ಸ್ಕ್ಯಾನ್ ಮಾಡಲಾದ ಉತ್ತರ ಪತ್ರಿಕೆಗಳ ಸಂಖ್ಯೆಗೆ ಅನುಗುಣವಾಗಿ ₹25.39 ಕೋಟಿ ಮಾತ್ರ ವೆಚ್ಚವಾಗುತ್ತದೆ' ಎಂದು ಅವರು ವರದಿಯೊಂದನ್ನು ಉಲ್ಲೇಖಿಸಿ ಹೇಳಿದ್ದಾರೆ.


'ಸಚಿವರು ರಾಜೀನಾಮೆ ನೀಡಿದಾಗ ಮಾತ್ರ ಈ ವಿಚಾರವಾಗಿ ಸ್ವತಂತ್ರ ತನಿಖೆ ನಡೆಯಲು ಸಾಧ್ಯ. ಇಲ್ಲವಾದರೆ ಏಕ ಸದಸ್ಯ ಸಮಿತಿ ರಚನೆ ಕಣ್ಣೊರೆಸುವ ತಂತ್ರವಾಗಿಯಷ್ಟೇ ಉಳಿಯಲಿದೆ' ಎಂದು ಅವರು ಆಗ್ರಹಿಸಿದ್ದಾರೆ.

ಮುಖ್ಯಾಂಶಗಳು

- ಒಎಸ್‌ಎಂ ಅಳವಡಿಕೆ ಮೊದಲೆರಡು ಬಾರಿಯೂ ₹28 ಕೋಟಿಗೆ ಟೆಂಡರ್
- ಅಂತಿಮ ಕಾರ್ಯಾದೇಶ ನೀಡಿದ ವೇಳೆ ₹38.46 ಕೋಟಿಗೆ ಹೆಚ್ಚಳ
- ಸಚಿವರು ರಾಜೀನಾಮೆ ನೀಡಲು ಆಗ್ರಹ

'ಪರೀಕ್ಷಾ ಅಕ್ರಮ: ಶ್ವೇತಪತ್ರ ಹೊರಡಿಸಿ'

ಕಳೆದ ಎಂಟು ವರ್ಷಗಳಲ್ಲಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ನಡೆಸಿರುವ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ ಅಥವಾ ಅಕ್ರಮಗಳು ಹಾಗೂ ಕೈಗೊಂಡಿರುವ ಕ್ರಮಗಳ ಕುರಿತು ಶ್ವೇತಪತ್ರ ಹೊರಡಿಸುವಂತೆ ಆಗ್ರಹಿಸಿ ಕಾಂಗ್ರೆಸ್ ನಾಯಕ ದಿಗ್ವಿಜಯ ಸಿಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.



ದಿಗ್ವಿಜಯ್ ಸಿಂಗ್

ಶಿಕ್ಷಣ, ಮಹಿಳೆ, ಮಕ್ಕಳು, ಯುವಜನ ಮತ್ತು ಕ್ರೀಡೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷರೂ ಆಗಿರುವ ಸಿಂಗ್ ಅವರು, ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿರುವ ಕಾರಣಕ್ಕೆ ಈ ಪತ್ರ ಬರೆದಿದ್ದಾರೆ.

'ಪರೀಕ್ಷೆ ರದ್ದು ಮಾಡಿರುವುದು ಲಕ್ಷಾಂತರ ವಿದ್ಯಾರ್ಥಿಗಳ ಮಾನಸಿಕ ಸ್ವಾಸ್ಥ್ಯದ ಮೇಲೆ ವಿನಾಶಕಾರಿ ಪರಿಣಾಮ ಬೀರಿದೆ. ಈ ಹಿಂದೆ ನಡೆದ ಪ್ರಶ್ನೆಪತ್ರಿಕೆಗಳ ಸೋರಿಕೆ ಮತ್ತು ತನಿಖೆಗಳ ಕುರಿತು ಸ್ಪಷ್ಟತೆ ಇಲ್ಲದಿರುವುದೂ ಅವರ ಒತ್ತಡಕ್ಕೆ ಕಾರಣವಾಗಿದೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಈ ವಿಚಾರವಾಗಿ ಸಾರ್ವಜನಿಕವಾಗಿ ಯಾವುದೇ ದಾಖಲೆಗಳೂ ಲಭ್ಯವಿಲ್ಲದ ಕಾರಣ ಸಾಕಷ್ಟು ಊಹಾಪೋಹಗಳು ಮತ್ತು ವರದಿಗಳು ಹರಿದಾಡುತ್ತಿವೆ. 2024ರ ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದ ಪ್ರಮುಖ ಆರೋಪಿ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾನೆ ಎಂಬ ದೂರು ನನಗೆ ಸಾಕಷ್ಟು ಬಾರಿ ಬಂದಿದೆ. ಆದರೆ, ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು ಸಿಬಿಐ ಮತ್ತೆ ಮತ್ತೆ ವರದಿ ಸಲ್ಲಿಸಿದೆ' ಎಂದು ಅವರು ಗಮನ ಸೆಳೆದಿದ್ದಾರೆ.

ದೂರು ದಾಖಲಿಸಿದ ಸಿಬಿಎಸ್‌ಇ

ಫಲಿತಾಂಶದ ಬಳಿಕ ತನ್ನ ಪೋರ್ಟಲ್ ಮೇಲೆ ನಡೆದ ಸಂಯೋಜಿತ ಸೈಬರ್ ದಾಳಿಯ ಬಗ್ಗೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ದೆಹಲಿ ಪೊಲೀಸರಿಗೆ ಶುಕ್ರವಾರ ಅಧಿಕೃತವಾಗಿ ದೂರು ಸಲ್ಲಿಸಿದೆ.

'ದೇಶದ ಒಳಗಿನಿಂದ ಮತ್ತು ಹೊರಗಿನಿಂದ ವಿವಿಧ ಐಪಿ ವಿಳಾಸಗಳ ಮೂಲಕ ದೊಡ್ಡ ಸಂಖ್ಯೆಗಳಲ್ಲಿ ಪೋರ್ಟಲ್ ಮೇಲೆ ಸರಣಿ ದಾಳಿ ನಡೆದಿದೆ. ಇದು ಸಂಯೋಜಿತ ಮತ್ತು ಸುಸಜ್ಜಿತ ದಾಳಿಯಾಗಿದ್ದು, ಯಶಸ್ವಿಯಾಗಿ ತಡೆಹಿಡಿಯಲಾಗಿದೆ. ಮಾಹಿತಿ ತಿರುಚುವಿಕೆಯ ಯಾವುದೇ ಪ್ರಕರಣ ಪತ್ತೆಯಾಗಿಲ್ಲ' ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ.

ಸುದ್ದಿ 2 ನಿಮಿಷ

ಪಿಎಫ್‌ಐನ 25 ಮುಖಂಡರ ವಿರುದ್ಧ ಆರೋಪ ನಿಗದಿ

ನವದೆಹಲಿ (ಪಿಟಿಐ): ಸಶಸ್ತ್ರ ಹೋರಾಟದ ಮೂಲಕ ಭಾರತದಲ್ಲಿ 2047ರ ಒಳಗಾಗಿ ಪ್ರಜಾಪ್ರಭುತ್ವ ಸರ್ಕಾರವನ್ನು ಉರುಳಿಸಿ, ಶರಿಯಾ ಕಾನೂನಿನಡಿಯಲ್ಲಿ 'ಇಸ್ಲಾಮಿಕ್ ಖಿಲಾಫತ್' (ಇಸ್ಲಾಮಿಕ್ ಆಡಳಿತ) ಸ್ಥಾಪಿಸಲು ಪಿತೂರಿ ನಡೆಸಿದ ಆರೋಪದಡಿ, ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆ ಮತ್ತು ಅದರ 25 ಮುಖಂಡರ ವಿರುದ್ಧ ಆರೋಪಗಳನ್ನು ಹೊರಿಸುವಂತೆ ದೆಹಲಿಯ ಎನ್‌ಐಎ ವಿಶೇಷ ನ್ಯಾಯಾಲಯ ಶುಕ್ರವಾರ ಆದೇಶಿಸಿದೆ.

ಐಪಿಸಿ ಮತ್ತು ಕಾನೂನುಬಾಹಿರ ಚಟುವಟಿಕೆ ನಿಯಂತ್ರಣ ಕಾಯ್ದೆಯ (ಯುಎಪಿಎ) ಪಿಎಫ್‌ಐ ಸಂಘಟನೆ ಮತ್ತು ಸಂಘಟನೆಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ವಿರುದ್ಧ ಆರೋಪಗಳನ್ನು ಹೊರಿಸಲು ಎನ್‌ಐಎ ವಿಶೇಷ ನ್ಯಾಯಾಲಯದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಪ್ರಶಾಂತ್ ಶರ್ಮಾ ಆದೇಶಿಸಿದ್ದಾರೆ.

ಭಾರತದಲ್ಲಿ 'ಇಸ್ಲಾಮಿಕ್ ಖಿಲಾಫತ್' ಸ್ಥಾಪಿಸಲು ಪಿಎಫ್‌ಐ ಪಿತೂರಿ ನಡೆಸಿರುವ ಬಗ್ಗೆ ಗಂಭೀರ ಅನುಮಾನಗಳಿವೆ ಎಂದು ಎನ್‌ಐಎ ಆರೋಪಿಸಿತ್ತು. ಪಿಎಫ್‌ಐ ಸಂಘಟನೆಯ ಅಧ್ಯಕ್ಷ ಒ.ಎಂ.ಎ ಸಲಾಂ, ಉಪಾಧ್ಯಕ್ಷ ಇ.ಎಂ. ಅಬ್ದುಲ್ ರಹಿಮಾನ್, ಪ್ರಧಾನ ಕಾರ್ಯದರ್ಶಿ ಅನೀಸ್ ಅಹಮ್ಮದ್, ಕಾರ್ಯದರ್ಶಿ ಅಫ್ಸರ್ ಪಾಶಾ, ಸ್ಥಾಪಕ ಅಧ್ಯಕ್ಷ ಇ. ಅಬೂಬಕರ್ ವಿರುದ್ಧ ಆರೋಪಗಳನ್ನು ಹೊರಿಸಿದೆ.

ಈ ಪ್ರಕರಣದಲ್ಲಿ ಪ್ರತಿಯೊಬ್ಬ ಆರೋಪಿಯ ಪಾತ್ರವು ಮೇಲ್ನೋಟಕ್ಕೆ ಹೊರಿಸಲಾಗಿರುವ ಸಂಚಿನ ಆರೋಪಕ್ಕೆ ಹೊಂದಿಕೊಳ್ಳುತ್ತಿದೆ' ಎಂದಿರುವ ನ್ಯಾಯಾಲಯ, ಔಪಚಾರಿಕ ಆರೋಪ ಪಟ್ಟಿ ರಚನೆಯ ವಿಚಾರಣೆಯನ್ನು ಜುಲೈ 10ಕ್ಕೆ ಮುಂದೂಡಿದೆ.



ಐಎಸ್‌ಐಎಸ್ ಸೇರಿದಂತೆ ಜಾಗತಿಕ ಭಯೋತ್ಪಾದಕ ಸಂಘಟನೆಗಳೊಂದಿಗೆ ನಂಟು ಹೊಂದಿರುವ ಕಾರಣಕ್ಕೆ ಕೇಂದ್ರ ಸರ್ಕಾರವು ಯುಎಪಿಎ ಕಾಯ್ದೆಯಡಿ ಪಿಎಫ್‌ಐ ಸಂಘಟನೆಯನ್ನು 2022ರಲ್ಲಿ 5 ವರ್ಷಗಳವರೆಗೆ ನಿಷೇಧಿಸಿತ್ತು.

ದಾರಿತಪ್ಪಿಸುವ ಪ್ರಯತ್ನ ಐಐಟಿ ರೂರ್ಕಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಭಾರತೀಯ ತಂತ್ರಜ್ಞಾನ ಸಂಸ್ಥೆಗಳು (ಐಐಟಿ) ಹಾಗೂ ದೇಶದ ಪ್ರಮುಖ ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ನಡೆದ ಜೆಇಇ–ಅಡ್ವಾನ್ಸ್ಡ್–2026ರ ಪರೀಕ್ಷೆಗೂ ಮುನ್ನ ದತ್ತಾಂಶ ಸೋರಿಕೆಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಖಾಸಗಿ ಮಾಹಿತಿ ಸೋರಿಕೆ ಹಾಗೂ ಖಾಸಗಿತನ ಉಲ್ಲಂಘನೆಯಾಗಿದೆ ಎಂಬ ಆರೋಪವು ದಾರಿ ತಪ್ಪಿಸುವಂತಿದ್ದು, ಆಧಾರರಹಿತ ಆರೋಪವಾಗಿದೆ' ಎಂದು ಐಐಟಿ ರೂರ್ಕಿ ತಿಳಿಸಿದೆ.

'ಸಂಸ್ಥೆಯ ಕ್ಲೌಡ್ ಸ್ಟೋರೇಜ್‌ನಿಂದ ಉಂಟಾದ ತಾಂತ್ರಿಕ ಸಮಸ್ಯೆಯಿಂದ ಈ ರೀತಿ ಆಗಿದೆ. ಯಾವುದೇ ಸೂಕ್ಷ್ಮ ಮಾಹಿತಿಗಳು ಬಹಿರಂಗಗೊಂಡಿಲ್ಲ' ಎಂದು ಸ್ಪಷ್ಟನೆ ನೀಡಿದೆ.

ಈ ಸಲದ ಜೆಇಇ– ಅಡ್ವಾನ್ಸ್ಡ್ ಪರೀಕ್ಷೆಯನ್ನು ಐಐಟಿ ರೂರ್ಕಿ ನಡೆಸಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಮಾಹಿತಿಯು ಏನಾಗಿದೆ ಎಂಬುದನ್ನು ನಿಖರವಾಗಿ ಬಿಂಬಿಸುತ್ತಿಲ್ಲ. ತಪ್ಪು ಮಾಹಿತಿಯನ್ನು ಹರಡುವ ಪ್ರಯತ್ನ ನಡೆಯುತ್ತಿದೆ' ಎಂದು ಸಂಸ್ಥೆಯು 'ಎಕ್ಸ್'ನಲ್ಲಿ ನೀಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

'ಪ್ರವೇಶ ಪತ್ರದ ದತ್ತಾಂಶ ಪಡೆಯಲು ತೊಂದರೆ ಪಡುತ್ತಿದ್ದ ಅಭ್ಯರ್ಥಿಗಳಿಗೆ ನೆರವಾಗಲು ಹಾಗೂ ನೋಂದಣಿ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸುವ ಉದ್ದೇಶದಿಂದ ಜೂನ್ 2ರಂದೇ ತ್ವರಿತಗತಿಯಲ್ಲಿ ಮಧ್ಯಪ್ರವೇಶಿಸಿ, ತಾಂತ್ರಿಕ ಸಮಸ್ಯೆಯನ್ನು ಬಗೆಹರಿಸಲಾಗಿದೆ' ಎಂದು ತಿಳಿಸಿದೆ.

'ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದ 1.79 ಲಕ್ಷ ವಿದ್ಯಾರ್ಥಿಗಳ ಪ್ರವೇಶ ಪತ್ರ, ಜನ್ಮ ದಿನಾಂಕ, ಮೊಬೈಲ್ ಸಂಖ್ಯೆಯ ವಿವರಗಳು ಸಾರ್ವಜನಿಕ ವಾಗಿ ಲಭ್ಯ ಇವೆ' ಎಂದು ಎಥಿಕಲ್ ಹ್ಯಾಕರ್ ರಾಯ್ಲೆನ್ ಅನಿಲ್ ಬಹಿರಂಗಪಡಿಸಿದ್ದರು.

ವಿನಾಯಿತಿಗೆ ನಕಾರ

ಐಐಟಿ, ಎನ್‌ಐಟಿ, ಕೇಂದ್ರ ಅನುದಾನಿತ ತಾಂತ್ರಿಕ ಸಂಸ್ಥೆಗಳ ಪ್ರವೇಶಕ್ಕಾಗಿ 12ನೇ ತರಗತಿಯ ಅರ್ಹತಾ ಮಾನದಂಡದಲ್ಲಿ ಒಂದು ಬಾರಿ ವಿನಾಯಿತಿ ನೀಡಲು ಐಐಟಿ ರೂರ್ಕಿ ನಿರಾಕರಿಸಿದೆ.

'ಸಿಬಿಎಸ್‌ಇಯ ಆನ್–ಸ್ಕ್ರೀನ್ ಮಾರ್ಕಿಂಗ್ ವ್ಯವಸ್ಥೆಯಿಂದ ತೊಂದರೆಯಾಗಿದ್ದು, ಅಂಕ ವಿನಾಯಿತಿ ನೀಡಬೇಕು' ಎಂದು ಜೆಇಇ ಅರ್ಹತೆ ಪಡೆದ ಕೆಲ ಅಭ್ಯರ್ಥಿಗಳು ಒತ್ತಾಯಿಸಿದ್ದರು.

ಲಂಡನ್: ಸಂವಾದದಲ್ಲಿ 'ಭಿನ್ನಾಭಿಪ್ರಾಯದ ವಿರುದ್ಧ ದ್ವೇಷ ಯಾಕೆ?' ಎಂದ ಸಭಿಕರು

ಸಿಜೆಐಗೆ ಪ್ರಶ್ನೆ: ತಡೆದ ಆಯೋಜಕರು

ನವದೆಹಲಿ (ಪಿಟಿಐ): ಭಿನ್ನಾಭಿಪ್ರಾಯದ ಎತ್ತಿದಾಗಲೆಲ್ಲ ಭಾರತದಲ್ಲಿ ಹೆಚ್ಚಾಗಿ ವ್ಯಕ್ತವಾಗುತ್ತಿರುವ ಪ್ರತಿರೋಧ ಕುರಿತು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಅವರಿಗೆ ಪ್ರಶ್ನೆ ಕೇಳಲು ಸಭಿಕರೊಬ್ಬರು ಮುಂದಾದಾಗ ಅವರಿಗೆ ತಡೆಯೊಡ್ಡಿದ ಪ್ರಸಂಗ ಲಂಡನ್‌ನಲ್ಲಿ ನಡೆದಿದೆ.

ಲಂಡನ್ ವಿಶ್ವವಿದ್ಯಾಲಯದ ಬ್ರಿಕ್‌ಬೆಕ್ ಕಾಲೇಜಿನಲ್ಲಿ ಆಯೋಜಿಸಿದ್ದ 'ಕೃತಕ ಬುದ್ಧಿಮತ್ತೆ ಹಾಗೂ ಅಂತರ ರಾಷ್ಟ್ರೀಯ ಕಾನೂನು' ಕುರಿತ ಕಾರ್ಯಾಗಾರದಲ್ಲಿ ಸಿಜೆಐ ಭಾಷಣ ಮಾಡಿ ಸಭಿಕರ ಜತೆ ಸಂವಾದ ನಡೆಸುತ್ತಿದ್ದರು. ಈ ವೇಳೆ ಸಭಿಕರೊಬ್ಬರು, 'ಕೃತಕ ಬುದ್ಧಿಮತ್ತೆಯ ಈ ಕಾಲಘಟ್ಟದಲ್ಲಿ ಪ್ರಜಾಪ್ರಭುತ್ವದ ರಕ್ಷಣೆಗೆ ಸಂಬಂಧಿಸಿದ ಭಾರತದ ಮಾಹಿತಿಯನ್ನು ನಾನು ಗಮನಹರಿಸಿದೆ. ಭಿನ್ನಾಭಿಪ್ರಾಯದ ವಿರುದ್ಧ ದ್ವೇಷ ಹೆಚ್ಚುತ್ತಿದ್ದು, ದೇಶದ ಒಳಗೆ ಹಾಗೂ ಹೊರಗೆ ಕಾನೂನಿನ ತಜ್ಞರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ' ಎಂದು ಪ್ರಶ್ನೆ ಕೇಳಿದರು.

ಈ ವೇಳೆ ವೇದಿಕೆಯಲ್ಲಿದ್ದ ವ್ಯಕ್ತಿಯೊಬ್ಬರು ಮಧ್ಯ ಪ್ರವೇಶಿಸಿ ಅವರನ್ನು ಇನ್ನಷ್ಟು ಮಾತನಾಡದಂತೆ ತಡೆದರು.

'ನಿಮ್ಮ ಪ್ರಶ್ನೆಯು ಎ.ಐ ವಿಷಯಕ್ಕಷ್ಟೇ ಸೀಮಿತವಾಗಿರಬೇಕು. ಉಳಿದ ಪ್ರಶ್ನೆಗಳಿಗೆ ಅವಕಾಶವಿಲ್ಲ... ಕ್ಷಮೆ ಇರಲಿ' ಎಂದು ಅರ್ಧಕ್ಕೆ ತಡೆದರು. ಇಬ್ಬರು ನಡುವಿನ ಈ ಸಂವಾದವು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ್ದು, ತೀವ್ರ ಚರ್ಚೆಗೆ ಕಾರಣವಾಗಿದೆ.

ಕಾಕ್ರೋಚ್ ಜನತಾ ಪಕ್ಷದ ಮುಖ್ಯ ವಕ್ತಾರ ಸೌರವ್ ದಾಸ್ ಕೂಡ ಈ ವಿಡಿಯೊ ಹಂಚಿಕೊಂಡಿದ್ದಾರೆ.

ಎಐ ಊಹಾತ್ಮಕ ತಂತ್ರಜ್ಞಾನವಲ್ಲ: 'ಕೃತಕ ಬುದ್ಧಿಮತ್ತೆ (ಎ.ಐ) ಎಂಬುದು ಊಹಾತ್ಮಕ ತಂತ್ರಜ್ಞಾನವಾಗಿರುವುದಿಲ್ಲ. ಕಾರ್ಯಾಚರಣೆಯ ವಾಸ್ತವವಾಗಿರಲಿದೆ. ಅಂತರರಾಷ್ಟ್ರೀಯ ಕಾನೂನಿಗೂ ಮಹತ್ವದ ಪರೀಕ್ಷೆಯನ್ನು ಒಡ್ಡಲಿದೆ' ಎಂದು ಭಾರತದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅಭಿಪ್ರಾಯಪಟ್ಟರು.

'ತಂತ್ರಜ್ಞಾನವು ಸಹಜವಾಗಿ ಪರೋಪಕಾರಿಯೂ ಅಲ್ಲ, ಹಾನಿಕಾರಕವೂ ಅಲ್ಲ' ಎಂದು ಅವರು ಒತ್ತಿ ಹೇಳಿದರು.

'ಹಿಂದಿನ ತಾಂತ್ರಿಕ ಕ್ರಾಂತಿಗಳಿಗಿಂದ ಎಐ ಎಂಬುದು ಮಾನವನ ಸಾಮರ್ಥ್ಯವನ್ನು ಹೆಚ್ಚಿಸುವುದಿಲ್ಲ. ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗಿಯಾಗಲಿದೆ' ಎಂದು ತಿಳಿಸಿದರು.

'ಎಐ ಎಂಬುದು ಕಾರ್ಯಾಚರಣೆಯ ವಾಸ್ತವವಾಗಿರಲಿದೆ. ಆಡಳಿತ, ವಾಣಿಜ್ಯ, ಯುದ್ಧ, ಸಂವಹನ, ಸಾರ್ವಜನಿಕ ಆಡಳಿತ ಹಾಗೂ ನ್ಯಾಯಾಂಗ ಹಾಗೂ ಸಾರ್ವಭೌಮದ ಅಧಿಕಾರವನ್ನು ಪುನರ್ ರೂಪಿಸಲಿದೆ' ಎಂದು ಸೂರ್ಯಕಾಂತ್ ಹೇಳಿದರು.



ಲಂಡನ್ ವಿಶ್ವವಿದ್ಯಾಲಯದ ಬ್ರಿಕ್‌ಬೆಕ್ ಕಾಲೇಜಿನಲ್ಲಿ ಆಯೋಜಿಸಿದ್ದ ಕೃತಕ ಬುದ್ಧಿಮತ್ತೆ ಹಾಗೂ ಅಂತರರಾಷ್ಟ್ರೀಯ ಕಾನೂನು ಕುರಿತ ಕಾರ್ಯಾಗಾರದಲ್ಲಿ ಭಾರತದ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮಾತನಾಡಿದರು —ಪಿಟಿಐ ಚಿತ್ರ

ರಾಯಭಾರ ಕಚೇರಿ ಖಂಡನೆ

ಲಂಡನ್ (ಪಿಟಿಐ): ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಭಾಷಣಕ್ಕೆ ಅಡ್ಡಿಪಡಿಸಿದ್ದನ್ನು ಬ್ರಿಟನ್‌ನಲ್ಲಿರುವ ರಾಯಭಾರ ಕಚೇರಿಯು ತೀವ್ರವಾಗಿ ಖಂಡಿಸಿದೆ.

ಭಿನ್ನಾಭಿಪ್ರಾಯಗಳು ಪ್ರಜಾಪ್ರಭುತ್ವ ಸಮಾಜದ ಸಹಜವಾದ ಭಾಗ. ಆದಾಗ್ಯೂ, ಅವನ್ನು ನಾಗರಿಕ ಹಾಗೂ ಗೌರವಯುತವಾಗಿ ವ್ಯಕ್ತಪಡಿಸಬೇಕು' ಎಂದು ಕಚೇರಿಯು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಬಂಗಾಳ ಸಿ.ಎಂ ಆಪ್ತನ ಹತ್ಯೆ ಕೃತ್ಯ: ಮತ್ತಿಬ್ಬರ ಬಂಧನ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಆಪ್ತರಾಗಿದ್ದ ಚಂದ್ರನಾಥ ರಥ್ ಹತ್ಯೆ ಪ್ರಕರಣದ ಸಂಬಂಧ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಸಿಬಿಐ ಶುಕ್ರವಾರ ತಿಳಿಸಿದೆ.

ವಿಕಾಸ್ ಮಿಶ್ರಾ ಮತ್ತು ಗೋಲು ಸಿಂಗ್ ಬಂಧಿತರು. ಇವರನ್ನು ಕ್ರಮವಾಗಿ ಉತ್ತರ ಪ್ರದೇಶದ ಲಖನೌ ಮತ್ತು ಬಲಿಯಾದಲ್ಲಿ ಬಂಧಿಸಲಾಯಿತು ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದು ಬೆಳವಣಿಗೆಯಲ್ಲಿ ಪ್ರಕರಣದ ಮತ್ತೊಬ್ಬ ಆರೋಪಿ ಜ್ಞಾನೇಂದ್ರ ಪ್ರತಾಪ್ ಸಿಂಗ್ ಅಲಿಯಾಸ್ ಮೋನು, ಬಲಿಯಾದಲ್ಲಿ ಕೋರ್ಟ್‌ಗೆ ಶರಣಾಗಿದ್ದಾನೆ. ಕೋರ್ಟ್ 12 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟವಾದ ಎರಡು ದಿನದ ನಂತರ, ಮೇ 6ರಂದು ಚಂದ್ರನಾಥ್ ರಥ್ ಅವರನ್ನು ದುಷ್ಕರ್ಮಿಗಳು ಮಧ್ಯಮಗ್ರಾಮದಲ್ಲಿ ಗುಂಡಿನ ದಾಳಿ ನಡೆಸಿ ಹತ್ಯೆ ಮಾಡಿದ್ದರು.

ವಿಧಾನ ಪರಿಷತ್ ಕಾಂಗ್ರೆಸ್‌ನಿಂದ 5 ನೇ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ವಿನಯ್ ಕಾರ್ತಿಕ್ ಅವರನ್ನು ವಿಧಾನಪರಿಷತ್ ದ್ವೈವಾರ್ಷಿಕ ಚುನಾವಣೆಗೆ ಐದನೇ ಅಭ್ಯರ್ಥಿಯಾಗಿ ಕಾಂಗ್ರೆಸ್ ಕಣಕ್ಕಿಳಿಸಲಿದೆ.

ಒಟ್ಟು 7 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ 4, ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದು. ಇನ್ನೊಂದು ಸ್ಥಾನವನ್ನು ಗೆಲ್ಲುವಷ್ಟು ಸಂಖ್ಯೆ ಕಾಂಗ್ರೆಸ್‌ಗೆ ಇಲ್ಲ. 18 ಶಾಸಕರನ್ನು ಹೊಂದಿರುವ ಜೆಡಿಎಸ್ ಶಾಸಕರ ಬೆಂಬಲ ಪಡೆಯಬೇಕಾಗಬಹುದು. ಒಬ್ಬ ಅಭ್ಯರ್ಥಿಯ ಗೆಲುವಿಗೆ ತಲಾ 32 ಮತಗಳ ಅಗತ್ಯವಿದೆ.

ಬಿಜೆಪಿ ಅಭ್ಯರ್ಥಿಗಳು ಯಾರು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಎನ್‌ಡಿಎ ಮೈತ್ರಿ ಕೂಟದ ಭಾಗವಾಗಿರುವ ಬಿಜೆಪಿ–ಜೆಡಿಎಸ್ ಪಕ್ಷಗಳು ಮೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿವೆಯೇ ಅಥವಾ ಎರಡಕ್ಕೆ ಮಾತ್ರ ಸ್ಪರ್ಧಿಸಲಿವೆಯೇ ಎಂಬುದು ಇನ್ನೂ ನಿಶ್ಚಯವಾಗಿಲ್ಲ.

ವಿನಯ್ ಸ್ಪರ್ಧೆಯಿಂದಾಗಿ ಪರಿಷತ್ ಚುನಾವಣೆ ರಂಗೇರಿದಂತಾಗಿದೆ. ಆಪ್ತನ ಗೆಲುವಿಗಾಗಿ ಶಿವಕುಮಾರ್ ಯಾವ ತಂತ್ರ ಹೆಣೆಯಲಿದ್ದಾರೆ? ಯಾರ ಮತ ಸೆಳೆಯಲಿದ್ದಾರೆ ಎಂಬ ಕುತೂಹಲವೂ ರಾಜಕೀಯ ವಲಯದಲ್ಲಿ ಮೂಡಿದೆ.

'10 ಗಂಟೆ ಒಳಗೆ ಕಚೇರಿಯಲ್ಲಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿ ಪ್ರತಿದಿನ ಬೆಳಿಗ್ಗೆ 10 ಗಂಟೆ ಒಳಗೆ ಕಡ್ಡಾಯವಾಗಿ ಕಚೇರಿಗೆ ಹಾಜರಾಗಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೂಚನೆಯನ್ನು ತಕ್ಷಣದಿಂದಲೇ ಪಾಲಿಸಬೇಕು ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚಿಸಿದ್ದಾರೆ.



ಶಾಲಿನಿ ರಜನೀಶ್

ಸರ್ಕಾರಿ ನೌಕರರಿಗೆ ಸೂಚನೆ

ಜೂನ್ 4ರ ಗುರುವಾರ ಅಧಿಕಾರಿಗಳ ಜತೆ ಸಭೆ ನಡೆಸಿದ್ದ ಶಿವಕುಮಾರ್ ಅವರು, 'ಎಲ್ಲರೂ ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಬರಬೇಕು' ಎಂದು ತಾಕೀತು ಮಾಡಿದ್ದರು.

ಮುಖ್ಯ ಕಾರ್ಯದರ್ಶಿಯು ಈ ಸಂಬಂಧ ಎಲ್ಲ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಎಲ್ಲ ಇಲಾಖೆಗಳ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

'ಇ–ಆಡಳಿತ ಇಲಾಖೆಯು ಸಿದ್ಧಪಡಿಸಿರುವ ಕರ್ತವ್ಯ ಆ್ಯಪ್‌ನಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯ ವಿವರಗಳನ್ನು ನೋಂದಾಯಿಸಲಾಗಿದೆ. ಆದರೆ, ಹಲವರು ಈ ಆ್ಯಪ್ ಅನ್ನು ಬಳಕೆ ಮಾಡುತ್ತಿಲ್ಲ. ಇನ್ನು ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಯು ಕಚೇರಿಗೆ ಬಂದು ಬೆಳಿಗ್ಗೆ 10ರ ಒಳಗೆ ಆ್ಯಪ್‌ನಲ್ಲಿ 'ಚೆಕ್ ಇನ್' ಮಾಡಬೇಕು. ಕಚೇರಿಯಿಂದ ಹೊರಗೆ ಹೋಗುವಾಗ 'ಚೆಕ್ ಔಟ್' ಮಾಡಬೇಕು' ಎಂದಿದ್ದಾರೆ.

'ಬೆಳಿಗ್ಗೆ 10ರ ಒಳಗೆ ಆ್ಯಪ್‌ನಲ್ಲಿ ಹಾಜರಾತಿ ದಾಖಲಿಸದ ಅಧಿಕಾರಿ ಮತ್ತು ಸಿಬ್ಬಂದಿಯ ಕಚೇರಿವಾರು ಮತ್ತು ಜಿಲ್ಲಾವಾರು ವರದಿಯು ಸ್ವಯಂಚಾಲಿತವಾಗಿ ಇಲಾಖಾ ಮುಖ್ಯಸ್ಥರಿಗೆ ರವಾನೆಯಾಗಲಿದೆ. ಇಲಾಖಾ ಮುಖ್ಯಸ್ಥರು ತಮ್ಮ ವೈಯಕ್ತಿಕ ಲಾಗಿನ್ ಮೂಲಕ ಡ್ಯಾಶ್‌ಬೋರ್ಡ್‌ನಲ್ಲಿ ವಿವರ ಪರಿಶೀಲಿಸಿ, ಸಮಯಕ್ಕೆ ಚೆಕ್ ಇನ್ ಮಾಡದ ಅಧಿಕಾರಿ ಮತ್ತು ಸಿಬ್ಬಂದಿಗೆ ಅಗತ್ಯ ಸೂಚನೆ ನೀಡಬೇಕು' ಎಂದು ತಿಳಿಸಿದ್ದಾರೆ.

'ಕಚೇರಿ ಕರ್ತವ್ಯದ ಮೇಲೆ ಪ್ರವಾಸದಲ್ಲಿದ್ದರೆ, ಕರ್ತವ್ಯ ಆ್ಯಪ್‌ನಲ್ಲಿ ಒಒಡಿ ಆಯ್ಕೆ ಮಾಡಿ ಹಾಜರಾತಿ ದಾಖಲಿಸಬೇಕು. ಮೇಲಧಿಕಾರಿಯು ಅದನ್ನು ದೃಢಪಡಿಸಬೇಕು. ಈ ಎಲ್ಲ ಸೂಚನೆಗಳನ್ನು ಅತ್ಯಂತ ತುರ್ತು ಮತ್ತು ಕಡ್ಡಾಯವೆಂದು ತಕ್ಷಣವೇ ಜಾರಿಗೆ ತರಬೇಕು' ಎಂದು ಸೂಚಿಸಿದ್ದಾರೆ.

ಜಮೀರ್ ಆಡಿಯೊ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಸಂದರ್ಭ ಜಮೀರ್ ಅಹಮದ್ ಖಾನ್ ಜೊತೆ ನಡೆದಿದೆ ಎನ್ನಲಾದ ನನ್ನ ಸಂಭಾಷಣೆಯ ಆಡಿಯೊ ಕುರಿತ ಸತ್ಯಾಸತ್ಯತೆಯ ತನಿಖೆ ನಡೆಸಬೇಕು' ಎಂದು ಕೋರಿ ಮೊಹಮ್ಮದ್ ಸಿರಾಜ್ ನೀಡಿದ್ದ ದೂರನ್ನಾಧರಿಸಿ ಎಫ್‌ಐಆರ್ ದಾಖಲಾಗಿದೆ.

'ಮಾಜಿ ಸಚಿವ ಜಮೀರ್ ಅಹಮದ್ ಖಾನ್ ಹಾಗೂ ನನ್ನ ವಿರುದ್ಧ ರಾಜಕೀಯ ಷಡ್ಯಂತ್ರದ ಭಾಗವಾಗಿ ಕಿಡಿಗೇಡಿಗಳು ನಕಲಿ ಆಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ಸೂಕ್ತ ತನಿಖೆ ನಡೆಸಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷರಾಗಿದ್ದ ಮೊಹಮ್ಮದ್ ಸಿರಾಜ್ ದೂರಿನಲ್ಲಿ ಒತ್ತಾಯಿಸಿದ್ದಾರೆ.

'ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ತನಿಖೆ ಜಾರಿಯಲ್ಲಿದೆ' ಎಂದು ಇಲ್ಲಿನ ಸೈಬರ್ ಅಪರಾಧ ಠಾಣೆಯ ಪೊಲೀಸರು ತಿಳಿಸಿದ್ದಾರೆ. ಪಕ್ಷ ವಿರೋಧಿ ಚಟುವಟಿಕೆ ಆರೋಪದಲ್ಲಿ ಮೊಹಮ್ಮದ್ ಸಿರಾಜ್ ಅವರನ್ನು ಕೆಪಿಸಿಸಿಯಿಂದ ಚುನಾವಣೆ ಸಂದರ್ಭವೇ ಉಚ್ಚಾಟಿಸಲಾಗಿತ್ತು.

ಡಿಸಿಎಂ ಮಾಡಲು ಪ್ರತಿಭಟನೆ

ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರ ಶಾಸಕ ಜಮೀರ್ ಅಹಮದ್ ಖಾನ್ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಂಡು, ಉಪ ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಅವರ ಅಭಿಮಾನಿಗಳು ಬೆಂಗಳೂರು ಸೇರಿದಂತೆ ಮೈಸೂರು, ಹಾವೇರಿ, ಕೋಲಾರ, ಮಂಡ್ಯ, ಕೊಪ್ಪಳ, ಬಳ್ಳಾರಿ, ವಿಜಯನಗರಗಳಲ್ಲಿ ಪ್ರತಿಭಟನೆ ನಡೆಸಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಜಮೀರ್ ಅಭಿಮಾನಿಗಳು ಪ್ರತಿಭಟನೆ ನಡೆಸಿ, ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದರು. ಇದಲ್ಲದೆ, ಚಾಮರಾಜಪೇಟೆ ಕ್ಷೇತ್ರದ ಹಲವು ಭಾಗಗಳಲ್ಲಿ ಮುಖಂಡರು ಹಾಗೂ ಅಭಿಮಾನಿಗಳು ಶುಕ್ರವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ಪ್ರತಿಭಟನೆ ನಡೆಸಿದರು.

ಅಣ್ಣಾಮಲೈ: ಹೊಸ ಪಕ್ಷ ಸ್ಥಾಪನೆಯ ಘೋಷಣೆ

ನವದೆಹಲಿ/ಚೆನ್ನೈ (ಪಿಟಿಐ): 'ಇಂದಿನಿಂದ ನನ್ನದು ಹೊಸ ಮಾರ್ಗ, ಹೊಸ ಆಂದೋಲನ ಮತ್ತು ಹೊಸ ರಾಜಕೀಯ ಹೋರಾಟ' ಎಂದು ತಮಿಳುನಾಡು ಬಿಜೆಪಿಯ ಮಾಜಿ ಅಧ್ಯಕ್ಷ ಕೆ. ಅಣ್ಣಾಮಲೈ ಶುಕ್ರವಾರ ಪ್ರಕಟಿಸಿದರು.



ಅಣ್ಣಾಮಲೈ

'ನನ್ನ ಗುರಿ ದೊಡ್ಡದಿದೆ. ಎಲ್ಲರನ್ನೂ ಒಳಗೊಳ್ಳುವ ಕಾರ್ಯಸೂಚಿಯೊಂದಿಗೆ ಹೊಸ ರಾಜಕೀಯ ಪಕ್ಷ ಪ್ರಾರಂಭಿಸಿ, ಮುಂದಿನ ವಿಧಾನಸಭಾ ಚುನಾವಣೆಗಳಲ್ಲಿ ಹೋರಾಡಲಾಗುವುದು' ಎಂದು ಅವರು ಘೋಷಿಸಿದರು.

ಕರ್ನಾಟಕ ಕೇಡರ್‌ನ ಮಾಜಿ ಐಪಿಎಸ್ ಅಧಿಕಾರಿಯೂ ಆಗಿರುವ ಅವರು ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ಸಲ್ಲಿಸಿದ್ದ ರಾಜೀನಾಮೆಯನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಶುಕ್ರವಾರ ಅಂಗೀಕರಿಸಿದ ಬೆನ್ನಲ್ಲೇ ಸಾಮಾಜಿಕ ಮಾಧ್ಯಮದಲ್ಲಿ ಮಾತನಾಡಿದರು.

'ನಾನು ಏಕಾಏಕಿ ಬಿಜೆಪಿಯನ್ನು ತ್ಯಜಿಸಿಲ್ಲ. 2024ರ ಡಿಸೆಂಬರ್ 4ರಂದು ಪಕ್ಷ ತೊರೆಯಲು ಬಯಸಿರುವುದಾಗಿ ಬಿಜೆಪಿ ನಾಯಕತ್ವಕ್ಕೆ ತಿಳಿಸಿದೆ. ಆದರೆ ಪಕ್ಷದ ಮುಖಂಡರು ವಿಧಾನಸಭಾ ಚುನಾವಣಾ ಕೆಲಸಗಳನ್ನು ಪೂರ್ಣಗೊಳಿಸುವಂತೆ ಕೇಳಿಕೊಂಡರು. ನೈಜ ಕಾರ್ಯಕರ್ತನಂತೆ ಆ ನಿರ್ದೇಶನವನ್ನು ನಾನು ಪಾಲಿಸಿದೆ' ಎಂದು 42 ವರ್ಷದ ಅಣ್ಣಾಮಲೈ ತಿಳಿಸಿದರು.

'ಎಂಬಿಬಿಎಸ್ ಪದವೀಧರರ ನೇರ ನೇಮಕಾತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಂಬಿಬಿಎಸ್ ಪದವಿ ಪಡೆದು ಹೊರಬರುವ ಯುವ ವೈದ್ಯರನ್ನು ಸರ್ಕಾರಿ ಆಸ್ಪತ್ರೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುವ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು' ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಅವರು ಶುಕ್ರವಾರ ಅಧಿಕಾರಿಗಳಿಗೆ ಸೂಚಿಸಿದರು.

ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಜತೆಗೆ ಇಲ್ಲಿ ಸಭೆ ನಡೆಸಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ತುರ್ತು ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯ ಅನುಷ್ಠಾನದ ಬಗ್ಗೆ ವಿಮರ್ಶೆ ನಡೆಸಿದ ಅವರು, 'ಈ ಯೋಜನೆ ವ್ಯಾಪ್ತಿಯಲ್ಲಿರುವ ಖಾಸಗಿ ಆಸ್ಪತ್ರೆಗಳು ರೋಗಿಗಳಿಂದ ಹೆಚ್ಚುವರಿ ಶುಲ್ಕ ವಸೂಲಿ ಮಾಡುವಂತಿಲ್ಲ. ಈ ಬಗ್ಗೆ ಆರೋಗ್ಯ ಇಲಾಖೆಯಿಂದ ನಿಗಾ ಇಡಬೇಕು' ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

'ಯೋಜನೆಯಡಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹಣ ಪಡೆಯಲು ಅವಕಾಶ ಇಲ್ಲ. ಒಂದು ವೇಳೆ ಖಾಸಗಿ ಆಸ್ಪತ್ರೆಗಳು ಹೆಚ್ಚುವರಿ ಹಣ ಪಡೆದರೆ, ಜಿಲ್ಲಾ ಮಟ್ಟದ ಆರೋಗ್ಯ ಮಿತ್ರರ ಮೂಲಕ ಜನರು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ದೂರು ನೀಡಿದರೆ ಆಸ್ಪತ್ರೆಗಳ ಮೇಲೆ ಕ್ರಮ ಕೈಗೊಳ್ಳಬೇಕು' ಎಂದರು.

ಆರೋಗ್ಯ ಇಲಾಖೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ಸಾರ್ವಜನಿಕರಿಂದ ಮತ್ತು ವೈದ್ಯರಿಂದ ಸಲಹೆಗಳನ್ನು ಆಹ್ವಾನಿಸುವುದಾಗಿ ಈ ವೇಳೆ ತಿಳಿಸಿದರು.

ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ, ಆಯುಕ್ತ ಗುರುದತ್ತ ಹೆಗಡೆ, ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕ ಅವಿನಾಶ್ ಮೆನನ್ ರಾಜೇಂದ್ರನ್, ಔಷಧ ಹಾಗೂ ಆಹಾರ ಗುಣಮಟ್ಟದ ಆಯುಕ್ತ ಶ್ರೀನಿವಾಸನ್, ಆಯುಷ್ ಇಲಾಖೆ ಪ್ರಧಾನ ಕಾರ್ಯದರ್ಶಿ ವಿಪಿನ್ ಸಿಂಗ್, ಆಯುಕ್ತ ಸುನಿಲ್ ಪನ್ವಾರ್ ಸಭೆಯಲ್ಲಿ ಇದ್ದರು.

₹ 60 ಸಾವಿರ ವೇತನ

'ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಇಚ್ಛಿಸುವ ಎಂಬಿಬಿಎಸ್ ಪದವೀಧರರು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ನೇರವಾಗಿ ಅರ್ಜಿ ಸಲ್ಲಿಸಿ, ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ಒಂದು ವಾರದೊಳಗೆ ಅವರನ್ನು ನೇಮಕಾತಿ ಮಾಡಿಕೊಂಡು ಕೆಲಸಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗುವುದು. ಹೊಸದಾಗಿ ನೇಮಕವಾಗುವ ವೈದ್ಯರಿಗೆ ತಿಂಗಳಿಗೆ ₹ 60 ಸಾವಿರ ವೇತನ ನಿಗದಿಪಡಿಸಲಾಗಿದೆ' ಎಂದು ಯು.ಟಿ. ಖಾದರ್ ತಿಳಿಸಿದರು.

ಶಾಸ್ತ್ರಾ ವಿವಿ ಬಿ.ಟೆಕ್ ರ‍್ಯಾಂಕ್ ಪಟ್ಟಿ ಪ್ರಕಟ: ಚೆನ್ನೈನ ಅಭಿನವ್‌ಗೆ ಪ್ರಥಮ ಸ್ಥಾನ

ಬೆಂಗಳೂರು: ಶಾಸ್ತ್ರಾ ವಿಶ್ವವಿದ್ಯಾಲಯದ 2026-27ನೇ ಶೈಕ್ಷಣಿಕ ವರ್ಷದ ಬಿ.ಟೆಕ್ ಪ್ರವೇಶಾತಿಯ ರ‍್ಯಾಂಕ್ ಪಟ್ಟಿ ಬಿಡುಗಡೆಯಾಗಿದ್ದು, ಚೆನ್ನೈನ ಆರ್.ಅಭಿನವ್ ಸ್ಟ್ರೀಮ್ 1 ಮತ್ತು 2 ಎರಡರಲ್ಲೂ ಪ್ರಥಮ ರ‍್ಯಾಂಕ್ ಗಳಿಸಿ ಸಾಧನೆ ಮಾಡಿದ್ದಾರೆ. ಶ್ರೀಮತಿ ಸುಂದರವಲ್ಲಿ ಮೆಮೋರಿಯಲ್ ಶಾಲೆಯ ವಿದ್ಯಾರ್ಥಿಯಾದ ಇವರು 12ನೇ ತರಗತಿಯಲ್ಲಿ ಶೇ.97.8 ಹಾಗೂ ಜೆಇಇ ಮೇನ್‌ನಲ್ಲಿ ಶೇ.99.6909 ಅಂಕ ಪಡೆದಿದ್ದಾರೆ.

ದೇಶಾದ್ಯಂತ 37,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಜೂ.5ರ ಸಂಜೆ 5 ಗಂಟೆಯವರೆಗೆ ಬಂದ ಅರ್ಜಿಗಳನ್ನು ಪರಿಶೀಲಿಸಿ ರಾತ್ರಿ 9 ಗಂಟೆಗೆ ರ‍್ಯಾಂಕ್ ಪಟ್ಟಿ ಪ್ರಕಟಿಸಲಾಗಿದೆ. ಸ್ಟ್ರೀಮ್ 1ರ ಸೀಟುಗಳನ್ನು 12ನೇ ತರಗತಿ ಹಾಗೂ ಜೆಇಇ ಮೇನ್ ಅಂಕಗಳ ಆಧಾರದ ಮೇಲೆ ಮತ್ತು ಸ್ಟ್ರೀಮ್ 2ರ ಸೀಟುಗಳನ್ನು ಕೇವಲ 12ನೇ ತರಗತಿಯ ಅಂಕಗಳ ಆಧಾರದ ಮೇಲೆ ಹಂಚಲಾಗುವುದು.

ವಿಶ್ವವಿದ್ಯಾಲಯವು ಎಂದಿನಂತೆ ತಿರುಚಿ ಮತ್ತು ತಂಜಾವೂರು ಭಾಗದ ವಿದ್ಯಾರ್ಥಿಗಳಿಗೆ ಶೇ.20ರಷ್ಟು ಸೀಟುಗಳನ್ನು ಮೀಸಲಿಟ್ಟಿದೆ. ಇದರೊಂದಿಗೆ ಈಶಾನ್ಯ ರಾಜ್ಯಗಳು, ಜಮ್ಮು-ಕಾಶ್ಮೀರ, ಅಂಡಮಾನ್ ಮತ್ತು ಲಕ್ಷದ್ವೀಪದ ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯ ಹಾಗೂ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಮತ್ತು ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಭಾರತೀಯ ಸಶಸ್ತ್ರ ಪಡೆಗಳ ಯೋಧರ ಮಕ್ಕಳಿಗೆ ವಿಶೇಷ ವಿದ್ಯಾರ್ಥಿವೇತನವನ್ನು ಘೋಷಿಸಿದೆ.

'ಪ್ರವೇಶಾತಿಗೆ ಸಂಬಂಧಿಸಿದ ಎಲ್ಲಾ ವಿವರಗಳು www.sastra.edu ನಲ್ಲಿ ಲಭ್ಯವಿದ್ದು, ಆ.3ರಿಂದ ಹೊಸ ತರಗತಿಗಳು ಆರಂಭವಾಗಲಿವೆ' ಎಂದು ಕುಲಪತಿ ಡಾ.ಎಸ್.ವೈದ್ಯಸುಬ್ರಮಣ್ಯಂ ತಿಳಿಸಿದ್ದಾರೆ.

ಜನ ಹಿತ ಖಾತೆಗಳಿಗೆ ಸಿಗದ ಆದ್ಯತೆ

• ವೈ.ಗ.ಜಗದೀಶ್

ಸುದ್ದಿ ವಿಶ್ಲೇಷಣೆ

ಡಿ.ಕೆ. ಶಿವಕುಮಾರ್ ನೇತೃತ್ವದ ನೂತನ ಸಚಿವ ಸಂಪುಟದ ಸದಸ್ಯರಿಗೆ ಖಾತೆ ಹಂಚಿಕೆಯಾಗಿದ್ದು, ತಕ್ಷಣದಲ್ಲಿ ಕಾರ್ಯ-ಪ್ರವೃತ್ತವಾಗಲೇಬೇಕಾದ ಆದ್ಯತಾ ಇಲಾಖೆಗಳ ಹೊಣೆಯನ್ನು ಯಾರಿಗೂ ವಹಿಸಿಲ್ಲ. ಆದರೆ, ಆಯಕಟ್ಟಿನ ಖಾತೆಗಳೆಂದೇ ಹೆಸರಾಗಿರುವ ಗೃಹ, ಲೋಕೋಪಯೋಗಿ, ಇಂಧನ, ಪಂಚಾಯತ್ ರಾಜ್, ಜಲಸಂಪನ್ಮೂಲದಂತಹ ಖಾತೆ-ಗಳನ್ನಷ್ಟೇ ಹಂಚಿಕೆ ಮಾಡಲಾಗಿದೆ.

ವಿದ್ಯಾರ್ಥಿಗಳು, ಕೃಷಿಕರು, ಹಿಂದುಳಿದ ಮತ್ತು ಪರಿಶಿಷ್ಟ ಸಮುದಾಯದ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗಳು ತೀವ್ರಗತಿಯಲ್ಲಿ ನಡೆಯಬೇಕು. ಅಂತಹ ಖಾತೆಗಳನ್ನು ಯಾರಿಗಾದರೂ ಹೆಚ್ಚುವರಿಯಾಗಿ ನೀಡಬಹುದಿತ್ತು. ಆ ಕೆಲಸಕ್ಕೆ ಮುಖ್ಯಮಂತ್ರಿ ಶಿವಕುಮಾರ್ ಹಾಗೂ ಕಾಂಗ್ರೆಸ್ ಹೈಕಮಾಂಡ್ ಒಲವನ್ನೇ ತೋರಿಲ್ಲ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಈಗಷ್ಟೇ ಆರಂಭವಾಗಿವೆ. ಶಾಲೆಗಳ ಆರಂಭದ ಮೊದಲೇ ದಿನವೇ ಚುನಾಯಿತ ಸರ್ಕಾರ ಇರದೇ, ಅಧಿಕಾರಿಗಳೇ ಶಾಲಾರಂಭಕ್ಕೆ ಚಾಲನೆ ನೀಡಿದರು. ಶಾಲೆಗಳು-ಶುರುವಾಗುವುದೆಂದರೆ ರಂಗೋಲಿ ಇಟ್ಟು, ಸಿಂಗಾರ ಮಾಡಿ, ಬಾಗಿಲು ತೆರೆದು ಮಕ್ಕಳನ್ನು ಬರಮಾಡಿಕೊಳ್ಳುವುದಷ್ಟೇ ಅಲ್ಲ, ಓದುವ ಮಕ್ಕಳಿಗೆ ಪಠ್ಯಪುಸ್ತಕ-ಗಳು ತಕ್ಷಣವೇ ಪೂರೈಕೆಯಾಗಬೇಕು, ಅದಕ್ಕೆ ಪೂರಕವಾದ ಪಠ್ಯ ಸಾಮಗ್ರಿಗಳನ್ನೂ ಒದಗಿಸಬೇಕು. ಮಕ್ಕಳಿಗೆ ಸಮವಸ್ತ್ರ, ಶೂಗಳನ್ನು ಸಕಾಲಕ್ಕೆ ನೀಡಬೇಕು. ಅದರ ಜತೆಗೆ ಮಧ್ಯಾಹ್ನದ ಬಿಸಿಯೂಟ, ಪೌಷ್ಟಿಕ ಆಹಾರವನ್ನು ನೀಡುವ ಕೆಲಸವು ಜತೆಜತೆಗೆ ನಡೆಯಬೇಕು. ಅವೆಲ್ಲವೂ ಸರ್ಕಾರದ ಮಹತ್ವದ ಜವಾಬ್ದಾರಿ. ಸಚಿವರಿದ್ದರೆ ಮಾತ್ರ ಇವೆಲ್ಲವೂ ಸುಗಮವಾಗಿ ನಡೆಯುತ್ತದೆ ಎಂಬುದೇನೂ ಅಲ್ಲ. ಸಚಿವರಿದ್ದರೂ ಅಧಿಕಾರಿಗಳೇ ನಿರ್ವಹಿಸುತ್ತಾರೆ. ಆದರೆ, ಕಾಲಕಾಲಕ್ಕೆ ಪ್ರಗತಿಪರಿಶೀಲನೆ ನಡೆಸಿ, ಅಧಿಕಾರಿಗಳನ್ನು ಚುರುಕುಗೊಳಿಸುವ ಕೆಲಸವನ್ನು ಸಚಿವರು ಮಾಡುತ್ತಾರೆ.

ಹಾಗೆಯೇ, ಕಾಲೇಜು, ವಿಶ್ವವಿದ್ಯಾ-ಲಯ, ತಾಂತ್ರಿಕ ಶಿಕ್ಷಣದ ಉಸ್ತುವಾರಿ ಹೊತ್ತಿರುವ ಉನ್ನತ ಶಿಕ್ಷಣ ಇಲಾಖೆಯ ಹೊಣೆಯನ್ನು ಯಾರಿಗೂ ನೀಡಿಲ್ಲ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿವಿಧ ಇಲಾಖೆಗಳ ಹುದ್ದೆಗಳ ಭರ್ತಿಗಾಗಿ ನೇಮಕಾತಿ ಪರೀಕ್ಷೆ ನಡೆಸುವ ಜತೆಗೆ, ವೃತ್ತಿಪರ ಕೋರ್ಸ್‌ಗಳಿಗೆ ಸಿಇಟಿ ನಡೆಸುತ್ತದೆ. ಜತೆಗೆ, ಪ್ರವೇಶ ಪ್ರಕ್ರಿಯೆಯನ್ನು ನಿರ್ವಹಿಸುತ್ತದೆ.

ನೀಟ್ ಗೊಂದಲ ಮಧ್ಯೆಯೇ ಸಿಇಟಿ ಪರೀಕ್ಷೆ ಮುಗಿದಿದ್ದು, ಫಲಿತಾಂಶ ಪ್ರಕಟವಾಗಲಿದೆ. ಬಳಿಕ ಸೀಟು ಹಂಚಿಕೆಗಾಗಿ ಕೌನ್ಸಿಲಿಂಗ್ ನಡೆಯಬೇಕಿದೆ. ಈ ಎಲ್ಲವನ್ನು ಸುಸೂತ್ರವಾಗಿ ನಡೆಸಬೇಕಾದುದು ಉನ್ನತ ಶಿಕ್ಷಣ ಸಚಿವರ ಹೊಣೆ. ಈ ಹಿಂದಿನ ಬಹುತೇಕ ಸಚಿವರು ಖುದ್ದು ಕೆಇಎ ಕೇಂದ್ರದಲ್ಲಿ ಕುಳಿತು, ಈ ಪ್ರಕ್ರಿಯೆ ಸುಗಮವಾಗಿ ನಡೆಯುವಂತೆ ನೋಡಿ-ಕೊಳ್ಳುತ್ತಿದ್ದರು. ಇದರ ಹೊಣೆಯನ್ನು ಯಾವುದಾದರೂ ಸಚಿವರಿಗೆ ವಹಿಸಬ-ಹುದಿತ್ತು. ಅದೂ ನಡೆದಿಲ್ಲ.

ರಾಜ್ಯಕ್ಕೆ ಸದ್ಯವೇ ಮುಂಗಾರು ಪ್ರವೇಶಿಸುತ್ತಿದ್ದು, ಕೃಷಿ ಚಟುವಟಿಕೆಗಳು ಶುರುವಾಗುತ್ತಿವೆ. ರಾಜ್ಯದ ಹಲವೆಡೆ ಬಿತ್ತನೆ ಬೀಜ ಮತ್ತು ರಸಗೊಬ್ಬರಕ್ಕಾಗಿ ಈಗಾಗಲೇ ರೈತಾಪಿ ಸಮುದಾಯ ಪರಿತಪಿಸುತ್ತಿದೆ. ಕೃಷಿ ಇಲಾಖೆಯ ಹೊಣೆಯನ್ನು ಯಾರಿಗೂ ನೀಡಿಲ್ಲ. ಸಚಿವರಿಲ್ಲದೇ ಇರುವುದರಿಂದ ಮುಖ್ಯಮಂತ್ರಿಯವರೇ ಇವೆಲ್ಲವನ್ನೂ ನಿಭಾಯಿಸಬೇಕಾಗಿದೆ.

ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆಗಳು ಬಹುಸಂಖ್ಯಾತ ಸಮುದಾಯದ ಹಿತವನ್ನು ನೋಡಿಕೊಳ್ಳುತ್ತವೆ. ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಆರಂಭವಾಗಲಿವೆ. ಗ್ರಾಮೀಣ ಬಡ ಮಕ್ಕಳ ಶಿಕ್ಷಣಕ್ಕೆ ಬೆಂಬಲವಾಗಿ ನಿಲ್ಲುವ ವಿದ್ಯಾರ್ಥಿನಿಲಯಗಳು, ಕ್ರೈಸ್ ವ್ಯಾಪ್ತಿಯ ವಸತಿ ಶಾಲೆಗಳನ್ನು ಈ ಇಲಾಖೆಗಳ ಉಸ್ತುವಾರಿಯಲ್ಲಿವೆ. ಈ ಇಲಾಖೆಗಳ ಜವಾಬ್ದಾರಿಯನ್ನು ಯಾವುದೇ ಸಚಿವರ ಹೆಗಲಿಗೂ ಹೊರಿಸಿಲ್ಲ. ಇದು ಮುಖ್ಯಮಂತ್ರಿಯವರ ಉಸ್ತುವಾರಿಯಲ್ಲಿಯೇ ಇರುವುದರಿಂದ ಸುವ್ಯವಸ್ಥೆ ಕಲ್ಪಿಸುವುದು ಸಮಸ್ಯೆಯಾಗುವ ಸಂಭವ ಇದೆ.

ಕೃಷ್ಣಗೆ ಬೆಂಗಳೂರಲ್ಲ; ನೀರು, ಗುಂಡಿ, ಚರಂಡಿ!

ಮೂರು ವರ್ಷ ಕಂದಾಯ ಸಚಿವರಾಗಿ ಇಲಾಖೆಯ ಆಡಳಿತವು ಜನಸಾಮಾನ್ಯರಿಗೆ ಕೈಗೆಟುಕುವಷ್ಟು ಕಾಯಕಲ್ಪ ನೀಡಿದ್ದ ಕೃಷ್ಣ ಬೈರೇಗೌಡ ಅವರಿಗೆ, ಹಿಂದಿನ ಕಾರ್ಯವೈಖರಿ ಆಧರಿಸಿ ಬೆಂಗಳೂರು ವರ್ಚಸ್ಸು ಹೆಚ್ಚಿಸುವ ಹೊಣೆಯನ್ನು ನೀಡಲಾಗಿದೆ. ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳು, ಜಲಮಂಡಳಿ ಮತ್ತು ಮೆಟ್ರೊ ಮಾತ್ರ ಕೃಷ್ಣ ಅವರಿಗೆ ನೀಡಲಾಗಿದೆ. ರಸ್ತೆಗಳ ಗುಂಡಿ ಮುಚ್ಚುವುದು, ನೀರು ಸರಬರಾಜು ಮತ್ತು ಚರಂಡಿ ನಿರ್ವಹಣೆಯಂತಹ ಸಮಸ್ಯೆಗಳಷ್ಟೇ ಅವರ ಉಸ್ತುವಾರಿಯಲ್ಲಿವೆ. ರಾಜಧಾನಿಗೆ ಹೊಸದಿಕ್ಕು ಕೊಡುವ ಎಲ್ಲ ಸಂಸ್ಥೆಗಳೂ ಮುಖ್ಯಮಂತ್ರಿ ಬಳಿಯೇ ಇವೆ.

ಹಿಂದಿನ ಸರ್ಕಾರದಲ್ಲಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರು ಅಭಿವೃದ್ಧಿ ಖಾತೆಯನ್ನು ನಿರ್ವಹಿಸಿದಾಗ, ಜಿಬಿಎ ವ್ಯಾಪ್ತಿಯ ಪಾಲಿಕೆಗಳು, ಬಿಡಿಎ, ಬಿಎಂಆರ್‌ಡಿಎ, ಬಿಐಎಎಪಿಎ (ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ), ಆರು ಉಪನಗರಗಳ ನಿರ್ಮಾಣ ಉದ್ದೇಶ ಹೊಂದಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳು ಅವರ ನಿರ್ವಹಣೆಯಲ್ಲಿಯೇ ಇದ್ದವು. ರಾಜಧಾನಿಗೆ ಹೊಸ ರೂಪುರೇಷೆ ಹಾಕಿಕೊಡುವ (ಮಾಸ್ಟರ್ ಪ್ಲಾನ್) ಬೆಂಗಳೂರು ನಗರ ಯೋಜನಾ ಆಯುಕ್ತಾಲಯ ಕೂಡ, ಮುಖ್ಯಮಂತ್ರಿ ಬಳಿಯೇ ಇದೆ.

ಕೆಎಲ್‌ಇ: 40 ವಿದ್ಯಾರ್ಥಿಗಳಿಗೆ ಚಿನ್ನ

ಘಟಿಕೋತ್ಸವ: ಡಾ.ಲಿಯೊನಾರ್ಡ್‌ಗೆ 'ಡಾಕ್ಟರ್ ಆಫ್ ಸೈನ್ಸ್' ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್‌ನ (ಕಾಹೇರ್) 16ನೇ ಘಟಿಕೋತ್ಸವದಲ್ಲಿ ಶುಕ್ರವಾರ, ಅಮೆರಿಕದ ಫಿಲಡೆಲ್ಫಿಯಾದ ಥಾಮಸ್ ಜೆಫರ್ಸನ್ ವಿಶ್ವವಿದ್ಯಾಲಯದ ಸಿಡ್ನಿ ಕಿಮ್ಮೆಲ್ ಕ್ಯಾನ್ಸರ್ ಸೆಂಟರ್‌ನ ಮೂತ್ರರೋಗಶಾಸ್ತ್ರ (ಯೂರಾಲಜಿ) ವಿಭಾಗದ ಪ್ರಾಧ್ಯಾಪಕ ಡಾ.ಲಿಯೊನಾರ್ಡ್ ಜಿ. ಗೊಮೆಲ್ಲೊ ಅವರಿಗೆ 'ಡಾಕ್ಟರ್ ಆಫ್ ಸೈನ್ಸ್' ಪದವಿ ಪ್ರದಾನ ಮಾಡಲಾಯಿತು.

ನಗರದ ಕೆಎಲ್‌ಇ ಶತಮಾನೋತ್ಸವ ಸಭಾಂಗಣದಲ್ಲಿ ನಡೆದ 16ನೇ ಘಟಿಕೋತ್ಸವದಲ್ಲಿ ಎಂಬಿಬಿಎಸ್, ಎಂ.ಡಿ ಸೇರಿ ವಿವಿಧ ಕೋರ್ಸ್‌ಗಳಲ್ಲಿ ಸಾಧನೆ ಮಾಡಿದ 40 ವಿದ್ಯಾರ್ಥಿಗಳು ಚಿನ್ನದ ಪದಕಕ್ಕೆ ಮುತ್ತಿಕ್ಕಿ ಸಂಭ್ರಮಿಸಿದರು.

ಆರೋಗ್ಯ ವಿಜ್ಞಾನಗಳ ವಿವಿಧ ವಿಭಾಗಗಳಲ್ಲಿ 1,810 ಪದವಿ ಪ್ರದಾನ ಮಾಡಲಾಯಿತು. ಈ ಪೈಕಿ 44 ಪಿಎಚ್‌.ಡಿ, ಡಿಎಂ ಹಾಗೂ ಎಂಸಿಎಚ್ ಪ್ರೋಗ್ರಾಮ್ಸ್‌ನಲ್ಲಿ 28 ಸೂಪರ್‌ಸ್ಪೆಷಾಲಿಟಿ ಪದವಿ, 691 ಸ್ನಾತಕೋತ್ತರ ಪದವಿ, 1,013 ಪದವಿ ಹಾಗೂ 34 ಡಿಪ್ಲೊಮಾ ಮತ್ತು ಫೆಲೋಷಿಪ್ ನೀಡಲಾಯಿತು.

ಪುಣೆಯ ಸಿಂಬಯೋಸಿಸ್ ಸೊಸೈಟಿಯ ಮುಖ್ಯ ನಿರ್ದೇಶಕಿ ಹಾಗೂ ಸಿಂಬಯೋಸಿಸ್ ಇಂಟರ್‌ನ್ಯಾಷನಲ್ (ಡೀಮ್ಡ್ ವಿಶ್ವವಿದ್ಯಾಲಯ) ಕುಲಪತಿ ವಿದ್ಯಾ ಯೆರವಡೇಕರ್ ಘಟಿಕೋತ್ಸವ ಭಾಷಣ ಮಾಡಿದರು.

'ಕಾಹೇರ್' ಕುಲಾಧಿಪತಿ ಪ್ರಭಾಕರ ಕೋರೆ ಅಧ್ಯಕ್ಷತೆ ವಹಿಸಿದ್ದರು. ವಾರ್ಧಾದ ದತ್ತ ಮೇಘೆ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಕುಲಪತಿ ಡಾ.ಲಲಿತಭೂಷಣ ವಾಘ್ಮರೆ, ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಅಮಿತ ಕೋರೆ, ಕಾಹೇರ್ ಕುಲಪತಿ ಸಂದೀಪ ಶ್ರೀವಾತ್ಸವ, ಕುಲಸಚಿವ ಡಾ.ವಿಶ್ವನಾಥ ಪಟ್ಟಣಶೆಟ್ಟಿ, ಪರೀಕ್ಷಾ ನಿಯಂತ್ರಕ ಚಂದ್ರ ಮೆಟಗುಡ್ ಇತರರಿದ್ದರು. ಡಾ.ಅವಿನಾಶ ಕವಿ ಮತ್ತು ಡಾ.ನೇಹಾ ಧಡೇದ ನಿರೂಪಿಸಿದರು.



ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಆ್ಯಂಡ್ ರಿಸರ್ಚ್‌ನ 16ನೇ ಘಟಿಕೋತ್ಸವದಲ್ಲಿ ಡಾ.ಲಿಯೊನಾರ್ಡ್ ಜಿ. ಗೊಮೆಲ್ಲೊ ಅವರಿಗೆ 'ಡಾಕ್ಟರ್ ಆಫ್ ಸೈನ್ಸ್' ಪದವಿ ಪ್ರದಾನ ಮಾಡಲಾಯಿತು. ಡಾ.ವಿಶ್ವನಾಥ ಪಟ್ಟಣಶೆಟ್ಟಿ, ಡಾ.ಲಲಿತಭೂಷಣ ವಾಘ್ಮರೆ, ಪ್ರಭಾಕರ ಕೋರೆ, ವಿದ್ಯಾ ಯೆರವಡೇಕರ್ ಭಾಗವಹಿಸಿದರು ಪ್ರಜಾವಾಣಿ ಚಿತ್ರ

ಕಾಡಾನೆ ದಾಳಿ: ಐಪಿಎಸ್ ಅಧಿಕಾರಿ ಪತ್ನಿ ಸಾವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲ್ಲೂಕಿನ ತಿತಿಮತಿ ಸಮೀಪದ ಕೋಣನಕಟ್ಟೆ ತೋಟದಲ್ಲಿ ಶುಕ್ರವಾರ ನಡೆದ ಕಾಡಾನೆ ದಾಳಿಯಲ್ಲಿ ಹಿರಿಯ ಐಪಿಎಸ್ ಅಧಿಕಾರಿ ಅಣ್ಣಳಮಾಡ ಸುನಿಲ್ ಅಚ್ಚಯ್ಯ ಅವರ ಪತ್ನಿ ಸಂಧ್ಯಾ ಅಚ್ಚಯ್ಯ (51) ಮೃತಪಟ್ಟಿದ್ದಾರೆ.

ನವದೆಹಲಿಯಲ್ಲಿ ಪತಿ ಮತ್ತು ಪುತ್ರಿಯರೊಂದಿಗೆ ವಾಸವಿದ್ದ ಅವರು ಸಂಬಂಧಿಕರ ಮದುವೆಯಲ್ಲಿ ಪಾಲ್ಗೊಳ್ಳಲು ಎರಡು ದಿನದ ಹಿಂದೆ ಇಲ್ಲಿಗೆ ಬಂದಿದ್ದರು. ಗ್ರಾಮದಲ್ಲಿರುವ ತಮ್ಮ ತೋಟಕ್ಕೆ ಸಂಬಂಧಿಕರೊಂದಿಗೆ ತೆರಳಿದ್ದ ಅವರ ಮೇಲೆ ಅಲ್ಲಿದ್ದ ಕಾಡಾನೆ ಏಕಾಏಕಿ ದಾಳಿ ನಡೆಸಿತು. ಕಾಲಿನಿಂದ ತುಳಿದು ಗಾಯಗೊಳಿಸಿತು. ಕೂಡಲೇ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆ ವೇಳೆಗೆ ಅವರು ಮೃತಪಟ್ಟಿದ್ದರು. ಜೊತೆಗಿದ್ದ ಪತಿಯ ಸಹೋದರಿ ಸಪ್ನ, ಲಕ್ಷ್ಮಣ್, ಆನಂದ್ ಹಾಗೂ ದಿನೇಶ್ ಎಂಬುವವರು ಓಡುವಾಗ ಬಿದ್ದು ಗಾಯಗೊಂಡಿದ್ದಾರೆ.

ಸಂಧ್ಯಾ ಅವರ ಪತಿ ಅಣ್ಣಳಮಾಡ ಸುನಿಲ್ ಅಚ್ಚಯ್ಯ ಹಿರಿಯ ಐಪಿಎಸ್ ಅಧಿಕಾರಿಯಾಗಿದ್ದು, ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿದ್ದಾರೆ. ದಂಪತಿಗೆ ಪುತ್ರಿಯರಿದ್ದಾರೆ.

ಸಂಧ್ಯಾ ಮೃತದೇಹವನ್ನು ಅವರ ತೋಟದ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿದೆ. ಪತಿ ಸುನಿಲ್ ನವದೆಹಲಿಯಿಂದ ಬಂದ ನಂತರ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಬ್ಬರು ಶಂಕಿತ ಉಗ್ರರ ಬಂಧನ



ಅಲ್ಲಾಬಕ್ಷು



ಜಮೀರ್ ಖಾನ್

ತುಮಕೂರು: ಇಬ್ಬರು ಶಂಕಿತ ಉಗ್ರರನ್ನು ಶುಕ್ರವಾರ ನಗರ ಠಾಣೆ ಪೊಲೀಸರು ಬಂಧಿಸಿದ್ದು, ವಿಚಾರಣೆಗೆ ಒಳಪಡಿಸಿದ್ದಾರೆ.

ನಗರದ ಶ್ರೀರಾಮನಗರದ ಅಲ್ಲಾಬಕ್ಷು (24), ದಾವಣಗೆರೆ ನಗರದ ಬಿ.ಡಿ.ಲೇಔಟ್ ನಿವಾಸಿ ಜಮೀರ್ ಖಾನ್ (22) ಬಂಧಿತರು.

ಕ್ಯಾತ್ಸಂದ್ರ ಬಳಿ ಅಲ್ಲಾಬಕ್ಷು ಎಂಬವರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದಾಗ ಜಮೀರ್ ಖಾನ್ ಬಗ್ಗೆ ವಿವರ ನೀಡಿದ್ದಾನೆ. ದಾವಣಗೆರೆ ರೈಲು ನಿಲ್ದಾಣದಲ್ಲಿ ಜಮೀರ್ ಪೊಲೀಸರ ಬಲೆಗೆ ಬಿದ್ದಿದ್ದಾನೆ.

ಕೇಂದ್ರ ತನಿಖಾ ತಂಡದಿಂದ (ಎನ್‌ಐಎ) ಜಿಲ್ಲಾ ಪೊಲೀಸರಿಗೆ ಮಾಹಿತಿ ರವಾನಿಸಲಾಗಿತ್ತು. ಇಬ್ಬರೂ 'ಎಕ್ಸ್' ಖಾತೆ, ಇನ್‌ಸ್ಟಾಗ್ರಾಮ್ ಮೂಲಕ ಉಗ್ರರ ಜತೆಗೆ ಸಂಪರ್ಕ ಬೆಳೆಸಿದ್ದರು. ದೇಶದ ಭದ್ರತೆಗೆ ಧಕ್ಕೆ ತರುವ ರೀತಿಯಲ್ಲಿ ಸಂದೇಶ ಕಳುಹಿಸುತ್ತಿದ್ದರು. ಇವರ ಸಾಮಾಜಿಕ ಜಾಲ ತಾಣದ ಖಾತೆಗಳ ಮೇಲೆ ಎನ್‌ಐಎ ಅಧಿಕಾರಿಗಳು ನಿಗಾ ವಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಬ್ಯಾಂಕಿಂಗ್ ಪರೀಕ್ಷೆಗೆ ತರಬೇತಿ



ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸಂಸ್ಥೆಯು ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) ನಡೆಸುವ ಪ್ರೊಬೇಷನರಿ ಅಧಿಕಾರಿಗಳ ಹುದ್ದೆಗೆ ಮಾರ್ಗದರ್ಶನ ಮತ್ತು ತರಬೇತಿ ನೀಡುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಜೂನ್ 3ನೇ ವಾರದಲ್ಲಿ ಆನ್‌ಲೈನ್ ಮತ್ತು ಭೌತಿಕ (ಆಫ್‌ಲೈನ್) ತರಗತಿಗಳು ಆರಂಭವಾಗಲಿವೆ. ಆಸಕ್ತ, ಅರ್ಹ ಅಭ್ಯರ್ಥಿಗಳು ಇದೇ 15ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು.

ವಿವರಗಳಿಗೆ ಕೋಡಿಹಳ್ಳಿಯಲ್ಲಿ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಸಂಸ್ಥೆಯ ಕೇಂದ್ರ ಕಚೇರಿ ಅಥವಾ ವೆಬ್‌ಸೈಟ್ www.ksfkarnataka.comಗೆ ಭೇಟಿ ನೀಡಬಹುದು ಎಂದು ಫೌಂಡೇಷನ್ ಕಾರ್ಯದರ್ಶಿ ಟಿ. ತಿಮ್ಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಂಪರ್ಕಕ್ಕೆ: 080 25202299 ಅಥವಾ 7625000990.

ಅಧಿಕ ಬಡ್ಡಿ ಆಮಿಷ: ಮುಂದುವರಿದ ತನಿಖೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಹೆಚ್ಚಿನ ಬಡ್ಡಿಯ ಆಮಿಷವೊಡ್ಡಿ ಅನಧಿಕೃತವಾಗಿ ವ್ಯವಹಾರ ನಡೆಸಿದ ದೂರಿನ ಮೇರೆಗೆ, ಇಲ್ಲಿನ ಭಾಗ್ಯನಗರದಲ್ಲಿ ಇರುವ ಆದಿತ್ಯರಾಜ ಕ್ಯಾಪಿಟಲ್ ಪ್ರೈವೆಟ್ ಲಿಮಿಟೆಡ್ ಹಣಕಾಸು ಸಂಸ್ಥೆಯಲ್ಲಿ ಶುಕ್ರವಾರವೂ ಜಿಲ್ಲಾಡಳಿತದ ಅಧಿಕಾರಿಗಳಿಂದ ಪರಿಶೀಲನೆ ಮುಂದುವರಿಯಿತು. ರಾತ್ರಿ 9ಕ್ಕೆ ಕಚೇರಿಯನ್ನು ಅಧಿಕಾರಿಗಳು ಸೀಜ್ ಮಾಡಿದರು.

'ಪ್ರಾಥಮಿಕ ಹಂತದಲ್ಲೇ ₹200 ಕೋಟಿಗೂ ಅಧಿಕ ಪ್ರಮಾಣದ ಅನಧಿಕೃತ ವ್ಯವಹಾರ ಮಾಡಿದ್ದು ಖಾತ್ರಿಯಾಗಿದೆ. ಆದರೆ, ಪರಿಶೀಲನೆ ಇನ್ನೂ ಒಂದು ದಿನ ಮುಂದುವರಿಯಲಿದೆ. ಎಷ್ಟು ಕೋಟಿ ವ್ಯವಹಾರ ಎಂಬುದು ಲೆಕ್ಕಕ್ಕೆ ಸಿಗಬೇಕಿದೆ. ಶುಕ್ರವಾರ ರಾತ್ರಿ ಸಂಸ್ಥೆಯ ವಿರುದ್ಧ ಎಫ್‌ಐಆರ್ ದಾಖಲಿಸುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

'ಮಹಾರಾಷ್ಟ್ರದ ವ್ಯಕ್ತಿಯೊಬ್ಬ ಈ ಸಂಸ್ಥೆ ಹುಟ್ಟುಹಾಕಿ ದಶಕಗಳೇ ಕಳೆದಿವೆ. ಈವರೆಗೆ ಸಂಸ್ಥೆಯು ಆರು ರಾಜ್ಯಗಳಲ್ಲಿ ಹಣಕಾಸು ವ್ಯವಹಾರ ಮಾಡಿದ ದಾಖಲೆಗಳು ಸಿಕ್ಕಿವೆ. ಶೀಘ್ರ ಸಂಸ್ಥೆಯ ಮಾಲೀಕರನ್ನು ಬಂಧಿಸಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಡಿಪಿಆರ್–01/681/2026–27 ದಿನಾಂಕ: 05.06.2026

ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಯೋಜನೆಗಳಿಗೆ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಸಿದ್ಧಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು/ಸಂಸ್ಥೆಗಳಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನಲ್ಲಿ ಪ್ರಸ್ತಾಪಿತ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶ ಹಂತ–8 ರ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ವೆಚ್ಚದ ರಚನೆಗಳು ಇತ್ಯಾದಿ ಸೇರಿದಂತೆ ವಿವರವಾದ ಯೋಜನಾ ವರದಿ (ಡಿಪಿಆರ್) ಅನ್ನು ಸಿದ್ಧಪಡಿಸುವುದಕ್ಕಾಗಿ ಸಲಹಾ ಸೇವೆಗಳನ್ನು ಒದಗಿಸುವುದು. (ವಿಸ್ತೀರ್ಣ 486ಎ–27½ಜಿ).

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08.07.2026 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಪ್ರಧಾನ ಅಭಿಯಂತರರು, ಕೆಐಎಡಿಬಿ, ಬೆಂಗಳೂರು

DIPR/CP/1009/Zen/2026-27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಆರ್ಚಿಡ್ ಮಾಲ್ ಹಿಂಭಾಗ, ಕಲಬುರಗಿ–585102 (ಕರ್ನಾಟಕ ರಾಜ್ಯ)
Website: https://kkrtc.karnataka.gov.in

ಸಂಖ್ಯೆ: ಕಕಸಾ/ಕೇಕ/ಸಿಬ್ಬಂದಿ/ನೇ–1/ಕ–461/468 /2026–27 ದಿನಾಂಕ: 04.06.2026

:: ಪ್ರಕಟಣೆ ::

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ: 08.10.2025 ರಂದು ಸಂಖ್ಯೆ: ಇಡಿ/ಕೆಇಎ/ ಆಡಳಿತ/ ಸಿ.ಆರ್.05/2025 (ಕಲ್ಯಾಣ–ಕರ್ನಾಟಕ) ಮತ್ತು ಇಡಿ/ಕೆಇಎ/ಆಡಳಿತ/ಸಿ.ಆರ್.04/2025 (ಆರ್‌ಪಿಸಿ) ಗಳನ್ವಯ ಅಧಿಸೂಚಿಸಿದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ **ನಿರ್ವಾಹಕ ಮತ್ತು ಸಹಾಯಕ ಲೆಕ್ಕಿಗ** ಹುದ್ದೆಗಳ ನೇಮಕಾತಿ ಸಂಬಂಧ ದಿ: 22.05.2026 ರಂದು ಪ್ರಕಟಿಸಲಾದ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯಲ್ಲಿ **ಯಾವುದೇ ಬದಲಾವಣೆ ಇರುವುದಿಲ್ಲ**. ಸದರಿ ಪಟ್ಟಿಗೆ ಸಲ್ಲಿಸಲಾದ ಆಕ್ಷೇಪಣೆಗಳಿಗೆ ಆನ್‌ಲೈನ್ ಮೂಲಕ ಉತ್ತರಿಸಲಾಗಿದೆ. ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್‌ನಲ್ಲಿ ತಮ್ಮ ಲಾಗಿನ್ ಮೂಲಕ ನೋಡಲು ಸೂಚಿಸಲಾಗಿದೆ.

ಪಟ್ಟಿಯಲ್ಲಿನ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಯನ್ನು **"ಕಕರಸಾ ನಿಗಮದ ಕೇಂದ್ರ ಕಛೇರಿ, ಆರ್ಚಿಡ್ ಮಾಲ್ ಹಿಂಭಾಗ, ಕಲಬುರಗಿ"** ಇಲ್ಲಿ ದಿನಾಂಕ: **16.06.2026** ರಿಂದ **19.06.2026** ರವರೆಗೆ ನಡೆಸಲಾಗುವುದು.

ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್ kkrtc.karnataka.gov.in ನಲ್ಲಿ, ತಮ್ಮ ಕರೆಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ಪರಿಶೀಲನೆಗೆ ಹಾಜರಾಗಲು ಸೂಚಿಸಲಾಗಿದೆ. ಗೈರು ಹಾಜರಾಗುವವರಿಗೆ ಮತ್ತೊಂದು ಅವಕಾಶ ಕಲ್ಪಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಮೇಲಿನ ವೆಬ್ ವಿಳಾಸಕ್ಕೆ ಭೇಟಿ ನೀಡುವುದು. ಸಹಾಯವಾಣಿ ಸಂಖ್ಯೆ 6366374977 (ಕಛೇರಿ ವೇಳೆಯಲ್ಲಿ ಮಾತ್ರ).

ಸಹಿ/–
ಅಧ್ಯಕ್ಷರು, ಆಯ್ಕೆ ಸಮಿತಿ

ವಾ.ಸಾ.ಸಂ.ಇ/ಕಲಬುರಗಿ/187/ಕೆ.ಎಸ್.ಎಂ.ಸಿ.&ಎ/2026–27

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿಯಮಿತ (ಬೆಂಗಳೂರು ಡೇರಿ)
ಡಿ.ಆರ್.ಕಾಲೇಜು ಅಂಚೆ, ಡಾ: ಎಂ.ಹೆಚ್.ಮರೀಗೌಡರಸ್ತೆ, ಬೆಂಗಳೂರು–560029,
ಇ–ಮೇಲ್: bamulpurchase@gmail.com, ವೆಬ್‌ಸೈಟ್: www.bamulnandini.coop, ದೂ: 080–26096214 & 282

ಟೆಂಡರ್ ಉಲ್ಲೇಖ ಸಂಖ್ಯೆ:ಬಮೂಲ್/ಖರೀದಿ/09/1850/ಟಿ–356/2026–27 ದಿನಾಂಕ:05.06.2026
ಟೆಂಡರ್ ಉಲ್ಲೇಖ ಸಂಖ್ಯೆ:ಬಮೂಲ್/ಖರೀದಿ/09/1851/ಟಿ–357/2026–27 ದಿನಾಂಕ:05.06.2026

ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್
ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.(ಬಮೂಲ್), ಬೆಂಗಳೂರು ರವರು ಆಸಕ್ತಿಯುಳ್ಳ ಅರ್ಹತೆಯಾರಕರು / ಸರಬರಾಜುದಾರರಿಂದ ಈ ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದೆ.

Sl. No.	Particulars	Qty	Estd Cost in Lakhs	Tender No
01	Supply of Pre **Printed Aluminium Pet top Lid Material** to Bangalore Dairy for a period of one year.	2000 Kgs	12.39	KMF/2026-27/IND2281
02	Supply of **Rigid PVC Film** (PVC Bottom web) to Bangalore Dairy period of for a one year.	18000 Kgs	37.70	KMF/2026-27/IND2282
03	**Supply of SMP Polythene Liners for packing SMP Capacity 25kg to Kanakapura Dairy for a period of one year**			KMF/2026-27/IND2283
	I) SMP Polythene Liners - Size-116.7cm x 61cm	5,00,000Nos	52.86	
	ii) SMPPolytheneLiners-Size-108cmx55cm	6,00,000Nos	61.32	
04	**Supply of Ghee pet jars with CAP, WAD, Sleeve/ Printed Aluminium Foils and Corrugated boxes to Bengaluru dairy for the period of one year.**			KMF/2026-27/IND2284
	Supply of **200ml Ghee pet jars** with WAD, CAP, Sleeves, & 3 ply corrugated boxes.	5,00,000No's	46.70	
	Supply of **500ml Ghee pet jars** with WAD,CAP,Sleeves,& **3 ply** corrugated boxes.	4,00,000No's	62.84	
	Supply of **1Liter Ghee pet jars** with WAD,CAP, Sleeves,& **3ply** corrugated boxes.	2,00,000No's	46.06	
	Supplyof **5Liter Ghee petjars** withCAP,inductionWAD,**Printed Aluminium Foils,& 5ply** corrugatedboxes.	50,000No's	22.67	
05	Supply of **Flexi Pack Printed 5 Layered UHT film** to Kanakapura Dairy.	1,00,000 Kgs	278.00	KMF/2026-27/IND2285
06	Design, Supply, Erection, Testing and Commissioning of **20 TPH Solid Fuel Boiler** and Accessories for NMPC Kanakapura on Turnkey basis.	01 Lot (Lumpsum)	1300.00	KMF/2026-27/IND2286
07	Design, Supply, Erection, Testing and Commissioning of **04 TPH Solid Fuel Boiler** and Accessories for NMPC Kanakapura on Turnkey basis.	01 Lot (Lumpsum)	120.00	KMF/2026-27/IND2287

1	ಇ–ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ	05.06.2026 ರಿಂದ 19.06.2026 ಅಪರಾಹ್ನ 02.00 ಗಂಟೆವರೆಗೆ
2	ಪ್ರೀ–ಬಿಡ್ ಮೀಟಿಂಗ್ ಮತ್ತು ಟೆಂಡರ್ ಬಗ್ಗೆ ಸ್ಪಷ್ಟನೆ ದಿನಾಂಕ ಮತ್ತು ಸಮಯ	12.06.2026 ಬೆಳಿಗ್ಗೆ 11.00 ಗಂಟೆಗೆ ವರೆಗೆ
3	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	19.06.2026 ಅಪರಾಹ್ನ 02.00 ಗಂಟೆವರೆಗೆ
4	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	20.06.2026 ಅಪರಾಹ್ನ 02.35 ಗಂಟೆಗೆ
5	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	24.06.2026 ಬೆಳಿಗ್ಗೆ 11.30 ಗಂಟೆಗೆ
6	ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ	ಬೆಂಗಳೂರು ಸಹಕಾರ ಹಾಲು ಒಕ್ಕೂಟ (ನಿ.) (ಬೆಂಗಳೂರು ಡೇರಿ) ಮಂಡಲಿ ಸಭಾಂಗಣ

ಟೆಂಡರ್‌ದಾರರು ಮೇಲೆ ತಿಳಿಸಿರುವ ಸೇವೆಗಳಿಗೆ ಪ್ರತ್ಯೇಕ ಟೆಂಡರ್ ಸಲ್ಲಿಸಬೇಕು. ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಹೊಂದಿರಬೇಕಾದ ಅರ್ಹತಾ ಅಗತ್ಯತೆಯನ್ನು ವಿಭಾಗ VII ರಲ್ಲಿ ತಿಳಿಸಲಾಗಿದೆ.
ಇ.ಎಂ.ಡಿ. ಬಾಬ್ತಿನ ಹಣವು ಟೆಂಡರ್ ಅವಧಿಯ 45 ದಿನಗಳ ವಾಯ್ದೆ ಮೀರಿದ್ದು, ಅಂದರೆ ಒಟ್ಟು 135 ದಿನಗಳ ಸಿಂಧುತ್ವದ ಅವಧಿಗೆ ಅನ್ವಯವಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕ ಇ–ಪಾವತಿಯ ವಿಧಾನಗಳು ಮತ್ತು ಟೆಂಡರ್ ದಾಖಲೆಗಳ ವಿವರವನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ವೀಕ್ಷಿಸಬಹುದು. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಸಹಾಯವಾಣಿ ಸಂ.8046010000/8068948777.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್‌ಆಹ್ವಾನಿಸುವ ಪ್ರಾಧಿಕಾರ(ಬಮೂಲ್)

ರಾಮನ್ ಸಂಶೋಧನಾ ಸಂಸ್ಥೆ
ಬೆಂಗಳೂರು – 560 080

ಜಾಹೀರಾತು ಸಂಖ್ಯೆ : 16/2026, ದಿನಾಂಕ : 4 ಜೂನ್ 2026

ಭಾರತ ಸರ್ಕಾರದಿಂದ ಅನುದಾನಿತವಾಗಿರುವ, ಮೂಲ ವಿಜ್ಞಾನಗಳ ಸಂಶೋಧನೆಯಲ್ಲಿ ತೊಡಗಿರುವ ಪ್ರತಿಷ್ಠಿತ ಸ್ವಾಯತ್ತ ಸಂಶೋಧನಾ ಸಂಸ್ಥೆಯಾದ ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಳಕಂಡ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ವೈಯಕ್ತಿಕ ಕಾರ್ಯದರ್ಶಿ (Personal Secretary) – 1 ಹುದ್ದೆ
2. ಸಹಾಯಕರು (Assistants) – 6 ಹುದ್ದೆಗಳು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 6 ಜುಲೈ 2026. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡಿ : https://www.rri.res.in/careers/regular-other-openings

---

REGIONAL INSTITUTE OF EDUCATION
National Council of Educational Research and Training, New Delhi
Ministry of Education, Government of India, MYSURU - 570006
Email: principal@riemysore.ac.in, website: https://riemysore.ac.in

WALK-IN-INTERVIEW

The Regional Institute of Education, Mysuru will conduct Walk-in-Interview for the following posts purely on Contractual Basis for the Academic Session 2026-27.

Sl. No.	Name of the Posts	Date of Interview
1	Junior Project Fellows, Senior Research Associate, Graphic Designer, Professional Programmer, Producer, Engineer Grade – II, Video Editors, Lab Assistant, Vocational Education Teacher (IT-ITes), Data Entry Operator, Pre-Primary Teacher, Helper &Assistant Programme Manager	12.06.2026
2	Assistant Professor in Pedagogy of Mathematics Assistant Professor in Pedagogy of Physical Science (Chemistry) & Primary Teacher	15.06.2026
3	PGT(Economics), TGT (Social Science & English) & WET (Home Science)	16.06.2026
4	Sound Recordist, Caretaker, Store Keeper Grade-I and Grade - II	17.06.2026

FOR MORE DETAILS PLEASE LOG ON TO https://riemysore.ac.in

Sd/- PRINCIPAL

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/2026–27/683
ದಿನಾಂಕ:04.06.2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲೂ– 4 ರಲ್ಲಿ 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಅಡಿಯಲ್ಲಿ 2 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅಂದಾಜು ಮೊತ್ತ ರೂ. 150.00 ಲಕ್ಷಗಳು & ಮುಂಗಡ ಠೇವಣಿ ಮೊತ್ತ 2,25,000.00 ರೂಗಳು. ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1. ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ– 12.06.2026 ರ ಮುಂಜಾನೆ 11.00 ಗಂಟೆಗೆ 2. ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:– 20.06.2026 ರ ಸಂಜೆ 4:30 ಗಂಟೆಯವರೆಗೆ, 3. ಟೆಂಡರಗಳ ತಾಂತ್ರಿಕ್ ಬಿಡ್‌ಗಳನ್ನು ತೆರೆಯುವ ದಿನಾಂಕ: 22.06.2026 ರ ಸಂಜೆ 4.31 ಗಂಟೆಗೆ ಮತ್ತು 4. ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 23.06.2026 ರ ಸಂಜೆ 4.30 ಗಂಟೆ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/130/ಕೆಎಸ್‌ಎಂಸಿಎ/2026–27

ಕೃಷಿ ಇಲಾಖೆ
ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–01

ಸಂ.: ಉಕೃನಿ(ರ&ಸಾ)/ಸಾಗೊವಿ/ಮರು/ಇ–RfP/2026–27 ದಿನಾಂಕ: 06.06.2026

E- REQUEST FOR PROPOSAL (RfP) ಪ್ರಕಟಣೆ

2026–27ನೇ ಸಾಲಿನಲ್ಲಿ ಕೃಷಿ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ವಿವಿಧ ಕೃಷಿ ಪರಿಕರಗಳ ಪೈಕಿ, ಮೂರು ಕೃಷಿ ಪರಿಕರಗಳಾದ ಪಿಳ್ಳೆ ಪಿಸರು Pillepesaru (Phaseolus trilobus) ಹಸಿರೆಲೆ ಗೊಬ್ಬರ ಬೀಜ, ಡೋಲೋಮೈಟ್ (Dolomite) ಮತ್ತು ರೋಡೋಫೈಟ್ಸ್‌ಗಳಿಂದ ಪಡೆಯುವ ಪೊಟ್ಯಾಷ್‌ಗಳನ್ನು ಸರಬರಾಜು ಪಡೆಯಲು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಮರು e-Request for Proposal (RfP) for empanelment ಅನ್ನು ಆಹ್ವಾನಿಸಲಾಗಿದೆ. ಸದರಿ ಕೃಷಿ ಪರಿಕರಗಳನ್ನು ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ರಾಜ್ಯದ ರೈತರಿಗೆ ಸಹಾಯಧನದಲ್ಲಿ ವಿತರಿಸಲು ಅವಶ್ಯವಿರುತ್ತದೆ.

REQUEST for PROPOSAL(RfP) ದಾಖಲೆಗಳನ್ನು e-Procurement website https://kppp.karnataka.gov.inನಲ್ಲಿ ಪಡೆಯಬಹುದಾಗಿರುತ್ತದೆ. ಸದರಿ ಮರು RfP ಯಲ್ಲಿ ಭಾಗವಹಿಸುವ ಅರ್ಜಿದಾರರು ರೂ.50,000/–ಗಳ ಇ.ಎಂ.ಡಿ ಮೊತ್ತವನ್ನು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ನೇರವಾಗಿ ಆನ್‌ಲೈನ್‌ನಲ್ಲಿ ಕ್ರೆಡಿಟ್ ಕಾರ್ಡ್–ವಿಸಾ ಅಥವಾ ಮಾಸ್ಟರ್ ಕಾರ್ಡ್, ಇ–ಪೇಮೆಂಟ್, ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್ (NEFT/RTGS), ಬ್ಯಾಂಕ್ ಕೌಂಟರ್‌ನಲ್ಲಿ ಪಾವತಿಸಬೇಕು. ನಂತರ ಸರಬರಾಜು ಮಾಡಲು ಇಚ್ಛಿಸುವ ಕೃಷಿ ಪರಿಕರಗಳಿಗೆ ಸಲ್ಲಿಸುವ ತಾಂತ್ರಿಕ ಪ್ರಸ್ತಾವನೆಗಳಿಗೆ ಅನುಗುಣವಾಗಿ ಬ್ಯಾಂಕ್ ಗ್ಯಾರಂಟಿ ಪಾವತಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಲಾದ ದಾಖಲಾತಿಗಳನ್ನು, ತಾಂತ್ರಿಕ ಪ್ರಸ್ತಾವನೆ ತೆರೆಯುವ ದಿನದಂದು ಅಥವಾ ಅದಕ್ಕೆ ಮುಂಚಿತವಾಗಿ 'ಉಪ ಕೃಷಿ ನಿರ್ದೇಶಕರು (ರಸ ಗೊಬ್ಬರ ಮತ್ತು ಸಾವಯವ ಗೊಬ್ಬರ), ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು' ರವರಿಗೆ ಸಲ್ಲಿಸಬೇಕು. REQUEST for PROPOSAL(RfP) ಅರ್ಜಿಯನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ **https://kppp.karnataka.gov.in** ಮೂಲಕ ದಿನಾಂಕ : **22.06.2026ರ ಸಂಜೆ 5:00 ಗಂಟೆ**ಯೊಳಗೆ ಭರ್ತಿ ಮಾಡಿ ಸಲ್ಲಿಸಬೇಕು. ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವ ದಾಖಲಾತಿಗಳನ್ನು ಮುದ್ದಾಂ ಸಲ್ಲಿಸಿದಲ್ಲಿ ಅಂಗೀಕರಿಸುವುದಿಲ್ಲ. ಪರಿಶೀಲನಾ ಸಮಿತಿಯು ದಿನಾಂಕ : **24.06.2026** ರಂದು **ಬೆಳಿಗ್ಗೆ 11:00 ಗಂಟೆ**ಗೆ ತಾಂತ್ರಿಕ ಪ್ರಸ್ತಾವನೆಗಳನ್ನು "ಸಮೃದ್ಧಿ ಸಭಾಂಗಣ", ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 ಇಲ್ಲಿ ತೆರೆಯಲಾಗುವುದು. ವಾಣಿಜ್ಯ ಪ್ರಸ್ತಾವನೆಯನ್ನು ತೆರೆಯುವ ದಿನಾಂಕವನ್ನು ನಂತರ ತಿಳಿಸಲಾಗುವುದು. RfPಯ ಅಂದಾಜು ಮೌಲ್ಯ ರೂ.2.50 ಕೋಟಿ ಆಗಿರುತ್ತದೆ.

ವಾಸಾಸಂಇ/ವಾಪ್ರ/ಎಲ್‌ಸಿ/998/2026–27 ಸಹಿ/–, ಕೃಷಿ ನಿರ್ದೇಶಕರು

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್‌ಜಿಇಎಫ್ ಬಸ್ ಸ್ಟಾಪ್ ಹತ್ತಿರ, ಬೈಯಪ್ಪನಹಳ್ಳಿ, ಬೆಂಗಳೂರು - 560 038. ದೂರವಾಣಿ: 080-25191039.
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in

ಬಿಡ್ ಸಂ.: ಬಿಎಂಆರ್‌ಸಿಎಲ್/2026–27/ಬಿಜಿ/ವರ್ಕ್_ಇಂಡೆಂಟ್131 ದಿನಾಂಕ: 06.06.2026

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್, **"ಎಸ್‌ಎಸ್‌ಎಂ ಇಲಾಖೆಗೆ ಸಂಬಂಧಿಸಿದಂತೆ ರೀಚ್–5ರಲ್ಲಿ ಚಿಕ್ಕ ಕೆಲಸಗಳಿಗೆ (ಆರ್‌ವಿ ರಸ್ತೆ ಮೆಟ್ರೋ ನಿಲ್ದಾಣದಿಂದ ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ಮೆಟ್ರೋ ನಿಲ್ದಾಣದವರೆಗೆ)"** ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿ ವಿವರಗಳನ್ನು ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು. ಟೆಂಡರ್ ದಸ್ತಾವೇಜುಗಳನ್ನು ಪಡೆದುಕೊಳ್ಳಲು ಮತ್ತು ಸಲ್ಲಿಸಲು ಕೊನೆಯ ದಿನಾಂಕ: **06.07.2026, 17.00 ಗಂಟೆವರೆಗೆ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in**ಗೆ ಅಥವಾ ಇದೇ ಕಚೇರಿಗೆ ಕಚೇರಿ ಸಮಯದಲ್ಲಿ ಭೇಟಿನೀಡಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಓ ಮತ್ತು ಎಂ)

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಎಫ್–34/ವಾ–38/2026–27/2087 ದಿನಾಂಕ:05.06.2026

ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಗ್ರಿಡ್ ಸಂಪರ್ಕಿತ ವಿತರಿಸಿದ ಸೌರ ಫೋಟೋವೋಲ್ಟಾಯಿಕ್ (DSPV) ಘಟಕಗಳು) ವಿನಿಮಯಗಳು, 2026 ಬಗ್ಗೆ.

ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಗ್ರಿಡ್ ಸಂಪರ್ಕಿತ ವಿತರಿಸಿದ ಸೌರ ಫೋಟೊವೋಲ್ಟಾಯಿಕ್ (DSPV) ಘಟಕಗಳು) ವಿನಿಮಯಗಳು, 2026 ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 04.06.2026 ರಂದು ಪ್ರಕಟಿಸಲಾಗಿದೆ. ಕ.ವಿ.ನಿ.ಆ.ದ ವೆಬ್‌ಸೈಟ್ https://kerc.karnataka.gov.in ನಲ್ಲಿ ಕರಡು ವಿನಿಮಯಗಳು ಲಭ್ಯವಿದೆ.

ಆಸಕ್ತರು ಕರಡು ವಿನಿಮಯಗಳ ಬಗ್ಗೆ ತಮ್ಮ ಲಿಖಿತ ಅಭಿಪ್ರಾಯ / ವಿಮರ್ಶೆ / ಸಲಹೆಗಳು ಇದ್ದಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರಿಗೆ ಮೇಲೆ ತಿಳಿಸಿದಂತೆ ಕರಡು ಅಧಿನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟವಾದ 15 ದಿನಗಳೊಳಗೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

DIPR/CP/YC/1000/2026-27

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ: 05/2026.27 ದಿನಾಂಕ: 30.05.2026

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ–2&3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.99.72 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.32.20 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 13–06–2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/189/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.
ಸಂಖ್ಯೆ: ಕಾಇಂ/ ಗ್ರಾಕುನೀ&ನೈ.ವಿ/ದಾ/ ಸ.ಇಂ–1 ಟೆಂಡರ್: 2026–27/ 315 ದಿನಾಂಕ:–04.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

2026–27 ನೇ ಸಾಲಿನ ಬಹುಗ್ರಾಮ ವಾರ್ಷಿಕ ನಿರ್ವಹಣೆ ಯೋಜನೆಯಡಿ ಹೊನ್ನಾಳಿ ತಾಲ್ಲೂಕಿನ ಕೆಂಗಟ್ಟೆ ಮತ್ತು ಇತರೆ 7 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ವಾರ್ಷಿಕ ನಿರ್ವಹಣೆ ಕಾಮಗಾರಿ ರೂ.292.75 ಲಕ್ಷಗಳಿಗೆ ಮತ್ತು ನ್ಯಾಮತಿ ತಾಲ್ಲೂಕಿನ ನ್ಯಾಮತಿ ಮತ್ತು ಇತರೆ 3 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ವಾರ್ಷಿಕ ನಿರ್ವಹಣೆ ಕಾಮಗಾರಿ ರೂ.433.30 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಅನ್ವಯ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 12.06.2026 ರ ಸಂಜೆ 5.00ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–262126 ಅಥವಾ http//kppp.karnataka.gov.in/ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/132/ಕೆಎಸ್‌ಎಂಸಿಎ/2026–27

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯತ ಕಾರ್ಯಾಲಯ ಎಮ್. ಕೆ. ಹುಬ್ಬಳ್ಳಿ–591118
TOWN PANCHAYATH COUNCIL M K HUBBALLI -591118
ಜಿಲ್ಲೆ ಬೆಳಗಾವಿ ರಾಜ್ಯ :ಕರ್ನಾಟಕ
EMAIL: itstaff_ulb_mkhubballi@yahoo.com Ph. No: 08288-274046
website:http://www.mkhubballitown,mrc.gov.in

ಕ್ರ:ಸಂ:ಪಪಂ.ಎಂ.ಕೆ.ಹು:ಲೋಕೊ ವಿಭಾಗ:/2026–27 ದಿನಾಂಕ:04/06/2026

॥ ಟೆಂಡರ್ ಪ್ರಕಟಣೆ ॥
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ 2023 ರನ್ವಯ)

ಪಟ್ಟಣ ಪಂಚಾಯತ ಎಂ.ಕೆ.ಹುಬ್ಬಳ್ಳಿ ವ್ಯಾಪ್ತಿಯಲ್ಲಿ ಸನ್ 2025–26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಅನುದಾನದಲ್ಲಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ಲೋಕೊಪಯೋಗಿ ಇಲಾಖೆ/ಜಿಲ್ಲಾ ಪಂಚಾಯತ ಇಂಜನೀಯರಿಂಗ ವಿಭಾಗದಲ್ಲಿ ನೋದಾಯಿಸಲ್ಪಟ್ಟ ಅರ್ಹ ಸಿವಿಲ್ ಗುತ್ತಿಗಾದಾರರಿಂದ ಕೆ.ಡಬ್ಲು–3 ಟೆಂಡರ ಡಾಕ್ಯುಮೆಂಟ ಪ್ರಕಾರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಕಾರಣ ಇಚ್ಛೆಯುಳ್ಳ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ ಟೆಂಡರ ಸಲ್ಲಿಸಬಹುದು. ಟೆಂಡರ ಪ್ರಕಟಣೆಯಲ್ಲಿ ಯಾವ್ಯದೇ ತಿದ್ದುಪಡಿ ಇದ್ದರೆ ಇ–ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಕ್ರ.ಸಂ:1:ಕಾಮಗಾರಿಗಳ ವಿವರ / ಇಂಡೆಂಟ್ ಸಂಖ್ಯೆ:DMA/2025-26/RD/WORK_INDENT55501/CALL-2, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):81.55, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):1,63,103/–,
ಕ್ರ.ಸಂ:2:ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2025-26/OW/WORK_INDENT55509/CALL-2, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):81.83, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):1,63,673/–.

ಟೆಂಡರ್ ಸಲ್ಲಿಸುವ ಮೊದಲು ಗುತ್ತಿಗೆದಾರರು ಅತ್ಯಂತ ಅವಶ್ಯಕವಾಗಿ ಟೆಂಡರುಗಳಿಗೆ ಸಂಬಂಧಿಸಿದಂತೆ ನಿಯಮ ನಿಭಂದಣೆಗಳನ್ನು ಓದಿ ಪಾಲಿಸಬೇಕು.

ಟೆಂಡರ ಪಾರ್ಮ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ: 05–06–2026,ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ: 15–06–2026 ಸಾಯಂಕಾಲ 4:00 ಘಂಟೆಯವರೆಗೆ. ಟೆಂಡರಗಳನ್ನು ತೆರೆಯುವ ದಿನಾಂಕ: 16–06–2026 ರ ಸಾಯಂಕಾಲ 4:30 ಘಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಮತ್ತು ಶರತ್ತುಗಳಿಗಾಗಿ Website: https://kppp.karnataka.gov.in ವೆಬ್‌ಸೈಟನಲ್ಲಿ ನೋಡಬಹುದು.

ಸಹಿ/–ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಎಂ.ಕೆ.ಹುಬ್ಬಳ್ಳಿ

ಸಹಿ/– ಅಧ್ಯಕ್ಷರು ಪಟ್ಟಣ ಪಂಚಾಯತ ಎಂ.ಕೆ.ಹುಬ್ಬಳ್ಳಿ

DIPR/BGM/RO-NO-376/KSMCA/2026-27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಹಣದಿಂದ ಹಣದ ಹಸಿವು ಹೆಚ್ಚುತ್ತದೆಯೇ ಹೊರತು, ತೃಪ್ತಿ ಸಿಕ್ಕಲಾರದು.

–ಪ್ರೇಮ್‌ಚಂದ್

ಸಂಪಾದಕೀಯ

ದುರ್ಬಲ ಮುಂಗಾರು, ಬರದ ಆತಂಕ ಬಿಕ್ಕಟ್ಟು ನಿರ್ವಹಣೆಗೆ ತೀವ್ರ ಸಿದ್ಧತೆ ಅಗತ್ಯ

ಭಾರತದ ಹವಾಮಾನ ಇಲಾಖೆ (ಐಎಂಡಿ) ಕಳೆದ ವಾರ ಬಿಡುಗಡೆ ಮಾಡಿರುವ ನೈರುತ್ಯ ಮುಂಗಾರಿನ ಪರಿಷ್ಕೃತ ಮುನ್ಸೂಚನೆಯು ಆಶಾದಾಯಕವಾಗಿಲ್ಲ. ಈ ಬಾರಿ ವಾಡಿಕೆಗಿಂತಲೂ ಕಡಿಮೆ ಮಳೆ ಆಗುವ ಸ್ಪಷ್ಟ ಸೂಚನೆಗಳನ್ನು ಐಎಂಡಿ ನೀಡಿದೆ. ಮಳೆಯ ದೀರ್ಘಕಾಲಿಕ ಸರಾಸರಿಯು ಶೇ 90ರಷ್ಟು ಮಾತ್ರ ಇರಲಿದೆ ಎಂದು ಇಲಾಖೆ ಅಂದಾಜು ಮಾಡಿದೆ. ಕಳೆದ ಏಪ್ರಿಲ್‌ನಲ್ಲಿ ಈ ಪ್ರಮಾಣ ಶೇ 92ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿತ್ತು. ಮಳೆಯ ಪ್ರಮಾಣ ಗಣನೀಯವಾಗಿ ಕಡಿಮೆ ಆಗಿರುವ ಈ ಪರಿಷ್ಕೃತ ಅಂದಾಜು ನಿಜವಾದರೆ, ಕಳೆದ ಹನ್ನೊಂದು ವರ್ಷಗಳಲ್ಲಿನ ಅತ್ಯಂತ ದುರ್ಬಲ ಮಳೆಗಾಲ ಈ ಬಾರಿಯದಾಗಿರುತ್ತದೆ. ಮಳೆಗಾಲದ ನಾಲ್ಕು ತಿಂಗಳ ಅವಧಿಯ ಲೆಕ್ಕಾಚಾರದಲ್ಲಿ ಕಳೆದ 50 ವರ್ಷಗಳ ಮಳೆಯ ಸರಾಸರಿ ಪ್ರಮಾಣ 87 ಸೆಂ.ಮೀ. ಆಗಿದೆ. ಶೇ 96ರಿಂದ ಶೇ 104ರವರೆಗಿನ ಮಳೆಯ ಪ್ರಮಾಣವನ್ನು 'ಸಾಮಾನ್ಯ ಮಳೆ' ಎಂದೂ, ಶೇ 90ರಷ್ಟು ಮಳೆಯ ಮುನ್ಸೂಚನೆಯನ್ನು ಬರಗಾಲದ ಸಾಧ್ಯತೆಯೆಂದೂ ಐಎಂಡಿ ಪರಿಗಣಿಸುತ್ತದೆ. ಅಧಿಕೃತ ವರದಿಗಳಲ್ಲಿ 'ಬರ' ಎನ್ನುವ ಪದವನ್ನು ಬಳಸದೇ ಇದ್ದರೂ, ಸಾಮಾನ್ಯಕ್ಕಿಂತಲೂ ಕಡಿಮೆ ಮಳೆಯಾಗುವ ಸಂಭವನೀಯತೆ ಶೇ 60ರಷ್ಟು ತಲಪಿರುವುದು ಎಚ್ಚರಿಕೆಯ ಸಂಕೇತವಾಗಿ ಕಾಣಿಸುತ್ತಿದೆ. ಭಾರತದ ನಾಲ್ಕು ಭೌಗೋಳಿಕ ವಲಯಗಳಲ್ಲಿ ಈಶಾನ್ಯ ಭಾಗದಲ್ಲಿ ಮಾತ್ರ 'ಸಾಮಾನ್ಯ ಮಳೆ' ಆಗುವ ನಿರೀಕ್ಷೆಯಿದೆ. ಉಳಿದಂತೆ, ದಕ್ಷಿಣ ಭಾರತ ಸೇರಿದಂತೆ ದೇಶದ ಎಲ್ಲ ಭಾಗಗಳೂ ಮಳೆಯ ಕೊರತೆಯನ್ನು ಎದುರಿಸುವ ಸಾಧ್ಯತೆಯಿದೆ. ದೇಶದ ಅನ್ನದ ಬಟ್ಟಲುಗಳಾಗಿರುವ ಈ ಭಾಗಗಳಲ್ಲಿ ಉಂಟಾಗುವ ಮಳೆಯ ಕೊರತೆಯು ಕೃಷಿ ಕ್ಷೇತ್ರದ ಮೇಲೆ, ಆ ಮೂಲಕ ದೇಶದ ಒಟ್ಟು ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಉಂಟು ಮಾಡಬಹುದು.



ದುರ್ಬಲ ಮುಂಗಾರಿನ ಮುನ್ಸೂಚನೆಯು, ದೇಶ ಈಗಾಗಲೇ ಎದುರಿಸುತ್ತಿರುವ ಹಲವು ರೂಪದ ಆರ್ಥಿಕ ಸಂಕಷ್ಟಗಳನ್ನು ಇನ್ನಷ್ಟು ಉಲ್ಬಣಗೊಳಿಸುವ ಸಾಧ್ಯತೆಯಿದೆ.

ಪೆಸಿಫಿಕ್ ಮಹಾಸಾಗರದಲ್ಲಿ ಅತ್ಯಂತ ಶಕ್ತಿಶಾಲಿಯಾದ ಎಲ್ ನಿನೊ ರೂಪುಗೊಳ್ಳುವ ಸಾಧ್ಯತೆಯೇ ಮುಂಗಾರು ದುರ್ಬಲಗೊಳ್ಳಲು ಕಾರಣಗಳಲ್ಲೊಂದಾಗಿದೆ. ಎಲ್ ನಿನೊ ಸಂಭವಿಸಿರುವ ಬಹುತೇಕ ಸಂದರ್ಭದಲ್ಲಿ ಭಾರತ ಮಳೆಯ ಕೊರತೆ ಎದುರಿಸಿರುವುದನ್ನು ಹಾಗೂ ಬರದ ದವಡೆಗೆ ಸಿಲುಕಿರುವುದನ್ನು ತಜ್ಞರು ದಾಖಲಿಸಿದ್ದಾರೆ. ಮಳೆಯ ಪ್ರಮಾಣ ಕಡಿಮೆಯಾಗುವುದು ಮಾತ್ರವಲ್ಲ, ಮುಂಗಾರು ಮಾರುತಗಳ ಆಗಮನದ ವಿಳಂಬ ಹಾಗೂ ಮಳೆಯ ಅವಧಿಗಳ ನಡುವೆ ಕಂಡುಬರುವ ಹೆಚ್ಚಿನ ಸಂಖ್ಯೆಯ ಒಣದಿನಗಳಿಗೆ ಸಂಬಂಧಿಸಿದ ಮಳೆಯ ಅಸಮಾನ ಹಂಚಿಕೆಯು ಸಹ ಕ್ಷಾಮದಂತಹ ಪರಿಸ್ಥಿತಿಯನ್ನು ಸೃಷ್ಟಿಸಬಹುದು. ಭಾರತವು ಕೊನೆಯದಾಗಿ ಬರಗಾಲ ಅನುಭವಿಸಿರುವುದು 2016–18ರಲ್ಲಿ. ಆದರೆ, ಈಗಿನ ಪರಿಸ್ಥಿತಿಗಳು ಸಂಪೂರ್ಣ ಭಿನ್ನವಾಗಿವೆ. ಸಂಭವನೀಯ ಬರಗಾಲವು ದೇಶದ ಆರ್ಥಿಕತೆ ಮತ್ತು ಜನರ ಜೀವನ, ಜೀವನೋಪಾಯಗಳ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆಯಿದೆ. ಹಾಗಾಗಿ, ಐಎಂಡಿಯ ಪರಿಷ್ಕೃತ ಮುನ್ಸೂಚನೆಯು ತೀವ್ರ ಕಳವಳ ಉಂಟುಮಾಡುವಂತಹದ್ದು. ಈ ವರದಿ, ಆತಂಕದ ಸ್ಥಿತಿಯನ್ನು ನಿಭಾಯಿಸಲು ಅಗತ್ಯವಾದ ಸಿದ್ಧತೆಗಳನ್ನು ಕೊಂಚವೂ ವಿಳಂಬವಿಲ್ಲದೆ ಮಾಡಿಕೊಳ್ಳುವ ತುರ್ತನ್ನು ಸೂಚಿಸುವಂತಿದೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಕಾರಣದಿಂದಾಗಿ ಉಂಟಾಗಿರುವ ಅನಿಶ್ಚಿತ ಪರಿಸ್ಥಿತಿಯನ್ನು ದುರ್ಬಲ ಮುಂಗಾರು ಮತ್ತು ಸಂಭವನೀಯ ಬರ ಇನ್ನಷ್ಟು ಹೆಚ್ಚಿಸಬಹುದು. ಕಚ್ಚಾತೈಲದ ಬೆಲೆ ಏರಿಕೆ, ಪೆಟ್ರೋಲ್–ಡೀಸೆಲ್‌ಗಳ ಬೆಲೆ ಹೆಚ್ಚಳ ಹಾಗೂ ಹೆಚ್ಚುತ್ತಿರುವ ಹಣದುಬ್ಬರಗಳ ಒತ್ತಡವನ್ನು ಭಾರತ ಈಗಾಗಲೇ ಎದುರಿಸುತ್ತಿದೆ. ಈ ಸಂಕಷ್ಟಗಳ ಸಾಲಿಗೆ ಮಳೆ ಕೊರತೆಯ ಪರಿಣಾಮಗಳೂ ಸೇರಿಕೊಳ್ಳಲಿವೆ. ಬರದ ಹೊಡೆತಕ್ಕೆ ಕೃಷಿ ವಲಯ ಸಿಲುಕುವುದು, ಆಹಾರ ಪದಾರ್ಥಗಳ ಬೆಲೆ ಏರಿಕೆಗೆ ಕಾರಣವಾಗುತ್ತದೆ; ಹಣದುಬ್ಬರವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇದರಿಂದ ಹಲವು ಆರ್ಥಿಕ ವಲಯಗಳಿಗೆ ಹೊಡೆತ ಬೀಳಲಿದೆ. ದೇಶದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಜಿಡಿಪಿ) ಕೃಷಿಯ ಪಾಲು ಶೇ 14ರಿಂದ 15ರಷ್ಟಿದ್ದರೂ, ಜನರ ಜೀವನೋಪಾಯದ ರೂಪದಲ್ಲಿ ವ್ಯವಸಾಯಕ್ಕೆ ವಿಶೇಷ ಮಹತ್ವವಿದೆ. ಹಾಗಾಗಿ, ಮುಂಗಾರಿನ ಕೊರತೆಯಿಂದ ಹೆಚ್ಚು ಬಾಧೆಗೊಳಗಾಗಬಹುದಾದ ಕೃಷಿ ವಲಯವನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಣಾಮಕಾರಿ ಕಾರ್ಯಯೋಜನೆಗಳನ್ನು ರೂಪಿಸಬೇಕಾಗಿದೆ. ಕೃಷಿಯ ಜೊತೆಗೆ ವಿದ್ಯುತ್, ಕುಡಿಯುವ ನೀರು ಮತ್ತು ಕೈಗಾರಿಕೆಗಳಂತಹ ಪ್ರಮುಖ ಕ್ಷೇತ್ರಗಳ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರಗಳು ತಮ್ಮ ಕಾರ್ಯತಂತ್ರವನ್ನು ಪುನರ್ ರಚಿಸಿಕೊಳ್ಳಬೇಕಾಗಿದೆ. ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ, ತನ್ನೊಳಗಿನ ಎಲ್ಲ ಗೊಂದಲಗಳನ್ನು ಆದಷ್ಟು ಬೇಗನೆ ಪರಿಹರಿಸಿಕೊಂಡು ಮಳೆ ಕೊರತೆಯಿಂದ ಎದುರಾಗಬಹುದಾದ ಸಮಸ್ಯೆಗಳನ್ನು ಎದುರಿಸಲು ಸಿದ್ಧತೆ ನಡೆಸಬೇಕಾಗಿದೆ.

ಜಾಲತಾಣ

ಖಾತೆಗಾಗಿ ಹಟ ಏಕೆ?



ಸಚಿವ ಸ್ಥಾನಗಳು ಮೇಲು–ಕೀಳು ಆಗಿದ್ದು ಯಾವಾಗ? ಸಚಿವರಾಗಿ ತಮಗೆ ಇಂತಹುದೇ ಖಾತೆ ಬೇಕು ಎಂದು ಶಾಸಕರು ಪಟ್ಟುಹಿಡಿಯುವುದು ಭ್ರಷ್ಟಾಚಾರದ ಮೊದಲ ಸೂಚನೆ ಅಲ್ಲವೆ? ಇಂತಹವರು ಸಚಿವರಾಗಿ ಮಾಡುವ ಕೆಲಸವಾದರೂ ಏನು?

ರಾಜೇಂದ್ರ ಪ್ರಸಾದ್, ಕವಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಮೊದಲು ಮುಖ್ಯಮಂತ್ರಿ ಕುರ್ಚಿಗಾಗಿ ಕಿತ್ತಾಡುತ್ತಿದ್ದರು. ಈಗ ಸಚಿವ ಸ್ಥಾನಕ್ಕಾಗಿ, ಖಾತೆಗಾಗಿ ಕಿತ್ತಾಡುತ್ತಿದ್ದಾರೆ! ಮುಂಗಾರು ಹಂಗಾಮು ಸಂದರ್ಭದಲ್ಲಿ ರೈತರಿಗೆ ಬಿತ್ತನೆಬೀಜ, ರಸಗೊಬ್ಬರ ಮುಂತಾದ ನೆರವು ನೀಡಬೇಕಾದ ಸರ್ಕಾರ ಅಧಿಕಾರದ ಕಿತ್ತಾಟದಲ್ಲಿ ತೊಡಗಿದೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಬುಧವಾರ, 6-6-2001

● **ಪ್ರಶಸ್ತಿ ಒಬ್ಬರಿಗೆ; ಪತ್ರ ಇನ್ನೊಬ್ಬರಿಗೆ**

ತುಮಕೂರು, ಜೂನ್ 5– ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಗಳ ಪೈಕಿ ಗಡಿನಾಡು ವಿಶೇಷ ಪ್ರಶಸ್ತಿ ನಿಜವಾಗಿ ಸಲ್ಲಬೇಕಾದವರಿಗೆ ಸಲ್ಲದೆ ಬೇರೊಬ್ಬರ ಪಾಲಾಗಿರುವ ಅಂಶ ಬೆಳಕಿಗೆ ಬಂದಿದೆ.

ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆಯ ಗೈಬು ಸಾಹೇಬ ಮಕಾಂದಾರ್ ಎಂಬುವವರಿಗೆ ಗೀಗಿಪದಕ್ಕಾಗಿ ಪ್ರಶಸ್ತಿ ಪ್ರಕಟಿಸಲಾಗಿತ್ತು. ಆದರೆ, ಅಕಾಡೆಮಿ ಸಿಬ್ಬಂದಿಯ ಅಚಾತುರ್ಯದಿಂದಾಗಿ ಪ್ರಶಸ್ತಿ ಬಂದ ಬಗ್ಗೆ ಮಾಹಿತಿ ನೀಡಿದ ಪತ್ರವನ್ನು ಬೇರೊಬ್ಬರಿಗೆ ರವಾನಿಸಲಾಗಿದೆ.

● **ಕಾವೇರಿ ಪ್ರಶ್ನೆ ಕೆದಕಿದ ಜಯಾ**

ನವದೆಹಲಿ, ಜೂನ್ 5– ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ವರದಿಯನ್ನು ಶೀಘ್ರವಾಗಿ ಜಾರಿಗೊಳಿಸುವಂತೆ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಅವರು, ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಮೂಲಕ ಕಾವೇರಿ ಪ್ರಶ್ನೆಯನ್ನು ಕೆದಕಿದ್ದಾರೆ.

ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ನಂತರ ರಾಜಧಾನಿಗೆ ಭೇಟಿ ನೀಡಿದ ಜಯಲಲಿತಾ, ಬೆಳಗ್ಗೆ ಪ್ರಧಾನಿ ವಾಜಪೇಯಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

75 ವರ್ಷಗಳ ಹಿಂದೆ

ಬುಧವಾರ, 6-6-1951

● **ಕೊಚ್ಚಿ–ತಿರುವಾಂಕೂರಿನಲ್ಲಿ ತೀವ್ರ ಆಹಾರ ಅಭಾವ**

ತಿರುವನಂತಪುರ, ಜೂನ್ 5– ಬಿಹಾರ ಬಿಟ್ಟರೆ ಭಾರತದ ಉಳಿದ ಎಲ್ಲ ಪ್ರದೇಶಗಳಿಗಿಂತ ತಿರುವಾಂಕೂರು ಮತ್ತು ಕೊಚ್ಚಿನ್‌ಗಳಲ್ಲಿ ಆಹಾರ ಪರಿಸ್ಥಿತಿ ತುಂಬಾ ವಿಷಮವಾಗಿದೆ ಎಂಬುದಾಗಿ ಸಂಸ್ಥಾನಗಳ ಕೇಂದ್ರ ಸಲಹಾ ಸಮಿತಿಗೆ ಅದರ ಸರಬರಾಜು ಉತ್ಪನ್ನ, ಬೆಲೆ ಮತ್ತು ಸಹಾಯದ್ರವ್ಯ ನಿರ್ಧಾರಕ ಉಪಸಮಿತಿ ಒಪ್ಪಿಸಿರುವ ವರದಿ ತಿಳಿಸುತ್ತದೆ.

ತಿರುವಾಂಕೂರು–ಕೊಚ್ಚಿನ್‌ಗಳಿಗೆ ವರ್ಷಕ್ಕೆ ಕನಿಷ್ಠಾಂಶ 5,44,321 ಟನ್ ಆಹಾರ ಕೊಟ್ಟೇ ತೀರಬೇಕೆಂದು ಕೇಂದ್ರ ಸರ್ಕಾರಕ್ಕೆ ಆಗಾಗ್ಗೆ ಜ್ಞಾಪಿಸಬೇಕು. ಪಡಿತರವನ್ನು 12 ಔನ್ಸ್‌ಗಳಿಗೆ ಏರಿಸಬೇಕು ಎಂದು ಹೇಳಿದೆ.

ಹಿಂದುತ್ವ: ಬಿಜೆಪಿಗೆ ಡಿ.ಕೆ. ಸ್ಪರ್ಧಿಯೆ?



ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ರಾಜಕೀಯ ಮತ್ತು ಮಾಧ್ಯಮ ಕ್ಷೇತ್ರವೂ ಸೇರಿದಂತೆ ಸಾರ್ವಜನಿಕ ವೇದಿಕೆಗಳಲ್ಲಿ ಅತೀ ಹೆಚ್ಚು ಚರ್ಚೆಯಾಗುತ್ತಿರುವುದು ಡಿ.ಕೆ. ಶಿವಕುಮಾರ್ ಅವರ 'ಹಿಂದುತ್ವ'ದ ಇಮೇಜ್ ಬಗ್ಗೆ. ಬಿಜೆಪಿಯವರ ಹಿಂದುತ್ವದ ರಾಜಕಾರಣವನ್ನು ಎದುರಿಸುವುದು ಹೇಗೆ ಎಂದು ಚಿಂತಾಕ್ರಾಂತರಾಗಿರುವ ಕಾಂಗ್ರೆಸ್ ಪಕ್ಷದಲ್ಲಿರುವ ಒಂದು ವರ್ಗಕ್ಕೆ ಇದ್ದಕ್ಕಿದ್ದಂತೆ ಶಿವಕುಮಾರ್ ಅವರಲ್ಲಿ ಬಿಜೆಪಿಯನ್ನು ಸದೆಬಡಿಯಬಲ್ಲ ಒಬ್ಬ ಅವತಾರ ಪುರುಷ ಕಾಣಿಸಿಕೊಂಡಿದ್ದಾನೆ.

ಕಳೆದ ಏಳೆಂಟು ವರ್ಷಗಳಲ್ಲಿ ಸಿದ್ದರಾಮಯ್ಯನವರ ಹಣೆಗೆ 'ಹಿಂದೂ ವಿರೋಧಿ' ಎಂಬ ಲೇಬಲ್ ಹಚ್ಚುವಲ್ಲಿ ಕನಿಷ್ಠ ಸಾರ್ವಜನಿಕ ಚರ್ಚೆಯಲ್ಲಿಯಾದರೂ ಯಶಸ್ಸನ್ನು ಕಂಡಿದ್ದ ಬಿಜೆಪಿಯನ್ನು ಮಣಿಸಲು ಕಟ್ಟಾ ಧಾರ್ಮಿಕ ಡಿ.ಕೆ. ಅವರೇ ಸರಿ ಎನ್ನುವುದು ಬಹುತೇಕ ಜಾತ್ಯತೀತರ ತಕ್ಷಣದ ಅಭಿಪ್ರಾಯವೂ ಆಗಿದೆ.

ಇಂತಹದ್ದೊಂದು ಅಭಿಪ್ರಾಯ ಹುಟ್ಟಿಕೊಳ್ಳಲು ಮೊದಲನೆಯ ಕಾರಣ, ಹಿಂದುತ್ವ ರಾಜಕೀಯದ ಬಗೆಗಿನ ಅಜ್ಞಾನ. ಎರಡನೆಯ ಕಾರಣ, ಬಿಜೆಪಿಯನ್ನು ಸೋಲಿಸಲಾಗದ ಕಾರಣಕ್ಕೆ ಹುಟ್ಟಿಕೊಂಡಿರುವ ಹತಾಶೆ. ಈ ಅಜ್ಞಾನದಿಂದಾಗಿಯೇ ರಾಜ್ಯ ಮತ್ತು ದೇಶದಲ್ಲಿ ರಾಜಕೀಯವಾಗಿ ಬಿಜೆಪಿಯನ್ನು ಮತ್ತು ಸಾಂಸ್ಕೃತಿಕವಾಗಿ ಆರ್‌ಎಸ್‌ಎಸ್ ಅನ್ನು ಎದುರಿಸಲಿಕ್ಕಾಗದೆ, ಕಾಂಗ್ರೆಸ್ ಬಸವಳಿದು ಹೋಗಿರುವುದು. ಸೈದ್ಧಾಂತಿಕ ಸ್ಪಷ್ಟತೆ ಬಿಜೆಪಿಯ ಶಕ್ತಿ, ಸೈದ್ಧಾಂತಿಕ ಗೊಂದಲ ಕಾಂಗ್ರೆಸ್ ಪಕ್ಷದ ದೌರ್ಬಲ್ಯ.

ಡಿ.ಕೆ. ಶಿವಕುಮಾರ್ ಅವರು ಖಂಡಿತ ಕಾಂಗ್ರೆಸ್ ಪಕ್ಷದಲ್ಲಿರುವ ಮೊದಲ ಹಿಂದೂ ಅಲ್ಲ. ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವ, ಶಾಸಕರು ಮಾತ್ರವಲ್ಲ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿರುವ ಹಿಂದೂಗಳಲ್ಲಿ ಯಾರೂ ಹಿಂದೂ ವಿರೋಧಿಗಳಿಲ್ಲ. ಎಲ್ಲರೂ ಒಂದಲ್ಲ ಒಂದು ದೇವರನ್ನು ಆರಾಧಿಸುವ ಮತ್ತು ಪೂಜೆ–ಪುನಸ್ಕಾರಗಳನ್ನು ತಪ್ಪದೆ ಮಾಡುವ ಹಿಂದೂಗಳೇ ಆಗಿದ್ದಾರೆ. ಇವರಲ್ಲಿ ಹೋಮ–ಹವನ, ಜ್ಯೋತಿಷಿ–ತಂತ್ರಮಂತ್ರಗಳಿಗೆ ಜೋತುಬಿದ್ದವರೂ ಇದ್ದಾರೆ.

ಕರ್ನಾಟಕದ ಜನಸಂಖ್ಯೆಯಲ್ಲಿ ಹಿಂದೂಗಳು ಶೇ 84ರಷ್ಟಿದ್ದಾರೆ. ಶೇ 0.27ರಷ್ಟು ಜನ ಮಾತ್ರ ತಾವು ಯಾವುದೇ ಧರ್ಮಕ್ಕೆ ಸೇರಿಲ್ಲ ಎಂದು ಹೇಳಿದ್ದಾರೆ. ಹೀಗಿದ್ದರೂ ಹಿಂದೂ ಮತದಾರರು, ಕಾಂಗ್ರೆಸ್ ಪಕ್ಷದ ಹಿಂದೂ ಅಭ್ಯರ್ಥಿಯನ್ನು ಸೋಲಿಸಿ ಬಿಜೆಪಿ ಹಿಂದೂ ಅಭ್ಯರ್ಥಿಯನ್ನು ಯಾಕೆ ಗೆಲ್ಲಿಸುತ್ತಾರೆ? ಈ ಪ್ರಶ್ನೆಗೆ ಯಾರಲ್ಲಿಯಾದರೂ ಉತ್ತರ ಇದೆಯೆ?

ಮುಖ್ಯಮಂತ್ರಿ ಶಿವಕುಮಾರ್ ಅವರಲ್ಲಿ 'ಹಿಂದೂ ಹೃದಯ ಸಾಮ್ರಾಟ'ನನ್ನು ಕಾಣಲು ಹೊರಟವರು ಮೊದಲು ನರೇಂದ್ರ ಮೋದಿಯವರನ್ನು 'ಹಿಂದೂ ಹೃದಯ ಸಾಮ್ರಾಟ' ಎಂದು ಯಾಕೆ ಕೊಂಡಾಡಲಾಯಿತು ಎನ್ನುವುದನ್ನು ತಿಳಿದುಕೊಳ್ಳಬೇಕು. ಮೋದಿಯವರೇನು ಪ್ರತಿನಿತ್ಯ ಪೂಜೆ–ಪುನಸ್ಕಾರ, ಹೋಮ–ಹವನ ಮಾಡುತ್ತಿರುವ ಮತ್ತು ಕಂಡಕಂಡಲ್ಲಿ ಧಾರ್ಮಿಕ ಪಂಡಿತರು, ಸ್ವಾಮಿಗಳ ಕಾಲಿಗೆ ಬೀಳುವ ಹಿಂದೂಗಳೇ? ಇಲ್ಲವೇ ಅವರೇನು ಹಿಂದೂಗಳನ್ನೆಲ್ಲ ಬಡತನದ ರೇಖೆಯಿಂದ ಮೇಲಕ್ಕೆತ್ತಿದ್ದಾರೆಯೇ? ನಮ್ಮ ನಡುವೆ ಬಾಳಿ ಬದುಕಿದ್ದ ಹಿಂದೂ ಧರ್ಮದ ಸುಧಾರಕರಂತೆ ಅವರು ಅಸ್ಪೃಶ್ಯತೆ, ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ಹೋರಾಡಿ ಹಿಂದೂ ಧರ್ಮದ ಸುಧಾರಣೆ ಮಾಡಿದ್ದಾರೆಯೆ? ಉತ್ತರ ಸ್ಪಷ್ಟ: 'ಗುಜರಾತ್‌ನಲ್ಲಿ ಮುಸ್ಲಿಮರಿಗೆ ಸರಿಯಾದ ಪಾಠ ಕಲಿಸಿದ್ದಾರೆ' ಎಂಬ ಸಾಧನೆಗಾಗಿಯೇ ಮೋದಿಯವರ ತಲೆಯ ಮೇಲೆ 'ಹಿಂದೂ ಹೃದಯ ಸಾಮ್ರಾಟ' ಎಂಬ ಕಿರೀಟ ಧಾರಣೆ ಮಾಡಲಾಯಿತು.

ಇಂತಹ ಮೋದಿಯವರು ಯಾವುದಾದರೂ ಚುನಾವಣಾ ಭಾಷಣದಲ್ಲಿ ತಾನು ಹಿಂದೂಗಳ ಉದ್ಧಾರ ಮಾಡಿದ್ದೇನೆ ಎಂದು ಮತ ಕೇಳಿದ್ದಾರೆಯೆ? ಇಲ್ಲವೇ ತಮ್ಮ ಸರ್ಕಾರ ಮಾಡಿದ ಸಾಧನೆಯ ಪಟ್ಟಿಯನ್ನು ಮುಂದಿಟ್ಟು ಮತ ಕೇಳಿದ್ದಾರೆಯೆ?

> ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಜೆಪಿಯ ಹಿಂದುತ್ವದ ಇಮೇಜ್‌ಗೆ ಸಮರ್ಥ ಎದುರಾಳಿಯಂತೆ ಕೆಲವರಿಗೆ ಕಾಣಿಸುತ್ತಿದ್ದಾರೆ. ಆದರೆ, ಬಿಜೆಪಿಯ ಹಿಂದೂ ಧರ್ಮದ ಪ್ರಮುಖ ಲಕ್ಷಣವೇ ಕೋಮುವಾದ ಆಗಿರುವುದನ್ನು ಗಮನಿಸಬೇಕು.

ಹಿಂದೂ–ಮುಸ್ಲಿಂ, ಹಿಂದೂಸ್ತಾನ–ಪಾಕಿಸ್ತಾನ, ಅಸ್ಸಿ–ಬೀಸ್, ಸ್ಮಶಾನ್–ಕಬರ್‌ಸ್ತಾನ್ ಸೇರಿದಂತೆ ಪತ್ರಿಕೆಯಲ್ಲಿ ಬರೆಯಲಾಗದಂತಹ ಕೋಮುದ್ವೇಷದ ಮಾತುಗಳೇ ಅವರ ಚುನಾವಣಾ ಭಾಷಣದಲ್ಲಿ ತುಂಬಿರುತ್ತಿತ್ತು. ಇದೇ ಅವರ ಅಸಲಿ ತಾಕತ್ತು ಮತ್ತು ರಾಜಕೀಯ ಯಶಸ್ಸಿನ ಗುಟ್ಟು. ಇದನ್ನು ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಮಾಡಲಿಕ್ಕಾಗುತ್ತದೆಯೆ?

ಮೊದಲಿಗೆ ಧರ್ಮ ಮತ್ತು ಕೋಮುವಾದ ಬೇರೆ ಬೇರೆ ಸಿದ್ಧಾಂತಗಳು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಧಾರ್ಮಿಕನಾಗಿರುವುದು ಖಂಡಿತ ತಪ್ಪಲ್ಲ, ಎಲ್ಲ ಧರ್ಮಗಳ ಆಚರಣೆಯ ಸ್ವಾತಂತ್ರ್ಯವನ್ನು ನಮ್ಮ ಸಂವಿಧಾನವೇ ನೀಡಿದೆ. ಆದರೆ, ಕೋಮುವಾದಿಯಾಗುವುದು ಅಪರಾಧ ಮಾತ್ರವಲ್ಲ, ಜಾತ್ಯತೀತತೆಯ ಮೌಲ್ಯವನ್ನು ಸಾರುವ ಸಂವಿಧಾನಕ್ಕೆ ವಿರುದ್ಧವಾಗಿರುವಂತಹದ್ದು.

ಹಿಂದೂ ಧರ್ಮ ಮತ್ತು ಕೋಮುವಾದದ ನಡುವಿನ ವ್ಯತ್ಯಾಸಗಳನ್ನು ಅರ್ಥಮಾಡಿಕೊಂಡ ದಿನದಿಂದ ಬಿಜೆಪಿಯ ಪತನದ ದಿನಗಳ ಎಣಿಕೆ ಶುರುವಾಗಲಿದೆ. ಮೇಲ್ನೋಟಕ್ಕೆ ಸರಳವೂ ಸುಂದರವೂ ಆಗಿ ಕಾಣುವ ಈ ಕೆಲಸದ ಆಚರಣೆ ಸುಲಭ ಅಲ್ಲ. ಸಂಘ ಪರಿವಾರ ಪ್ರತಿಪಾದಿಸುವ ಹಿಂದುತ್ವದ ಕೇಂದ್ರಸ್ಥಾನದಲ್ಲಿರುವುದು ಕೋಮುದ್ವೇಷ. ಯಾವ ಧರ್ಮವೂ ಅನ್ಯಧರ್ಮವನ್ನು ದ್ವೇಷಿಸಲು ಹೇಳುವುದಿಲ್ಲ. ಆದರೆ, ನಿಜವಾದ ಹಿಂದೂ ವ್ಯಕ್ತಿ ಹಿಂದೂ ಧಾರ್ಮಿಕನಾಗಿದ್ದರಷ್ಟೇ ಸಾಲದು, ಆತ ಮುಸ್ಲಿಂ ವಿರೋಧಿಯಾಗಬೇಕು ಎನ್ನುವುದು ಸಂಘ ಪರಿವಾರ ಕಟ್ಟಿರುವ ಕಥನ. ಅದೇ ರೀತಿ ಒಬ್ಬ ಮುಸ್ಲಿಂ ತಾನು ಜಾತ್ಯತೀತ ಎಂದು ಅನಿಸಿಕೊಳ್ಳಬೇಕಾದರೆ, ಅನ್ಯಧರ್ಮಗಳ ಗೋಜಿಗೆ ಹೋಗದೆ ಮುಸ್ಲಿಮನಾಗಿ ಉಳಿದರೆ ಸಾಕಾಗುವುದಿಲ್ಲ. ಅವನು ಹಿಂದೂಗಳ ಮನೆಯ ಸತ್ಯನಾರಾಯಣ ಪೂಜೆಗೆ ಬಂದು ನಾಮ ಹಾಕಿಕೊಳ್ಳಬೇಕು ಎಂದು ಬಿಜೆಪಿ ಹಿಂದೂಗಳು ಫರ್ಮಾನು ಹೊರಡಿಸುತ್ತಾರೆ.

ಕೋಮುವಾದವನ್ನು ಹರಡುವುದು ಸುಲಭ. ತಲೆಗೆ ಕೇಸರಿ ಪಟ್ಟಿ, ಹೆಗಲಿಗೆ ಕೇಸರಿ ಶಾಲು, ಹಣೆಗೆ ಕುಂಕುಮ, ಬಾಯಲ್ಲಿ ಸುಳ್ಳು ಮತ್ತು ಕೈಯಲ್ಲಿ ಮೊಬೈಲ್ ಇದ್ದರೆ ಸಾಕು. ಹಿಂದುತ್ವದ ನಶೆ ತುಂಬುತ್ತಾ ಹೋಗಬಹುದು. ಆದರೆ ಆ ನಶೆಯನ್ನು ಇಳಿಸಲು ಅವಶ್ಯಕವಾಗಿರುವ ಜಾತ್ಯತೀತತೆಯನ್ನು ಬೆಳೆಸುವುದು ಬಹಳ ಕಷ್ಟ. ಇದಕ್ಕಾಗಿ ಜನರಿಗೆ ಸಂವಿಧಾನದ ಪಾಠ ಮಾಡಬೇಕು, ಜಾತ್ಯತೀತತೆ ಎನ್ನುವುದು ಧರ್ಮವಿರೋಧಿ ಅಲ್ಲ, ಅದುವೇ ನಿಜವಾದ ಧರ್ಮ ಎಂದು ಮನವರಿಕೆ ಮಾಡಿಕೊಡಬೇಕು.

ನಮ್ಮ ನಡುವೆ ಕೋಮುವಾದವನ್ನು ಎದುರಿಸಿ ಯಶಸ್ವಿಯಾಗಿರುವ ಒಂದು ಮಾಡೆಲ್ ತಮಿಳುನಾಡಿನಲ್ಲಿದೆ. ತಮಿಳುನಾಡಿನಲ್ಲಿ ಅಧಿಕೃತವಾಗಿ 32,000ಕ್ಕೂ ಹೆಚ್ಚು ದೇವಸ್ಥಾನಗಳಿವೆ. ತಮಿಳರು ತರಹೇವಾರಿ ದೇವರುಗಳನ್ನು ಪೂಜಿಸುತ್ತಾರೆ. ಅವರು ಕಟ್ಟಾ ಧಾರ್ಮಿಕರು. ಹೀಗಿದ್ದರೂ ಬಿಜೆಪಿಗೆ ಆ ರಾಜ್ಯದಲ್ಲಿ ಪ್ರವೇಶಿಸಲು ಸಾಧ್ಯವಾಗಿಲ್ಲ. ಯಾಕೆಂದರೆ, ಧರ್ಮ ಮತ್ತು ಕೋಮುವಾದ ಬೇರೆ ಎನ್ನುವ ಸ್ಪಷ್ಟತೆ ತಮಿಳರಲ್ಲಿದೆ. ನಿಜವಾದ ಧಾರ್ಮಿಕ ವ್ಯಕ್ತಿ ಕೋಮುವಾದಿ ಆಗಲಾರ ಎನ್ನುವುದನ್ನು ತಮಿಳರು ತೋರಿಸಿಕೊಟ್ಟಿದ್ದಾರೆ. ಇಂದು ರಾಜ್ಯಕ್ಕೆ ಮಾತ್ರವಲ್ಲ, ದೇಶಕ್ಕೆ ಬೇಕಾಗಿರುವುದು ಈ ಮಾಡೆಲ್.

ಮುಖ್ಯಮಂತ್ರಿ ಆಗಿದ್ದುಕೊಂಡು ಶಿವಕುಮಾರ್ ಅವರು ಧಾರ್ಮಿಕರಾಗಿರುವುದು ತಪ್ಪಲ್ಲ. ಅವರು ಯಾವ ಗುರುಗಳು, ಸ್ವಾಮಿಗಳನ್ನು ನಂಬುತ್ತಾರೆ ಎನ್ನುವುದಾಗಲಿ, ಜ್ಯೋತಿಷಿ, ವಾಸ್ತು ಬಗೆಗಿನ ನಂಬಿಕೆಗಳಾಗಲಿ, ಅವು ಅವರ ವೈಯಕ್ತಿಕ ವಿಚಾರಗಳು. ಆದರೆ, ಪ್ರಜೆಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕೆಂದು ಸಾರಿದ ಕೊಡುಗೆಯಾಗಿರುವ ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂತು ಸಾರ್ವಜನಿಕವಾಗಿ ಜ್ಯೋತಿಷಿ–ವಾಸ್ತು ಇತ್ಯಾದಿಗಳ ಬಗ್ಗೆ ಮಾತನಾಡುವುದು ಸರಿ ಹೊಂದುವುದಿಲ್ಲ.

ಈ ಗೊಂದಲ ಬರೀ ಶಿವಕುಮಾರ್ ಒಬ್ಬರದ್ದಲ್ಲ, ಬಹುತೇಕ ಕಾಂಗ್ರೆಸಿಗರಲ್ಲಿದೆ. ಬಿಜೆಪಿಯನ್ನು ಸೋಲಿಸಬೇಕೆಂಬ ವಿಚಾರದಲ್ಲಿ ನಮ್ಮ ಬಹಳಷ್ಟು ಕಾಂಗ್ರೆಸಿಗರು ಮತ್ತು ಜಾತ್ಯತೀತರು 'ನಮಗೊಬ್ಬ ಮೋದಿ ಬೇಕು' ಎನ್ನುವಷ್ಟು ಹತಾಶರಾಗಿದ್ದಾರೆ. 2019ರ ಲೋಕಸಭಾ ಚುನಾವಣಾ ಕಾಲದಲ್ಲಿ 'ನರೇಂದ್ರ ಮೋದಿಯವರಿಂದ ನೀವೇನು ಕಲಿತಿದ್ದೀರಿ' ಎಂಬ ಪತ್ರಕರ್ತನ ಪ್ರಶ್ನೆಗೆ ರಾಹುಲ್ ಗಾಂಧಿ 'ಮೋದಿಯವರ ಹಾಗೆ ಆಗಬಾರದು ಎನ್ನುವುದನ್ನು ಕಲಿತೆ' ಎಂದು ಥಟ್ಟನೇ ಉತ್ತರಿಸಿದ್ದರು. ಅದೇ ರಾಹುಲ್ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಪಕ್ಷಾಂತರಗಳ ಬಗ್ಗೆ ಪ್ರತಿಕ್ರಿಯಿಸುತ್ತಾ 'ಆರ್‌ಎಸ್‌ಎಸ್‌ಗೆ ಹೆದರುವವರು ಕಾಂಗ್ರೆಸ್ ಬಿಟ್ಟು ಹೋಗಬಹುದು' ಎಂದಿದ್ದರು.

ಇಂತಹದ್ದೊಂದು ಸೈದ್ಧಾಂತಿಕ ಸ್ಪಷ್ಟತೆ ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ, ಬಿಜೆಪಿಯ ಸೋಲಿಗಾಗಿ ಹಂಬಲಿಸುತ್ತಿರುವ ಜಾತ್ಯತೀತರಲ್ಲಿಯೂ ಇರಬೇಕು. ಅದು ಇದೆಯೇ ಎನ್ನುವುದು ಪ್ರಶ್ನೆ. ಅಂತಹ ಸ್ಪಷ್ಟತೆ ಇದ್ದಿದ್ದರೆ, ಮುಖ್ಯಮಂತ್ರಿಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭದ ವೇದಿಕೆಯಲ್ಲಿ ಸ್ವಾಮೀಜಿಗಳ ಫೋಟೊ ಇಟ್ಟಿದ್ದರ ಬಗ್ಗೆ ಕಾಂಗ್ರೆಸ್ ವರಿಷ್ಠರು ಕನಿಷ್ಠ ಅಸಮಾಧಾನವನ್ನಾದರೂ ವ್ಯಕ್ತಪಡಿಸುತ್ತಿದ್ದರು. ಈ ವಿಷಯದ ಬಗ್ಗೆ ಸಾರ್ವಜನಿಕ ಚರ್ಚೆ ಆಗುತ್ತಿತ್ತು.

ಮುಖ್ಯವಾಗಿ ಆ ಸಮಾರಂಭ ಸರ್ಕಾರದ್ದು ಅಲ್ಲವೇ ಅಲ್ಲ. ಅದು ಸಂಪೂರ್ಣವಾಗಿ ರಾಜ್ಯದಲ್ಲಿ ಸಂವಿಧಾನದ ರಕ್ಷಣೆಗಾಗಿಯೇ ನೇಮಕಗೊಂಡಿರುವ ರಾಜ್ಯಪಾಲರದ್ದು. ಪ್ರಶ್ನೆ ಸ್ವಾಮೀಜಿಯವರ ಫೋಟೊ ಬಗ್ಗೆ ಖಂಡಿತ ಅಲ್ಲ, ಅದು ಸಂವಿಧಾನದ ಮೇಲಿನ ನಮ್ಮ ಬದ್ಧತೆಯದ್ದು. ಈ ಹೊಸ ಸಂಪ್ರದಾಯ ಇಲ್ಲಿಗೆ ನಿಲ್ಲುವುದಿಲ್ಲ. ಮುಂದೊಂದು ದಿನ ಬಿಜೆಪಿಗೆ ಸರ್ಕಾರ ರಚಿಸುವ ಅವಕಾಶ ಬಂದರೆ ಅವರು, ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಶ್ರೀರಾಮನ ಫೋಟೊ ಇಟ್ಟು ಪೂಜಿಸಬಹುದು. ಅಂತಹ ಸಂದರ್ಭದಲ್ಲಿ ಅದನ್ನು ತಪ್ಪೆಂದು ಹೇಳುವ ನೈತಿಕತೆ ಯಾರಿಗಿರುತ್ತದೆ?

ಇಂತಹ ಸಂದರ್ಭದಲ್ಲಿ ಸಂವಿಧಾನವನ್ನು ನಂಬಿರುವ ಪ್ರಜೆಗಳಾಗಿ ನೂತನ ಮುಖ್ಯಮಂತ್ರಿ ಆಡಳಿತಕ್ಕೆ 'ಗುಡಿ, ಚರ್ಚ್ ಮಸೀದಿಗಳ ಬಿಟ್ಟು ಹೊರಬನ್ನಿ, ಬಡತನವ ಬುಡಮಟ್ಟ ಕೀಳಬನ್ನಿ, ಮೌಢ್ಯತೆಯ ಮಾರಿಯನು ಹೊರದೂಡಲೆನ್ನಿ, ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ' ಎಂಬ ಕುವೆಂಪು ಅವರ ಕವನದ ನಾಲ್ಕು ವಾಕ್ಯಗಳು ದಾರಿದೀಪವಾಗಲಿ ಎಂದು ಹಾರೈಸಬಹುದು ಅಷ್ಟೆ.



ವಾಚಕರ ವಾಣಿ

ಖಾತೆಗಾಗಿ ಕ್ಯಾತೆ: ಜನಸೇವಕರ ಲಕ್ಷಣವೆ?

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಂಪುಟದಲ್ಲಿ ಸಚಿವರಿಂದ ಖಾತೆಗಾಗಿ ಕ್ಯಾತೆ ಶುರುವಾಗಿದೆ. ಈ ಬೆಳವಣಿಗೆಯು ಶಾಸಕರನ್ನು ಚುನಾಯಿಸಿದ ಜನರನ್ನು ನಗೆಪಾಟಲಿಗೀಡು ಮಾಡಿದೆ. ಸಚಿವರಾದವರು ನಮಗೆ ಇಂತಹದ್ದೇ ಖಾತೆ ಬೇಕೆಂದು ಬೇಡಿಕೆ ಮಂಡಿಸುವುದು ಜನಸೇವಕರ ಲಕ್ಷಣವಲ್ಲ. ಯಾವುದೇ ಖಾತೆ ಕೊಟ್ಟರೂ ಸಮರ್ಥವಾಗಿ ನಿಭಾಯಿಸುವುದು ಅವರ ಗುರಿಯಾಗಿರಬೇಕು. ರಾಮಲಿಂಗಾರೆಡ್ಡಿ ಅವರು ತಮ್ಮಿಷ್ಟದ ಬೆಂಗಳೂರು ಅಭಿವೃದ್ಧಿ ಖಾತೆ ಸಿಗಲಿಲ್ಲವೆಂಬ ಕಾರಣಕ್ಕೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರ ಈ ವರ್ತನೆ ಗಮನಿಸಿದರೆ ಮುಖ್ಯಮಂತ್ರಿಯ ಪರಮಾಧಿಕಾರದ ಮೇಲೆ ಗದಾಪ್ರಹಾರ ಆದಂತಿದೆ.

ವಿ.ಜಿ. ಇನಾಮದಾರ, ಸಾರವಾಡ

ಕನ್ನಡ ಕಣ್ಮಣಿಗಳಿಗೆ ನ್ಯಾಯ ದೊರೆಯಲಿ

'ಭಾಷಾಕ್ರೌರ್ಯದಿಂದ ಶಿಕ್ಷಣ ಶಿಕ್ಷೆ!' ಲೇಖನವು (ಲೇ: ಜಿ.ಎಸ್. ಜಯದೇವ, ಪ್ರ.ವಾ., ಜೂನ್ 4) ಹೃದಯಸ್ಪರ್ಶಿಯಾಗಿದೆ. ಕನ್ನಡದ ಮಕ್ಕಳಿಗೆ, ವಿಶೇಷವಾಗಿ ಗ್ರಾಮೀಣ ಭಾಗದ ಮಕ್ಕಳಿಗೆ ಅವರ ಮಾತೃಭಾಷೆಯಲ್ಲಿ, ಪರಿಸರದ ಭಾಷೆಯಲ್ಲಿ ಕಲಿಸಿದರೆ ಸರಳವಾಗಿ ತಿಳಿಯುತ್ತದೆ. ತಿಳಿದರೆ ಸಂತೋಷಪಡುತ್ತಾರೆ; ತಪ್ಪದೆ ಶಾಲೆಗೂ ಬರುತ್ತಾರೆ. ಸರಳವಾಗಿ ಕಲಿಸಿದ ಗುರುಗಳನ್ನು ಪ್ರೀತಿಸುತ್ತಾರೆ. ಜಗತ್ತಿನಲ್ಲಿ ಹೊಸ ಹೆಜ್ಜೆ ಇಡುವವರಿಗೆ ಪರಭಾಷೆಯಾದ ಇಂಗ್ಲಿಷ್ ಬಗ್ಗೆ ಅವರಿಗೇನು ಗೊತ್ತು? ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತರೆ ಹಣದ ಗಳಿಕೆ ಸಾಧ್ಯವೆಂಬ ಭ್ರಮೆಯಲ್ಲಿ ಮಗುವಿನ ಆತ್ಮವಿಶ್ವಾಸ, ವಿದ್ಯಾರ್ಜನೆಯಲ್ಲಿನ ಆನಂದವನ್ನು ಬಲಿಗೊಡುತ್ತಾರೆ. ಚಿಂತಕರ ವಾದಗಳನ್ನು ಗೌರವಿಸಿ, ಅನುಸರಿಸಿದರೆ ಕನ್ನಡದ ಮಕ್ಕಳಿಗೆ ನ್ಯಾಯ ದೊರೆಕೀತು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಪುಸ್ತಕ ಖರೀದಿಗೆ ಹತ್ತಾರು ತೊಡಕು

ಈಗ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವಿವಿಧ ವಲಯಗಳಿಂದ ಪುಸ್ತಕಗಳ ಖರೀದಿ ಆರಂಭಿಸಲಾಗಿದೆ. ಈ ಖರೀದಿ ವ್ಯವಸ್ಥೆಯು ಏಕಗವಾಕ್ಷಿ ಖರೀದಿಯಂತಿಲ್ಲ. ವಲಯವಾರು ಪುಸ್ತಕ ಖರೀದಿ ಆರಂಭವಾಗಿರುವುದನ್ನು ಲೇಖಕರೇ ಆಗಾಗ್ಗೆ ಮೊಬೈಲ್ ಕರೆ ಮಾಡಿ ತಿಳಿದುಕೊಂಡು, ಎಷ್ಟು ಪ್ರತಿ ಸರಬರಾಜು ಮಾಡಬೇಕೆಂದು ಕೇಳಿಕೊಂಡು ಗ್ರಂಥಪಾಲಕರಿಗೆ ಅರ್ಜಿ ಸಲ್ಲಿಸಬೇಕು. ಲೇಖಕರೇ ಹೋಗಿ ಆದೇಶ ಪ್ರತಿ ಪಡೆಯಬೇಕು. ಬಿಲ್ ಜೊತೆಯಲ್ಲಿ ಇತರ ಏನು ದಾಖಲೆ ಕೊಡಬೇಕು ಎಂಬ ವಿವರ ಇರುವುದಿಲ್ಲ. ಈ ಅಡೆತಡೆ ದಾಟಿ ಪುಸ್ತಕ ಸರಬರಾಜು ಮಾಡುವುದು ಶ್ರಮದ ಹಾಗೂ ಹೆಚ್ಚು ಸಮಯ ಬಯಸುವ ಕೆಲಸ. ಇದನ್ನು ತಡೆಗಟ್ಟಿ ಸರಬರಾಜು ಪ್ರಕ್ರಿಯೆ ಸುಲಭವಾಗಲು ಗ್ರಂಥಾಲಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದರೆ ಲೇಖಕರು ಇದನ್ನು ಒಂದೇ ಗುಕ್ಕಿನಲ್ಲಿ ಸ್ವೀಕರಿಸಿ, ವಲಯ ಕಚೇರಿಗೆ ಪುಸ್ತಕ ಸರಬರಾಜಿಗೆ ಅನುಕೂಲವಾಗಲಿದೆ.

ಸತ್ಯಬೋಧ, ಬೆಂಗಳೂರು

ಯುವಕ್ರಾಂತಿ: ಭಾರತ್ ಜೋಡೋ ಮದ್ದು

ಯುವಜನರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 'ಭಾರತ್ ಜೋಡೋ ಯುವಕರ ಸಂಘ' ರಚನೆಗೆ ಆದ್ಯತೆ ನೀಡಿರುವ ಸರ್ಕಾರದ ಕ್ರಮ ಸ್ವಾಗತಾರ್ಹ. ಈ ಯೋಜನೆಯು ಗ್ರಾಮೀಣ ಯುವಜನರಲ್ಲಿ ನಾಯಕತ್ವದ ಗುಣ ಬೆಳೆಸಲಿದೆ; ಸಾಮಾಜಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಯುವಜನರು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಹಕಾರಿಯಾಗಲಿದೆ. ಆದರೆ, ಹಿಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು 'ಸ್ವಾಮಿ ವಿವೇಕಾನಂದ ಯುವಜನ ಸಬಲೀಕರಣ ಯೋಜನೆ' ಆರಂಭಿಸಿತ್ತು. ಇದು ಅರ್ಧದಲ್ಲೇ ಸ್ಥಗಿತಗೊಂಡಿತು. ಇದರಿಂದ ಅನೇಕ ಯುವಜನರಿಗೆ ನಿರಾಸೆಯಾಯಿತು. ಭಾರತ್ ಜೋಡೋ ಯುವಕರ ಸಂಘ ಯೋಜನೆಯು ಘೋಷಣೆಗೆ ಸೀಮಿತವಾಗಬಾರದು. ಪಂಚಾಯಿತಿಗಳಲ್ಲಿ ನಿರಂತರವಾಗಿ ಮುಂದುವರಿಯಬೇಕು. ಯುವಜನರ ಅಭಿವೃದ್ಧಿ, ಸಮಾಜಮುಖಿ ಚಟುವಟಿಕೆಗಳಿಗೆ ಈ ಯೋಜನೆ ನೆರವಾಗಲಿ.

ಅಭಿಲಾಷ್ ಎಂ., ದಾವಣಗೆರೆ

ಜಾತಿಗಿಂತ ಸಾಮರ್ಥ್ಯಕ್ಕೆ ಆದ್ಯತೆ ಸಿಗಬೇಕು

ಪ್ರಜಾಪ್ರಭುತ್ವದಲ್ಲಿ ಎಲ್ಲ ಸಮುದಾಯಗಳಿಗೂ ಪ್ರಾತಿನಿಧ್ಯ ದೊರೆಯಬೇಕು. ಆದರೆ,ಸಚಿವ ಸ್ಥಾನಗಳ ಹಂಚಿಕೆಯು ಜಾತಿ ಲೆಕ್ಕಾಚಾರದ ಮೇಲೆ ನಡೆಯುವುದು ಸರಿಯಲ್ಲ. ಯಾವುದೇ, ಸಚಿವ ಸಂಪುಟ ರಚನೆಯಾದರೂ, 'ನಮ್ಮ ಜಾತಿಗೆ ಎಷ್ಟು ಸ್ಥಾನ ಸಿಕ್ಕಿದೆ?' ಎಂಬ ಪ್ರಶ್ನೆಯೇ ಹೆಚ್ಚಾಗಿ ಕೇಳಿಬರುತ್ತದೆ. ಯಾರು ಉತ್ತಮವಾಗಿ ಕೆಲಸ ಮಾಡಬಲ್ಲರು? ಎಂಬ ಪ್ರಶ್ನೆ ಹಿನ್ನೆಲೆಗೆ ಸರಿಯುತ್ತಿದೆ. ಸಚಿವ ಸ್ಥಾನವು ಒಂದು ಸಮುದಾಯದ ಪ್ರತಿಷ್ಠೆಯ ಸಂಕೇತವಾಗುವುದಕ್ಕಿಂತ, ಜನಸೇವೆಯ ಜವಾಬ್ದಾರಿಯುತ ಸ್ಥಾನವಾಗಬೇಕು. ಕೃಷಿ ಇಲಾಖೆಗೆ ಅನ್ನದಾತರ ಸಮಸ್ಯೆ ಅರಿತವರು, ಶಿಕ್ಷಣ ಇಲಾಖೆಗೆ ಶಿಕ್ಷಣ ಕ್ಷೇತ್ರದ ತಿಳಿವಳಿಕೆ ಇರುವವರು, ಆರೋಗ್ಯ ಇಲಾಖೆಗೆ ಆ ಕ್ಷೇತ್ರದ ಅರಿವು ಹೊಂದಿರುವವರು ಬಂದರೆ ಜನರಿಗೆ ಹೆಚ್ಚಿನ ಪ್ರಯೋಜನವಾದೀತು. ರಾಜಕೀಯ ಪಕ್ಷಗಳು ಸಾಮಾಜಿಕ ಸಮತೋಲನ ಕಾಪಾಡುವುದರ ಜೊತೆಗೆ, ಅರ್ಹತೆ, ಕಾರ್ಯಕ್ಷಮತೆಯನ್ನೂ ಪರಿಗಣಿಸಬೇಕು.

ಸಿದ್ದು ಸಿ. ಮೈದೊಳಲು, ಶಿವಮೊಗ್ಗ

ಗಿಡ ನೆಟ್ಟರೆ ಸಾಲದು; ಪೋಷಣೆ ಬೇಕು

ಪ್ರತಿವರ್ಷ ಜೂನ್ 5ರಂದು ವಿಶ್ವ ಪರಿಸರ ದಿನಾಚರಣೆಯ ನಿಮಿತ್ತ ರಾಜ್ಯದ ಶಾಲಾಕಾಲೇಜು, ಸರ್ಕಾರಿ ಕಚೇರಿಗಳು, ಸಂಘ–ಸಂಸ್ಥೆಗಳು ಸೇರಿದಂತೆ ವಿವಿಧೆಡೆ ಸಸಿಗಳನ್ನು ನೆಡಲಾಗುತ್ತದೆ. ಆ ಸಂಭ್ರಮವು ಸೆಲ್ಫಿಯೊಂದಿಗೆ ಮುಗಿದುಹೋಗುತ್ತದೆ. ಫೋಟೊಕ್ಕಾಗಿ ಸಸಿ ನೆಟ್ಟು ಪ್ರಚಾರ ಪಡೆಯುವ ಗೀಳು ಹಲವರಲ್ಲಿದೆ. ಗಿಡ ನೆಡುವುದು ಪರಿಸರ ದಿನಾಚರಣೆಗಷ್ಟೇ ಸೀಮಿತವಾಗಬಾರದು. ನೆಟ್ಟ ಗಿಡಕ್ಕೆ ಒಂದಷ್ಟು ತಿಂಗಳು ನೀರೆರೆದು ಪೋಷಿಸಬೇಕಿದೆ. ಪ್ರತಿಯೊಂದು ಗಿಡಕ್ಕೂ ಪೋಷಣೆಯ ಜೊತೆಗೆ ರಕ್ಷಣೆಯೂ ಬೇಕಿದೆ. ಆಗಷ್ಟೇ ಪರಿಸರ ದಿನದ ಆಚರಣೆಯು ಸಾರ್ಥಕವಾಗಲಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಚುರುಮುರಿ



ಕೇಶಿರಾಜರ ಒಡ್ಡೋಲಗ!

● ತುರುವೇಕೆರೆ ಪ್ರಸಾದ್

ಕೇಶೀರಾಜರು ಚಕ್ರಾಧಿಪತಿಗಳಾದ ಖುಷಿಯಲ್ಲಿ ಒಡ್ಡೋಲಗ ನಡೆಯುತ್ತಿತ್ತು. 'ಅಣ್ಣ, ಮುಂದೆ ಏನ್ ಯೋಚ್ನೆ ಮಾಡಿದೀರ?' ಸಿಬಿರೆಬ್ಬಿತು ಸೀಗಡಿ ಬಾಲಣ್ಣ.

'ಅಳಿದುಳಿದ ಖಾತೆಗಳನ್ನು ಹಂಚೋದೇ ಶಾನೆ ತಲೆನೋವಿನ ಕೆಲಸ ಆಗೋಗದೆ'.

'ಗುಮ್ಮೋ ಟಗರನ್ನ ಎದುರಾಕ್ಕಂಡು ನೀವೇ ಚಕ್ರಾಧಿಪತಿ ಆಗ್ಬೇಕು ಅಂತ ಇದ್ದಬದ್ದ ಚಾನಲ್ಲಲ್ಲೆಲ್ಲಾ ಯೋಳಿದ್ವಿ. ನೀವೇ ನಮ್ಗೆ ನೋಟಿಸೂ ಕೊಟ್ಟು ತೆಪ್ಪಗೆ ಬಾಯ್ ಮುಚ್ಕಂಡಿರಿ ಅಂತ ಯೋಳಿದ್ರಲ್ಲಣ್ಣ. ಈಗಲಾದ್ರೂ ನಮ್ಗೆ ಒಂದು ಚಾನ್ಸ್ ಕೊಡಣ್ಣ' ಕೇಳಿತು ರಾಮನಗರ ಫೈರ್‌ಬಾಲು!

'ಅದೆಂಗ್ಲಾ ಆಯ್ತದೆ? ಹಳಬ್ರುಗೆ ಜಾಗ ಕೊಡ್ಬೇಡ್ವಾ?'

'ಅವರ್ಗೆಲ್ಲಾ ಯಾಕಣ್ಣ ಮಂತ್ರಿಗಿರಿ ಕೊಡ್ಬೇಕು? ದರ್ಬಾರಿರಲಿ, ನೆಟ್ಟಗೆ ಡಿನ್ನರೇ ಮಾಡಕ್ಕಾಗದೆ ಪಥ್ಯದಲ್ಲವ್ರೆ. ಅವರೇನು ನುಂಗಿಯಾರು?' ಕೇಳಿತು ಶಿವಬಸಣ್ಣೆ.

'ಅದೂ ಅಲ್ದೆ ಮನಸ್ಸಾಕ್ಷಿಗೆ ವಂಚನೆ ಮಾಡ್ಕಂಡು, ನಡೀರಿ ನಡೀರಿ ಯಾವ ಒಪ್ಪಂದ ಅಂತ ಗುರುಗಟ್ತಿದ್ರಲ್ಲ... ಸಿಎಂ ಸೀಟೇನು ಇವರಪ್ಪಂದಾ? ಈ ದ್ರೋಹಿಗಳ್ಗೆಲ್ಲ ಯಾಕಣ್ಣ ಮಂತ್ರಿಗಿರಿ ಕೊಡ್ಬೇಕು?'

'ವ್ರೂ ಕಣಣ್ಣ, ನಿನ್ ಟೆಂಪಲ್ ರನ್ ಗೇಲಿ ಮಾಡ್ಕಂಡು ಐದು ವರ್ಷಾನೂ ಟಗರೇ ಸಿಎಂ ಅಂತ ಬಫೂನ್ ತರ ಕುಣ್ದೋರಿಗೆ ಮತ್ಯಾಕಣ್ಣ ಮಣೆ ಹಾಕ್ತೀಯ?' ಎಂದು ಪ್ರಶ್ನೆ ಹಾಕಿತು ಲಕ್ಷ್ಮಮ್ಮಣ್ಣಿ.

'ಆ ಬಣ, ಈ ಬಣ, ಸಮನ್ವಯ, ಮಣ್ಣುಮಸಿ ಎಲ್ಲಾ ನೋಡ್ಬೇಕಾಯ್ತದೆ. ಇಲ್ಲ ಅಂದ್ರೆ ಕೋರ್ ಕಮಿಟಿ ಮಾಡುಸ್ತಾರೆ'.

'ಸುಮ್ಕಿರಣ್ಣ, ನಿಂದು ಡೋಂಟ್ ಕೇರ್ ಕಮಿಟಿ ಅಂತ ಎಲ್ರಿಗೂ ಗೊತ್ತದೆ. ಒದ್ದು ತಗಳೋ ತಾಕತ್ತಿರೋ ನೀನು ಒದ್ದು ವರಗೂ ಆಕ್ಬೇಕಣ್ಣ' ಚೆಲುವಯ್ಯ ತಾನಿ ತಂದಾನ ಅಂತು.

'ಲೇಯ್, ಬಾಂಬುಗಳು ನಮ್ ತವಾನೇ ಇರ್ಬೇಕು! ಆಚೆ ಹೋದ್ರೆ ಎಲ್ಲಂದ್ರಲ್ಲಿ ನಮ್ಮೇಲೆ ಸಿಡೀತಾವೆ. ಇವರಿಗೆಲ್ಲಾ ಖಾತೆ ಕೊಟ್ಟ ಶಾಸ್ತ್ರ ಮಾಡಿ ಕೈ ಕಟ್ ಹಾಕ್ಬೇಕು ಕಣ್ರಲಾ' ಎಂದು ನಕ್ಕರು ಕೇಶೀರಾಜರು. ಎಲ್ಲರೂ 'ಬಂಡೆಮಹಾರಾಜರಿಗೆ ಜೈ' ಎಂದು ಕೂಗಿದರು.

ಸಂಗತ

ವರ್ತಮಾನ ಮತ್ತು ಅರಸು 'ಅಪೂರ್ವ ಕಥನ'

ರಾಜಕಾರಣ ಮತ್ತು ಉದ್ಯಮದ ನಡುವಣ ಗೆರೆ ಅಳಿಸಿಹೋಗುತ್ತಿರುವ ದಿನಗಳಲ್ಲಿ ದೇವರಾಜ ಅರಸು ಅವರ ಜನಪರ ರಾಜಕಾರಣ ಮತ್ತೆ ಮುನ್ನೆಲೆಗೆ ಬರಬೇಕಾಗಿದೆ.


● ಎಚ್. ವಿಶ್ವನಾಥ್



ದೇವರಾಜ ಅರಸು ಅವರು ಮೈಸೂರು ಪ್ರಾಂತ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದ ಪುಣ್ಯಪುರುಷ. ನಾಡಿನ ಮುಖ್ಯಮಂತ್ರಿಯಾಗಿ ಸಾರ್ವಜನಿಕ, ಶೈಕ್ಷಣಿಕ ಮತ್ತು ರಾಜಕೀಯ ಸುಧಾರಣೆಗಳನ್ನು ದೊಡ್ಡ ಮಟ್ಟದಲ್ಲಿ ತಂದಂತಹ ಸಾಮಾಜಿಕ ನ್ಯಾಯದ ಹರಿಕಾರ. ಪ್ರಸ್ತುತ ಸರ್ಕಾರದ ನಾಯಕರುಗಳಾದ ನಾವು 'ಐದು ಕೆ.ಜಿ ಅಕ್ಕಿ ಉಚಿತ ಕೊಡುತ್ತಿದ್ದೇವೆ' ಎಂದು ಹೇಳುವ ನಾಯಕರುಗಳಾಗಿದ್ದೇವೆ. ಅರಸು ಅವರು ಭೂಸುಧಾರಣೆಯ ಮೂಲಕ ನಾಡಿನ ರೈತರಿಗೆ 21 ಲಕ್ಷ ಎಕರೆ ಭೂಮಿಯನ್ನು ಕೊಟ್ಟವರು; 'ಈ ಭೂಮಿ ನಿಮ್ಮದೇ. ವಂಶಪಾರಂಪರ್ಯವಾಗಿ ಉಳುಮೆ ಮಾಡಿ ಅನುಭವಿಸಿ' ಎಂದವರು.

1978ರಲ್ಲಿ ಅರಸು ಅವರ ಕೃಪೆಯಿಂದ ನಾನು ಮೊದಲ ಬಾರಿಗೆ ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರದಿಂದ ಶಾಸಕನಾಗಿ ಆಯ್ಕೆಯಾಗಿದ್ದೆ. ಒಂದು ದಿನ ದಾವಣಗೆರೆಯ ಶಾಮನೂರು ಶಿವಶಂಕರಪ್ಪರವರು ಕೃಷ್ಣರಾಜನಗರದ ನಮ್ಮ ಮನೆಗೆ ಬಂದರು. ಅವರು ತಮ್ಮ ಪರಿಚಯ ಮಾಡಿಕೊಂಡು, 'ನಮ್ಮ ದಾವಣಗೆರೆಯ ಶಾಸಕರಾಗಿದ್ದ ಪಂಪಾಪತಿಯವರ ಅಕಾಲಿಕ ಮರಣದ ಕಾರಣದಿಂದ ಉಪ ಚುನಾವಣೆ ಘೋಷಣೆಯಾಗಿದೆ. ನಾನು ಸ್ಪರ್ಧಿಸಲು ಬಯಸಿದ್ದೇನೆ. ದಯಮಾಡಿ ನೀವು ನನ್ನೊಡನೆ ಬೆಂಗಳೂರಿಗೆ ಬಂದು, ಅರಸು ಅವರನ್ನು ಕಂಡು ಮಾತನಾಡಬೇಕು' ಎಂದರು. 'ನಾನು ಅಷ್ಟು ದೊಡ್ಡವನಲ್ಲ' ಎಂದು ಹೇಳಿದರೂ ಅವರು ಪಟ್ಟುಬಿಡಲಿಲ್ಲ. ನನ್ನನ್ನು ಬೆಂಗಳೂರಿನ ಅರಸು ಅವರ ಸರ್ಕಾರಿ ನಿವಾಸಕ್ಕೆ ಕರೆದುಕೊಂಡು ಬಂದರು.

ಅರಸು ಅವರನ್ನು ಕಂಡು, ದಾವಣಗೆರೆಯ ಉಪ ಚುನಾವಣೆಗೆ ಶಾಮನೂರು ಶಿವಶಂಕರಪ್ಪ ಅವರನ್ನು ಕಾಂಗ್ರೆಸ್ ಅಭ್ಯರ್ಥಿ ಮಾಡಬೇಕೆಂದು ವಿನಂತಿ ಮಾಡಿಕೊಂಡೆ. ಅರಸು ಅವರು ಆಶ್ಚರ್ಯದಿಂದ ನನ್ನ ಕಡೆ ನೋಡುತ್ತಾ, 'ಭೇಷ್! ಚುನಾವಣೆಗೆ ಅಭ್ಯರ್ಥಿಯನ್ನು ಶಿಫಾರಸು ಮಾಡಲು ಬಂದಿದ್ದೀರಿ' ಎಂದು ಉದ್ಗರಿಸಿ, ಕುಳಿತುಕೊಳ್ಳಲು ಹೇಳಿದರು. ಶಾಮನೂರು ಶಿವಶಂಕರಪ್ಪ ಅವರಿಗೆ 'ನೀವು ಕೆಳಗೆ ಕುಳಿತಿರಿ, ವಿಶ್ವನಾಥ್ ಬರುತ್ತಾರೆ' ಎಂದು ಕೆಳಗೆ ಕಳಿಸಿದರು. ನನ್ನನ್ನು ಉದ್ದೇಶಿಸಿ, "ನೀವುಗಳು ಮುಂದಿನ ದಿನಗಳಲ್ಲಿ ನಾಯಕರುಗಳಾಗಿ ಬೆಳೆಯುವವರು. ನಿಮಗೆ ಒಂದು ಪ್ರಸಂಗವನ್ನು ಹೇಳುತ್ತೇನೆ. ಮುಂದೆ ಇಂತಹವೆಲ್ಲ ನಿಮಗೆ ಬೇಕಾಗುತ್ತದೆ. ಈ ಶಾಮನೂರು ಅವರನ್ನು ಬೆಳೆಸಿದವನು ನಾನೇ. ಲಿಂಗಾಯತರಲ್ಲಿ ಇವರ ಉಪ ಪಂಗಡ ನನಗೆ ರಾಜಕೀಯವಾಗಿ ಬೇಕಾಗಿತ್ತು, ಹಾಗಾಗಿ ಅವರನ್ನು ಬೆಳೆಸುತ್ತಿದ್ದೇನೆ. ಇವರಿಗೆ ಶಾಲಾಕಾಲೇಜು, ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜು, ಎಲ್ಲವನ್ನೂ ಕೊಟ್ಟು ಆರ್ಥಿಕವಾಗಿ ಬಲಗೊಳಿಸಿದ್ದೇನೆ" ಎಂದರು. ನಂತರ ಸ್ವಾತಂತ್ರ್ಯ ನಂತರದ ಒಂದು ಘಟನೆ ಹಂಚಿಕೊಂಡರು. ಆ ಘಟನೆ ಹೀಗಿದೆ:



"ಸ್ವಾತಂತ್ರ್ಯಾನಂತರ 1952ರಲ್ಲಿ ನಡೆದ ಮೊದಲ ಪಾರ್ಲಿಮೆಂಟ್ ಚುನಾವಣೆ ಸಂದರ್ಭ. ನೆಹರೂ ಅವರನ್ನು ಭೇಟಿ ಮಾಡಿದ ಉದ್ಯಮಿಗಳಾದ ಟಾಟಾ ಮತ್ತು ಬಿರ್ಲಾ, 'ನಾವು ಸ್ವಾತಂತ್ರ್ಯ ಚಳವಳಿಗೆ ಗಾಂಧೀಜಿಯವರ ಮೂಲಕ ಆರ್ಥಿಕ ಸಹಾಯ ಮಾಡಿದ್ದೇವೆ. ಹಾಗಾಗಿ ನಾವು ಕೂಡ ದೇಶದ ಆಡಳಿತದ ಭಾಗವಾಗಬೇಕು. ನಮಗೆ ಪಾರ್ಲಿಮೆಂಟ್‌ನ ಒಂದಷ್ಟು ಸ್ಥಾನಗಳನ್ನು ಬಿಟ್ಟು ಕೊಡಬೇಕು ಎಂದು ಬೇಡಿಕೆ ಸಲ್ಲಿಸಿದರು. ಅದಕ್ಕೆ ನೆಹರೂ, 'ಹೌದು, ನಿಮ್ಮ ಸಹಾಯ ಸ್ಮರಣೀಯ. ಬ್ರಿಟಿಷರಿಂದ ಬಿಡುಗಡೆಯಾದ ಜರ್ಜರಿತ ಭಾರತವನ್ನು ಕಟ್ಟಬೇಕಾದ ಕಾಲವಿದು. ವಿಶ್ವವಿದ್ಯಾಲಯಗಳು, ಕೈಗಾರಿಕೆಗಳು, ವಾಹನಗಳು, ನೀರಾವರಿ ಯೋಜನೆಗಳು ಮುಂತಾದ ಅವಶ್ಯಕ ಕ್ಷೇತ್ರಗಳನ್ನು ಕಟ್ಟುವ ಕೆಲಸವನ್ನು ನಿಮ್ಮ ಕೈಗೆ ಕೊಡುತ್ತೇನೆ. ಆ ಉದ್ಯಮ ಚಟುವಟಿಕೆಗಳಿಗೆ ಅಗತ್ಯ ಪರವಾನಗಿಯನ್ನೂ ಕೊಡುತ್ತೇನೆ. ಆದರೆ, ಸದ್ಯದ ಸ್ಥಿತಿಯಲ್ಲಿ ನಿಮ್ಮನ್ನು ರಾಜಕೀಯ ಮತ್ತು ಆಡಳಿತದೊಳಕ್ಕೆ ಬಿಟ್ಟುಕೊಳ್ಳಲು ಸಾಧ್ಯವಿಲ್ಲ. ನಂತರದ ದಿನಗಳಲ್ಲಿ ನೋಡೋಣ' ಎಂದರು. 'ಯಾಕಾಗಿ ರಾಜಕೀಯ ಮತ್ತು ಆಡಳಿತದಲ್ಲಿ ನಮ್ಮ ಪ್ರವೇಶ ಸಾಧ್ಯವಿಲ್ಲ' ಎನ್ನುವ ಪ್ರಶ್ನೆಗೆ ನೆಹರೂ, 'The Political Power and The Money Power Shouldn't sail Together, It is Dangerous to Democracy' ಎಂದು ಉತ್ತರಿಸಿದರು".

ರಾಜಕೀಯ ಶಕ್ತಿ ಮತ್ತು ಹಣಬಲದ ಶಕ್ತಿ ಒಟ್ಟಿಗೆ ಸಾಗಿದರೆ ಅದು ಜನತಂತ್ರ ವ್ಯವಸ್ಥೆಗೆ ಮಾರಕ ಎನ್ನುವ ನೆಹರೂ ಅವರ ದೂರದರ್ಶಿತ್ವದ ಮಾತು ಇಂದು ಸತ್ಯವಾಗಿದೆ. ಇಂದು ರಾಜಕಾರಣಿಗಳು, ಸರ್ಕಾರ, ಅಧಿಕಾರಶಾಹಿ ಹಾಗೂ ಉದ್ಯಮಗಳು ವಾಸ್ತವ ಜಗತ್ತನ್ನು ಮರೆಮಾಚುತ್ತಾ ದುಡ್ಡಿನ ಹಿಂದೆಬಿದ್ದಿವೆ. ಮತದಾರರನ್ನು ನಾವೇ ಭ್ರಷ್ಟರನ್ನಾಗಿಸುತ್ತಿದ್ದೇವೆ.

2013ರಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿಗಳು ಲೋಕಾಯುಕ್ತವನ್ನೇ ಮುಚ್ಚಲಿಲ್ಲವೆ? ಗುಜರಾತಿನಲ್ಲಿ ಮೋದಿಯವರು ಲೋಕಾಯುಕ್ತದ ಬಾಗಿಲು ತೆರೆಯಲು ಎಷ್ಟು ವರ್ಷ ತೆಗೆದುಕೊಂಡರು?

ಇಂದು (ಜೂನ್ 6) ದೇವರಾಜ ಅರಸು ಅವರ ಪುಣ್ಯಸ್ಮರಣೆ. ಅರಸು ಅವರು ಅಂದು ಹೇಳಿದ ಪ್ರಸಂಗ ಇಂದೂ ನನ್ನ ಹೃದಯದಲ್ಲಿ ಹಸಿರಾಗಿದೆ. ಇದು ನಮ್ಮ ಯುವ ರಾಜಕಾರಣಿಗಳಿಗೆ ಒಂದು ಪಾಠ. ಜಿರಲೆಗಳು ಭ್ರಷ್ಟ ವ್ಯವಸ್ಥೆಯನ್ನು ಕಚ್ಚುತ್ತಿವೆ. ತಮಿಳುನಾಡಿನ ಇತ್ತೀಚಿನ ಚುನಾವಣಾ ಫಲಿತಾಂಶಗಳು ಮರುಕಳಿಸುತ್ತವೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

To know more about The Printers (Mysore) Private Ltd, visit www.printersmysore.com.

ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಮಾತು

ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ದೀರ್ಘಕಾಲದ ರಾಜಕೀಯ ಅನುಭವ ಅವರದು. 'ಅಹಿಂದ' ನಾಯಕರಾದ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ, ಹಿಂದುಳಿದ ಸಮುದಾಯದ ನಾಯಕರಾದ ಹರಿಪ್ರಸಾದ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಪಕ್ಷದ ಜವಾಬ್ದಾರಿ ನೀಡಿದೆ. ಅವರ ಜೊತೆಗಿನ ಮಾತುಕತೆಯ ಆಯ್ದ ಭಾಗ ಇಲ್ಲಿದೆ

ಅಧಿಕಾರಕ್ಕಿಂತ ಸಿದ್ಧಾಂತ, ಹುದ್ದೆಗಿಂತ ಜನಹಿತ ದೊಡ್ಡದು

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ಸಂದರ್ಶನ

• ಕೆಪಿಸಿಸಿ ಸಾರಥ್ಯ ನಿಮಗೆ ಒಲಿದಿದೆ. ಕಾಂಗ್ರೆಸ್ ಕೇಂದ್ರ ನಾಯಕತ್ವದ ಈ ನಿರ್ಧಾರವನ್ನು ಹೇಗೆ ವಿಶ್ಲೇಷಿಸುತ್ತೀರಿ?

ಕೇರಳಂ ಚುನಾವಣೆಯಲ್ಲಿ ಗೆದ್ದ ನಂತರ ಕರ್ನಾಟಕ ಕಡೆಗೆ ಗಮನಹರಿಸಿದ ಪಕ್ಷದ ವರಿಷ್ಠರು, ಇಲ್ಲಿ 'ಅಧಿಕಾರ ಹಸ್ತಾಂತರ' ಪ್ರಕ್ರಿಯೆಯನ್ನು ಗೊಂದಲಗಳಿಲ್ಲದೆ ಪೂರ್ಣಗೊಳಿಸಿದ್ದಾರೆ. ಜೊತೆಗೆ, ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸುವ ಜವಾಬ್ದಾರಿಯನ್ನು ನನ್ನ ಮೇಲೆ ಪ್ರೀತಿ, ವಿಶ್ವಾಸ, ನಂಬಿಕೆಯಿಟ್ಟು ನೀಡಿದ್ದಾರೆ. ಎಲ್ಲರಿಗೂ ಅವಕಾಶ ಕೊಡಬೇಕು, 2028ರ ವೇಳೆಗೆ ಪಕ್ಷಕ್ಕೆ ಹೊಸ ವರ್ಚಸ್ಸು ತುಂಬಬೇಕು ಎಂಬ ಉದ್ದೇಶದಿಂದ ಈ ತೀರ್ಮಾನಕ್ಕೆ ವರಿಷ್ಠರು ಬಂದಿರಬಹುದು. ಪಕ್ಷದ ಈ ನಿರ್ಧಾರವು ಒಬ್ಬ ವ್ಯಕ್ತಿಗೆ ನೀಡಿರುವ ಹುದ್ದೆಯಲ್ಲ; ಕಾಂಗ್ರೆಸ್‌ನ ಮೂಲ ಸಿದ್ಧಾಂತಗಳಾದ ಸಾಮಾಜಿಕ ನ್ಯಾಯ, ಜಾತ್ಯತೀತ ತತ್ವ, ಪ್ರಜಾಪ್ರಭುತ್ವ, ಸಂವಿಧಾನ ಪರ ಮತ್ತು ದುರ್ಬಲ ವರ್ಗಗಳ ಸಬಲೀಕರಣದ ಪರವಾಗಿರುವ ಸಂದೇಶ ಎಂದೇ ನಾನು ಭಾವಿಸುತ್ತೇನೆ.

• ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಬಹಳಷ್ಟು ಆಕಾಂಕ್ಷಿಗಳಿದ್ದರು. ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದ ನಿಮಗೆ ಈ ಹೊಣೆಗಾರಿಕೆ ಸಮಾಧಾನ ತಂದಿದೆಯೇ?


ಐದು ದಶಕಗಳನ್ನು ಮೀರಿದ ನನ್ನ ರಾಜಕೀಯ ಪಯಣದಲ್ಲಿ ಪಕ್ಷದ ವಿವಿಧ ಹಂತಗಳಲ್ಲಿ ಕೆಲಸ ಮಾಡಿದ್ದೇನೆ. ಆದರೆ, ಎಂದೂ ಯಾವುದೇ ಅಧಿಕಾರದ ಸ್ಥಾನ ಬಯಸಿಲ್ಲ. ಅದಕ್ಕಾಗಿ ರಾಜಕೀಯವನ್ನೂ ಮಾಡಿಲ್ಲ. ಕಾಂಗ್ರೆಸ್ ತತ್ವ, ಸಿದ್ಧಾಂತಗಳ ವಿಚಾರದಲ್ಲಿ ರಾಜಿ ಇಲ್ಲದಂತೆ, ಅದಕ್ಕಾಗಿಯೇ ಜೀವನ ಮುಡುಪಿಟ್ಟಿದ್ದೇನೆ. ಅಧಿಕಾರಕ್ಕಿಂತ ಸಿದ್ಧಾಂತ ದೊಡ್ಡದು, ಹುದ್ದೆಗಿಂತ ಜನರ ಹಿತ ಮುಖ್ಯ ಎಂಬ ನಿಲುವಿನಂತೆ ರಾಜಕೀಯ ಬದುಕು ಕಟ್ಟಿಕೊಂಡಿದ್ದೇನೆ. ನಾನು ಸಂಸದನಾಗಿದ್ದೆ. ಮುಖ್ಯಮಂತ್ರಿ, ಸಚಿವ ಆಗಬೇಕೆಂಬ ಆಕಾಂಕ್ಷಿಯೂ ಅಲ್ಲ. ಆದರೆ, ಇಷ್ಟು ವರ್ಷ ಪಕ್ಷದ ಕೆಲಸ ಮಾಡಿದ್ದೇನೆ. ಇನ್ನೊಬ್ಬರ ಮುಂದೆ ನಗೆಪಾಟಲಿಗೆ ಈಡಾಗಬಾರದು, ಗೌರವಯುತ ಸ್ಥಾನಮಾನ ಕೊಡಿ ಎಂದಷ್ಟೆ ಕೇಳಿದ್ದೆ. ಈ ಸ್ಥಾನ ಸಿಕ್ಕಿದೆ. ಕೆಪಿಸಿಸಿ ಅಧ್ಯಕ್ಷ ಹುದ್ದೆ ವಹಿಸಿಕೊಂಡು ಪಕ್ಷ ಕಟ್ಟುವ ಕಾಯಕವನ್ನು ಒಪ್ಪಿಕೊಂಡಿದ್ದೇನೆ.

• ದೇಶದಾದ್ಯಂತ ಬಿಜೆಪಿ ಪ್ರಬಲವಾಗಿರುವ ಕಾಲದಲ್ಲಿ ಈ ಹೊಣೆ ಸವಾಲಾಗಿದೆಯೇ?

ಖಂಡಿತ. ಸಾಮಾಜಿಕ ಸಾಮರಸ್ಯ ಮತ್ತು ಜಾತ್ಯತೀತ ಮೌಲ್ಯಗಳನ್ನು ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿರುವ ನನಗೆ ಇದೊಂದು ದೊಡ್ಡ ಜವಾಬ್ದಾರಿ–ಸವಾಲು. ಇತ್ತೀಚೆಗೆ ಕರ್ನಾಟಕವಷ್ಟೇ ಅಲ್ಲ, ಇಡೀ ದೇಶದಲ್ಲಿ ದ್ವೇಷ ರಾಜಕಾರಣ, ಧರ್ಮದ ಹೆಸರಿನ ಧ್ರುವೀಕರಣ ಮತ್ತು ಸಂವಿಧಾನ ವಿರೋಧಿ ಪ್ರವೃತ್ತಿಗಳು ಹೆಚ್ಚುತ್ತಿವೆ. ಅದರ ಮೂಲಕವೇ ಬಿಜೆಪಿ ಮತ ಫಸಲು ಪಡೆದು ರಾಜಕಾರಣ ಮಾಡುತ್ತಿದೆ. ನನ್ನ ಪಕ್ಷದ ಸಿದ್ಧಾಂತಬದ್ಧ ಕಾರ್ಯಕರ್ತರ ಬಲದಿಂದ ಬಿಜೆಪಿಯ ಈ ಸವಾಲು ಎದುರಿಸುವ ನಂಬಿಕೆ ನನಗಿದೆ. ಹಿಂದುಳಿದ ವರ್ಗಗಳು, ದಲಿತರು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕರು, ಮಹಿಳೆಯರು ಮತ್ತು ಯುವಜನರ ಆಶೋತ್ತರಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತೆ ಬೂತ್ ಮಟ್ಟದಿಂದ ಸಂಘಟಿಸಿ ಬಲಪಡಿಸಬಹುದು. ರಾಜ್ಯದಲ್ಲಿ ಪಕ್ಷದೊಂದಿಗೆ ಇರುವ ಸಮರ್ಥ ಸೈದ್ಧಾಂತಿಕ ನಾಯಕರು, ಕಾರ್ಯಕರ್ತರು ಕೈಜೋಡಿಸುತ್ತಾರೆ ಎಂಬ ಬಲವಾದ ವಿಶ್ವಾಸ ನನಗಿದೆ.

• ಐದು ದಶಕಗಳನ್ನು ಮೀರಿದ ನಿಮ್ಮ ರಾಜಕೀಯ ಪಯಣ, ಗಾಂಧಿ ಕುಟುಂಬದ ಮೂರು ತಲೆಮಾರುಗಳ ಜೊತೆಗಿನ ನಿಮ್ಮ ಸಂಬಂಧದ ಬಗ್ಗೆ ಹೇಳಿ?

1967ರಲ್ಲಿ ಭಾರತ್ ಸೇವಾದಳದ ಮೂಲಕ ನನ್ನ ಸಂಘಟನೆ, ರಾಜಕೀಯ ಪಯಣ ಆರಂಭಗೊಂಡಿದೆ. ವಿದ್ಯಾರ್ಥಿ ರಾಜಕಾರಣದಿಂದ ರಾಷ್ಟ್ರ ಮಟ್ಟಕ್ಕೆ ಹೋದವನು ನಾನು. ಇಂದಿರಾ ಗಾಂಧಿ ಅವರ ತುರ್ತು ಪರಿಸ್ಥಿತಿಯ ಆಡಳಿತದಿಂದ ಹಿಡಿದು, ರಾಜೀವ್ ಗಾಂಧಿ ಅವರ ಕಾಲದ ತಂತ್ರಜ್ಞಾನ ಕ್ರಾಂತಿ, ರಾಹುಲ್ ಗಾಂಧಿಯವರ ನಾಯಕತ್ವದ ವರೆಗಿನ ರಾಜಕೀಯ ಏಳು-ಬೀಳುಗಳನ್ನು ಹತ್ತಿರದಿಂದ ಕಂಡಿದ್ದೇನೆ. ಅಖಿಲ ಭಾರತ ಯುವ ಕಾಂಗ್ರೆಸ್ ಉಪಾಧ್ಯಕ್ಷ, ಕಾಂಗ್ರೆಸ್ ಸೇವಾದಳದ ಅಧ್ಯಕ್ಷ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಸುದೀರ್ಘ ಕಾಲ ಕೆಲಸ ಮಾಡಿದ್ದೇನೆ. ಪಕ್ಷದ ಸಂಘಟನಾತ್ಮಕ ವಿಭಾಗಗಳಲ್ಲಿ ಹಲವು ಜವಾಬ್ದಾರಿಗಳನ್ನು ನಿಭಾಯಿಸಿದ್ದೇನೆ. ಪಕ್ಷದ ಮೂಲಕ ಇಡೀ ದೇಶದಲ್ಲಿ ಕೆಲಸ ಮಾಡುವ ಅವಕಾಶವನ್ನು ಗಾಂಧಿ ಕುಟುಂಬ ನನಗೆ ನೀಡಿದೆ. 25 ವರ್ಷಕ್ಕೂ ಹೆಚ್ಚು ಕಾಲ ಅಖಿಲ ಭಾರತ ಮಟ್ಟದಲ್ಲಿಯೇ ಕೆಲಸ ಮಾಡಿದ್ದೇನೆ. ಭವ್ಯ ಭಾರತ ದೇಶದ ಪರಿಕಲ್ಪನೆಗೆ ರೂಪು ನೀಡಿದ್ದು, ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್ ಪಕ್ಷ. ಬಿಜೆಪಿಯವರು ಕೇಂದ್ರದಲ್ಲಿ 2014ರಿಂದ ಅಧಿಕಾರಕ್ಕೆ ಬಂದ ಬಳಿಕ ಇಡೀ ದೇಶ ಕವಲು ದಾರಿಯಲ್ಲಿ ನಿಂತಿದೆ. 2020ರಲ್ಲಿ ಪಕ್ಷ ನನ್ನನ್ನು ಕರ್ನಾಟಕ ವಿಧಾನ ಪರಿಷತ್ ಸದಸ್ಯನಾಗಿ ಆಯ್ಕೆ ಮಾಡಿತು. ಬಳಿಕ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಲು ಅವಕಾಶ ನೀಡಿತು. ಆ ಅವಧಿಯಲ್ಲಿ ಆಡಳಿತ ಪಕ್ಷ ಬಿಜೆಪಿಯನ್ನು ಸಮರ್ಥವಾಗಿ ತರಾಟೆಗೆ ತೆಗೆದುಕೊಂಡಿದ್ದೇನೆ.



• ನಿಮ್ಮ ಮುಂದಿರುವ ಸವಾಲುಗಳೇನು?

ಬಿಜೆಪಿಯವರು ಸಾಂವಿಧಾನಿಕ ಸಂಸ್ಥೆಗಳನ್ನು ಅದರ ಒಳಹೊಕ್ಕು, ತಮ್ಮ ಅಂಗವಾಗಿ ಮಾಡಿಕೊಂಡಿದ್ದಾರೆ. ಚುನಾವಣಾ ಆಯೋಗ, ಇ.ಡಿ, ಸಿಬಿಐ, ಐಟಿ ಇವೆಲ್ಲವನ್ನೂ ಮೀರಿ ಕೆಲಸ ಮಾಡಬೇಕಾದ ಸವಾಲಿದೆ. ಈಗ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಮೂಲಕ ನೈಜ ಮತದಾರರನ್ನು ಪಟ್ಟಿಯಿಂದ ಕೈಬಿಡಲು ಯತ್ನ ನಡೆಯುತ್ತಿದೆ. ಎಸ್‌ಐಆರ್ ಮೂಲಕ ಪರೋಕ್ಷವಾಗಿ ಹಿಂದುತ್ವದ ರಾಜಕಾರಣಕ್ಕೆ ಬಿಜೆಪಿಯವರು ಪ್ರಯತ್ನಿಸುತ್ತಿದ್ದಾರೆ. ಬಿಜೆಪಿ ವಿರುದ್ಧ ಚುನಾವಣೆಯಲ್ಲಿ ಗೆಲ್ಲುವುದಷ್ಟೇ ಅಲ್ಲ, ಎಸ್‌ಐಆರ್ ವಿರುದ್ಧ ಹೋರಾಡುವುದೂ ದೊಡ್ಡ ಸವಾಲು. ಸಮಾಜದಲ್ಲಿ ಹರಡುತ್ತಿರುವ ದ್ವೇಷ ರಾಜಕಾರಣ, ಜಾತಿ ಆಧಾರಿತ ಅಸಮಾನತೆ ಮತ್ತು ಧಾರ್ಮಿಕ ಧ್ರುವೀಕರಣದ ವಿರುದ್ಧ ಪರ್ಯಾಯ ರಾಜಕೀಯ ನಿರೂಪಣೆಯನ್ನು ಕಟ್ಟುವುದು ಕೂಡ ಸವಾಲೇ. ಮುಂಬರುವ ಚುನಾವಣೆಗಳಿಗೆ ಕಾರ್ಯಕರ್ತರನ್ನು ಸಜ್ಜುಗೊಳಿಸುವುದು ಹಾಗೂ ಹೊಸ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿಕೊಂಡು ಸಂಘಟನೆಯನ್ನು ಮುನ್ನಡೆಸುವುದು ತಕ್ಷಣದ ಪ್ರಮುಖ ಸವಾಲು ಅಂದುಕೊಂಡಿದ್ದೇನೆ. 2028ರ ವಿಧಾನಸಭೆ, 2029ರ ಲೋಕಸಭೆ ಚುನಾವಣೆಗೂ ಮೊದಲು ಸ್ಥಳೀಯ ಚುನಾವಣೆಗಳನ್ನು ಎದುರಿಸಬೇಕಿದೆ. ಅದಕ್ಕೆ ಪಕ್ಷವನ್ನು ಎಲ್ಲ ರೀತಿಯಲ್ಲಿಯೂ ಸಜ್ಜುಗೊಳಿಸಬೇಕಿದೆ.

• ನೀವು ಪ್ರತಿಪಾದಿಸುವ ವಿಚಾರಗಳಿಗೆ ಯುವ ಸಮುದಾಯವನ್ನು ಹೇಗೆ ಒಳಗು ಮಾಡುತ್ತೀರಿ?

ಹೌದು, ನಾನು ಪ್ರತಿಪಾದಿಸುವ ವಿಚಾರಗಳು, ನನ್ನ ಆಶಯಗಳು ಸಾಕಾರಗೊಳ್ಳಲು, ಸಾಮಾಜಿಕ ನ್ಯಾಯದ ಪರವಾಗಿ ಧ್ವನಿ ಎತ್ತುವವರು, ಕೋಮುವಾದದ ವಿರುದ್ಧ ಹೋರಾಡುವವರು, ಸಂವಿಧಾನವನ್ನು ರಕ್ಷಿಸುವ ಹೋರಾಟಗಾರರು ಮತ್ತು ಪ್ರಗತಿಪರ ಚಿಂತನೆ ಹೊಂದಿರುವ ಕೋಟ್ಯಂತರ ಕಾಂಗ್ರೆಸ್ಸೇತರ ಕಾರ್ಯಕರ್ತರು ಕೈಜೋಡಿಸಬೇಕಿದೆ. ಕಾಂಗ್ರೆಸ್ಸಿಗರಾದ ನಾವೂ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಜಾತ್ಯತೀತ ಯುವ ಸಮುದಾಯವನ್ನು ಒಟ್ಟುಗೂಡಿಸಿಕೊಂಡು ಹೋಗಬೇಕಿದೆ ಎಂಬ ಅರಿವು ನನಗಿದೆ.

• ಬೇರೆ ರಾಜ್ಯಗಳಲ್ಲಿನ ರಾಜಕೀಯವನ್ನು ಬಹಳ ಹತ್ತಿರದಿಂದ ಕಂಡವರು ನೀವು. ಆ ಅನುಭವ ನೆರವಾಗಬಹುದೇ?

ಅನುಭವಗಳೇ ಪಾಠ. 20 ರಾಜ್ಯಗಳಲ್ಲಿ ಪಕ್ಷ ನೀಡಿದ್ದ ಹೊಣೆ ನಿಭಾಯಿಸಿದ್ದೇನೆ. ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಪ್ರಗತಿಪರ ರಾಜ್ಯ. ನಾನು ಇಲ್ಲಿಗೆ ಬರುವ ಮೊದಲು ಬಿಜೆಪಿಯವರು ಅವರದ್ದೇ ಆದ ದ್ವೇಷ ರಾಜಕಾರಣ, ಧರ್ಮ ರಾಜಕಾರಣ ಮಾಡಿಕೊಂಡಿದ್ದರು. ನಾನು ಅವರಿಗೆ ಉತ್ತರ ಕೊಡುವಲ್ಲಿ ಯಶಸ್ವಿಯಾಗಿದ್ದೇನೆ. ನಮ್ಮದು ಸಾಂವಿಧಾನಿಕ ರಾಜಕಾರಣ. ಪ್ರಜಾಪ್ರಭುತ್ವಕ್ಕೆ ಬೆಲೆ. ಬಿಜೆಪಿಯವರು ಕೆಲವೇ ಜನರಿಗೆ ಸೀಮಿತವಾದ ರಾಜಕಾರಣ ಮಾಡುತ್ತಾರೆ. ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕನಾಗಿ ಸಿಕ್ಕಿದ ಮೂರು ವರ್ಷಗಳ ಅವಕಾಶದಲ್ಲಿ ಬಿಜೆಪಿಯವರ ಚಹರೆಯನ್ನು, ನಮ್ಮದು ಭಿನ್ನ ಪಕ್ಷವೆಂಬ ಅವರ ವಾದವನ್ನು ಬಿಚ್ಚಿಡಲು ಸಾಧ್ಯವಾಗಿದೆ. 2008ರಲ್ಲಿ ಬಿಜೆಪಿಯವರು ಅಧಿಕಾರಕ್ಕೆ ಬಂದ ನಂತರ, ಇಲ್ಲಿ ಹಣದ ಪ್ರಾಬಲ್ಯ ಹೆಚ್ಚಾಯಿತು. ಅಧಿಕಾರ ಹಿಡಿಯಲು ಅವರು ಧರ್ಮವನ್ನು, ಹಣವನ್ನು ಬಳಸಿದರು. ಅಲ್ಲಿಂದೀಚೆಗೆ ರಾಜಕೀಯ ಕಲುಷಿತಗೊಂಡಿದೆ. ಸರಿಪಡಿಸಲು ವರ್ಷಗಳೇ ಬೇಕು. ಅಷ್ಟೊಂದು ಧಕ್ಕೆ ತಂದಿದ್ದಾರೆ. ತಮ್ಮ ಮಕ್ಕಳನ್ನು ವಿದೇಶದಲ್ಲಿ ಓದಿಸುತ್ತಲೇ ದುರ್ಬಲ ವರ್ಗದ ಮಕ್ಕಳನ್ನು ಬಲಿ ತೆಗೆದುಕೊಳ್ಳುತ್ತಾರೆ. ಅವರೂ ರಾಜಕೀಯ ಮಾಡಲಿ, ಅದಕ್ಕೆ ಅಭ್ಯಂತರ ಇಲ್ಲ. ಆದರೆ, ಕೊಲೆಗಳು ಆಗಬಾರದು. ಯಾರೂ ಜೈಲಿಗೆ ಹೋಗಬಾರದು ಎನ್ನುವುದು ನಮ್ಮ ಮೂಲ ಉದ್ದೇಶ. ನಮ್ಮ ಆಡಳಿತ ಅವಧಿಯಲ್ಲಿ ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ ಆಗಿದೆ.

• ಆರ್‌ಎಸ್‌ಎಸ್ ಬಗ್ಗೆ ನಿಮಗೆ ಯಾಕಿಷ್ಟು ಕೋಪ?

ಆರ್‌ಎಸ್‌ಎಸ್‌ನವರು ಈ ದೇಶದ ಸಂವಿಧಾನದಲ್ಲಿ, ತ್ರಿವರ್ಣ ಧ್ವಜದಲ್ಲಿ, ಜಾತ್ಯತೀತ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿಲ್ಲ. ಸಂವಿಧಾನವನ್ನು ಅವರು ಒಪ್ಪಿಕೊಂಡಿಲ್ಲ. ಅವರದ್ದು ಧರ್ಮಾಧಾರಿತ ರಾಜಕೀಯ. ಅದರಲ್ಲಿ ಕಟ್ಟುಪಾಡುಗಳು, ಭೇದಭಾವ ಹೆಚ್ಚು ಇರುತ್ತದೆ. ಶ್ರೇಣೀಕೃತ ಸಮಾಜ, ಮೇಲು–ಕೀಳು ತಾರತಮ್ಯ ಇರುತ್ತದೆ. ಅವರ ಹಿಂದುತ್ವ ಎನ್ನುವುದು ದ್ವೇಷ ಮತ್ತು ಸುಳ್ಳಿನ ರಾಜಕಾರಣ. ಸುಳ್ಳು ಸುದ್ದಿಗಳನ್ನು ಸೃಷ್ಟಿಸುವುದು, ಆ ಸುಳ್ಳು ಸುದ್ದಿಗಳನ್ನು ವ್ಯಾಪಕವಾಗಿ ಹರಡಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುವುದೇ ಆರ್‌ಎಸ್‌ಎಸ್ ಸಿದ್ಧಾಂತ. ಗಾಂಧಿ ಕೊಲೆಯನ್ನು ಸಂಭ್ರಮಿಸುವವರನ್ನು, ಕೊಂದ ನಾಥೂರಾಂ ಗೋಡ್ಸೆಯ ಆರಾಧಕರನ್ನು ಒಪ್ಪಿಕೊಳ್ಳಲು, ಅಪ್ಪಿಕೊಳ್ಳಲು ಸಾಧ್ಯವೇ?

• ಪಕ್ಷದ ಒಳಗಿನ ಭಿನ್ನಾಭಿಪ್ರಾಯಗಳ ಬಗ್ಗೆ ಏನು ಹೇಳುತ್ತೀರಿ?

ಭಿನ್ನಮತ ಇದ್ದೇ ಇರುತ್ತದೆ. ಹಾಗೆಂದು ಮನಭೇದ ಇರುವುದಿಲ್ಲ. ಭಿನ್ನ ಅಭಿಪ್ರಾಯಗಳು, ವಿರೋಧಗಳು ಇರಲೇಬೇಕು. ಅದೇ ಪ್ರಜಾಪ್ರಭುತ್ವದ ಆತ್ಮ. ಆ ಅಭಿಪ್ರಾಯ ಭೇದ ವಿಷಯ ಆಧರಿತ ಆಗಿರಬೇಕು. ನೋಡಿ, ಎರಡೂವರೆ ವರ್ಷದ ನಂತರ ಅಧಿಕಾರ ಬಿಟ್ಟುಕೊಡಬೇಕು ಎನ್ನುವುದು ವಿಷಯಾಧಾರಿತ ಭಿನ್ನಮತವೇ ಆಗಿತ್ತು.

• ಹಾಗಾದರೆ, ಪಕ್ಷದಲ್ಲಿ ಗುಂಪುಗಾರಿಕೆ ಇಲ್ಲವೆಂದೇ?

ಅಭಿಪ್ರಾಯ ಭೇದ ಗುಂಪುಗಾರಿಕೆಯಲ್ಲ. ಸಿದ್ದರಾಮಯ್ಯ ಅವರು ಸುಲಲಿತವಾಗಿ ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರಿಸಿ ಅವಕಾಶ ಮಾಡಿಕೊಟ್ಟಿಲ್ಲವೇ? ನಾಯಕತ್ವ ವಿಚಾರದಲ್ಲಿ ಏನೇನೋ ಆಗಿಬಿಡುತ್ತದೆ ಎಂದು ವಿರೋಧ ಪಕ್ಷಗಳು ಸೇರಿದಂತೆ ಎಲ್ಲರೂ ಭಾವಿಸಿದ್ದರು. ಏನಾಯಿತು? ಈ ವಿಚಾರದಲ್ಲಿ ನಾವು ಇಡೀ ದೇಶಕ್ಕೆ ಮಾದರಿ.

• ಮುಸ್ಲಿಮರು ಕಾಂಗ್ರೆಸ್ ಬಗ್ಗೆ ಮುನಿಸಿಕೊಂಡಿದ್ದಾರಲ್ಲ?

ಹಾಗೇನೂ ಇಲ್ಲ. ಅಸ್ಸಾಂನಲ್ಲಿ ನಾವು ಗೆದ್ದಿರುವ 19 ಶಾಸಕರಲ್ಲಿ 18 ಮಂದಿ, ಪಶ್ಚಿಮ ಬಂಗಾಳದಲ್ಲಿ ಗೆದ್ದ ಇಬ್ಬರೂ ಮುಸ್ಲಿಮರು. ಅವರಿಗೆ ತಮ್ಮ ಸಮುದಾಯದವರು ಪ್ರಾಬಲ್ಯ ಇರುವ ಕಡೆ ಟಿಕೆಟ್ ಕೊಟ್ಟಿಲ್ಲ ಎಂಬ ಅಸಮಾಧಾನ ಇರಬಹುದು. ಅದನ್ನು ನಾವು ಸರಿಪಡಿಸಿಕೊಳ್ಳುತ್ತೇವೆ.

• ಆರು ವರ್ಷ ರಾಜ್ಯದಾದ್ಯಂತ ಸುತ್ತಾಡಿ ಡಿ.ಕೆ. ಶಿವಕುಮಾರ್ ಪಕ್ಷ ಸಂಘಟಿಸಿದ್ದಾರೆ. ನಿಮ್ಮ ಕಾರ್ಯಯೋಜನೆಗಳೇನು?

ಪಕ್ಷ ಕಟ್ಟಲು ಇಡೀ ದೇಶ ಸುತ್ತಾಡಿದವನು ನಾನು. ಪಕ್ಷ ಸಂಘಟನೆಗೆ ಓಡಾಡಲೇಬೇಕು. ನಾನು ವಿದ್ಯಾರ್ಥಿ ಚಳವಳಿ, ಸೇವಾ ದಳ, ಕಾರ್ಮಿಕ ಸಂಘಟನೆಗಳಿಂದ ಬಂದಿರುವುದರಿಂದ ಕಾರ್ಯಕರ್ತರನ್ನು ಒಗ್ಗೂಡಿಸುವುದು ಕಷ್ಟವೇನೂ ಅಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕರ್ನಾಟಕದಲ್ಲಿಯೂ ಪಕ್ಷ ಕಟ್ಟುವ ಕೆಲಸ ಮಾಡುತ್ತೇನೆ. ಸಂಘಟನೆಯಲ್ಲಿ ಎಲ್ಲರಿಗೂ ಅವಕಾಶ ನೀಡುತ್ತೇನೆ. ರಾಜಕೀಯವಾಗಿ ದೂರ ಸರಿದವರನ್ನು ಪಕ್ಷದ ಒಳಗೆ ತರುವ ಕೆಲಸ ಮಾಡುತ್ತೇನೆ. ಜೂನ್ 8ರಂದು ದೆಹಲಿಗೆ ತೆರಳಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡಿ ಬರುತ್ತೇನೆ. ಎಲ್ಲರನ್ನೂ ನಿಭಾಯಿಸುವ ದೊಡ್ಡ ಸವಾಲು ಇದೆ ಎನ್ನುವುದು ಗೊತ್ತು. ಎಲ್ಲರ ಜೊತೆ ಚರ್ಚಿಸಿ ಕಾರ್ಯಯೋಜನೆಗಳನ್ನು ರೂಪಿಸುತ್ತೇನೆ.

• ಸರ್ಕಾರ ಮತ್ತು ಪಕ್ಷದ ನಡುವೆ ಸಮನ್ವಯ ಹೇಗೆ?

ಸಮನ್ವಯ ಇದ್ದೇ ಇರುತ್ತದೆ. ಕೆಲವು ವಿಚಾರಗಳಲ್ಲಿ ಅಭಿಪ್ರಾಯ ವ್ಯತ್ಯಾಸ ಬರುವುದು ಸಹಜ. ಹೊಂದಾಣಿಕೆ ಮಾಡಿಕೊಂಡು ಹೋಗಲೇಬೇಕಾಗುತ್ತದೆ. ❖

ಅಥ್ಲೆಟಿಕ್ಸ್ ಅಂಗಳದ ತೇಜಸ್ವಿ



• ಗಿರೀಶ ದೊಡ್ಡಮನಿ

ವ್ಯಕ್ತಿ

ತೇಜಸ್ವಿನ್ ಶಂಕರ್‌ಗೆ ಬಾಲ್ಯದಿಂದಲೂ ಕ್ರಿಕೆಟ್ ಹುಚ್ಚು. ಅದರಲ್ಲೂ ವೇಗದ ಬೌಲರ್ ಆಗಬೇಕೆಂಬ ಆಸೆ. ಓಡಾಡುವಾಗ, ಕುಂತಲ್ಲಿ, ನಿಂತಲ್ಲಿ ಕೈಗಳನ್ನು ಬೌಲಿಂಗ್ ಶೈಲಿಯಲ್ಲಿ ತಿರುಗಿಸುವ ಹವ್ಯಾಸ ಇತ್ತು. ವಕೀಲರಾಗಿದ್ದ ಅಪ್ಪ ಹರಿಹರನ್ ಅವರೂ ಕ್ರಿಕೆಟ್ ಪ್ರೇಮಿ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೊಂದಿಗೂ ವೃತ್ತಿ ಬಾಂಧವ್ಯ ಹೊಂದಿದ್ದರು.

ಬಹುಶಃ ತೇಜಸ್ವಿನ್ ಶಂಕರ್ ತಾವಂದುಕೊಂಡಂತೆ ಕ್ರಿಕೆಟಿಗರಾಗಿದ್ದರೆ, ಇವತ್ತು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುತ್ತಿದ್ದರೋ ಏನೋ? ಆದರೆ ಹಾಗಾಗಲಿಲ್ಲ. 14 ವರ್ಷಗಳ ಹಿಂದೆ ಕ್ರಿಕೆಟ್ ಅಂಗಣದಿಂದ ದೂರವಾದ ಅವರು ಅಥ್ಲೆಟಿಕ್ಸ್‌ನಲ್ಲಿ ಬದುಕು ಕಂಡುಕೊಂಡರು. ಕಾಕತಾಳೀಯ ಎಂಬಂತೆ ಹೋದ ತಿಂಗಳು ಇಡೀ ದೇಶ ಐಪಿಎಲ್ ಪಂದ್ಯ ನೋಡುವುದರಲ್ಲಿ ಮುಳುಗಿದ್ದಾಗ ತೇಜಸ್ವಿನ್ ಅವರು ಡಿಕ್ಯಾತಲಾನ್ ಎಂಬ ಕಡುಕಠಿಣ ಸ್ಪರ್ಧೆಯಲ್ಲಿ ಅಪರೂಪದ ದಾಖಲೆ ಬರೆದರು.

ರಾಂಚಿಯಲ್ಲಿ ನಡೆದ ಫೆಡರೇಷನ್ ಕಪ್ ಅಥ್ಲೆಟಿಕ್ ಕೂಟದಲ್ಲಿ ಡಿಕ್ಯಾತಲಾನ್ ವಿಭಾಗದಲ್ಲಿ 8,057 ಅಂಕ ಗಳಿಸಿ ದಾಖಲೆ ಬರೆದರು. ಹಿಂದೆಂದೂ ಯಾವುದೇ ಭಾರತೀಯ ಅಥ್ಲೀಟ್ ಈ ಸಾಧನೆ ಮಾಡಿರಲಿಲ್ಲ. ವಿಶೇಷ ಎಂದರೆ ತೇಜಸ್ವಿನ್ ಅವರು ಈ ಕ್ರೀಡೆಯನ್ನು ಆಯ್ಕೆ ಮಾಡಿಕೊಂಡಿದ್ದು ಮೂರು ವರ್ಷಗಳ ಹಿಂದೆ. ಅದಕ್ಕೂ ಮುನ್ನ ಅವರು ಹೈಜಂಪ್ ಅಥ್ಲೀಟ್. ಜೀವನದಲ್ಲಿ ಎದುರಾದ ಸವಾಲುಗಳನ್ನು ಎದುರಿಸುವುದು ಎಲ್ಲರಿಗೂ ಆಗುವ ಅನುಭವ. ಆದರೆ ತೇಜಸ್ವಿನ್ ಅವರು ವಿಭಿನ್ನ ವ್ಯಕ್ತಿತ್ವದವರು. ಕಠಿಣ ಸವಾಲುಗಳನ್ನು ತಾವೇ ಮೈಮೇಲೆಳೆದುಕೊಂಡು ಯಶಸ್ಸು ಸಾಧಿಸುವ ಛಲದಂಕಮಲ್ಲ. ಅದಕ್ಕಾಗಿಯೇ 27 ವರ್ಷದ ಈ ಅಥ್ಲೀಟ್ ಉಳಿದೆಲ್ಲರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಅವರ ಜೀವನಗಾಥೆಯನ್ನು ನೋಡಿದರೆ ಪ್ರತಿ ಹೆಜ್ಜೆಯಲ್ಲಿಯೂ ಅವರ ಸಾಹಸಗಳು ಗಮನ ಸೆಳೆಯುತ್ತವೆ.

ಕ್ರಿಕೆಟ್‌ನಿಂದ ಅಥ್ಲೆಟಿಕ್ಸ್‌ನತ್ತ...: ವೇಗದ ಬೌಲರ್ ಆಗುವ ಗುರಿ ಹೊಂದಿದ್ದ ತೇಜಸ್ವಿನ್ ಶಾಲಾ ತಂಡದಲ್ಲಿ ಮಿಂಚುತ್ತಿದ್ದರು. ಅದಕ್ಕೆ ತಕ್ಕಂತಹ ಎತ್ತರಕಾಯ ಮತ್ತು ಸದೃಢ ಮೈಕಟ್ಟು ಅವರಿಗೆ ಇದ್ದವು. ಆದರೆ ಕ್ರಮೇಣ ಬೌಲಿಂಗ್ ಮಾಡುವ ಸಂದರ್ಭದಲ್ಲಿ ದೀರ್ಘ ದೂರದ ರನ್ ಅಪ್ ತೆಗೆದುಕೊಳ್ಳುವಾಗ ಕಾಲುಗಳ ವೇಗ ಕುಂಠಿತವಾಗತೊಡಗಿತು. ಫೀಲ್ಡಿಂಗ್ ಮಾಡುವಾಗ ಚೆಂಡು ಹಿಡಿಯುವಲ್ಲಿಯೂ ಎಡವತೊಡಗಿದರು. ಇದನ್ನು ಗಮನಿಸಿದ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರೊಬ್ಬರು ಕ್ರಿಕೆಟ್‌ನಲ್ಲಿ ಯಶಸ್ವಿಯಾಗಬೇಕಾದರೆ ಅಥ್ಲೆಟಿಕ್ಸ್ ಅಭ್ಯಾಸ ಮಾಡಬೇಕು ಎಂದು ಸಲಹೆ ನೀಡಿದರು.

ಅದು ತೇಜಸ್ವಿನ್ ಜೀವನಕ್ಕಷ್ಟೇ ಅಲ್ಲ. ಭಾರತದ ಅಥ್ಲೆಟಿಕ್ಸ್ ಕ್ಷೇತ್ರಕ್ಕೂ ಹೊಸ ಹೊಳಹು ನೀಡಿದ ಕ್ಷಣವಾಯಿತು. 13 ವರ್ಷದ ಹುಡುಗ ಟ್ರ್ಯಾಕ್ ಮತ್ತು ಫೀಲ್ಡ್‌ನತ್ತ ವಾಲಿದರು. 400 ಮೀಟರ್ಸ್ ಓಟದೊಂದಿಗೆ ಅವರ ಪಯಣ ಆರಂಭವಾಯಿತು. ಕ್ರಮೇಣ ಹೈಜಂಪ್ ಅವರನ್ನು ಆಕರ್ಷಿಸಿತು. ಅವರ ದೇಹವೂ ಹೈಜಂಪ್‌ಗೆ ಒಗ್ಗಿಕೊಂಡಿತು. 2013ರಲ್ಲಿ ದೆಹಲಿ ರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಹೈಜಂಪ್‌ನಲ್ಲಿ ಕಂಚು ಗೆದ್ದರು. ಅಲ್ಲಿಂದ ಮುಂದೆ ಕ್ರಿಕೆಟ್ ಖಯಾಲಿ ಬಿಟ್ಟ ಅವರು ಹೈಜಂಪ್‌ನಲ್ಲಿಯೇ 'ಎತ್ತರ'ಕ್ಕೇರುವ ನಿರ್ಧಾರ ಮಾಡಿದರು. ಅದನ್ನು ಸಾಧಿಸಿಯೂ ಬಿಟ್ಟರು. 2.29 ಮೀಟರ್ ಎತ್ತರ ಜಿಗಿದು ರಾಷ್ಟ್ರೀಯ ದಾಖಲೆ ಮಾಡಿದರು.

ಆದರೆ, 2014ರಲ್ಲಿ ತೇಜಸ್ವಿನ್ ತಂದೆ ರಕ್ತದ ಕ್ಯಾನ್ಸರ್‌ನಿಂದ ನಿಧನರಾದರು. ಈ ಆಘಾತವನ್ನು ಗಟ್ಟಿ ಹೃದಯದಿಂದ ಸಹಿಸಿಕೊಂಡು ತಮ್ಮ ಅಭ್ಯಾಸ ಮುಂದುವರಿಸಿದರು. 2015ರಲ್ಲಿ ಎಪಿಯಾದಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಯೂತ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದರು. ನಂತರ ಸ್ಯಾಫ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ.

ಆದರೆ, 2021ರಲ್ಲಿ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅರ್ಹತೆ ಗಿಟ್ಟಿಸುವಲ್ಲಿ ಅವರು ವಿಫಲರಾದರು. ಅದರಿಂದ ವಿಚಲಿತರಾಗಲಿಲ್ಲ. 2022ರಲ್ಲಿ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕಂಚು ಗಳಿಸಿದರು. 2023ರಲ್ಲಿ ಡಿಕ್ಯಾತಲಾನ್‌ನತ್ತ ಹೊರಳಿದರು. ಅದೇ ವರ್ಷ ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯನ್ ಅಥ್ಲೆಟಿಕ್ಸ್‌ನಲ್ಲಿ ಕಂಚಿನ ಪದಕ ತಮ್ಮದಾಗಿಸಿಕೊಂಡರು. 2023ರ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಗಳಿಸಿದರು. ಅಲ್ಲಿ ಅವರು 7,666 ಅಂಕ ಗಳಿಸಿದರು. ಅದೇ ವರ್ಷ ರಾಷ್ಟ್ರೀಯ ಮಟ್ಟದ ಡಿಕ್ಯಾತಲಾನ್‌ನಲ್ಲಿ 7,826 ಅಂಕಗಳಿಸಿ ರಾಷ್ಟ್ರೀಯ ದಾಖಲೆ ಬರೆದರು. ಇದೀಗ ತಮ್ಮದೇ ದಾಖಲೆಯನ್ನು ಮುರಿದು ಇನ್ನೂ ಎತ್ತರಕ್ಕೇರಿದ್ದಾರೆ.

ಡಿಕ್ಯಾತಲಾನ್ ಆಯ್ಕೆ ಮಾಡಿಕೊಂಡಿದ್ದು ಯಾಕೆ ಎಂಬ ಪ್ರಶ್ನೆಗೆ ನಗುತ್ತಲೇ ಉತ್ತರಿಸುವ ತೇಜಸ್ವಿನ್, 'ಹೈಜಂಪ್ ಮಾಡುವಾಗ ಫೀಲ್ಡ್‌ನಲ್ಲಿ 15 ನಿಮಿಷ ಇರಲು ಮಾತ್ರ ಸಾಧ್ಯವಾಗುತ್ತಿತ್ತು. ಡಿಕ್ಯಾತಲಾನ್ ಹಾಗಲ್ಲ. ಎರಡು ದಿನ ನಡೆಯುತ್ತದೆ. ಆದ್ದರಿಂದ ಹೆಚ್ಚು ಸಮಯ ಮೈದಾನದಲ್ಲಿ ಕಳೆಯಲು ಸಾಧ್ಯ' ಎನ್ನುತ್ತಾರೆ.


'ನಮ್ಮ ಜೀವನಕ್ಕೂ ಡಿಕ್ಯಾತಲಾನ್‌ಗೂ ಸಾಮ್ಯತೆ ಇದೆ. ಏಳು, ಬೀಳುಗಳ ನೋಟ ಇದು. ಇದರಲ್ಲಿ ಹತ್ತು ಸ್ಪರ್ಧೆಗಳು ಇರುತ್ತವೆ. ಮೂರ್ನಾಲ್ಕು ಸ್ಪರ್ಧೆಗಳಲ್ಲಿ ಉತ್ತಮವಾಗಿ ಆಡಬಹುದು. ನಂತರ ಒಂದೆರಡು ಪೈಪೋಟಿಗಳಲ್ಲಿ ಮಂಕಾಗಬಹುದು. ಮತ್ತೆ ಉಳಿದದ್ದರಲ್ಲಿ ಪುಟಿದೇಳಬಹುದು. ಇದೇ ಅಲ್ಲವೇ ಜೀವನ' ಎಂದು ತೇಜಸ್ವಿನ್ ಕೇಳುತ್ತಾರೆ.

ಡಿಕ್ಯಾತಲಾನ್...

ಒಟ್ಟು ಹತ್ತು ಸ್ಪರ್ಧೆಗಳ ಗುಚ್ಛ; 100 ಮೀ. ಓಟ, ಲಾಂಗ್ ಜಂಪ್, ಶಾಟ್‌ಪಟ್, ಹೈಜಂಪ್, 400 ಮೀ. ಓಟ, 110 ಮೀ. ಹರ್ಡಲ್ಸ್, ಡಿಸ್ಕಸ್ ಥ್ರೋ, ಪೋಲ್‌ವಾಲ್ಟ್, ಜಾವೆಲಿನ್ ಥ್ರೋ ಮತ್ತು 1500 ಮೀ. ಓಟ ಇರುತ್ತವೆ. ಪ್ರತಿ ಸ್ಪರ್ಧೆಯಲ್ಲಿ ಗಳಿಸುವ ಸ್ಥಾನಕ್ಕೆ ಪಾಯಿಂಟ್ ನೀಡಲಾಗುತ್ತದೆ. ಇದನ್ನು ಆಡುಭಾಷೆಯಲ್ಲಿ ಡೆಕಾಥ್ಲಾನ್ ಎಂದೂ ಕರೆಯುತ್ತಾರೆ.

ಅಮೆರಿಕ ದಾರಿ ತೋರಿದ ಬೆಂಗಳೂರು: ತಮ್ಮ ಅಥ್ಲೆಟಿಕ್ಸ್ ಕೌಶಲಗಳಿಗೆ ಸಾಣೆ ಹಿಡಿಯಲು ತೇಜಸ್ವಿನ್ ಅವರಿಗೆ ಉನ್ನತ ದರ್ಜೆಯ ತರಬೇತಿಯ ಅವಶ್ಯಕತೆ ಇತ್ತು. ಅದಕ್ಕಾಗಿ ಅವರು ವಿದೇಶಕ್ಕೆ ಹೋಗಬೇಕಾಗಿತ್ತು. ಅಮೆರಿಕದ ವಿಶ್ವವಿದ್ಯಾಲಯವೊಂದರಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕಿತ್ತು. ಆದರೆ ವಿಧಾನ ಗೊತ್ತಿರಲಿಲ್ಲ. ಆದರೆ, ಆ ದಾರಿ ಸಿಕ್ಕಿದ್ದು ಬೆಂಗಳೂರಿನಲ್ಲಿ.

ಈ ಹಂತದಲ್ಲಿ ಬೆಂಗಳೂರಿಗೆ ಬಂದಿದ್ದ ಆಸ್ಟ್ರೇಲಿಯಾದ ಜಾವೆಲಿನ್ ಥ್ರೋ ಕೋಚ್ ಗ್ಯಾರಿ ಕಾಲ್ವರ್ಟ್ ಅವರ ಪರಿಚಯವಾಯಿತು. ಅವರು ನೀಡಿದ ಸಲಹೆಯು ದಾರಿ ದೀಪವಾಯಿತು. ಅಮೆರಿಕದ ಕಾಲೇಜು ಕ್ರೀಡೆಗಳು ಮತ್ತು ರಾಷ್ಟ್ರೀಯ ಕಾಲೇಜು ಅಥ್ಲೆಟಿಕ್ಸ್ ಸಂಘಟನೆ (ಎನ್‌ಸಿಎಎ) ಕುರಿತು ಗ್ಯಾರಿ ಅವರು ತೇಜಸ್ವಿನ್ ಅವರಿಗೆ ಮಾರ್ಗದರ್ಶನ ನೀಡಿದರು.



'ಗ್ಯಾರಿ ಹೇಳಿದಂತೆ ಮಾಡಿದೆ. ಬಹಳ ಪೈಪೋಟಿಯ ನಡುವೆ ಎನ್‌ಸಿಎಎ ಮೂಲಕ ಅಮೆರಿಕದ ಕನ್ಸಾಸ್ ರಾಜ್ಯ ವಿಶ್ವವಿದ್ಯಾಲಯದಲ್ಲಿ ಸೀಟು ಸಿಕ್ಕಿತು. ನನ್ನ ಶಿಕ್ಷಣದ ಪೂರ್ಣ ವೆಚ್ಚವನ್ನು ವಿವಿಯೇ ಭರಿಸಿತು. ಜೊತೆಗೆ ಉನ್ನತ ದರ್ಜೆಯ ಕೋಚ್‌ಗಳಿಂದ ತರಬೇತಿಯೂ ಅಲ್ಲಿ ಲಭಿಸಿತು. 2004ರ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಜಯಿಸಿದ್ದ ಮ್ಯಾಟ್ ಹೆಮಿಂಗ್ವೆ ಮತ್ತು 2012ರ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದ್ದ ಎರಿಕ್ ಕೈನಾರ್ಡ್ ಅವರು ಈ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳಾಗಿದ್ದರು. ಅವರ ಮಾರ್ಗದರ್ಶನ ಸಿಕ್ಕಿತು' ಎಂದು ಹೇಳುತ್ತಾರೆ ತೇಜಸ್ವಿನ್.

ಇದು ಅವರ ಜೀವನವನ್ನೇ ಬದಲಿಸಿತು. 2018ರಲ್ಲಿ 2.29 ಮೀಟರ್ ಜಿಗಿದು ರಾಷ್ಟ್ರೀಯ ದಾಖಲೆ ಬರೆದರು.

ಅಮೆರಿಕದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಹಾಗೂ ಕ್ರೀಡೆಗಳನ್ನು ಜೊತೆಜೊತೆಯಾಗಿ ಕಲಿಸುವ ಪದ್ಧತಿಯನ್ನು ಅಧ್ಯಯನ ಮಾಡಿದ ಅವರು ಪ್ರಭಾವಿತರಾದರು. ಅಲ್ಲಿ ಪ್ರತಿಭಾನ್ವಿತ ಅಥ್ಲೀಟ್‌ಗಳಿಗೆ ಸಿಗುವ ವಿದ್ಯಾರ್ಥಿ ವೇತನ, ಸೌಲಭ್ಯಗಳು ಅವರನ್ನು ಸೆಳೆದವು.

ತೇಜಸ್ವಿನ್, ತಮ್ಮ ಪತ್ನಿ ಸಿದ್ಧಿ ಹಿರಾಯ್ ಅವರೊಂದಿಗೆ 'ಕಿಂಗ್ಸ್ ಸ್ಪೋರ್ಟ್ಸ್ ಗ್ರೂಪ್' ಆರಂಭಿಸಿದ್ದಾರೆ. ಅದರ ಮೂಲಕ ಪ್ರತಿಭಾನ್ವಿತ ವಿದ್ಯಾರ್ಥಿ–ಅಥ್ಲೀಟ್‌ಗಳನ್ನು ತರಬೇತುಗೊಳಿಸುತ್ತಿದ್ದಾರೆ. ಅಮೆರಿಕದ ಕಾಲೇಜು ಶಿಕ್ಷಣದಲ್ಲಿರುವ ಕ್ರೀಡಾ ಮಾದರಿಯನ್ನು ಭಾರತದಲ್ಲಿ ಬಲಗೊಳಿಸುವತ್ತ ಚಿತ್ತ ನೆಟ್ಟಿದ್ದಾರೆ. ಅಲ್ಲದೇ ಮುಂಬರುವ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಮೇಲೆ ಕಣ್ಣಿಟ್ಟಿದ್ದಾರೆ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

06 ಜೂನ್ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ಷಷ್ಠಿ ಗಂ. 26-42 ನಕ್ಷತ್ರ: ಶ್ರವಣ ಗಂ. 6-04 ಯೋಗ: ಐಂದ್ರ ಗಂ. 10-05 ಕರಣ: ಗರ ಗಂ. 14-05, ವೃಷಭ ಮಾಸದ 23 ನೇ ದಿನ. ಮಳೆ ನಕ್ಷತ್ರ : ರೋಹಿಣಿ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-06 ಸೂರ್ಯಾಸ್ತ : 06-52. ಮುಸ್ಲಿಂ ದಿನಾಂಕ : 20 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 8, 10

ಮೇಷ: ಎಲ್ಲರೊಂದಿಗೆ ಹೊಂದಿಕೊಳ್ಳುವ ನಿಮ್ಮ ಗುಣ ಹಾಗೂ ಸಾಮರ್ಥ್ಯ ಮುಖ್ಯವೆನಿಸುವುದು. ಅಧಿಕಾರಿಗಳ ಕೈಗೊಂಬೆಯಾಗಿರುವ ನಿಮಗೆ ಜವಾಬ್ದಾರಿಗಳು ಹೆಚ್ಚುವವು.

ವೃಷಭ: ಮಗಳ ಮದುವೆಯ ಸಲುವಾಗಿ ಆಭರಣವನ್ನು ಕೊಳ್ಳುವ ಬಗ್ಗೆ ಅಥವಾ ಇನ್ನೇನಾದರು ತಯಾರಿ ಮಾಡಿಕೊಳ್ಳುವ ಬಗ್ಗೆ ಯೋಚಿಸಿ. ಹಿರಿಯರ ಆರೋಗ್ಯ ತಪಾಸಣೆ ನಡೆಸಿ.

ಮಿಥುನ: ಕೆಲವು ದಿನಗಳಿಂದ ಜೀವನದಲ್ಲಿ ನಡೆಯುತ್ತಿರುವ ಮುಸುಕಿನ ಗುದ್ದಾಟಗಳಿಂದ ನೊಂದ ನಿಮಗೆ ವಿರಾಮ ಸಿಗಲಿದೆ. ಹಳೆಯ ನೋವುಗಳನ್ನು ಮರೆಯಲು ಸಹಾಯವಾಗುವುದು.

ಕರ್ಕಾಟಕ: ಆರ್ಥಿಕವಾಗಿ ಸಾಕಷ್ಟು ಸಂಪಾದನೆಯಾಗುವುದರಿಂದ ಅನಿವಾರ್ಯದ ಖರ್ಚಿಗೇನೂ ಯೋಚನೆ ಇರುವುದಿಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ಮಿತ್ರವರ್ಗದವರ ಸಹವಾಸದಿಂದ ಅನುಕೂಲ.

ಸಿಂಹ: ಎಲ್ಲಾ ನಡವಳಿಕೆ ಸತ್ಯಮಾರ್ಗದಲ್ಲಿ ಹಾಗೂ ಪರರಿಗೆ ಅಹಿತವಾಗದಂತೆ ಇರಲಿ. ಸ್ವಲ್ಪ ಪರಿಶ್ರಮ ಕೂಡ ಕಾರ್ಯಸಾಧನೆಯಲ್ಲಿ ಫಲ ನೀಡಲಿದೆ. ಬದುಕಿನ ಧನ್ಯತೆಗೆ ಅಚಲವಾದ ನಂಬಿಕೆ ಮುಖ್ಯ.

ಕನ್ಯಾ: ವೃತ್ತಿಯಲ್ಲಿ ಅನುಸರಿಸುತ್ತಿರುವ ಮಾರ್ಗದ ಬಗ್ಗೆ ಪರಿಶೀಲನೆ ನಡೆಸಿ. ಯೋಗ ಮಾರ್ಗದಲ್ಲಿ ಸಾಧನೆಯನ್ನು ನಡೆಸುವವರಿಗೆ ಅಗತ್ಯವಿರುವ ಮಾರ್ಗ-ದರ್ಶಕರು ಸಿಗುವರು.

ತುಲಾ: ತಂದೆ-ತಾಯಿಯ ಮನಸ್ಸಿಗೆ ನೋವಾಗುವ ಸಂಗತಿ ನಡೆಯಬಹುದು. ಮಾತಿನಲ್ಲಿ ಜಾಗ್ರತೆ ವಹಿಸಿ. ದೊಡ್ಡ ಮಟ್ಟದಲ್ಲಿ ವ್ಯವಹಾರ ನಡೆಸುವವರು ಪಾಲುದಾರರನ್ನು ಹುಡುಕುವ ಪ್ರಯತ್ನ ನಡೆಸಬಹುದು.

ವೃಶ್ಚಿಕ: ರಾಜಕೀಯ ವ್ಯಕ್ತಿಗಳಿಗೆ ಸ್ಥಾನ ಬಲಪಡಿಸುವ ಕಾರ್ಯದಲ್ಲಿ ಹಿರಿಯ ಅಧಿಕಾರಿಗಳಿಂದ ಉಪಯೋಗವಾಗಲಿದೆ. ಮನೆ ಬದಲಾಯಿಸುವ ಯೋಚನೆಗೆ ಹೊಸ ಮನೆ ಹುಡುಕಲು ಸರಿಯಾದ ಸಮಯ.

ಧನು: ಜನರನ್ನು ಆಕರ್ಷಿಸುವ ಕಲೆ ನಿಮ್ಮಲ್ಲಿದೆ. ಆ ತಂತ್ರಗಾರಿಕೆಯನ್ನು ಬಳಸಿಕೊಳ್ಳುವುದರಿಂದ ವ್ಯವಹಾರದಲ್ಲಿ ಲಾಭ. ವ್ಯಾವಹಾರಿಕವಾಗಿ ಕೆಲವರು ನಿಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ನಡೆಸಲಿದ್ದಾರೆ.

ಮಕರ: ಅತಿಯಾಗಿ ನಂಬಿಕೆ ಇಟ್ಟಿರುವ ವ್ಯಕ್ತಿಗಳಿಂದ ತೊಂದರೆಗಳು ಆಗಲಿವೆ. ಹಳೆಯ ತಪ್ಪುಗಳನ್ನು ಮನ್ನಿಸುವಂತೆ ಜಗನ್ಮಾತೆಯಲ್ಲಿ ಪ್ರಾರ್ಥಿಸಿ ನಂತರ ಕಾರ್ಯವನ್ನು ಕೈಗೊಳ್ಳಿ.

ಕುಂಭ: ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿವೆ. ದೇವರ ಕೃಪೆಯಿಂದ ಕೆಲಸಗಳು ನೆರವೇರಲಿವೆ. ಖರ್ಚು-ವೆಚ್ಚದಲ್ಲಿ ಮಿತಿ ಇದ್ದರೆ ಉತ್ತಮ.

ಮೀನ: ಮನುಷ್ಯ ಪ್ರಯತ್ನದ ಜೊತೆಯಲ್ಲಿ ದೇವ ಬಲ ದೊರಕಿಸಿಕೊಂಡರೆ ಕನಸು ನನಸಾಗುವುದು. ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ದುಡಿಯುವಿರಿ. ಗೃಹದಲ್ಲಿ ಸುಖಶಾಂತಿ ವರ್ಧಿಸುತ್ತದೆ.

ಪದಬಂಧ 6425


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಗ್ರಂಥದ ಒಂದು ಭಾಗ (2)
3.ಮುಂದೆ ಬರಲಿರುವ ಕಾಲ (3)
5.ಪುಣ್ಯ ಸ್ಥಳವಿದು (2)
6.ಧಮಕಿ ಹಾಕುತ್ತಿರುವನಲ್ಲಾ ಈ ನೀಚ ವ್ಯಕ್ತಿ! (3)
7.ಹಾಜರಾಗಿರುವ ಸಾಮ್ರಾಟ (4)
8.ಸತಿ ಸಾವಿತ್ರಿಯ ಪತಿ (4)
10.ಕರಡಿಗಳ ಒಡೆಯನಿಲ್ಲಿ ತಿರುಗಿಹನಲ್ಲಾ? (4)
11.ಚಾವಡಿಯನ್ನೇರಿದ ಪಿಸುಣ (4)
13.ಈ ತರ ಕಳ್ಳ ಕಾಣಿಸಿಕೊಂಡಿದ್ದಾನೆ (3)
14.ಭಾಸ್ಕರ ಹೊತ್ತಿರುವ ಒಜ್ಜೆ! (2)
15. ಗಸಗಸೆ ಚಲ್ಲಿದ್ದು ಈ ಹೆಬ್ಬಾಗಿಲ ಬಳಿ! (3)
17.ಹರಿಯುವಂಥ ವಸ್ತು (2)

ಮೇಲಿಂದ ಕೆಳಕ್ಕೆ

1.ಸ್ತಂಭನದಲ್ಲಿರುವ ಕಂಬ ಕಂಡೀತೇ (2)
2.ತಾಪತ್ರಯ ತೋಡಿಕೊಂಡು ಬರೆದ ಓಲೆ (2)
4.ಪ್ರೇಮಿಗಳ ಅಗಲಿಕೆಯ ನೋವು ದೀರ್ಘವಾಗಿದೆ (3)
5.ಸುಖದ ಸುದ್ದಿ (6)
6.ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
7.ಚೆನ್ನಾಗಿ ಕಡೆಯಲ್ಪಟ್ಟಿದ್ದು (3)
9.ಶಾಶ್ವತವಿರದೆ ನಾಶವಾಗುವಂಥದ್ದು (3)
12.ಕೋಡನ್ನೇರಿದ ಕೋತಿ (3)
14.ಅಭಾವ ಕಾಲದಲ್ಲಿ ಆಗಮಿಸಿದ ಅಕ್ಕನ ಗಂಡ (2)
16.ಗರ್ಭದಲ್ಲಿರುವ ಕೂಸಿನ ಚೀಲ (2)



6424ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುರೂಪ 3.ಸನಾತನ 5.ವಿಪುಲ 7.ದಟ್ಟಿ 8.ಮರ್ಮ 9.ಗುರಿ 10.ಉತ್ತರಾಯಣ 12.ಭಾಷೆ 13.ಜಾವ 14.ಜಾಗ 15.ಮೃತ್ತಿಕೆ 17.ಅಂತರಂಗ 18.ಸನ್ನಿಧಾನ

ಮೇಲಿಂದ ಕೆಳಕ್ಕೆ:
1.ಅಪಧಮನಿ 2.ಪದವಿ 3.ಸಕಾಲ 4.ತಲೋದರಿ 6.ಪುನರಾವೃತ್ತಿ 9.ಗುಣ 10.ಉಷೆ 11.ಅವಲೋಕನ 12.ಭಾಗವತ 15.ಮೃದಂಗ 16.ಕೆಲಸ

ಸುಡೊಕು 6808


ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5			8		1	9		2
	8						3	
3		1	2		9		5	6
	1	7			8	3		
								4
8		3	9				6	
1			7		2	4		3
		8		4			1	
	3		1		5		7	8

6807 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	23,416
ಇಂದಿನ ಅಂತ್ಯ:	23,366
ದಿನದ ಕನಿಷ್ಠ:	23,282
	49

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹625
12 ಕ್ಕೆ	₹86
ಮೈಸೂರು: 100 ಕ್ಕೆ	₹635

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹257.50
ಆರ್‌ಎಸ್‌ಎಸ್-5	₹249
ಗುಡ್ ಲಾಟ್	₹214

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹336-689
ದ್ವಿತಳಿ (ಬಿ.ವಿ)	₹515-830

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹1600-2200
ಮಧ್ಯಮ	₹1000-1400
ಸಣ್ಣ	₹400-1000

ಮುದ್ರಮನೆ ಕಾಫಿ (50 ಕೆಜಿಗೆ)	
ಎಪಿ	₹22500
ಎಸಿ	₹14000
ಆರ್‌ಪಿ	₹18100
ಆರ್‌ಸಿ	₹9580

ಹಣದುಬ್ಬರ ಅಂದಾಜು ಹೆಚ್ಚಿಸಿದ ಆರ್‌ಬಿಐ

ಇಂಧನ ದರ ಏರಿಕೆಯಿಂದ ತಯಾರಿಕಾ ವೆಚ್ಚ ಹೆಚ್ಚಳ: ಮಲ್ಹೋತ್ರಾ



ನವದೆಹಲಿ / ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಚಿಲ್ಲರೆ ಹಣದುಬ್ಬರ ದರವು ಶೇ 5.1ಕ್ಕೆ ಹೆಚ್ಚಳವಾಗಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಈ ಮೊದಲು ಶೇ 4.6ರಷ್ಟಾಗಲಿದೆ ಎಂದು ಹೇಳಿತ್ತು.

ಆದರೂ, ಚಿಲ್ಲರೆ ಹಣದುಬ್ಬರವು ಆರ್‌ಬಿಐನ ಸಹಿಷ್ಣುತಾ ಮಟ್ಟವಾದ ಶೇ 2ರಿಂದ ಶೇ 6ರ ನಡುವೆಯೇ ಇದೆ.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಜಾಗತಿಕ ಮಟ್ಟದಲ್ಲಿ ಇಂಧನ ಬೆಲೆ ಏರಿಕೆ ಆಗಿದೆ. ಇದರಿಂದ ದೇಶದ ರಿಟೇಲ್ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳವಾಗಿದ್ದು, ತಯಾರಿಕಾ ವೆಚ್ಚ ಏರಿಕೆಯಾಗಿದೆ. ಇದು ಹಣದುಬ್ಬರ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ ಎಂದು ತಿಳಿಸಿದೆ.

ಮೇ ತಿಂಗಳಿನಿಂದ ಪೆಟ್ರೋಲ್ ಮತ್ತು ಡೀಸೆಲ್ ದರವು ಕ್ರಮವಾಗಿ ಶೇ 7.4 ಮತ್ತು ಶೇ 8.4ರಷ್ಟು ಹೆಚ್ಚಳವಾಗಿದೆ. ಇದು ನೇರವಾಗಿ ಚಿಲ್ಲರೆ ಹಣದುಬ್ಬರದ ಮೇಲೆ ಪರಿಣಾಮ ಬೀರಲಿದ್ದು, ಶೇ 0.36ರಷ್ಟು ಹಣದುಬ್ಬರ ಹೆಚ್ಚಳವಾಗಲಿದೆ ಎಂದು ಹೇಳಿದೆ.

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿನ ಹೆಚ್ಚಳ, ಕೈಗಾರಿಕೆಗಳಲ್ಲಿ ಬಳಸುವ ಕಚ್ಚಾ ವಸ್ತುಗಳು, ರಾಸಾಯನಿಕಗಳು, ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳ ಬೆಲೆಯಲ್ಲಿ ಏರಿಕೆಯಾಗಿದೆ. ಇದು ಮುಂದಿನ ದಿನಗಳಲ್ಲಿ ಮತ್ತಷ್ಟು ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಲಿದೆ ಎಂದು ಹೇಳಿದೆ.

ಚಿಲ್ಲರೆ ಹಣದುಬ್ಬರವು ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇ 4.2, ಎರಡನೇ ತ್ರೈಮಾಸಿಕದಲ್ಲಿ ಶೇ 5.1, ಮೂರನೇ ತ್ರೈಮಾಸಿಕದಲ್ಲಿ ಶೇ 5.9 ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಶೇ 5.4ರಷ್ಟಾಗಲಿದೆ ಎಂದು ಅಂದಾಜಿಸಿದೆ. 2026–27ರಲ್ಲಿ ಕೋರ್ ಹಣದುಬ್ಬರವು ಶೇ 4.7ರಷ್ಟಾಗಲಿದೆ ಎಂದಿದೆ.

ಆಹಾರ ಧಾನ್ಯಗಳ ಸಾಕಷ್ಟು ದಾಸ್ತಾನು ಇದೆ ಮತ್ತು ಜಲಾಶಯದಲ್ಲಿನ ನೀರಿನ ಮಟ್ಟ ತೃಪ್ತಿಕರವಾಗಿದೆ. ಆದರೆ, ಈ ಬಾರಿ ಸಾಮಾನ್ಯಕ್ಕಿಂತ ಮುಂಗಾರು ಮುನ್ಸೂಚನೆ ಕಡಿಮೆ ಇರುವ ಅಂದಾಜು, ಎಲ್ ನಿನೊ ಆಹಾರದ ಬೆಲೆಗಳ ಪರಿಣಾಮ ಬೀರಲಿದೆ ಎಂದು ಮಲ್ಹೋತ್ರಾ ಹೇಳಿದ್ದಾರೆ.

ಏಪ್ರಿಲ್-ಮೇ ಅವಧಿಯಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರಲ್‌ಗೆ ಸರಾಸರಿ 110 ಡಾಲರ್‌ನಷ್ಟಿತ್ತು.

ರೂಪಾಯಿ ಮೌಲ್ಯ 56 ಪೈಸೆ ಏರಿಕೆ

ವಿದೇಶಿ ಬಂಡವಾಳದ ಒಳಹರಿವು ಹೆಚ್ಚಿಸಲು ಮತ್ತು ರೂಪಾಯಿ ಮೌಲ್ಯ ಸದೃಢತೆಗೆ ಆರ್‌ಬಿಐ ತೆಗೆದುಕೊಂಡ ನಿರ್ಧಾರದಿಂದ ಶುಕ್ರವಾರದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 56 ಪೈಸೆ ಏರಿಕೆಯಾಗಿದೆ. ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯ 95.18ಕ್ಕೆ ತಲುಪಿದೆ.

ರೆಪೊ ದರ ಮತ್ತೆ ಯಥಾಸ್ಥಿತಿ



ಪಾಲಿಮರ್ ಕರೆನ್ಸಿ ನೋಟುಗಳನ್ನು ಪರಿಚಯಿಸುವ ಪ್ರಸ್ತಾವ ಇನ್ನೂ ಪ್ರಾಥಮಿಕ ಹಂತದಲ್ಲಿದೆ
ಸಂಜಯ್ ಮಲ್ಹೋತ್ರಾ, ಆರ್‌ಬಿಐ ಗವರ್ನರ್

ಸತತ ಮೂರನೇ ಬಾರಿಯೂ ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ ಇರುವ ತೀರ್ಮಾನವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು ಶುಕ್ರವಾರ ತೆಗೆದುಕೊಂಡಿದೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ನೇತೃತ್ವದ ಸಮಿತಿಯು ರೆಪೊ ದರವನ್ನು ಶೇ 5.25ರಲ್ಲೇ ಉಳಿಸಿಕೊಳ್ಳಲು ನಿರ್ಧರಿಸಿದೆ. ಅಲ್ಲದೆ, 'ತಟಸ್ಥ' ಹಣಕಾಸಿನ ನೀತಿಯನ್ನು ಮುಂದುವರಿಸಲು ಕೂಡ ಅದು ನಿರ್ಣಯಿಸಿದೆ. ಜೂನ್ 3ರಿಂದ 5ರವರೆಗೆ ಹಣಕಾಸು ನೀತಿ ಸಮಿತಿ ಸಭೆ ನಡೆಯಿತು.

ಆರ್ಥಿಕ ಸ್ಥಿರತೆ ಸಾಧಿಸಲು, ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಕಚ್ಚಾ ತೈಲದ ಬೆಲೆ, ಪಶ್ಚಿಮ ಏಷ್ಯಾದ ಸಂಘರ್ಷ ಸೇರಿದಂತೆ ವಿವಿಧ ಕಾರಣದಿಂದಾಗಿ ಆರ್‌ಬಿಐ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಇರಿಸಿದೆ.

ಇದೇ ವೇಳೆ ವಿದೇಶಿ ಬಂಡವಾಳ ಆಕರ್ಷಿಸಲು ಮತ್ತು ರೂಪಾಯಿ ಸದೃಢತೆಗೆ ಹಲವಾರು ಕ್ರಮಗಳನ್ನು ಆರ್‌ಬಿಐ ಘೋಷಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷ, ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು, ಹೆಚ್ಚುತ್ತಿರುವ ಸರಕುಗಳ ಬೆಲೆ ಮತ್ತು ಪೂರೈಕೆ ಸರಪಳಿಯಲ್ಲಿನ ಅಡಚಣೆಯು ದೇಶದ ಆರ್ಥಿಕ ಬೆಳವಣಿಗೆಗೆ ಅಡ್ಡಿ ಉಂಟು ಮಾಡುತ್ತಿವೆ ಎಂದು ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಸಾಮಾನ್ಯಕ್ಕಿಂತ ಮುಂಗಾರು ಮುನ್ಸೂಚನೆ ಕಡಿಮೆ ಇರುವುದು, ಎಲ್ ನಿನೊ ಆಹಾರ ಬೆಲೆಗಳ ಪರಿಣಾಮ ಬೀರುವ ಸಾಧ್ಯತೆ ಇದೆ. ಅಲ್ಲದೆ, ಹೆಚ್ಚುತ್ತಿರುವ ಇಂಧನ ದರವು ಹಣದುಬ್ಬರದ ಮೇಲೆ ಪರಿಣಾಮ ಬೀರುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ದೇಶದಲ್ಲಿ ಸರಕು ಮತ್ತು ಸೇವೆಗಳಿಗೆ ಬೇಡಿಕೆ ಸದೃಢವಾಗಿದೆ. ತಯಾರಿಕಾ ಮತ್ತು ಸೇವಾ ವಲಯದಲ್ಲಿ ಹೂಡಿಕೆಯು ನಿರಂತರವಾಗಿ ಹೆಚ್ಚಳವಾಗುತ್ತಿದೆ. ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಮೇ 29ಕ್ಕೆ ಕೊನೆಗೊಂಡ ವಾರದಲ್ಲಿ ₹64.79 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದ್ದಾರೆ.

'ನಿರೀಕ್ಷೆಯಂತೆ ರೆಪೊ ದರವನ್ನು ಆರ್‌ಬಿಐ ಬದಲಾಯಿಸಿಲ್ಲ. ವಿದೇಶಿ ಬಂಡವಾಳ ಆಕರ್ಷಣೆಗೆ ತೆಗೆದುಕೊಂಡಿರುವ ಕ್ರಮಗಳು ರೂಪಾಯಿ ಮೇಲಿನ ಒತ್ತಡ ತಗ್ಗಿಸಲು ನೆರವಾಗಲಿದೆ' ಎಂದು ಕೋಟಕ್ ಮಹೀಂದ್ರ ಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಉಪಾಸನಾ ಭಾರದ್ವಾಜ್ ಹೇಳಿದ್ದಾರೆ.

ಜಿಡಿಪಿ ಪ್ರಗತಿ ಅಂದಾಜು ಇಳಿಕೆ



ಪಶ್ಚಿಮ ಏಷ್ಯಾದ ಸಂಘರ್ಷದಿಂದ 2026–27ರ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇ 6.6ಕ್ಕೆ ಇಳಿಯಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಏಪ್ರಿಲ್ ತಿಂಗಳಿನಲ್ಲಿ ಜಿಡಿಪಿ ಪ್ರಗತಿ ಶೇ 6.9ರಷ್ಟಾಗಲಿದೆ ಎಂದು ಆರ್‌ಬಿಐ ಅಂದಾಜಿಸಿತ್ತು.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ಮತ್ತು ಸರಕುಗಳ ದರ ಹೆಚ್ಚಳವಾಗಿದೆ. ಅಲ್ಲದೆ, ಸರಕುಗಳ ಪೂರೈಕೆಗೆ ನಿರಂತರವಾಗಿ ಅಡಚಣೆ ಉಂಟಾಗಿದೆ. ಇದು ಜಿಡಿಪಿ ದರ ಪರಿಷ್ಕರಣೆಗೆ ಕಾರಣ ಎಂದು ಆರ್‌ಬಿಐ ಹೇಳಿದೆ.

ದೀರ್ಘಕಾಲದವರೆಗಿನ ಪೂರೈಕೆ ಸರಪಳಿಯಲ್ಲಿನ ಅಡಚಣೆಗಳು, ಜಾಗತಿಕ ಮಾರುಕಟ್ಟೆಗಳಲ್ಲಿ ಹೆಚ್ಚಿದ ಏರಿಳಿತ ಮತ್ತು ಹವಾಮಾನ ಸಂಬಂಧಿತ ಅಪಾಯಗಳು ದೇಶದ ಬೆಳವಣಿಗೆಯ ಮುನ್ನೋಟಕ್ಕೆ ಪ್ರತಿಕೂಲ ಅಂಶಗಳಾಗಿವೆ ಎಂದು ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಪ್ರಗತಿ ಶೇ 6.6, ದ್ವಿತೀಯ ತ್ರೈಮಾಸಿಕದಲ್ಲಿ ಶೇ 6.3, ತೃತೀಯ ತ್ರೈಮಾಸಿಕದಲ್ಲಿ ಶೇ 6.5 ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಶೇ 6.8ರಷ್ಟಾಗಲಿದೆ ಎಂದು ಅಂದಾಜಿಸಿದೆ.

ದೇಶದ ತಯಾರಿಕಾ ಮತ್ತು ಸೇವಾ ವಲಯದ ಪ್ರಗತಿಯು ವಿಸ್ತರಣೆಯ ಹಾದಿಯಲ್ಲಿದ್ದು, ವಲಯದ ವ್ಯವಹಾರದ ನಿರೀಕ್ಷೆಯು ಸಕಾರಾತ್ಮಕ ಆಗಿದೆ ಎಂದು ಮಲ್ಹೋತ್ರಾ ತಿಳಿಸಿದ್ದಾರೆ.

ಆರ್ಥಿಕ ಸ್ಥಿರತೆ ಮತ್ತು ಪೂರೈಕೆ ಸುಧಾರಣೆಯಿಂದಾಗಿ 2027–28ರಲ್ಲಿ ದೇಶದ ಜಿಡಿಪಿ ಪ್ರಗತಿ ಶೇ 7ಕ್ಕಿಂತ ಹೆಚ್ಚಾಗುವ ನಿರೀಕ್ಷೆ ಇದೆ
ಅನಂತ ನಾಗೇಶ್ವರನ್, ಮುಖ್ಯ ಆರ್ಥಿಕ ಸಲಹೆಗಾರ

ಎಫ್‌ಪಿಐಗಳಿಗೆ ತೆರಿಗೆ ವಿನಾಯಿತಿ

ರೂಪಾಯಿ ಮೇಲಿನ ಒತ್ತಡ ತಗ್ಗಿಸಲು, ವಿದೇಶಿ ಬಂಡವಾಳ ಆಕರ್ಷಿಸುವ ಉದ್ದೇಶದಿಂದ ವಿದೇಶಿ ಹೂಡಿಕೆದಾರರಿಗೆ (ಎಫ್‌ಪಿಐ) ಸರ್ಕಾರದ ಸಾಲ ಪತ್ರಗಳಿಂದ ಬರುವ ಬಡ್ಡಿ ಗಳಿಕೆ ಮತ್ತು ಬಂಡವಾಳ ಲಾಭದ ಮೇಲಿನ ತೆರಿಗೆಯಿಂದ ಕೇಂದ್ರ ಸರ್ಕಾರ ವಿನಾಯಿತಿ ನೀಡಿದೆ.

ಏಪ್ರಿಲ್ 1ರಿಂದ ಅನ್ವಯ ಆಗುವಂತೆ ಸರ್ಕಾರಿ ಸಾಲಪತ್ರಗಳ ಮಾರಾಟ, ವಿನಿಮಯ ಅಥವಾ ವರ್ಗಾವಣೆಯಿಂದ ಬರುವ ಬಡ್ಡಿ ವರಮಾನ ಮತ್ತು ಬಂಡವಾಳ ಗಳಿಕೆ ಮೇಲಿನ ತೆರಿಗೆ ವಿನಾಯಿತಿಗಳನ್ನು ಒದಗಿಸಲು ಆದಾಯ ತೆರಿಗೆ ಕಾಯ್ದೆಗೆ ತಿದ್ದುಪಡಿ ತರಲು ಸರ್ಕಾರ ಸುಗ್ರೀವಾಜ್ಞೆಯನ್ನು ಪ್ರಕಟಿಸಿದೆ.

ಈ ಸುಗ್ರೀವಾಜ್ಞೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಹಿ ಹಾಕಿದ್ದಾರೆ.

12 ತಿಂಗಳಿಗಿಂತ ಹೆಚ್ಚಿನ ಅವಧಿಗೆ ನೋಂದಾಯಿತ ಷೇರುಗಳು ಮತ್ತು ಸಾಲಪತ್ರಗಳನ್ನು ಹೊಂದಿರುವ ವಿದೇಶಿ ಹೂಡಿಕೆದಾರರು ದೀರ್ಘಾವಧಿ ಬಂಡವಾಳ ಗಳಿಕೆ ಮೇಲಿನ ತೆರಿಗೆಯಾಗಿ ಶೇ 12.5ರಷ್ಟು ಪಾವತಿಸಬೇಕಿತ್ತು.

ಸುದ್ದಿ 2 ನಿಮಿಷ

'ಇ–85': ಇಂಧನ ಮಾರಾಟ ಶುರು

ನವದೆಹಲಿ (ಪಿಟಿಐ): ಫ್ಲೆಕ್ಸ್-ಫ್ಯುಯೆಲ್ ವಾಹನಗಳಿಗೆ ಎಥೆನಾಲ್ ಪ್ರಮಾಣ ಹೆಚ್ಚಾಗಿರುವ 'ಇ–85' ಇಂಧನದ ಬಳಕೆಗೆ ಕೇಂದ್ರ ಸರ್ಕಾರ ಮುಕ್ತಗೊಳಿಸಿದ್ದು, ಸಾಮಾನ್ಯ ಪೆಟ್ರೋಲ್ ದರಕ್ಕಿಂತ ಪ್ರತಿ ಲೀಟರ್‌ಗೆ ₹20ರಷ್ಟು ರಿಯಾಯಿತಿ ಪ್ರಕಟಿಸಿದೆ.

ಈ ಇಂಧನವು ಆರಂಭಿಕವಾಗಿ ಆಯ್ದ ಪೆಟ್ರೋಲ್ ಬಂಕ್‌ಗಳಲ್ಲಿ ಮಾತ್ರ ದೊರೆಯಲಿದೆ. ಫ್ಲೆಕ್ಸ್ ಫ್ಯುಯೆಲ್ ಎಂಜಿನ್ ಹೊಂದಿರುವ ವಾಹನಗಳು ಮಾತ್ರ ಈ ಇಂಧನವನ್ನು ಬಳಕೆ ಮಾಡಬಹುದಾಗಿದೆ.

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ಅವರು ವಿಶ್ವ ಪರಿಸರ ದಿನದ ಅಂಗವಾಗಿ ದೆಹಲಿಯಲ್ಲಿ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಈ ಮಳಿಗೆಯನ್ನು ಉದ್ಘಾಟಿಸಿದರು. ಇದೇ ವೇಳೆ ದೇಶದಾದ್ಯಂತ 48 ಮಳಿಗೆಗೆ ಚಾಲನೆ ನೀಡಲಾಯಿತು.

ಪ್ರಸಕ್ತ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ 500 ಮತ್ತು 2027ರ ಅಂತ್ಯದ ವೇಳೆಗೆ 5 ಸಾವಿರ ಮಳಿಗೆಗಳಲ್ಲಿ ಈ ಇಂಧನ ಮಾರಾಟ ಆರಂಭಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ.



'ಇ–85' ಇಂಧನವು ಶೇ 80ರಿಂದ ಶೇ 85ರಷ್ಟು ಎಥೆನಾಲ್ ಹೊಂದಿದ್ದು, ಶೇ 14ರಿಂದ ಶೇ 19ರಷ್ಟು ಪೆಟ್ರೋಲ್ ಹೊಂದಿರಲಿದೆ.

ಏರ್‌ಟ್ರಂಕ್‌ನಿಂದ ₹3 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಮೂಲದ ತಂತ್ರಜ್ಞಾನ ಕಂಪನಿ 'ಏರ್‌ಟ್ರಂಕ್' 2030ರ ವೇಳೆಗೆ ಭಾರತದಲ್ಲಿ ₹3 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಶುಕ್ರವಾರ ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಏರ್‌ಟ್ರಂಕ್‌ನ ಸ್ಥಾಪಕ ಮತ್ತು ಸಿಇಒ ರಾಬಿನ್ ಖುಡಾ ಅವರನ್ನು ಭೇಟಿ ಮಾಡಿದ ಬಳಿಕ ಕಂಪನಿ ಈ ಘೋಷಣೆ ಮಾಡಿದೆ.

ದೇಶದ ಡಿಜಿಟಲ್ ಮೂಲಸೌಕರ್ಯ ವಲಯದ ಅತಿ ದೊಡ್ಡ ಹೂಡಿಕೆಗಳಲ್ಲಿ ಇದು ಒಂದಾಗಲಿದೆ. ಅಲ್ಲದೆ, ಕಂಪನಿಯು ದೇಶದಲ್ಲಿ 5 ಗಿಗಾವಾಟ್ ಸಾಮರ್ಥ್ಯದ ದತ್ತಾಂಶ ಕೇಂದ್ರವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ ಎಂದು ಪ್ರಧಾನಿ ಮೋದಿ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಇಂತಹ ಹೂಡಿಕೆಗಳು ಕ್ಲೌಡ್ ಕಂಪ್ಯೂಟಿಂಗ್ ಮತ್ತು ಕೃತಕ ಬುದ್ಧಿಮತ್ತೆಗೆ ಜಾಗತಿಕ ಕೇಂದ್ರವಾಗಿ ಭಾರತದ ಸ್ಥಾನವನ್ನು ಬಲಪಡಿಸುತ್ತದೆ. ಅಲ್ಲದೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಹೇಳಿದ್ದಾರೆ.

'ವ್ಯಾಪಾರ ಒಪ್ಪಂದ ಶೀಘ್ರ ಅಂತಿಮ'

ನರೇಂದ್ರ ಮೋದಿ ನನ್ನ ಆತ್ಮೀಯ ಸ್ನೇಹಿತ: ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ನನ್ನ ಆತ್ಮೀಯ ಸ್ನೇಹಿತ' ಎಂದಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕ ಮತ್ತು ಭಾರತದ ನಡುವಿನ ವ್ಯಾಪಾರ ಒಪ್ಪಂದ ಶೀಘ್ರದಲ್ಲೇ ಅಂತಿಮಗೊಳ್ಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಪ್ರಧಾನಿ ಮೋದಿ ಅವರನ್ನು ತುಂಬಾ ಇಷ್ಟಪಡುತ್ತೇನೆ. ನಮ್ಮಿಬ್ಬರ ನಡುವೆ ಉತ್ತಮ ಬಾಂಧವ್ಯ ಇದೆ. ಆದ್ದರಿಂದ ನಾವು ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿದ್ದೇವೆ' ಎಂದು ಗುರುವಾರ ಓವಲ್ ಕಚೇರಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ವ್ಯಾಪಾರ ಒಪ್ಪಂದ ಅಂತಿಮಗೊಳಿಸಲು ಉಭಯ ದೇಶಗಳ ನಡುವೆ ಪ್ರಗತಿಯಲ್ಲಿರುವ ಮಾತುಕತೆ ಬಗ್ಗೆ ಕೇಳಿದಾಗ ಟ್ರಂಪ್, ಭಾರತವು ಹಲವು ವರ್ಷಗಳಿಂದ ಅಮೆರಿಕದ ನೀತಿಗಳ ಲಾಭವನ್ನು ಪಡೆದುಕೊಂಡಿದೆ ಎಂದು ಹೇಳಿದರು. 'ಅವರು ನಮ್ಮ ಕಂಪನಿಗಳಿಗೆ ಭಾರಿ ಪ್ರಮಾಣದ ಸುಂಕ ವಿಧಿಸಿದರು. ಅದಕ್ಕೆ ಪ್ರತಿಯಾಗಿ ನಾವು ಅವರಿಗೆ ಏನನ್ನೂ ವಿಧಿಸಲಿಲ್ಲ' ಎಂದರು.

ಮೊದಲ ಹಂತದ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು (ಬಿಟಿಎ) ಅಂತಿಮಗೊಳಿಸುವುದಕ್ಕೆ ಸಂಬಂಧಿಸಿದ ಮಾತುಕತೆ ನಡೆಸಲು ಅಮೆರಿಕದ ನಿಯೋಗವು ಈ ವಾರದ ಆರಂಭದಲ್ಲಿ ಭಾರತಕ್ಕೆ ಬಂದಿತ್ತು. ಭಾರತದ ನಿಯೋಗದ ಜತೆಗಿನ ನಾಲ್ಕು ದಿನಗಳ ಮಾತುಕತೆ ಗುರುವಾರ ಕೊನೆಗೊಂಡಿದೆ. 'ಮೊದಲ ಹಂತದ ವ್ಯಾಪಾರ ಒಪ್ಪಂದದ ಬಹುತೇಕ ಅಂಶಗಳನ್ನು ಭಾರತ ಮತ್ತು ಅಮೆರಿಕ ಅಂತಿಮಗೊಳಿಸಿವೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಹೇಳಿದ್ದಾರೆ.




ಮೋದಿ ಹಾಗೂ ಟ್ರಂಪ್

ಹಾರ್ಲಿ-ಡೇವಿಡ್ಸನ್ ದ್ವಿಚಕ್ರ ವಾಹನದ ಹೆಸರು ಉಲ್ಲೇಖಿಸಿದ ಟ್ರಂಪ್, ಭಾರತವು ಹೆಚ್ಚಿನ ಸುಂಕ ವಿಧಿಸುತ್ತಿರುವುದರಿಂದ ಅಮೆರಿಕದ ಈ ಜನಪ್ರಿಯ ಕಂಪನಿಗೆ ಭಾರತದಲ್ಲಿ ತನ್ನ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡುವುದು ಕಷ್ಟಕರವಾಗಿ ಪರಿಣಮಿಸಿದೆ ಎಂದರು.

'ಈ ಹಿಂದೆ ಅವರು (ಭಾರತವು) ಹಾರ್ಲಿ-ಡೇವಿಡ್ಸನ್ ಕಂಪನಿಗೆ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಲು ಬಿಡುತ್ತಿರಲಿಲ್ಲ. ಅವರು ಶೇಕಡಾ 200ರಷ್ಟು ಸುಂಕ ವಿಧಿಸಿ, ಹಾರ್ಲಿ–ಡೇವಿಡ್ಸನ್ ಕಂಪನಿಗೆ ತಡೆಯೊಡ್ಡಿದರು. ಕಂಪನಿಯು ಬೇರೆ ದಾರಿಯಿಲ್ಲದೆ ತನ್ನ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ಭಾರತಕ್ಕೆ ಹೋಗಬೇಕಾಯಿತು. ಇದು ತೀರಾ ದುರದೃಷ್ಟಕರ ಬೆಳವಣಿಗೆ' ಎಂದು ಹೇಳಿದರು.

'ಭಾರತದ ದ್ವಿಚಕ್ರ ವಾಹನ ತಯಾರಿಕಾ ಕಂಪನಿಗಳು ಅಮೆರಿಕದಲ್ಲಿ ಈ ರೀತಿಯ ಯಾವುದೇ ಅಡೆತಡೆ ಎದುರಿಸಲಿಲ್ಲ. ಅವರು ನಮ್ಮಲ್ಲಿಗೆ ಬಂದು ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಿದರು. ಭಾರತದ ಕಂಪನಿಗಳಿಗೆ ನಾವು ಎಷ್ಟು ಸುಂಕ ವಿಧಿಸಿದ್ದೇವೆ ಎಂಬುದು ನಿಮಗೆ ತಿಳಿದಿದೆಯೇ? ಏನೂ ಇಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಭಾರತದ ಸರಕುಗಳ ಮೇಲೆ ಸುಂಕ ವಿಧಿಸಿರುವುದರಿಂದ ನಾವು ಸಾಕಷ್ಟು ಹಣ ಗಳಿಸುತ್ತಿದ್ದೇವೆ' ಎಂದರು.

ಟ್ರಂಪ್‌ಗೆ ಆಭಾರಿ: ಪಾಕ್ ಪ್ರಧಾನಿ



ಇಸ್ಲಾಮಾಬಾದ್ (ಪಿಟಿಐ): ಭಾರತದೊಂದಿಗೆ ಕದನ ವಿರಾಮ ಏರ್ಪಡಲು ಕಾರಣರಾದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸದಾ ಕೃತಜ್ಞರಾಗಿ ಇರುವುದಾಗಿ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದರು.

ಎರಡು ದೇಶಗಳ ನಡುವಿನ ಸೇನಾ ಸಂಘರ್ಷದ ವೇಳೆ ಸಕಾಲಿಕ ಹಸ್ತಕ್ಷೇಪ ಮಾಡಿ, ಲಕ್ಷಾಂತರ ಜನರ ಪ್ರಾಣ ಉಳಿಯಲು ಟ್ರಂಪ್ ನೆರವಾಗಿದ್ದಾರೆ ಎಂದು ಅವರು ಸ್ಮರಿಸಿದರು.

ಅಮೆರಿಕ ಸ್ವಾತಂತ್ರ್ಯ ಪಡೆದ 250ನೇ ವರ್ಷಾಚರಣೆ ಪ್ರಯುಕ್ತ ಅಮೆರಿಕದ ರಾಯಭಾರ ಕಚೇರಿಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ಎಂಟು ದಶಕಗಳಿಂದ ಪಾಕಿಸ್ತಾನ ಮತ್ತು ಅಮೆರಿಕದ ಜತೆಗೆ ವಿಶೇಷ ಮತ್ತು ನೈಜ ಸಂಬಂಧ ಇದೆ ಎಂದು ಬಣ್ಣಿಸಿದರು.

ಕಳೆದ ವರ್ಷ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನರು ಮೃತಪಟ್ಟ ಬಳಿಕ ಭಾರತ ಮತ್ತು ಪಾಕಿಸ್ತಾನದ ನಡುವೆ ನಾಲ್ಕು ದಿನಗಳವರೆಗೆ ನಡೆದ ಸೇನಾ ಸಂಘರ್ಷವನ್ನು ಉಲ್ಲೇಖಿಸಿದ ಪಾಕ್ ಪ್ರಧಾನಿ, ಟ್ರಂಪ್ ಅವರ ಸಮಯೋಚಿತ ಹಸ್ತಕ್ಷೇಪವು ಯುದ್ಧವನ್ನು ಕೊನೆಗೊಳಿಸುವಲ್ಲಿ ಮಹತ್ವದ ಪಾತ್ರವಹಿಸಿತು ಎಂದರು.

ಆರ್ಥಿಕ ವರ್ಷ 2025–26 ಜಿಡಿಪಿ ಶೇ 7.7 ಪ್ರಗತಿ

ಒಂದನೇ ಪುಟದಿಂದ...

ಪಶ್ಚಿಮ ಏಷ್ಯಾ ಸಂಘರ್ಷವು ಸದ್ಯದ ಮಟ್ಟಿಗೆ ದೇಶದ ಜಿಡಿಪಿ ಮೇಲೆ ದೊಡ್ಡ ಮಟ್ಟದಲ್ಲಿ ಪರಿಣಾಮ ಬೀರಿಲ್ಲ. ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಒಂದು ತಿಂಗಳು ಮಾತ್ರ ಯುದ್ಧದ ಪರಿಣಾಮವನ್ನು ದೇಶದ ಜಿಡಿಪಿ ಎದುರಿಸಿದೆ. ಇಂಧನ, ಅಡುಗೆ ಅನಿಲ, ರಸಗೊಬ್ಬರ ಪೂರೈಕೆಯಲ್ಲಿ ಆಗಿರುವ ಕೊರತೆ ಮತ್ತು ಬೆಲೆ ಏರಿಕೆ ದೇಶದ ಜಿಡಿಪಿ ಮೇಲೆ ಹೇಗೆ ಪರಿಣಾಮ ಬೀರಿದೆ ಎನ್ನುವುದು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಸ್ಪಷ್ಟವಾಗಿ ಗೋಚರಿಸಲಿದೆ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ.

ಆರ್ಥಿಕತೆಯ ಒಟ್ಟು ಮೌಲ್ಯವರ್ಧನೆ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಶೇ 7.9ರಷ್ಟಾಗಿದೆ ಎಂದು ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಹೇಳಿದೆ.

ಜಾಗತಿಕ ಆರ್ಥಿಕ ಅಸ್ಥಿರತೆಗಳ ನಡುವೆಯೇ ನಿರ್ಣಾಯಕ ನೀತಿಯ ಮೂಲಕ ಸುಸ್ಥಿರ ಜಿಡಿಪಿ ಬೆಳವಣಿಗೆ ದರ ಕಾಯ್ದುಕೊಳ್ಳಲು ಸರ್ಕಾರ ಬದ್ಧವಾಗಿದೆ
ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ

ಬೇಡಿಕೆ ಹೆಚ್ಚಿರುವುದು ಮಾತ್ರವಲ್ಲ, ಉತ್ಪಾದನೆ ಹೆಚ್ಚಿರುವ ಅಂಶವೂ ಜಿಡಿಪಿ ಪ್ರಗತಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ ಎಂದು ಡೆಲಾಯ್ಟ್ ಇಂಡಿಯಾದ ಆರ್ಥಿಕ ತಜ್ಞೆ ರುಮ್ಕಿ ಮಜುಂದಾರ್ ಅಭಿಪ್ರಾಯಪಟ್ಟಿದ್ದಾರೆ.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	32099-34599
ಕೋಕ	17869-33090
ಫ್ಯಾಕ್ಟರಿ	13509-26139
ಹಳೆಚಾಲಿ	46099-48398
ಹೊಸಚಾಲಿ	42569-47439
ಪುತ್ತೂರು	
ಕೋಕ	20000-33500
ಶಿವಮೊಗ್ಗ	
ಸರಕು	56029-91896
ಬೆಟ್ಟೆ	50119-62519
ರಾಶಿ	47199-54209
ಗೊರಬಲು	20069-41599
ಸಿದ್ದಾಪುರ	
ಬಿಳಿಗೋಟು	25699-35809
ಚಾಲಿ	39299-48119
ಕೋಕ	20399-32899
ಕೆಂಪುಗೋಟು	33109-36699
ರಾಶಿ	48599-53289
ತಟ್ಟಿಬೆಟ್ಟೆ	37000-48899
ಶಿರಸಿ	
ಬೆಟ್ಟೆ	41800-48699
ಬಿಳಿಗೋಟು	26219-38199
ಚಾಲಿ	44299-48799
ಕೆಂಪುಗೋಟು	26100-35099
ರಾಶಿ	50000-53500
ಯಲ್ಲಾಪುರ	
ಆಪಿ	58999-61600
ಬಿಳಿಗೋಟು	16012-37289
ಚಾಲಿ	37709-49099
ಕೋಕ	16900-34699
ಕೆಂಪುಗೋಟು	24899-36899
ರಾಶಿ	50400-56059
ತಟ್ಟಿಬೆಟ್ಟೆ	38599-49928

'ಎಸ್‌ಯು 57' ಅಭಿವೃದ್ಧಿಗೆ ಸಹಭಾಗಿತ್ವ



ವ್ಲಾದಿಮಿರ್ ಪುಟಿನ್

ಸೇಂಟ್ ಪೀಟರ್ಸ್‌ಬರ್ಗ್ (ಪಿಟಿಐ): 'ಅತ್ಯಾಧುನಿಕ ಯುದ್ಧ ವಿಮಾನ ಸುಕೋಯ್ 'ಎಸ್‌ಯು–57' ಅನ್ನು ಭಾರತಕ್ಕೆ ಪೂರೈಸಲು ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮುಂದಾಗಿದ್ದಾರೆ.

'ಸದೃಢವಾದ ಕಾರ್ಯತಂತ್ರ ಪಾಲುದಾರಿಕೆಯಲ್ಲಿ ಈ ಯುದ್ಧ ವಿಮಾನವನ್ನು ಭಾರತದಲ್ಲಿಯೇ ಉತ್ಪಾದಿಸಲೂ ರಷ್ಯಾ ಸಿದ್ಧವಿದೆ' ಎಂದೂ ಪುಟಿನ್ ಹೇಳಿದ್ದಾರೆ.

ಗುರುವಾರ ರಾತ್ರಿ ಇಲ್ಲಿ ವಿವಿಧ ಸುದ್ದಿಸಂಸ್ಥೆಗಳ ಪ್ರತಿನಿಧಿಗಳ ಜೊತೆಗೆ ಸಂವಾದ ನಡೆಸಿದ ಪುಟಿನ್ ಅವರು, 'ಭಾರತ ಜೊತೆಗಿನ ರಕ್ಷಣಾ ಕ್ಷೇತ್ರ ಮತ್ತು ಸೇನಾ ಸಹಭಾಗಿತ್ವವನ್ನು ಉಲ್ಲೇಖಿಸಿದರು.

ಭಾರತ ಇತ್ತೀಚೆಗೆ 5ನೇ ಪೀಳಿಗೆಯ ಬಹುಉದ್ದೇಶದ ಯುದ್ಧ ವಿಮಾನ (ಎಎಂಸಿಎ) ಯೋಜನೆ ಅನುಷ್ಠಾನಕ್ಕೆ ಚಾಲನೆ ನೀಡಿದೆ. ಇದನ್ನು ದೇಶದ ಅತಿದೊಡ್ಡ ದೇಶಿ ಉತ್ಪಾದನೆ ವೈಮಾನಿಕ ಯೋಜನೆ ಎಂದೂ ಬಣ್ಣಿಸಲಾಗಿದೆ.

'ನನ್ನ ಪ್ರಕಾರ, 'ಎಸ್‌ಯು–57' ಈವರೆಗಿನ ಅತ್ಯುತ್ತಮ ಯುದ್ಧ ವಿಮಾನ ಅಭಿವೃದ್ಧಿ ಯೋಜನೆ. ಜಂಟಿ ಸಹಭಾಗಿತ್ವ ಕುರಿತ ಸಲಹೆಗೆ 'ಪರಿಶೀಲಿಸೋಣ' ಎಂದೂ ಭಾರತ ಪ್ರತಿಕ್ರಿಯಿಸಿದೆ' ಎಂದು ಸಂವಾದದಲ್ಲಿ ಪಿಟಿಐ ಸುದ್ದಿಸಂಸ್ಥೆಯ ಸಿಇಒ, ಪ್ರಧಾನ ಸಂಪಾದಕ ವಿಜಯ್ ಜೋಷಿ ಅವರ ಪ್ರಶ್ನೆಗೆ ಪುಟಿನ್ ಪ್ರತಿಕ್ರಿಯಿಸಿದರು.

'ರಷ್ಯಾದ ಆಹ್ವಾನವನ್ನು ಭಾರತ ಪೂರ್ಣವಾಗಿ ತಿರಸ್ಕರಿಸಿಲ್ಲ. ಯೋಜನೆಗೆ ಸಂಬಂಧಿಸಿ ಭಾರತದ ಎಚ್‌ಎಎಲ್ ಸಂಸ್ಥೆಯು ಸುಕೋಯ್ ಸಂಸ್ಥೆಯ ವಿನ್ಯಾಸ ವಿಭಾಗದ ಜೊತೆಗೆ ಸಂಪರ್ಕದಲ್ಲಿದೆ' ಎಂದು ತಿಳಿದುಬಂದಿದೆ.

ಉಲ್ಲೇಖಿತ ಎಸ್‌ಯು–57 ಯುದ್ಧ ವಿಮಾನವು ಭಾರತದ ವಾಯುಪಡೆಗೆ 2035ರ ಮೊದಲು ಸೇರ್ಪಡೆ ಆಗುವ ಸಂಭವ ಇಲ್ಲ. ಎಲ್ಲ ತಾಂತ್ರಿಕ ವಿವರಗಳು ತೃಪ್ತಿಕರವಾಗಿದ್ದಲ್ಲಿ 36 ವಿಮಾನಗಳನ್ನು ಖರೀದಿಸುವ ಸಾಧ್ಯತೆಯನ್ನು ಭಾರತ ಸರ್ಕಾರ ಪರಿಶೀಲಿಸುತ್ತಿದೆ ಎಂದು ತಿಳಿದುಬಂದಿದೆ.

'ಚೀನಾ–ಭಾರತ ಗಡಿ ವಿವಾದ: ರಷ್ಯಾ ಮಧ್ಯ ಪ್ರವೇಶಿಸದು'

'ಭಾರತ –ಚೀನಾ ನಡುವಣ, 'ಸೂಕ್ಷ್ಮವಾದ' ದ್ವಿಪಕ್ಷೀಯ ಬಾಂಧವ್ಯದ ವಿಷಯದಲ್ಲಿ ಮಧ್ಯಪ್ರವೇಶಿಸಲು ರಷ್ಯಾ ಬಯಸುವುದಿಲ್ಲ' ಎಂದು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. 'ವಿವಾದವನ್ನು ಸೌಹಾರ್ದವಾಗಿ ಬಗೆಹರಿಸಿಕೊಳ್ಳಲು ಭಾರತದ ಪ್ರಧಾನಿ ನರೇಂದ್ರ ಮೋದಿ, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಸಮರ್ಥರಿದ್ದಾರೆ' ಎಂದು ಅಭಿಪ್ರಾಯಪಟ್ಟರು.

ಸುದ್ದಿಸಂಸ್ಥೆಗಳ ಪ್ರತಿನಿಧಿಗಳ ಜೊತೆಗಿನ ಸಂವಾದದಲ್ಲಿ ಅವರು, 'ಭಾರತ–ಚೀನಾ ಗಡಿ ವಿವಾದ ಸೂಕ್ಷ್ಮ ವಿಷಯ. ಈ ವಿಷಯದಲ್ಲಿ ಮಧ್ಯಪ್ರವೇಶಿಸುವುದು ಒಳ್ಳೆಯ ಚಿಂತನೆಯಲ್ಲ. ರಷ್ಯಾ ಈ ಎರಡೂ ದೇಶಗಳ ಜೊತೆಗೆ ಉತ್ತಮ ಸಂಬಂಧ ಹೊಂದಿದೆ' ಎಂದು ಹೇಳಿದರು.

ಗ್ರ್ಯಾನ್‌ಸ್ಲಾಮ್ ಗೆಲ್ಲುವತ್ತ ಜ್ವರೇವ್

ಫ್ರೆಂಚ್ ಓಪನ್ ಟೆನಿಸ್: ಸೆಮಿಫೈನಲ್‌ನಲ್ಲಿ ಮೆನ್ಸಿಕ್ ವಿರುದ್ಧ ಜಯ

ಪ್ಯಾರಿಸ್ (ಎಎಫ್‌ಪಿ): ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರು ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲುವ ತಮ್ಮ ದೀರ್ಘ ಕಾಲದ ಕನಸನ್ನು ಸಾಕಾರಗೊಳಿಸುವ ಹಾದಿಯಲ್ಲಿ ದಾಪುಗಾಲಿಟ್ಟರು. ಫ್ರೆಂಚ್ ಓಪನ್ ಟೆನಿಸ್ ಟೂರ್ನಿ ಸಿಂಗಲ್ಸ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಜ್ವರೇವ್ ನಾಲ್ಕು ಸೆಟ್‌ಗಳ ಸೆಣಸಾಟದಲ್ಲಿ ಯಾಕೂಬ್ ಮೆನ್ಸಿಕ್ ಅವರನ್ನು ಸೋಲಿಸಿ ಫೈನಲ್ ತಲುಪಿದರು.

ಫಿಲಿಪ್ ಶಾತ್ರಿಯೆ ಅಂಕಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಅವರು 7–5, 6–2, 3–6, 6–3 ರಿಂದ ಝೆಕ್ ರಿಪಬ್ಲಿಕ್‌ನ ಮೆನ್ಸಿಕ್ ಅವರನ್ನು ಸೋಲಿಸಿದರು. ಫೈನಲ್ ಪಂದ್ಯ ಭಾನುವಾರ ನಡೆಯಲಿದೆ.

ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಜ್ವರೇವ್ ಅವರು ಈ ಹಿಂದೆ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಮೂರು ಬಾರಿ ಫೈನಲ್ ತಲುಪಿದ್ದರೂ, ಪ್ರಶಸ್ತಿ ಎಟುಕಿರಲಿಲ್ಲ. ಎರಡು ವರ್ಷಗಳ ಹಿಂದೆ ರೋಲಂಡ್ ಗ್ಯಾರೋಸ್‌ನಲ್ಲಿ ಫೈನಲ್ ತಲುಪಿದಾಗ ಕಾರ್ಲೋಸ್ ಅಲ್ಕರಾಜ್ ಅವರಿಗೆ ಮಣಿದಿದ್ದರು. 20 ವರ್ಷ ವಯಸ್ಸಿನ ಮೆನ್ಸಿಕ್ ಎದುರಿನ ಪಂದ್ಯದಲ್ಲಿ ಜ್ವರೇವ್ ಅವರ ಅನುಭವ ಎದ್ದುಕಂಡಿತು.



ಅಲೆಕ್ಸಾಂಡರ್ ಜ್ವರೇವ್ ಎಎಫ್‌ಪಿ ಚಿತ್ರ

ಪ್ರಶಸ್ತಿಗೆ ಪ್ರಬಲ ಆಕಾಂಕ್ಷಿಯಾಗಿರುವ ಫ್ಲಾವಿಯೊ ಕಾಬೊಲಿ (ಇಟಲಿ) ಅಥವಾ 104ನೇ ಕ್ರಮಾಂಕದ ಮ್ಯಾಟಿಯೊ ಅರ್ನಾಲ್ಡಿ ಅವರನ್ನು ನಡುವಣ ಸೆಮಿಫೈನಲ್ ವಿಜೇತರನ್ನು ಜ್ವರೇವ್ ಎದುರಿಸಲಿದ್ದಾರೆ.

ಇಂದು ಮಹಿಳಾ ಫೈನಲ್: ಕ್ವಾಲಿಫಯರ್ ಹಂತದಿಂದ ಬಂದು ಇಲ್ಲಿ ಪ್ರಧಾನ ಸುತ್ತಿನ ಫೈನಲ್ ತಲುಪಿದ ಮೊದಲ ಆಟಗಾರ್ತಿ ಎನಿಸಿದರುವ ಮಾಯಾ ಕಲ್ಹಿನ್‌ಸ್ಕಾ ಅವರು ಶನಿವಾರ ನಡೆಯಲಿರುವ ಮಹಿಳಾ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಫೇವರಿಟ್ ಆಗಿರುವ ರಷ್ಯಾದ ಮೀರಾ ಅಂದ್ರೆಯೇವಾ ಅವರನ್ನು ಎದುರಿಸಲಿದ್ದಾರೆ.

ಮೀರಾ ಇಲ್ಲಿ ಎಂಟನೇ ಶ್ರೇಯಾಂಕ ಗಳಿಸಿದ್ದಾರೆ. ಕಲ್ಹಿನ್‌ಸ್ಕಾ ಅವರು ವಿಶ್ವ ಕ್ರಮಾಂಕದಲ್ಲಿ 114ನೇ ಸ್ಥಾನದಲ್ಲಿದ್ದಾರೆ. ಆದರೆ ಅವರು ಫೈನಲ್‌ನಲ್ಲಿ ಯಶಸ್ಸು ಗಳಿಸಿದಲ್ಲಿ ಅದು ಈ ಟೂರ್ನಿಯ ಅದ್ಭುತ ಯಶೋಗಾಥೆಯಾಗಲಿದೆ.

ಅಥ್ಲೆಟಿಕ್ಸ್: ತೀರ್ಥೇಶ್, ಉನ್ನತಿ ದಾಖಲೆ

ಬೆಂಗಳೂರು: ತೀರ್ಥೇಶ್ ಪಿ. ಶೆಟ್ಟಿ ಮತ್ತು ಉನ್ನತಿ ಅಯ್ಯಪ್ಪ ಅವರು ಶ್ರೀಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ಮುಕ್ತಾಯಗೊಂಡ ರಾಜ್ಯ ಸೀನಿಯರ್ ಚಾಂಪಿಯನ್‌ಷಿಪ್‌ನ 200 ಮೀ. ಓಟದಲ್ಲಿ ಪ್ರಾಬಲ್ಯ ಮೆರೆದು ನೂತನ ದಾಖಲೆ ಸ್ಥಾಪಿಸಿದರು.

ಮೊದಲ ದಿನ 400 ಮೀ. ಓಟದಲ್ಲಿ ಜಯಗಳಿಸಿದ್ದ 24 ವರ್ಷ ವಯಸ್ಸಿನ ತೀರ್ಥೇಶ್, ಎರಡನೇ ದಿನ 200 ಮೀ. ಓಟವನ್ನು 20.70 ಸೆ.ಗಳಲ್ಲಿ ಪೂರೈಸಿದರು. ಅಭಿನ್ ಬಿ.ದೇವಾಡಿಗ ಹೆಸರಿನಲ್ಲಿದ್ದ ದಾಖಲೆ (20.79) ಮುರಿದರು. ತೀರ್ಥೇಶ್ ಅವರು ಮಹಾಂತೇಶ ಎಸ್.ಹೆಳವಿ (20.91 ಸೆ.) ಮತ್ತು ಪ್ರಸನ್ನಕುಮಾರ್ (21.08 ಸೆ.) ಅವರನ್ನು ಹಿಂದೆಹಾಕಿದರು.

21 ವರ್ಷ ವಯಸ್ಸಿನ ಉನ್ನತಿ 23.10 ಸೆ.ಗಳಲ್ಲಿ ಗುರಿತಲುಪಿದರು. ಗುರುವಾರ 100 ಮೀ. ಓಟದಲ್ಲಿ ಅವರನ್ನು ಹಿಂದೆಹಾಕಿದ್ದ ಪ್ರಕೃತಿ ರೂಪಾ ಎರಡನೇ ಸ್ಥಾನಕ್ಕೆ ಸರಿದರು. 36 ವರ್ಷ ಹಳೆಯ ದಾಖಲೆ ಒಲಿಂಪಿಯನ್ ಅಶ್ವಿನಿ ನಾಚಪ್ಪ (23.40 ಸೆ.) ಹೆಸರಿನಲ್ಲಿತ್ತು.



ಉನ್ನತಿ ಅಯ್ಯಪ್ಪ

400 ಮೀ. ಓಟದಲ್ಲಿ ಆರ್ಯನ್ ಕಶ್ಯಪ್ (50.70 ಸೆ.), 10000 ಮೀ. ಓಟದಲ್ಲಿ ಶೈಲೇಶ್ ಕುಶ್ವಾಹ (29:56.95), ಡೆಕಾಥ್ಲಾನ್‌ನಲ್ಲಿ ತ್ರಿಲೋಕ್ ಒಡೆಯರ್ (6104 ಪಾಯಿಂಟ್ಸ್) ಮೊದಲಿಗರಾದರು.

ಮಹಿಳೆಯರ 10000 ಮೀ. ಓಟದಲ್ಲಿ ಯುವರಾಣಿ (46:40.70), 400 ಮೀ. ಹರ್ಡಲ್ಸ್‌ನಲ್ಲಿ ಸಿಂಚಲ್ ಕಾವೇರಮ್ಮ (58.96 ಸೆ.), ಹೆಪ್ಟಥ್ಲಾನ್‌ನಲ್ಲಿ ರಕ್ಷಿತಾ (3754 ಪಾಯಿಂಟ್ಸ್) ಮೊದಲ ಸ್ಥಾನ ಗಳಿಸಿದರು.



ಸಿನಿ ಸಮ್ಮಾನ: ಅತ್ಯುತ್ತಮ ನಿರ್ದೇಶನ ಸ್ಪರ್ಧೆಯಲ್ಲಿ...

4 ನೇ ಆವೃತ್ತಿ ಜೂನ್ 19ಕ್ಕೆ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿ ಜೂನ್ 19ರಂದು ನಡೆಯಲಿದೆ. ಈಗಾಗಲೇ 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಹಾಕುವ ವೋಟ್ ವಿಜೇತರನ್ನು ತೀರ್ಮಾನಿಸಲಿದೆ. ಇದೀಗ 'ಅತ್ಯುತ್ತಮ ನಿರ್ದೇಶನ' ವಿಭಾಗದಲ್ಲಿ ನಾಮನಿರ್ದೇಶನಗೊಂಡವರನ್ನು ಪರಿಚಯಿಸುವ ಸಮಯ.

ರಿಷಬ್ ಶೆಟ್ಟಿ




'ಕಾಂತಾರ–ಅಧ್ಯಾಯ 1'ರ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. 'ರಿಕ್ಕಿ' ಮೂಲಕ ಆರಂಭವಾದ ಇವರ ನಿರ್ದೇಶನದ ಪಯಣ 'ಕಿರಿಕ್ ಪಾರ್ಟಿ', 'ಸರ್ಕಾರಿ ಹಿ.ಪ್ರಾ.ಶಾಲೆ, ಕಾಸರಗೋಡು' ಮೂಲಕ ಹೊಸ ಆಯಾಮ ಪಡೆಯಿತು. 'ಸರ್ಕಾರಿ...' ರಾಷ್ಟ್ರ ಪ್ರಶಸ್ತಿಯನ್ನು ಬಾಚಿಕೊಂಡಿತು. ಬಳಿಕ 2022ರಲ್ಲಿ ತೆರೆಕಂಡ 'ಕಾಂತಾರ' ಅವರ ನಿರ್ದೇಶನದ ಸಾಮರ್ಥ್ಯವನ್ನು ದೇಶಕ್ಕೇ ಪರಿಚಯಿಸಿತು. 'ಕಾಂತಾರ'ದಲ್ಲಿನ ನಟನೆಗೆ 'ಸ್ವರ್ಣ ಕಮಲ' ರಾಷ್ಟ್ರೀಯ ಪ್ರಶಸ್ತಿಯು ಮುಡಿಗೇರಿತು. ಅತ್ಯುತ್ತಮ ಮನರಂಜನಾತ್ಮಕ ಸಿನಿಮಾ ರಾಷ್ಟ್ರ ಪ್ರಶಸ್ತಿಯೂ ಸಂದಿತು. ಸದ್ಯ ರಿಷಬ್ ಅವರು ತಮ್ಮ ನಿರ್ದೇಶನದ ಹೊಸ ಸಿನಿಮಾದ ತಯಾರಿ ಆರಂಭಿಸಿದ್ದಾರೆ.

ಬಿ.ನವೀನ್ ರೆಡ್ಡಿ



'ಮಾರ್ದಣಿ' ಸಿನಿಮಾದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ತುಮಕೂರಿನ ಇವರು ಕಳೆದ 22 ವರ್ಷಗಳಿಂದ ಚಿತ್ರರಂಗದಲ್ಲಿದ್ದಾರೆ. 'ಸಂಗಮ', 'ಕೂಲ್', 'ಲೀಡರ್' ಹೀಗೆ ಹಲವು ಸಿನಿಮಾಗಳಲ್ಲಿ ಸಹಾಯಕ–ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಇವರು 2020ರಲ್ಲಿ 'ಚಾಕಿ' ಎಂಬ ಸಿನಿಮಾ ಮೂಲಕ ನಿರ್ದೇಶಕರಾಗಿದ್ದರು. ಸಿನಿಮಾ ಕ್ಷೇತ್ರದಲ್ಲಿ ಬರವಣಿಗೆಗೆ ಹೆಚ್ಚಿನ ಸಮಯವನ್ನು ಮೀಸಲಿಡುವ ಇವರು 2025ರಲ್ಲಿ 'ಮಾರ್ದಣಿ' ಮೂಲಕ ಕನ್ನಡ ಸಿನಿಮಾಗೆ ಅಪರೂಪದ ಕಥೆಯೊಂದನ್ನು ತಂದರು. ಜೈಲಿನಲ್ಲಿ 'ಹ್ಯಾಂಗ್‌ಮ್ಯಾನ್' ಆಗಿ ಕೆಲಸ ಮಾಡುವ ನಾಯಕನ ಪಾತ್ರದ ಬರವಣಿಗೆಯೂ ಭಿನ್ನವಾಗಿತ್ತು. ಸದ್ಯ ಹೊಸ ಪ್ರಾಜೆಕ್ಟ್ ಮೇಲೆ ನವೀನ್ ಅವರು ಕಾರ್ಯ ಆರಂಭಿಸಿದ್ದಾರೆ.

ಕಿಶೋರ್ ಮೂಡಬಿದ್ರೆ



'ರಿಪ್ಪನ್ ಸ್ವಾಮಿ' ಚಿತ್ರದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಚಿತ್ರರಂಗದಲ್ಲಿ ಒಂದೂವರೆ ದಶಕಗಳ ಅನುಭವ ಹೊಂದಿರುವ ಇವರು ಹಿರಿತೆರೆ, ಕಿರುತೆರೆಯ ಹಲವು ವಿಭಾಗಗಳಲ್ಲಿ ಕೆಲಸ ಮಾಡಿದ್ದಾರೆ. 2011ರಲ್ಲಿ ಕಲಾ ನಿರ್ದೇಶಕ ಚೇತನ್ ಮುಂಡಾಡಿ ಅವರ ತಂಡದಲ್ಲಿ ಸೆಟ್ ಬಾಯ್ ಆಗಿ ಕಿರುತೆರೆಯಲ್ಲಿ ಕೆಲಸ ಪ್ರಾರಂಭಿಸಿದರು. ಬಳಿಕ ಸಹ, ಸಹಾಯಕ ನಿರ್ದೇಶಕರಾದರು. 12 ತುಳು ಸಿನಿಮಾಗಳಲ್ಲಿ ಸಹ, ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದಾರೆ. 2020ರಲ್ಲಿ ವಿಜಯ್ ರಾಘವೇಂದ್ರ ಅವರಿಗೆ 'ಮಾಲ್ಗುಡಿ ಡೇಸ್' ಚಿತ್ರ ನಿರ್ದೇಶಿಸಿದರು. ನಂತರ ತುಳುವಿನಲ್ಲಿ 'ಅಪ್ಪೆ ಟೀಚರ್' ಎಂಬ ಹಾಸ್ಯಮಯ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದರು. 'ರಿಪ್ಪನ್ ಸ್ವಾಮಿ' ಇವರ ಮೂರನೇ ಸಿನಿಮಾ. ಇವರು ಸದ್ಯ ಹೊಸ ಚಿತ್ರದ ಸಿದ್ಧತೆಯಲ್ಲಿದ್ದಾರೆ.

ಅನೀಶ್ ಪೂಜಾರಿ ವೇಣೂರು



'ದಸ್ಕತ್' ಸಿನಿಮಾ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಇದು ಇವರ ನಿರ್ದೇಶನದ ಚೊಚ್ಚಲ ಸಿನಿಮಾ. ವೇಣೂರಿನ ಶಾಲೆಯೊಂದರಲ್ಲಿ ಶಿಕ್ಷಕರಾಗಿದ್ದ ಇವರು ಎಂ.ಎ ಕನ್ನಡ ಪದವೀಧರ. ಜೀ ಕನ್ನಡದ ಕಾಮಿಡಿ ಕಿಲಾಡಿಗಳು ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟ ಇವರು ಹಾಸ್ಯನಟನಾಗಿ ಗುರುತಿಸಿಕೊಂಡವರು. 'ಕನಸು ಮಾರಾಟಕ್ಕಿದೆ' ಸಿನಿಮಾದ ಸಹ ನಿರ್ದೇಶಕರಾಗಿ ನಿರ್ದೇಶನದತ್ತ ವಾಲಿದರು. 'ಮಾಯೆ', 'ವನಜ' ಎಂಬ ವೆಬ್‌ಸರಣಿಯನ್ನು ನಿರ್ದೇಶಿಸಿದ್ದಾರೆ. ಸದ್ಯ ಎರಡು ಸಿನಿಮಾಗಳನ್ನು ನಿರ್ದೇಶಿಸಲು ಸಜ್ಜಾಗಿದ್ದಾರೆ. ಇದರಲ್ಲಿ ಒಂದು ತುಳು ಸಿನಿಮಾವೂ ಕೂಡಿದೆ.

ಪುನೀತ್ ರಂಗಸ್ವಾಮಿ



'ಏಳುಮಲೆ' ಸಿನಿಮಾದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಮಂಡ್ಯದ ಇವರು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಗೀತ ಸಾಹಿತ್ಯದ ಕಡೆ ಆಸಕ್ತಿ ಮೂಡಿಸಿಕೊಂಡವರು. 200ಕ್ಕೂ ಹೆಚ್ಚು ಭಕ್ತಿಗೀತೆಗಳನ್ನು ಬರೆದಿದ್ದಾರೆ. ನಂತರ ಸಿನಿಮಾ ಜೀವನದ ಆರಂಭದಲ್ಲಿ ಗೀತ ಸಾಹಿತ್ಯ ಮತ್ತು ಸಂಭಾಷಣೆ ಕೆಲಸ ಮಾಡಿದ್ದಾರೆ. ಎಸ್.ಮಹೇಂದರ್, ಗುರು ದೇಶಪಾಂಡೆ ಮತ್ತು ತರುಣ್ ಸುಧೀರ್ ಅವರಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವ ಇವರು 'ಕಾಟೇರ', 'ಗುರುಶಿಷ್ಯರು' ಸೇರಿದಂತೆ ಹಲವು ಸಿನಿಮಾಗಳಿಗೆ ಹಾಡು ಬರೆದಿದ್ದಾರೆ. 'ಕಾಟೇರ'ದಲ್ಲಿ ತರುಣ್ ಸುಧೀರ್ ಅವರಿಗೆ ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇವರಿಗಿದೆ.

ಭೀಮರಾವ್ ಪಿ.



'ಹೆಬ್ಬುಲಿ ಕಟ್' ಸಿನಿಮಾದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ರಾಯಚೂರು ಜಿಲ್ಲೆಯ ಮಾನ್ವಿಯವರಾದ ಇವರು ಪತ್ರಿಕೋದ್ಯಮದಲ್ಲಿ ಒಂಬತ್ತು ವರ್ಷಗಳ ಅನುಭವ ಹೊಂದಿರುವವರು. ಮೈಸೂರು ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದಾರೆ. ಆರಂಭದಲ್ಲಿ ಕಿರುಚಿತ್ರಗಳ ಮೂಲಕ ಸಿನಿಮಾ ಲೋಕಕ್ಕೆ ಕಾಲಿಟ್ಟರು. ಕೆಲ ಸಿನಿಮಾಗಳಲ್ಲಿ ಸಹ ಬರಹಗಾರರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಇವರ ಚೊಚ್ಚಲ ನಿರ್ದೇಶನದ ಸಿನಿಮಾವೇ 'ಹೆಬ್ಬುಲಿ ಕಟ್'. ಮೊದಲ ಸಿನಿಮಾದಲ್ಲೇ ಅಸ್ಪೃಶ್ಯತೆ, ಜಾತಿ ತಾರತಮ್ಯ, ದಬ್ಬಾಳಿಕೆಯ ಘಟನೆಗಳ ಚಿತ್ರಣಗಳಿಗೆ ಕಮರ್ಷಿಯಲ್ ಸ್ಪರ್ಶ ನೀಡಿ ಪ್ರೇಕ್ಷಕರ ಮನಸ್ಸು ತಟ್ಟಿ ತಮ್ಮ ನಿರ್ದೇಶನದ ಸಾಮರ್ಥ್ಯ ತೋರಿದವರು.

ಸಾಗರ್ ಕುಮಾರ್



'ಅನಾಮಧೇಯ ಅಶೋಕ್ ಕುಮಾರ್' ಚಿತ್ರಕ್ಕಾಗಿ ನಾಮನಿರ್ದೇಶಿತರು. ಮೂಲತಃ ಶಿವಮೊಗ್ಗದವರು. ವೃತ್ತಿಯಿಂದ ಸಾಫ್ಟ್‌ವೇರ್ ಎಂಜಿನಿಯರ್. ಐಒಎಸ್ ಡೆವಲಪರ್ ಆಗಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಇವರು, ಪ್ರವೃತ್ತಿಯಾಗಿ ಸಿನಿಮಾವನ್ನು ಕೈಗೆತ್ತಿಕೊಂಡವರು. ಸಿನಿಮಾಗಳನ್ನು ನೋಡಿ, ಕಿರುಚಿತ್ರಗಳನ್ನು ಮಾಡುತ್ತಲೇ ತಮ್ಮ ಸಿನಿಮಾ ಕಲಿಕೆ ಅನುಭವವನ್ನು ಪಡೆದರು. ಇವರು ನಿರ್ದೇಶಿಸಿದ 'ವರದಿ' ಕಿರುಚಿತ್ರ ಅನೇಕ ಪ್ರಶಸ್ತಿಗಳನ್ನು ಪಡೆದಿತ್ತು. 'ನಾನು ಯಾವುದೇ ಸಿನಿಮಾಗಳಲ್ಲಿ ಕೆಲಸ ಮಾಡಿರಲಿಲ್ಲ. ಈಗಲೂ ನನಗೆ ಸಿನಿಮಾ ಕ್ಷೇತ್ರದಲ್ಲಿ ಹೆಚ್ಚು ಜನರ ಪರಿಚಯವಿಲ್ಲ' ಎನ್ನುವ ಇವರು, ಸಾಫ್ಟ್‌ವೇರ್ ಜಗತ್ತಿನಿಂದಲೇ ತಮ್ಮ ತಂಡ ಕಟ್ಟಿಕೊಂಡು 'ಅನಾಮಧೇಯ ಅಶೋಕ್ ಕುಮಾರ್' ಚಿತ್ರವನ್ನು ತೆರೆಗೆ ತಂದರು.

ವಂಶಿ ಕೃಷ್ಣ




'ಫೈರ್‌ಫ್ಲೈ' ಸಿನಿಮಾ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಕೋಲಾರದ ಇವರು ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರ. ಕಿರುಚಿತ್ರಗಳು, ನಾಟಕದ ಬಗ್ಗೆ ಆಸಕ್ತಿ ಹೊಂದಿದ್ದ ವಂಶಿ ಅವರಿಗೆ ಸಿನಿಮಾ ಕನಸು ಚಿಗುರಿದ್ದು ಕಾಲೇಜಿನಲ್ಲೇ. 'ಮಾಯಾಬಜಾರ್' ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದರು. ಬಳಿಕ 'ಪೆಂಟಗನ್' ಚಿತ್ರದಲ್ಲಿನ ಒಂದು ಕಥೆಯಲ್ಲಿ ಮುಖ್ಯಭೂಮಿಕೆಯಲ್ಲಿ ನಟಿಸಿದರು. ಒಂಟಿತನ ಹಾಗೂ ಖಿನ್ನತೆಯ ವಿಷಯ ಹೊತ್ತ 'ಫೈರ್‌ಫ್ಲೈ' ಮೂಲಕ ನಿರ್ದೇಶನದ ಚುಕ್ಕಾಣಿ ಹಿಡಿದರು. ಖಿನ್ನತೆಯಂಥ ವಿಷಯವನ್ನು ಮನರಂಜನಾತ್ಮಕವಾಗಿ ಹೆಣೆದ ಚತುರ ವಂಶಿ. ತಮ್ಮೊಳಗಿರುವ ನಿರ್ದೇಶನದ ಬೆಳಕನ್ನು ಹೊರಚೆಲ್ಲಲು ಮಿಂಚು ಹುಳದಂತೆ ಕಾಯುತ್ತಿರುವ ಹೊಸಬರಿಗೆ ಇವರು ಪ್ರೇರಣೆ.

ನಾವು ನೋಡಿದ ಸಿನಿಮಾ

ಮ್ಯಾಂಗೋ ಪಚ್ಚ (ಕನ್ನಡ)

- ನಿರ್ಮಾಣ: ಪ್ರಿಯಾ ಸುದೀಪ್, ಕಾರ್ತಿಕ್ ಗೌಡ, ಯೋಗಿ ಜಿ.ರಾಜ್
- ನಿರ್ದೇಶನ: ವಿವೇಕ
- ತಾರಾಗಣ: ಸಂಚಿತ್, ಕಾಜಲ್ ಕುಂದರ್, ಹರಿಣಿ ಶ್ರೀಕಾಂತ್, ಜೈ, ಮಯೂರ್ ಪಟೇಲ್, ಮಂಜು, ಪ್ರಶಾಂತ್ ಹಿರೇಮಠ



ಸಂಚಿತ್

'ಹಸ್ರವ್ವ'ನ ಲೋಕದಲ್ಲಿ 'ಪಚ್ಚ'ನ ಪಯಣ

ಇತ್ತೀಚೆಗೆ ಮಾದಕವಸ್ತುವಿನ ಮಾರಾಟದ ಸುತ್ತ ಕಥೆ ಇರುವ ಸಿನಿಮಾಗಳು ಸರಣಿಯಾಗಿ ಹಲವು ಬಂದಿವೆ. ತಮಿಳಿನಲ್ಲಿ 'ಕೈದಿ' ಹಾಗೂ 'ವಿಕ್ರಮ್' ಸಿನಿಮಾ ಸರಣಿ ಈ ವಿಷಯವನ್ನು ಆಳವಾಗಿ ಸೆರೆಹಿಡಿದಿದ್ದವು. ಇದಕ್ಕೆ ಸೇರ್ಪಡೆ 'ಮ್ಯಾಂಗೋ ಪಚ್ಚ'.

ಮೈಸೂರು ನಗರವನ್ನು ಕೇಂದ್ರವಾಗಿರಿಸಿಕೊಂಡು ಅಲ್ಲಿ 2001 ರಿಂದ 2011ರ ಅವಧಿಯಲ್ಲಿ ನಡೆದ ನೈಜ ಘಟನೆಗಳನ್ನು ಸ್ಫೂರ್ತಿಯಾಗಿಟ್ಟುಕೊಂಡು ನಿರ್ದೇಶಕರು ಕಥೆ ಹೆಣೆದಿದ್ದಾರೆ. 'ಮಾದಕ ದ್ರವ್ಯ ವ್ಯಸನದ ಅಪಾಯಗಳನ್ನು ಚರ್ಚಿಸುವುದು ನಮ್ಮ ಉದ್ದೇಶವಾಗಿದೆ' ಎಂದು ಆರಂಭದಲ್ಲೇ ಉಲ್ಲೇಖಿಸಿ ನಿರ್ದೇಶಕರು ಕಥೆಗೆ ಇಳಿಯುತ್ತಾರೆ.

ರಿವರ್ಸ್ ಸ್ಕ್ರೀನ್‌ಪ್ಲೇಯಲ್ಲಿ ಕಥೆಯನ್ನು ಹೇಳುವ ಶೈಲಿಯನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. 2002ರಲ್ಲಿ ಕಥೆ ತೆರೆದುಕೊಳ್ಳುತ್ತದೆ. 'ಪ್ರಶಾಂತ–ಪಚ್ಚ'(ಸಂಚಿತ್) ನಗರದಲ್ಲಿ ಸಿ.ಡಿ ಅಂಗಡಿ ಇಟ್ಟುಕೊಂಡಿದ್ದಾನೆ. ಸಿನಿಮಾಗಳನ್ನು ಪೈರಸಿ ಮಾಡಿ ಮಾರುವುದು ಈತನ ಹಾಗೂ ಈತನ ತಂಡದ ಕೆಲಸ. ತಾಯಿ, ತಮ್ಮನ ಜೊತೆ ಪಚ್ಚನ ವಾಸ. ಇಂತಹ ಪಚ್ಚನ ತಂದೆ ನಿಧನವಾದ ಬೆನ್ನಲ್ಲೇ ಗಾಂಜಾ ಬೆಳೆಯುವ ವ್ಯವಹಾರ ಪಚ್ಚನದ್ದಾಗುತ್ತದೆ. ಇದಕ್ಕೆ ನಗರದ ಮೇಯರ್ 'ಮಹೇಂದ್ರ'ನ ಸಾರಥ್ಯ. ಮಲಸಹೋದರ 'ನಾಗಪ್ಪ'ನೂ ಈ ವಹಿವಾಟಿನಲ್ಲಿ ಇದ್ದಾನೆ. ಈ ಸುಳಿಯೊಳಗೆ ಖುದ್ದಾಗಿ ಇಳಿಯುವ 'ಪಚ್ಚ'ನ ಕಥೆಯೇ ಸಿನಿಮಾ.

ಸಿನಿಮಾದ ಅವಧಿ ಕೇವಲ 95 ನಿಮಿಷವಿದ್ದು, ಎರಡನೇ ಭಾಗಕ್ಕೆ ಕೊಂಡಿಯನ್ನಿರಿಸಿ ಕಥೆ ಪೂರ್ಣಗೊಳಿಸಿದ್ದಾರೆ ನಿರ್ದೇಶಕರು. ಹೀಗಾಗಿ ಚಿತ್ರಕಥೆಯೂ ವೇಗವಾಗಿದೆ. ತಮಿಳಿನ 'ವಿಕ್ರಮ್' ಸಿನಿಮಾ ರೀತಿಯಲ್ಲೇ ಈ ಸಿನಿಮಾದ ಕ್ಲೈಮ್ಯಾಕ್ಸ್ ಇದ್ದು ಎರಡನೇ ಭಾಗಕ್ಕೆ ಹೀರೊ ಒಬ್ಬರನ್ನು ಖಳನಾಯಕನನ್ನಾಗಿ ಪರಿಚಯಿಸಲಾಗಿದೆ.

ಕಥೆಯ ಹಲವು ಅಂಶಗಳು ತರ್ಕಕ್ಕೆ ಸಿಗದು. ಆ್ಯಕ್ಷನ್ ದೃಶ್ಯಗಳ ಹಲವು ಫ್ರೇಮ್‌ಗಳಲ್ಲಿ ಸುದೀಪ್ ಅವರಂತೇ ಸಂಚಿತ್ ಕಾಣಿಸುತ್ತಾರೆ. ನಟನೆಯಲ್ಲಿ ಎಲ್ಲಾ ಕಲಾವಿದರು ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ.

'ಹಸ್ರವ್ವ' ಹಾಡು ಮತ್ತೆ ಮತ್ತೆ ಗುನುಗುವಂತಿದೆ. ಚರಣ್ ರಾಜ್ ಸಂಗೀತ ಚಿತ್ರಕಥೆಗೆ ಪೂರಕವಾಗಿದೆ. ಶೇಖರ್‌ಚಂದ್ರ ಛಾಯಾಚಿತ್ರಗ್ರಹಣ ಮೈಸೂರನ್ನು ಅಂದವಾಗಿ ಸೆರೆಹಿಡಿದಿದೆ.

–ಅಭಿಲಾಷ್ ಪಿ.ಎಸ್.

ಚಿಟಿಕೆ ಸುದ್ದಿ

ಇಂಡೊನೇಷ್ಯಾ ಓಪನ್: ಭಾರತದ ಸವಾಲು ಅಂತ್ಯ

ಜಕಾರ್ತ (ಪಿಟಿಐ): ಭಾರತದ ಹರಿಹರನ್ ಅಮ್ಸಕರುಣನ್– ಎಂ.ಆರ್. ಅರ್ಜುನ್ ಜೋಡಿಯು ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ನೇರ ಸೆಟ್‌ಗಳಿಂದ ಮಲೇಷ್ಯಾದ ಗೊಹ್ ಝಿ ಫೀಯಿ– ನೂರ್ ಇಝುದ್ದೀನ್ ಅವರಿಗೆ ಮಣಿಯಿತು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಏಳನೇ ಶ್ರೇಯಾಂಕದ ಜೋಡಿ ಫೀಯಿ–ನೂರ್ ಶುಕ್ರವಾರ ನಡೆದ ಪುರುಷರ ಡಬಲ್ಸ್ ಪಂದ್ಯದಲ್ಲಿ 21–12, 21–10ರಿಂದ ನಿರಾಯಾಸವಾಗಿ ಗೆಲುವು ಸಾಧಿಸಿತು.

ಕುಸ್ತಿ: ಮನೀಷಾ, ನೇಹಾಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಮನೀಷಾ ಮತ್ತು ನೇಹಾ ಅವರು ಮಂಗೋಲಿಯಾದಲ್ಲಿ ನಡೆದ ಉಲಾನಬತರ್ ಓಪನ್ ರ್‍ಯಾಂಕಿಂಗ್ ಸರಣಿಯ ಕುಸ್ತಿ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದಲ್ಲಿ ಚಿನ್ನ ಗೆದ್ದರು.

ಶುಕ್ರವಾರ ಭಾರತಕ್ಕೆ ಶುಭದಿನವಾಗಿತ್ತು. ಭಾರತದ ಕುಸ್ತಿಪಟುಗಳು ಒಟ್ಟು ನಾಲ್ಕು ಚಿನ್ನ ಮತ್ತು ಎರಡು ಕಂಚಿನ ಪದಕಗಳನ್ನು ಜಯಿಸಿದರು. ಮಹಿಳೆಯರ 57 ಕೆ.ಜಿ. ವಿಭಾಗದಲ್ಲಿ ಮನೀಷಾ ಕೊರಿಯಾದ ಸಿಮ್ ಸನ್ ವಿರುದ್ಧ 3–1ರಿಂದ ಜಯಿಸಿದರು. 59 ಕೆ.ಜಿ ವಿಭಾಗದಲ್ಲಿ ನೇಹಾ ಅವರು 5–3ರಿಂದ ಕೊರಿಯಾದ ಪಿಯೊಲ್ ಹಾಂಗ್ ವಿರುದ್ಧ ಗೆದ್ದರು.

50 ಕೆ.ಜಿ. ವಿಭಾಗದ ಕುಸ್ತಿಯಲ್ಲಿ ನೀಲಂ ಅವರು 10–0 ಯಿಂದ ಕಜಾಕಸ್ತಾನದ ಮರಲ್ ತಾಂಗಿರ್‌ಬರ್ಗೆನೊವಾ ವಿರುದ್ಧ ಗೆದ್ದು ಕಂಚು ಪಡೆದರು.

ಭವಿಷ್ಯದ ಸರಣಿಗಳಿಗೆ ಪ್ರಯೋಗದ ವೇದಿಕೆ

ಮುಲ್ಲನಪುರ: ಭಾರತ– ಅಫ್ಗಾನಿಸ್ತಾನ ಏಕೈಕ ಟೆಸ್ಟ್ ಪಂದ್ಯ ಇಂದಿನಿಂದ

• ಮಧು ಜವಳಿ



ಹಷ್ಮತ್‌ಉಲ್ಲಾ ಶಹೀದಿ



ಶುಭಮನ್ ಗಿಲ್

ಮುಲ್ಲನಪುರ: 'ದಕ್ಷಿಣ ಭಾರತವು ಅದ್ಭುತವಾದ ಕ್ರಿಕೆಟ್ ಸಂಸ್ಕೃತಿ (ಕಲ್ಚರ್) ಹೊಂದಿದೆ. ಆದರೆ ಪಂಜಾಬ್ ರಾಜ್ಯದಲ್ಲಿ ಕೃಷಿ ಸಂಸ್ಕೃತಿ (ಅಗ್ರಿಕಲ್ಚರ್) ಇದೆ' ಎಂದು ಕ್ರಿಕೆಟ್ ದಿಗ್ಗಜ ಬಿಷನ್ ಸಿಂಗ್ ಬೇಡಿ ಅವರು ಕೆಲವು ವರ್ಷಗಳ ಹಿಂದೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಾಸ್ಯ ಚಟಾಕಿ ಹಾರಿಸಿದ್ದರು.

ಆ ಮಾತಿನ ಹಿನ್ನೆಲೆಯಲ್ಲಿ ಅವಲೋಕಿಸಿದರೆ ಪಂಜಾಬ್ ರಾಜ್ಯದಲ್ಲಿ ಈಗ ಮೂರನೇ ಟೆಸ್ಟ್ ಕ್ರಿಕೆಟ್ ತಾಣವು ತಲೆಯೆತ್ತಿದೆ. ಶನಿವಾರದಿಂದ ನಡೆಯಲಿರುವ ಟೆಸ್ಟ್ ಪಂದ್ಯದಲ್ಲಿ ಭಾರತ ಮತ್ತು ಅಫ್ಗಾನಿಸ್ತಾನ ಮುಖಾಮುಖಿಯಾಗಲಿರುವ ಮಹಾರಾಜ ಯಾದವೀಂದ್ರ ಸಿಂಗ್ ಕ್ರೀಡಾಂಗಣವೇ ಆ ತಾಣವಾಗಿದೆ. ಈ ಮೈದಾನದಲ್ಲಿ ನಡೆಯಲಿರುವ ಚೊಚ್ಚಲ ಟೆಸ್ಟ್ ಇದಾಗಿದೆ. ಇದು ಈಗ 31ನೇ ಟೆಸ್ಟ್ ತಾಣವಾಗಲಿದೆ. ಮುಂಬೈನಲ್ಲಿ ಮೂರು ಟೆಸ್ಟ್ ತಾಣಗಳಿವೆ. ಅದನ್ನು ಬಿಟ್ಟರೆ ಪಂಜಾಬ್ ಈಗ ಆ ಸಾಲಿಗೆ ಸೇರಿದೆ. ಮೊಹಾಲಿಯಲ್ಲಿರುವ ಐ.ಎಸ್. ಬಿಂದ್ರಾ ಕ್ರೀಡಾಂಗಣವು ಭಾರತದ ಪ್ರತಿಷ್ಠಿತ ಟೆಸ್ಟ್ ತಾಣಗಳಲ್ಲಿ ಒಂದಾಗಿತ್ತು. 16ನೇ ಸೆಕ್ಟರ್ ಕ್ರೀಡಾಂಗಣದಲ್ಲಿಯೂ ಟೆಸ್ಟ್ ಪಂದ್ಯಗಳು ಆಯೋಜನೆಗೊಂಡಿದ್ದವು.

ಒಂದು ವಾರದ ಹಿಂದಷ್ಟೇ ಮುಲ್ಲನಪುರ ಕ್ರೀಡಾಂಗಣದಲ್ಲಿ ಹಬ್ಬದ ವಾತಾವರಣ ಇತ್ತು. ಇಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯಗಳು ಆಯೋಜನೆಗೊಂಡಿದ್ದವು. ಅಪಾರ ಸಂಖ್ಯೆಯಲ್ಲಿ ಜನರು ಸೇರಿದ್ದರು. ಆದರೆ ಈಗ ನಡೆಯಲಿರುವ ಟೆಸ್ಟ್ ಪಂದ್ಯದಲ್ಲಿ ದೊಡ್ಡ ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರುವುದು ಅನುಮಾನ.

ಪ್ರಸಕ್ತ ವರ್ಷ ಭಾರತ ಕ್ರಿಕೆಟ್ ತಂಡಕ್ಕೆ ಬಿಡುವಿಲ್ಲದಂತೆ ಪಂದ್ಯಗಳು ಇವೆ. ಅದರಲ್ಲಿ ಈ ಟೆಸ್ಟ್ ಕೂಡ ಒಂದು. ಇದು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಆವೃತ್ತಿಯಲ್ಲಿಯೂ ಇಲ್ಲ. ಆದ್ದರಿಂದ ಭಾರತ ತಂಡಕ್ಕೆ ಭವಿಷ್ಯದ ಪಂದ್ಯಗಳಿಗೂ ಮುನ್ನ ಆಟಗಾರರನ್ನು ಪರೀಕ್ಷೆಗೊಡ್ಡುವ ಅವಕಾಶವೂ ಇದಾಗಿದೆ. ಮುಂದಿನ 18 ತಿಂಗಳುಗಳಲ್ಲಿ ಭಾರತ ತಂಡವು 9 ಟೆಸ್ಟ್ ಆಡಲಿದೆ.

ಅಫ್ಗಾನಿಸ್ತಾನ ತಂಡವು ಶ್ವೇತ ವರ್ಣದ ಚೆಂಡಿನ ಕ್ರಿಕೆಟ್ ಮಾದರಿಯಲ್ಲಿ ಉತ್ತಮವಾಗಿ ಬೆಳೆಯುತ್ತಿದೆ. ಆದರೆ ಟೆಸ್ಟ್ ಮಾದರಿಯಲ್ಲಿ ಇನ್ನೂ ಪಳಗಬೇಕಿದೆ. ಹೆಚ್ಚು ಪಂದ್ಯಗಳನ್ನು ಆಡುವ ಅವಕಾಶವೂ ತಂಡಕ್ಕೆ ಲಭಿಸಿಲ್ಲ. ಆದ್ದರಿಂದ ಅನುಭವದ ಕೊರತೆ ಇದೆ. ಆದ್ದರಿಂದ ಈ ಪಂದ್ಯದಲ್ಲಿ ಭಾರತವು ಆಟಗಾರರ ಆಯ್ಕೆಯಲ್ಲಿ ಪ್ರಯೋಗಗಳನ್ನು ಮಾಡುವ ಸಾಧ್ಯತೆಗಳೂ ಹೆಚ್ಚು.

ಭಾರತ ತಂಡದಲ್ಲಿ ಪ್ರಮುಖ ಸವಾಲಾಗಿರುವ ಮೂರನೇ ಕ್ರಮಾಂಕದ ಬ್ಯಾಟಿಂಗ್ ಸ್ಥಾನ. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ನಂತರ ಕೆ.ಎಲ್. ರಾಹುಲ್ ಅವರು ಆರಂಭಿಕ ಬ್ಯಾಟರ್ ಆಗಿ ಯಶಸ್ವಿಯಾಗಿದ್ದಾರೆ. ಅವರೊಂದಿಗೆ ಯಶಸ್ವಿ ಜೈಸ್ವಾಲ್ ಕೂಡ ಉತ್ತಮವಾಗಿ ಆಡಿದ್ದಾರೆ. ನಾಯಕ ಗಿಲ್ ಅವರು ನಾಲ್ಕನೇ ಕ್ರಮಾಂಕದಲ್ಲಿ ಆಡುತ್ತಿದ್ದು ಸಫಲರಾಗಿದ್ದಾರೆ. ಆದರೆ ಪ್ರಮುಖವಾಗಿರುವ ಮೂರನೇ ಕ್ರಮಾಂಕದಲ್ಲಿ ಆಡಲು ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್, ಕರುಣ್ ನಾಯರ್ ಮತ್ತು ವಾಷಿಂಗ್ಟನ್ ಸುಂದರ್ ಅವರಿಗೆ ಅವಕಾಶ ನೀಡಿ ಪ್ರಯೋಗ ಮಾಡಲಾಗಿತ್ತು. ಆದರೆ ಚೇತೇಶ್ವರ್ ಪೂಜಾರ ಅವರು ಆಡುತ್ತಿದ್ದ ಈ ಸ್ಥಾನವನ್ನು ತುಂಬುವಲ್ಲಿ ಇವರೆಲ್ಲರೂ ವಿಫಲರಾಗಿದ್ದರು.



ಮುಲ್ಲನಪುರದಲ್ಲಿ ಭಾರತ ತಂಡದ ಕೆ.ಎಲ್. ರಾಹುಲ್ ಅಭ್ಯಾಸ ಪಿಟಿಐ ಚಿತ್ರ

ಸದ್ಯ ನಾಯರ್ ಅವರು ಆಯ್ಕೆಯ ವ್ಯಾಪ್ತಿಯಿಂದ ದೂರ ಇದ್ದಾರೆ. ಪಡಿಕ್ಕಲ್ ಅವರು ಹೋದ ವರ್ಷ ಪರ್ತ್‌ನಲ್ಲಿ ಮೂರನೇ ಕ್ರಮಾಂಕದಲ್ಲಿ ಆಡಿಸಲಾಗಿತ್ತು. ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಪಡಿಕ್ಕಲ್ ಅವರಿಗೆ ಇಲ್ಲಿ ಅವಕಾಶ ನೀಡುವ ಬಗ್ಗೆ ಯೋಚಿಸುವ ಸಾಧ್ಯತೆ ಕಡಿಮೆ. ಆದ್ದರಿಂದ ಸುದರ್ಶನ್ ಅವರಿಗೆ ಅವಕಾಶ ಸಿಗುವುದು ಬಹುತೇಕ ಖಚಿತ.

ಸ್ಪಿನ್ ವಿಭಾಗದಲ್ಲಿ ಕೂಡ ತಂಡಕ್ಕೆ ಸವಾಲಿದೆ. ರವೀಂದ್ರ ಜಡೇಜ ಅವರಿಗೆ ವಿಶ್ರಾಂತಿ ಕೊಡಲಾಗಿದೆ. ಆದ್ದರಿಂದ ವಾಷಿಂಗ್ಟನ್ ಸುಂದರ್ ಮತ್ತು ಕುಲದೀಪ್ ಯಾದವ್ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಹೆಚ್ಚು. ಹೊಸ ಪ್ರತಿಭೆಗಳಾದ ಎಡಗೈ ಸ್ಪಿನ್ನರ್ ಮಾನವ್ ಸುತಾರ್ ಮತ್ತು ಹರ್ಷ ದುಬೆ ಅವರಲ್ಲಿ ಒಬ್ಬರಿಗೆ ಸ್ಥಾನ ಸಿಗಬಹುದು. ಆಗಸ್ಟ್‌ನಲ್ಲಿ ನಡೆಯಲಿರುವ ಶ್ರೀಲಂಕಾ ಟೆಸ್ಟ್ ಸರಣಿಯಲ್ಲಿ ಆಡಲು ಸ್ಪಿನ್ನರ್‌ಗಳನ್ನು ಸಿದ್ಧಗೊಳಿಸಲು ಇಲ್ಲಿ ಪ್ರಯೋಗ ನಡೆಯಬಹುದು.

ಹಷ್ಮತ್‌ವುಲ್ಲಾ ಶಹೀದಿ ನಾಯಕತ್ವದ ಅಫ್ಗನ್ ತಂಡಕ್ಕೆ ಈ ಪಂದ್ಯವು ಒಂದು ವಿಶೇಷ ಅನುಭವವಾಗುವುದು ಖಚಿತ. ವರ್ಷದಿಂದ ವರ್ಷಕ್ಕೆ ಪ್ರತಿಯೊಂದು ವಿಭಾಗದಲ್ಲಿಯೂ ಛಾಪು ಮೂಡಿಸುತ್ತಿರುವ ತಂಡದಲ್ಲಿ ಪ್ರತಿಭಾನ್ವಿತ ಆಟಗಾರರಿದ್ದಾರೆ. ರಶೀದ್ ಖಾನ್ ಮತ್ತು ಮೊಹಮ್ಮದ್ ನಬಿ ಅವರ ಅನುಪಸ್ಥಿತಿಯಲ್ಲಿ ತಂಡವು ಕಣಕ್ಕಿಳಿಯಲಿದೆ. ಸೋಲು, ಗೆಲುವುಗಳಾಚೆ ಅಫ್ಗನ್ ತಂಡವು ಗಿಲ್ ಬಳಗಕ್ಕೆ ಎಷ್ಟರ ಮಟ್ಟಿಗಿನ ಕಠಿಣ ಪೈಪೋಟಿ ಒಡ್ಡಲಿದೆ ಎಂಬುದೇ ಈಗ ಕುತೂಹಲದ ಸಂಗತಿ.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಮಹಾರಾಜ ಟ್ರೋಫಿ ಆಟಗಾರರ ಬಿಡ್: ಹುಬ್ಬಳ್ಳಿಗೆ ಮಯಂಕ್

ಕರುಣ್, ಸ್ಮರಣ್‌ಗೆ ಬಂಪರ್ ಮೌಲ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೆಸ್ಟ್ ಕ್ರಿಕೆಟಿಗ ಕರುಣ್ ನಾಯರ್ ಅವರು ಶುಕ್ರವಾರ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಗಾಗಿ ನಡೆದ ಆಟಗಾರರ ಬಿಡ್‌ನಲ್ಲಿ ಅತ್ಯಧಿಕ ಮೌಲ್ಯ ಗಳಿಸಿದರು. ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವು ಕರುಣ್ ಅವರಿಗೆ ₹ 18 ಲಕ್ಷ ಮೌಲ್ಯ ನೀಡಿತು.

ಈ ಬಾರಿಯ ಟೂರ್ನಿಯಲ್ಲಿ ಮಂಗಳೂರು ಮತ್ತು ಶಿವಮೊಗ್ಗ ಯೋಧಾಸ್ ತಂಡಗಳು ಪದಾರ್ಪಣೆ ಮಾಡುತ್ತಿವೆ. ಆರ್. ಸ್ಮರಣ್ ಅವರಿಗೆ ಶಿವಮೊಗ್ಗ ತಂಡವು ₹15.75 ಲಕ್ಷ ನೀಡಿ ಖರೀದಿಸಿತು.

ಹುಬ್ಬಿ ಟೈಗರ್ಸ್ ತಂಡವು ಅಭಿನವ್ ಮನೋಹರ್ (₹13.50 ಲಕ್ಷ) ಮತ್ತು ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಮನೀಷ್ ಪಾಂಡೆ ಹಾಗೂ ಆಲ್‌ರೌಂಡರ್ ಮೆಕ್ನಿಲ್ ನರೋನ್ಹಾ ಅವರಿಗೆ ತಲಾ ₹12.25 ಲಕ್ಷ ನೀಡಿ ಖರೀದಿಸಿದವು. ಮೈಸೂರು ವಾರಿಯರ್ಸ್ ತಂಡವು ಎಲ್.ಆರ್. ಚೇತನ್ (₹11.50 ಲಕ್ಷ) ಅವರನ್ನು ಸೇರ್ಪಡೆ ಮಾಡಿಕೊಂಡಿತು. ಇಷ್ಟೇ ಮೊತ್ತಕ್ಕೆ ಮಯಂಕ್ ಅಗರವಾಲ್ ಅವರು ಹುಬ್ಬಿ ಟೈಗರ್ಸ್ ಬಳಗಕ್ಕೆ ಸೇರ್ಪಡೆಯಾದರು. ಶ್ರೇಯಸ್ ಗೋಪಾಲ್ (₹10.25 ಲಕ್ಷ) ಮತ್ತು ಮನೋಜ್ ಬಾಂಢಗೆ (₹10 ಲಕ್ಷ) ಕ್ರಮವಾಗಿ ಮಂಗಳೂರು ಮತ್ತು ಮೈಸೂರು ವಾರಿಯರ್ಸ್ ತಂಡಗಳಿಗೆ ಸೇರ್ಪಡೆಯಾದರು.

ಮಧ್ಯಮವೇಗಿ ವಿ. ಕೌಶಿಕ್ ಅವರನ್ನು ಮಂಗಳೂರು ತಂಡವು ₹8 ಲಕ್ಷ ನೀಡಿ ಖರೀದಿಸಿತು. ಆಲ್‌ರೌಂಡರ್ ಎಂ.ವೆಂಕಟೇಶ್ (₹3.4ಲಕ್ಷ), ನಿಕಿನ್ ಜೋಸ್ (₹2.4ಲಕ್ಷ) ಹಾಗೂ ಸೂರಜ್ ಅಹುಜಾ (₹6 ಲಕ್ಷ) ಇದೇ ತಂಡ ಸೇರಿದರು. ಈಚೆಗೆ ಐಪಿಎಲ್‌ನಲ್ಲಿ ಮಿಂಚಿದ್ದ ಸ್ಪಿನ್ನರ್ ಯಶ್ ರಾಜ್ ಪೂಂಜಾ ಅವರನ್ನು ಶಿವಮೊಗ್ಗ ಯೋಧಾಸ್ ತಂಡವು ₹5 ಲಕ್ಷಕ್ಕೆ ಖರೀದಿಸಿತು. ಗುಲ್ಬರ್ಗ ತಂಡವು ಮೇಲು ಕ್ರಾಂತಿಕುಮಾರ್ (₹ 8.75 ಲಕ್ಷ) ಮತ್ತು ಬಿ.ಆರ್. ಶರತ್ (₹ 5.75 ಲಕ್ಷ) ಅವರನ್ನು ಸೆಳೆದುಕೊಂಡಿತು.

ವೇಗಿ ವೈಶಾಖ ವಿಜಯಕುಮಾರ್ (₹8.25ಲಕ್ಷ) ಅವರನ್ನು ಮೈಸೂರು ವಾರಿಯರ್ಸ್ ಸೇರ್ಪಡೆ ಮಾಡಿಕೊಂಡಿತು. ಭಾರತ ತಂಡದಲ್ಲಿ ಆಡಲು ತೆರಳಿರುವ ದೇವದತ್ತ ಪಡಿಕ್ಕಲ್ ಮತ್ತು ಪ್ರಸಿದ್ಧ ಕೃಷ್ಣ (ಟೂರ್ನಿಗೆ ಲಭ್ಯರಾಗುವುದು ಖಚಿತವಿಲ್ಲ) ಅವರಿಗೆ ತಲಾ ₹ 2.60 ಲಕ್ಷ ನೀಡಿ ಖರೀದಿಸಿತು.

ಇದೇ 20ರಿಂದ ಜುಲೈ 12ರವರೆಗೆ ಮಹಾರಾಜ ಟ್ರೋಫಿ ಟೂರ್ನಿಯು ನಡೆಯಲಿದೆ. ಆರು ತಂಡಗಳು ಪೈಪೋಟಿ ನಡೆಸಲಿವೆ. ಮೈಸೂರು, ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಪಂದ್ಯಗಳು ಆಯೋಜನೆಯಾಗಲಿವೆ.

ಚಿನ್ನಸ್ವಾಮಿ ಕ್ರೀಡಾಂಗಣದ ಸಭಾಭವನದಲ್ಲಿ ಬಿಡ್ ಪ್ರಕ್ರಿಯೆ ನಡೆಯಿತು. ಬೆಳಿಗ್ಗೆ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರು ಬಿಡ್‌ಗೆ ಚಾಲನೆ ನೀಡಿದರು.

ಅತಿ ಹೆಚ್ಚು ಮೌಲ್ಯ ಪಡೆದ 10 ಆಟಗಾರರು

ಆಟಗಾರ	ತಂಡ	ಮೌಲ್ಯ (₹ಲಕ್ಷ)
ಕರುಣ್ ನಾಯರ್	ಕೋಸ್ಟಲ್ ಕಿಂಗ್ಸ್ ಮಂಗಳೂರು	18
ಆರ್.ಸ್ಮರಣ್	ಶಿವಮೊಗ್ಗ ಯೋಧಾಸ್	15.75
ಅಭಿನವ್ ಮನೋಹರ್	ಹುಬ್ಬಿ ಟೈಗರ್ಸ್	13.25
ಮನೀಷ್ ಪಾಂಡೆ	ಗುಲ್ಬರ್ಗ ಮಿಸ್ಟಿಕ್ಸ್	12.75
ಮೆಕ್ನಿಲ್ ನರೋನ್ಹಾ	ಗುಲ್ಬರ್ಗ ಮಿಸ್ಟಿಕ್ಸ್	12.25
ಎಲ್.ಆರ್. ಚೇತನ್	ಮೈಸೂರ ವಾರಿಯರ್ಸ್	11.50
ಮಯಂಕ್ ಅಗರವಾಲ್	ಹುಬ್ಬಿ ಟೈಗರ್ಸ್	11.50
ಶುಭಾಂಗ್ ಹೆಗ್ಡೆ	ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್	11
ಶ್ರೇಯಸ್ ಗೋಪಾಲ್	ಕೋಸ್ಟಲ್ ಕಿಂಗ್ಸ್ ಮಂಗಳೂರು	10.25
ಮನೋಜ್ ಬಾಂಢಗೆ	ಮೈಸೂರು ವಾರಿಯರ್ಸ್	10

ಬೆಂಗಳೂರಿಗೆ ಸಮಿತ್; ಮಂಗಳೂರಿಗೆ ಅನ್ವಯ್

ಭಾರತ ತಂಡದ ಮಾಜಿ ಕೋಚ್ ರಾಹುಲ್ ದ್ರಾವಿಡ್ ಅವರ ಮಕ್ಕಳಾದ ಅನ್ವಯ್ ಮತ್ತು ಸಮಿತ್ ಅವರನ್ನು ಕ್ರಮವಾಗಿ ಕೋಸ್ಟಲ್ ಕಿಂಗ್ಸ್ ಮಂಗಳೂರು ಹಾಗೂ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡಗಳು ಖರೀದಿಸಿದವು.

ಮಂಗಳೂರು ತಂಡವು ಅನ್ವಯ್ ಅವರಿಗೆ ₹90 ಸಾವಿರ ನೀಡಿ ಸೇರ್ಪಡೆ ಮಾಡಿಕೊಂಡಿತು. ಸಮಿತ್ ಅವರಿಗೆ ಬೆಂಗಳೂರು ತಂಡ ₹1.50 ಲಕ್ಷ ನೀಡಿತು.




ಕರುಣ್ ನಾಯರ್



ಸ್ಮರಣ್ ಆರ್.

ಶ್ರೇಯಸ್ ಅಯ್ಯರ್‌ಗೆ ಟಿ20 ತಂಡದ ಸಾರಥ್ಯ?



ಮುಂಬೈ (ಪಿಟಿಐ): ಶ್ರೇಯಸ್ ಅಯ್ಯರ್ ಅವರನ್ನು ಭಾರತ ಟಿ20 ತಂಡದ ನೂತನ ನಾಯಕನಾಗಿ ಆಯ್ಕೆ ಮಾಡುವ ಬಗ್ಗೆ ಔಪಚಾರಿಕ ಘೋಷಣೆಯೊಂದು ಬಾಕಿಯಿದೆ. ಐರ್ಲೆಂಡ್– ಇಂಗ್ಲೆಂಡ್ ಪ್ರವಾಸಕ್ಕೆ ಮತ್ತು ಅದರ ನಂತರ ಜಪಾನ್‌ನಲ್ಲಿ ನಡೆಯುವ ಏಷ್ಯನ್ ಗೇಮ್ಸ್‌ಗೆ ಭಾರತ ತಂಡವನ್ನು ಅಂತಿಮಗೊಳಿಸಲು ರಾಷ್ಟ್ರೀಯ ಆಯ್ಕೆ ಸಮಿತಿ ಶನಿವಾರ ಇಲ್ಲಿ ಸೇರಲಿದೆ.

ಭಾರತ ತಂಡವು ಐರ್ಲೆಂಡ್ ವಿರುದ್ಧ ಬೆಲ್‌ಫಾಸ್ಟ್‌ನಲ್ಲಿ ಇದೇ 26 ಮತ್ತು 28ರಂದು ಎರಡು ಟಿ20 ಪಂದ್ಯಗಳನ್ನು ಆಡಲಿದೆ. ಇದರ ನಂತರ ಜುಲೈ 1ರಂದು ಆರಂಭವಾಗುವ ಇಂಗ್ಲೆಂಡ್ ಪ್ರವಾಸದಲ್ಲಿ ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳ ಸರಣಿಗಳನ್ನು ಆಡಲಿದೆ.

ಜಪಾನ್‌ನ ಐಚಿ– ನಗೊಯಾದಲ್ಲಿ ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲಿ ಏಷ್ಯನ್ ಕ್ರೀಡೆಗಳು ನಡೆಯಲಿವೆ. ಆಟಗಾರರ ಪಟ್ಟಿಯನ್ನು ಕಳುಹಿಸಲು ಗಡುವು ನಿಗದಿಪಡಿಸಿರುವ ಕಾರಣ ತಂಡವನ್ನು ಘೋಷಿಸಬೇಕಾಗಿದೆ. ತಿಲಕ್ ವರ್ಮಾ ಅವರು ನೂತನ ಉಪನಾಯಕನಾಗುವ ನಿರೀಕ್ಷೆಯಿದೆ. ಸ್ಫೋಟಕ ಆಟದಿಂದ ಮನೆಮಾತಾಗಿರುವ 15 ವರ್ಷ ವಯಸ್ಸಿನ ವೈಭವ್ ಸೂರ್ಯವಂಶಿ ಸೀನಿಯರ್ ತಂಡದಲ್ಲಿ ಮೊದಲ ಬಾರಿ ಅವಕಾಶ ಪಡೆಯಲಿದ್ದಾರೆ.

ಈ ವರ್ಷದ ಆರಂಭದಲ್ಲಿ ವಿಶ್ವಕಪ್ ಗೆದ್ದ ತಂಡದ ಸಾರಥ್ಯ ವಹಿಸಿದ್ದ ಸೂರ್ಯಕುಮಾರ್ ಯಾದವ್ ಅವರು ಕಳಪೆ ಆಟದಿಂದಾಗಿ ನಾಯಕತ್ವ ಮಾತ್ರವಲ್ಲ, ತಂಡದಲ್ಲಿ ಸ್ಥಾನವನ್ನೂ ಕಳೆದುಕೊಳ್ಳುವುದು ಖಚಿತವಾಗಿದೆ.

31 ವರ್ಷದ ಅಯ್ಯರ್ ಟಿ20 ವಿಶ್ವಕಪ್ ತಂಡದಲ್ಲಿರಲಿಲ್ಲ. ಬ್ಯಾಟಿಂಗ್ ಸರದಿಯಲ್ಲಿ ಅವರು ನಾಲ್ಕನೇ ಕ್ರಮಾಂಕದಲ್ಲಿ ಆಡುವ ನಿರೀಕ್ಷೆಯಿದೆ. ಐಪಿಎಲ್‌ನಲ್ಲಿ ಉತ್ತಮ ನಾಯಕತ್ವ ವಹಿಸಿದ್ದ ಅವರು ತಾವು ನಾಯಕರಾಗಿದ್ದ ಮೂರು ತಂಡಗಳನ್ನು (ಡೆಲ್ಲಿ ಕ್ಯಾಪಿಟಲ್ಸ್, ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಪಂಜಾಬ್ ಕಿಂಗ್ಸ್) ಫೈನಲ್ ತಲುಪಿಸಿದ್ದರು. ಇದರಲ್ಲಿ ಕೋಲ್ಕತ್ತ ತಂಡವು 2024ರಲ್ಲಿ ಚಾಂಪಿಯನ್ ಆಗಿತ್ತು. ಈ ಸಾಧನೆಗೆ ಪಾತ್ರರಾದ ಏಕೈಕ ನಾಯಕ ಅವರಾಗಿದ್ದಾರೆ. ಬ್ಯಾಟಿಂಗ್‌ನಲ್ಲೂ ಅವರು ಲಯ ಕಳೆದುಕೊಂಡಿರಲಿಲ್ಲ.

ಇಂಗ್ಲೆಂಡ್–ಐರ್ಲೆಂಡ್ ಪ್ರವಾಸ ಹಾಗೂ ಏಷ್ಯನ್ ಗೇಮ್ಸ್‌ಗೆ ಪ್ರತ್ಯೇಕ ತಂಡಗಳನ್ನು ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರಕರ್ ಇಂದು ಪ್ರಕಟಿಸಲಿದ್ದಾರೆ.

ಯೋಗಾಸನ: ಭಾರತಕ್ಕೆ ಐದು ಚಿನ್ನ

ಅಹಮದಾಬಾದ್ (ಪಿಟಿಐ): ಆತಿಥೇಯ ಭಾರತದ ಯೋಗಪಟುಗಳು ಇಲ್ಲಿ ನಡೆಯುತ್ತಿರುವ ಚೊಚ್ಚಲ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಆರು ಸ್ಪರ್ಧೆಗಳ ಪೈಕಿ ಐದರಲ್ಲಿ ಪಾರಮ್ಯ ಮೆರೆದರು. ಉಳಿದಂತೆ, ಸೀನಿಯರ್ ಎ (28–35 ವರ್ಷ) ಪುರುಷರ ಸ್ಪರ್ಧೆಯಲ್ಲಿ ಸಿಂಗಪುರದ ನಥಾನೀಲ್ ತಾನ್ ಲಿಯಾಂಗ್ ಆ್ಯನ್ ಅವರು ಚಿನ್ನ ಜಯಿಸಿದರು.

ಪಶ್ಚಿಮ ಬಂಗಾಳದ ಅಭಯ್ ಬರ್ಮನ್ ಅವರು ಸಾಂಪ್ರದಾಯಿಕ ಯೋಗಾಸನ ಸ್ಪರ್ಧೆಯ ಸೀನಿಯರ್ ಪುರುಷರ ವಿಭಾಗದಲ್ಲಿ 63.42 ಅಂಕ ಗಳಿಸಿ ಭಾರತಕ್ಕೆ ಮೊದಲ ಚಿನ್ನ ಗೆದ್ದುಕೊಟ್ಟರು. ಇಂಡೊನೇಷ್ಯಾದ ಅರ್ಕನ್ ರಿಯಾಂತೊ (57.23 ಅಂಕ) ಹಾಗೂ ಉಜ್ಬೇಕಿಸ್ತಾನದ ಅಲನ್ (53.21) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದರು.

ಪಶ್ಚಿಮ ಬಂಗಾಳದವರೇ ಆದ ರಿತು ಮೊಂಡಲ್ (64.33 ಅಂಕ) ಅವರು ಸೀನಿಯರ್ ಮಹಿಳೆಯರ ವಿಭಾಗದಲ್ಲಿ ಸ್ವರ್ಣಕ್ಕೆ ಮುತ್ತಿಕ್ಕಿದರು. ಕಜಾಕಸ್ತಾನದ ಐಝಾನ್ ಕುವಾನಿಶ್‌ಬಯೇವಾ (58.97) ರಜತ ಗೆದ್ದರೆ, ಹಾಂಗ್‌ಕಾಂಗ್‌ನ ಲಾಮ್ ಗಾ ಮಾನ್ (56.98) ಕಂಚು ತಮ್ಮದಾಗಿಸಿಕೊಂಡರು.

ಸೀನಿಯರ್ ಎ ಮಹಿಳೆಯರ ಸ್ಪರ್ಧೆಯಲ್ಲಿ ರಿತು ಠಾಕೂರ್ 63.50 ಅಂಕಗಳೊಂದಿಗೆ ಚಿನ್ನ ಗೆದ್ದರು. ಅರ್ಜೆಂಟೀನಾದ ನಬಿಲಾ ಸೊಲ್ ಬರಾಝಾ (62.04) ಹಾಗೂ ಕೆನ್ಯಾದ ಅವೂರ್ ಸೌಲಿನ್ಹಾ (53.86) ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ಸೀನಿಯರ್ ಬಿ (35 –45 ವರ್ಷ) ಪುರುಷರ ವಿಭಾಗದಲ್ಲಿ ರೋಶನ್ ಥಾಪ (65.67 ಅಂಕ) ಅವರು ಅಮೋಘ ಪ್ರದರ್ಶನದೊಂದಿಗೆ ಚಿನ್ನದ ಪದಕ ಗೆದ್ದುಕೊಂಡರು.

'ಟ್ವಿಸ್ಟಿಂಗ್ ಬಾಡಿ' ವೈಯಕ್ತಿಕ ಸ್ಪರ್ಧೆಯ ಸೀನಿಯರ್ ಬಿ ಮಹಿಳೆಯರ ವಿಭಾಗದಲ್ಲಿ ಜ್ಯೋತಿ ಡಿ. (46.14 ಅಂಕ) ಮೊದಲಿಗರಾದರು. ಒಮಾನ್‌ನ ಒಲಿಮುತ್ತು ನವಮಣಿ (38.66 ಅಂಕ) ರಜತ ಗೆದ್ದರೆ, ಜಪಾನ್‌ನ ಸಾವೊರಿ ಕ್ಯುಯಿ (38.41) ಕಂಚು ತಮ್ಮದಾಗಿಸಿಕೊಂಡರು.

ಯುವ ಹಾಕಿ: ಪಾಕ್ ವಿರುದ್ಧ ಗೆದ್ದ ಭಾರತ ಫೈನಲ್‌ಗೆ

ಕಾಕಮಿಗಾಹರಾ (ಜಪಾನ್), (ಪಿಟಿಐ): ಭಾರತ ಹಾಕಿ ತಂಡವು ಶುಕ್ರವಾರ ಇಲ್ಲಿ ನಡೆದ 18 ವರ್ಷದೊಳಗಿನವರ ಪುರುಷರ ಏಷ್ಯಾ ಕಪ್ ಸೆಮಿಫೈನಲ್ ಪಂದ್ಯದಲ್ಲಿ ಬದ್ಧ ಎದುರಾಳಿ ಪಾಕಿಸ್ತಾನ ತಂಡದ ವಿರುದ್ಧ ಅಮೋಘವಾಗಿ ಆಡಿ 5–3 ಗೋಲುಗಳಿಂದ ಜಯಗಳಿಸಿತು. ಆಶಿಷ್ ಪುರ್ತಿ ಅವರು ಗಳಿಸಿದ ನಾಲ್ಕು ಗೋಲುಗಳು ಭಾರತದ ಗೆಲುವಿನಲ್ಲಿ ಮಹತ್ವದ ಪಾತ್ರವಹಿಸಿದವು.

ತೀವ್ರ ಹಣಾಹಣಿಯ ಈ ಪಂದ್ಯದಲ್ಲಿ ಅಂತಿಮ ಕ್ವಾರ್ಟರ್ ಶುರುವಾದಾಗ ಭಾರತ 2–3 ಗೋಲುಗಳಿಂದ ಹಿನ್ನಡೆಯಲ್ಲಿತ್ತು. ಆದರೆ ಕೊನೆಯ 15 ನಿಮಿಷಗಳಲ್ಲಿ ಆಕ್ರಮಣಕಾರಿಯಾಗಿ ಆಡಿದ ಭಾರತ ಚಿನ್ನದ ಪದಕಕ್ಕಾಗಿ ಸೆಣಸಾಡುವ ಅರ್ಹತೆ ಸಂಪಾದಿಸಿಕೊಂಡಿತು.

ವಿರಾಮದ ವೇಳೆ ಸ್ಕೋರ್ 1–1ರಲ್ಲಿ ಸಮನಾಗಿತ್ತು. ಆಶಿಷ್ ತನಿ ಪುರ್ತಿ (12, 49, 53, 56ನೇ ನಿಮಿಷ), ಶಾಹರೂಕ್ ಅಲಿ (35ನೇ ನಿ.) ಗೋಲು ಗಳಿಸಿದರು.

ಪಾಕಿಸ್ತಾನ ತಂಡದ ಪರ ಅದೀಲ್ (27ನೇ ನಿಮಿಷ), ಮುಹಮ್ಮದ್ ಫರ್ಹಾನ್ ಅಸ್ಲಂ (37ನೇ ನಿಮಿಷ) ಮತ್ತು ಉರ್ರೈರ್ ಅಹಮದ್ ಖುರೇಷಿ (42ನೇ ನಿಮಿಷ) ಗೋಲು ಹೊಡೆದರು.

ಭಾರತ ತಂಡವು ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಆತಿಥೇಯ ಜಪಾನ್ ತಂಡವನ್ನು ಎದುರಿಸಲಿದೆ.

ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಜಪಾನ್ 8–1 ಗೋಲುಗಳಿಂದ ಮಲೇಷ್ಯಾ ತಂಡವನ್ನು ಸುಲಭವಾಗಿ ಸೋಲಿಸಿತು.

ಮಹಿಳಾ ತಂಡಕ್ಕೆ ನಿರಾಸೆ: ಏಷ್ಯಾ ಕಪ್ ಮಹಿಳೆಯರ ವಿಭಾಗದಲ್ಲಿ ಭಾರತ ತಂಡ ಸೆಮಿಫೈನಲ್ ಪಂದ್ಯದಲ್ಲಿ ಚೀನಾ ತಂಡಕ್ಕೆ ಶೂಟೌಟ್‌ನಲ್ಲಿ 1–3ರಿಂದ ಮಣಿಯಿತು. ಭಾರತ ತಂಡ ಶನಿವಾರ ಬೆಳಿಗ್ಗೆ ಕಂಚಿನ ಪದಕದ ಪಂದ್ಯ ಆಡಲಿದೆ.

ನಿಗದಿತ ಅವಧಿಯ ಆಟ ಮುಗಿದಾಗ ಸ್ಕೋರ್ 2–2 ರಲ್ಲಿ ಸಮನಾಗಿತ್ತು.

ನಾರ್ವೆ ಚೆಸ್: ಪ್ರಶಸ್ತಿಗೆ ಮೂವರ ಪೈಪೋಟಿ

ಓಸ್ಲೊ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರು ನಾರ್ವೆ ಚೆಸ್ ಟೂರ್ನಿಯ 9ನೇ ಸುತ್ತಿನಲ್ಲಿ ಸ್ವದೇಶದ ಡಿ.ಗುಕೇಶ್ ಅವರ ಮೇಲೆ ಕ್ಲಾಸಿಕಲ್ ಪಂದ್ಯದಲ್ಲೇ ಅಧಿಕಾರಯುತ ಜಯಗಳಿಸಿದರು. ಇನ್ನೊಂದು ಸುತ್ತು ಉಳಿದಿರುವಂತೆ ಅವರು ಎರಡನೇ ಸ್ಥಾನಕ್ಕೇರಿದರು.

ಒಂದು ಕಡೆ ವಿಶ್ವ ಚಾಂಪಿಯನ್ ಗುಕೇಶ್ ಹಿನ್ನಡೆ ಮುಂದುವರಿದರೆ, ಇನ್ನೊಂದು ಕಡೆ ಪ್ರಜ್ಞಾನಂದ ಅವರು ಈ ಟೂರ್ನಿಯಲ್ಲಿ 15 ಅಂಕ ಗಳಿಸಿ ಏಕಾಂಗಿಯಾಗಿ ಎರಡನೇ ಸ್ಥಾನದಲ್ಲಿದ್ದಾರೆ. 15.5 ಅಂಕ ಗಳಿಸಿರುವ ಅಮೆರಿಕದ ವೆಸ್ಲಿ ಸೊ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಇಲ್ಲಿ ಗೆದ್ದಲ್ಲಿ ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ ಎಂಬ ಹಿರಿಮೆ ಪ್ರಜ್ಞಾನಂದ ಅವರದಾಗಲಿದೆ. ಸೊ, ಪ್ರಜ್ಞಾನಂದ ಜೊತೆಗೆ ಮೂರನೇ ಸ್ಥಾನದಲ್ಲಿರುವ ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ (14.5) ಅವರಿಗೂ ಪ್ರಶಸ್ತಿ ಅವಕಾಶ ಜೀವಂತವಾಗಿದೆ. ಸೊ ಹಾಗೂ ಅಲಿರೇಝಾ ಸಹ ಈ ಟೂರ್ನಿಯಲ್ಲಿ ಈವರೆಗೆ ಚಾಂಪಿಯನ್ ಆಗಿಲ್ಲ.

ವೆಸ್ಲಿ ಸೊ ಇನ್ನೊಂದು ಪಂದ್ಯದಲ್ಲಿ ಮ್ಯಾಗ್ನಸ್ ಕಾರ್ಲ್‌ಸನ್ (10) ಅವರನ್ನು 'ಆರ್ಮ್‌ಗೆಡನ್'ನಲ್ಲಿ ಸೋಲಿಸಿದರು.

ಪ್ರಜ್ಞಾನಂದ ಅಂತಿಮ ಸುತ್ತಿನಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ (11) ಅವರನ್ನು ಎದುರಿಸಲಿದ್ದಾರೆ. ಅಗ್ರಸ್ಥಾನದಲ್ಲಿರುವ ಸೋ ಅವರು ಅಲಿರೇಝಾ ಅವರಿಗೆ ಮುಖಾಮುಖಿಯಾಗಿದ್ದಾರೆ. ಎರಡೂ ಪಂದ್ಯ ನಿರ್ಣಾಯಕವಾಗಿವೆ.

ಬಿಬಿಸಾರಾಗೆ ಪ್ರಶಸ್ತಿ: ಮಹಿಳೆಯರ ವಿಭಾಗದಲ್ಲಿ ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ (16.5 ಅಂಕ) ಇನ್ನೂ ಒಂದು ಸುತ್ತು ಉಳಿದಿರುವಂತೆ ಪ್ರಶಸ್ತಿ ಖಚಿತಪಡಿಸಿಕೊಂಡರು. ಹಾಲಿ ವಿಶ್ವ ಬ್ಲಿಟ್ಝ್ ಚಾಂಪಿಯನ್ ಆಗಿರುವ ಅವರು ಟೈಬ್ರೇಕರ್‌ನಲ್ಲಿ 2025ರ ಚಾಂಪಿಯನ್, ಉಕ್ರೇನ್‌ನ ಅನ್ನಾ ಮುಝಿಚುಕ್ (12) ಅವರಿಗೆ ಮಣಿದರೂ ಅದರಿಂದ ಅವರ ಅಗ್ರಸ್ಥಾನವು ಕೊನೆಯ ಸುತ್ತಿನಲ್ಲೂ ಅಬಾಧಿತವಾಗಿ ಉಳಿಯಲಿದೆ.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331







ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

WANTED BDA & BDA Approved Sites Anjanapura, Banashankari 6th Stage, Jp-Nagar 8th/ 9th Phase, Kanakapura Road, NPKL, SMV Layout ANY MEASUREMENT CONTACT: 9845298419

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

"BUYING AND Selling of Residency/ Commercial/ Industrial Properties in Bangalore only genuine Buyers/ Sellers Call: 9845286505"

SALE, BSK 6th stage, 4th 'B' Block, BDA 50x80`West facing nextto corner semi-commercial, Owner Meeting: 9620341818

"AVAILABLE" BANASHANKARI 6th Stage, 4th Block Maruthi Layout, 30x46,South Facing Genuine Buyers Contact: 9900097239

BTM Layout

BTM 6TH Stage BDA 20x33 Building, Sale 5 Floor 1.4L Monthly Rent, 2.40Cr. Owner: 9900966336

Basaweshwaranagar

BASVESHWARNAGAR 40×60 South Rajajinagar 45×90, 50×80 West, East Commercial Site and Building Immediate Sale 8660075308

Girinagar

30X55 (WEST) Girinagar 3rd Phase, Close to 50 Feet Road, Excellent Location. Clear Documents. 24,000/ SFT. GK- 94480-56369/ 80500-99266

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Multiple Locations

AMRUTHHALLI 30/40 North facing site, 11,999/- RMV Extentions south facing site 30/50, 27,999/-. Phone No. 9844322310/ 8217007930.

Nelamangala

BYRASHETTYHALLI VILLAGE. Aiswarya County. BMRDA. 40X60. East facing site for sale. loan available. Owner. 9620117773

Vidyaranyapura

NEAR SAMBRAM College Best County 2, DC Conversion A/E Katha 40x60 WF, 37.5x40 WF BBMP B/E Katha, 2 BHK Rent, 1st, 2nd, 3rd New Building with Lift Sale: 8296895858

Thanisandra

SALE BDA 'PURELY RESIDENTIAL' Site 30x50 Behind Purvankara Atmosphere Thanisandra, 3km from Ring Road, Manyata. 2.20Cr. 9845442054

Uttarahalli

UTTARAHALLI PLOT Sale 55'x65' BBMP A Khatha. North Facing, Lake View Rs.15,000/- sft. Call: 6362348146.

Vishweshwariah Layout

"VISVESHWARAIAH LAYOUT 6th Block 40x60 South facing Site sale Good Location Genuine Buyers Contact: 9845500019/ 7019314962"

AVAILABLE VISHWESHWARAIAH Layout 6th Block N/W Corner 1230Sqft Opp Park, Near 100ft Road, Good Location 40ft Road: 8553908699

SITE FOR SALE 50x80 West Facing Residential Vishveshwaraiya Layout, 8th Block Genuine Buyer Call 8105688602

BDA SITE SALE 660 Sqft NORTH WEST CORNER SMV LAYOUT RATE 1.25 CR. CONTACT: 9108133156

VISHWESHWARAIAH 3RD Block 20x30 EF 3rd Floor House Rs. 1,25,00000/- Kempegowda 2nd Block Site. 491 20x30 West Rs. 57,00000/- Negotiable: 9845793121

Sahakarnagar

SAHAKARNAGAR SALE 2400SQFT SOUTH FACING Site Clear Title, 23rd Cross 7th Main. Immediate Sale: 9880515577

Commercial Building

Malleshwaram

FULLY FURNISHED 16,000sft. A/C Showroom For RENT/SALE On Prime Busy Commercial Area, 8th Cross, Malleshwaram. 9845358544/ 9448477419

Commerical

Banashankari

BANASHANKARI 6TH stage. 50x80. Commercial 100 Feet Road. And 40x60. Corners Sites For Sale. -9916817739

Flat

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

House

Kolar

3 FLOOR Building house for sale. Rs. 95 Lakhs (Negotiable). Location: Karahalli, Bangarpet Taluk. Brokers Excuse. Contact:- 9916499979/ 8746929435.

Padmanabha Nagar

HOUSE FOR SALE A KATHA AND E-SWATHU.
Total Area 1800 sqft
7 Nos 2BHk house with fully furnished in chikkalasandra Near kidney Foundation North Facing. Ground floor Car parking, Lift,1Bore well, cauvery water
Contact: 7760835596, 9606991860

Industrial & Factory

Hoskote

PRIME INDUSTRIAL LAND FOR SALE
1 Acre at KIADB Hosakote.
Call: 7795990009 9743508995

Residential/ Commercial

Multiple Locations

LANDS AVAILABLE FOR SALE
BIDADI, RAMANAGAR, CHANNAPATTANA, NELAMANGALA, DEVANAHALLI, DABASPETE, STRR Road, HOSAKOTE
Extent of 1, 2, 5, 25 upto 50 ACRES
Suitable For Warehouse, Industrial, Villa Plots, and Farmhouse.
CALL: 9845 488 488

Old Madras Road

FOR SALE A KHATA OMR MAIN ROAD FACING SHOWROOM/ COMMERCIAL PROPERTY. SUITABLE FOR OFFICE/INSTITUTE/BPO/CLINIC CONTACT 9948661379

REAL ESTATE BUYING

Sites

Vijayanagar

VIJAYANAGARA/ M C layout Wanted 60x40/ 40x50 vacant site/ building, East/ North facing only. contact immediately 9901985699. No brokers please

ಕ್ಲಾಸಿಫೈಡ್ಸ್ WEEKEND CORNER

Vishweshwariah Layout

BUYING/ SELLING 20x30,30x40,40x60 50x80 BDA sites VISHVESHWARAIAH LAYOUT,BSK 6th-stage KEMPEGOWDA- LAYOUT.Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

BASAVANAGUDI NORTH East Corner Office Space Available for Rent on the 1st, 2nd,and 3rd floors Near Kalidasa Circle Bus Stand.Suitable for offices.Contact: 9900555550

House

RENT- NEWLY Built Duplex 4BHK House with Lift, Modular Kitchen, Carparking, Semi-furnished, Veg only. @ BCMC Layout Close to Vajarahalli Metro Station Kanakapura Road. Call:9845050263

Flats

FULLY FURNISHED Senior Living in Devanahalli. 2BHK. 33K including maintenance. 9482562481

SOCIAL SERVICES

Old Age Home

SUKHSHANTHI LUXURY Retirement Home, near Sarjapura Bangalore Rs. 22,575/- monthly Rs. 1,500 per day furnished accommodation. 3 Meals, 24X7 Nurse, Ambulance. Call: 9341289357



ಪಿಎಚ್.ಡಿ ಪದವಿ ಪ್ರದಾನ

ಗಣಿತಶಾಸ್ತ್ರದಲ್ಲಿ
ಶ್ರೀ ಚೌಡಪ್ಪ ಮಣ್ಣೆ ಆರ್ ಗೆ
ಪಿಎಚ್.ಡಿ. ಪದವಿ ಪ್ರದಾನ

ಬೆಂಗಳೂರು ಗ್ರಾ.ಜಿಲ್ಲೆ ನೆಲಮಂಗಲ ತಾಲ್ಲೂಕಿನ ಮಣ್ಣೆ (ಮಾನ್ಯಪುರ) ಗ್ರಾಮದ ಶ್ರೀ ರಾಮಾಂಜನೇಯ್ಯ (ಪಣಮದಲ ರಾಮಣ್ಣ) ಮತ್ತು ಸರೋಜಮ್ಮ ದಂಪತಿಯ ಮಗನಾದ ಶ್ರೀ ಚೌಡಪ್ಪ ಮಣ್ಣೆ ಆರ್ ರವರು ಗಣಿತಶಾಸ್ತ್ರ ವಿಷಯದಲ್ಲಿ ಮಂಡಿಸಿದ "ಎಕ್ಸ್‌ಟೆನ್ಷನ್ ಆಫ್ ಕ್ಲಾಸಿಕಲ್ ಮೀನ್ಸ್ ಫಾರ್ ದಿ ಸ್ಟಡಿ ಆಫ್ ಮ್ಯಾಥಮೆಟಿಕಲ್ ಇನ್ ಈಕ್ವಾಲಿಟಿಸ್" ಎಂಬ ಪ್ರಬಂಧಕ್ಕೆ ಪ್ರತಿಷ್ಠಿತ ರೇವ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿಯನ್ನು ನೀಡಿದೆ. ಡಾ. ಉದಯ ಕುಮಾರ ಮತ್ತು ಡಾ. ಶ್ರೀನಿವಾಸ ರೆಡ್ಡಿ ರವರ ಮಾರ್ಗದರ್ಶನದಲ್ಲಿ ಸಂಶೋಧನೆಯ ಪ್ರಬಂಧವನ್ನು ಮಂಡಿಸಿದ್ದಾರೆ. ಇವರು ಪ್ರಸ್ತುತ ಚಿಕ್ಕಬಳ್ಳಾಪುರದಲ್ಲಿ ಬಿಜಿಎಸ್ ಸಂಸ್ಥೆಯ ಎಸ್.ಜೆ.ಸಿ. ತಾಂತ್ರಿಕ ಮಹಾವಿದ್ಯಾಲಯದ ಗಣಿತ ಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

BUSINESS

Business to Business

Finance

GOLDEN OPPORTUNITY Property Investors Fully Secured Layout Project Best Returns 1year Project. Genuine's Only. 9902678314

Business Offers

Machinery & Tools

MACHINERY FOR SALE: Wire Drawing Unit, Binding Wire Unit, Wire Nails Unit of 10 Machineries, Lathe, Drill etc., Contact: 76763-73976

MORE **Classifieds** IN MAIN ISSUE



email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಹಸಿರು ವಸತಿ ಪ್ರದೇಶಗಳತ್ತ ಬೆಂಗಳೂರಿಗರು!

ಜನದಟ್ಟಣೆಯಿಂದ ಮುಕ್ತಿ ಪಡೆದು ಹೊರವಲಯಗಳತ್ತ ಮುಖ ಮಾಡುತ್ತಿರುವ ಐಟಿ-ಬಿಟಿ ಜನ, ಬೆಂಗಳೂರು ಸುತ್ತಲಿನ ತಾಲ್ಲೂಕುಗಳ ಜಮೀನುಗಳೇ ಹಾಟ್‌ಫೇವರೆಟ್!



ಬೆಂಗಳೂರು: ಒಂದೆಡೆ ಮುಗಿಲೆತ್ತರಕ್ಕೆ ಬೆಳೆಯುತ್ತಿರುವ ಬಹುಮಹಡಿ ಕಟ್ಟಡಗಳು, ಇನ್ನೊಂದೆಡೆ ವಾಹನಗಳ ಹಾರನ್ ಸದ್ದು. ಇದರ ನಡುವೆ ಉಸಿರುಗಟ್ಟಿಸುವ ವಾತಾವರಣ. ಇದು ಸದ್ಯ ಸಿಲಿಕಾನ್ ಸಿಟಿ ಬೆಂಗಳೂರಿನ ಬಹುತೇಕ ವಲಯಗಳ ಚಿತ್ರಣ. ಆದರೆ, ಕಳೆದ ಕೆಲವು ವರ್ಷಗಳಲ್ಲಿ ಬೆಂಗಳೂರಿಗರ ಆಲೋಚನಾ ಲಹರಿಯಲ್ಲಿ ಭಾರಿ ಬದಲಾವಣೆಯಾಗಿದೆ. ಸಾಂಕ್ರಾಮಿಕ ರೋಗಗಳ ಭೀತಿ, ಹೆಚ್ಚುತ್ತಿರುವ ವಾಯು ಮಾಲಿನ್ಯ ಮತ್ತು ಜಾಗತಿಕ ತಾಪಮಾನದ ಪರಿಣಾಮವಾಗಿ ನಗರದ ಜನತೆ ಈಗ ಕಾಂಕ್ರೀಟ್ ಕಾಡುಗಳಿಂದ ಬೇಸತ್ತು, ನೆಮ್ಮದಿಯ ಉಸಿರಾಟಕ್ಕಾಗಿ 'ಹಸಿರು ವಲಯ'ಗಳ ಕಡೆಗೆ ಮುಖ ಮಾಡುತ್ತಿದ್ದಾರೆ.

ನಗರದ ಹೃದಯಭಾಗದಲ್ಲಿ ಗದ್ದಲದ ಮಧ್ಯೆ ಜೀವಿಸುವುದಕ್ಕಿಂತ, ಸ್ವಲ್ಪ ದೂರವಾದರೂ ಸರಿ, ಹಸಿರಿನಿಂದ ಕಂಗೊಳಿಸುವ ವಸತಿ ಪ್ರದೇಶಗಳಲ್ಲಿ ಸ್ವಂತ ಮನೆ ಹೊಂದುವುದು ಇಂದಿನ ಸಾರ್ವಜನಿಕರ ಕ್ರೇಜ್ ಆಗಿ ಮಾರ್ಪಟ್ಟಿದೆ. ರಿಯಲ್ ಎಸ್ಟೇಟ್ ಮಾರುಕಟ್ಟೆಯಲ್ಲಿ ಹಸಿರು ಭೂಮಿ ಮತ್ತು ಪರಿಸರಸ್ನೇಹಿ ವಿಲ್ಲಾಗಳಿಗೆ ಬೇಡಿಕೆ ಗಗನಕ್ಕೇರಿದೆ.

ಬದಲಾಗುತ್ತಿರುವ ಆದ್ಯತೆಗಳು: ಕೆಲವು ವರ್ಷಗಳ ಹಿಂದೆ ಐಟಿ ಬಿಟಿ ಉದ್ಯೋಗಿಗಳು ಕಚೇರಿಗಳಿಗೆ ಹತ್ತಿರವಿರುವ ಸೆಂಟ್ರಲ್ ಬ್ಯುಸಿನೆಸ್ ಡಿಸ್ಟ್ರಿಕ್ಟ್ ಅಥವಾ ವೈಟ್‌ಫೀಲ್ಡ್, ಎಲೆಕ್ಟ್ರಾನಿಕ್ ಸಿಟಿಯಂತಹ ಪ್ರಮುಖ ವಾಣಿಜ್ಯ ಹಬ್‌ಗಳಲ್ಲಿ ಫ್ಲಾಟ್‌ಗಳನ್ನು ಖರೀದಿಸಲು ಮುಗಿಬೀಳುತ್ತಿದ್ದರು. ಆದರೆ ಈಗ ಚಿತ್ರಣ ಬದಲಾಗಿದೆ. ಕೆಲಸದ ಜೊತೆಗೆ ದೈಹಿಕ ಮತ್ತು ಮಾನಸಿಕ ಆರೋಗ್ಯ ಮುಖ್ಯ ಎಂಬುದನ್ನು ಅರಿತಿರುವ ಜನತೆ, ವಾರಾಂತ್ಯದಲ್ಲಿ ಮಾತ್ರವಲ್ಲದೆ ಪ್ರತಿದಿನವೂ ಹಸಿರಿನ ಮಧ್ಯೆ ಕಳೆಯಲು ಬಯಸುತ್ತಿದ್ದಾರೆ. ರಿಯಲ್ ಎಸ್ಟೇಟ್ ತಜ್ಞರ ಪ್ರಕಾರ, ಪ್ರಸ್ತುತ ಶೇ.60ಕ್ಕಿಂತ ಹೆಚ್ಚು ಮನೆ ಖರೀದಿದಾರರು ವಿಶಾಲವಾದ ಉದ್ಯಾನವನಗಳು, ನೈಸರ್ಗಿಕ ಕೆರೆಗಳು ಮತ್ತು ಮರಗಿಡಗಳಿಂದ ಆವೃತವಾದ ಲೇಔಟ್‌ಗಳನ್ನು ಮೊದಲ ಆದ್ಯತೆಯಾಗಿ ಆರಿಸಿಕೊಳ್ಳುತ್ತಿದ್ದಾರೆ. 'ನಮಗೆ ಕೇವಲ ನಾಲ್ಕು ಗೋಡೆಗಳ ಮನೆ ಬೇಡ, ಮುಂಜಾನೆ ಎದ್ದ ತಕ್ಷಣ ಹಕ್ಕಿಗಳ ಚಿಲಿಪಿಲಿ ಸದ್ದು ಕೇಳುವ, ಶುದ್ಧ ಗಾಳಿ ಸಿಗುವ ಪರಿಸರ ಬೇಕು' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಇತ್ತೀಚೆಗೆ ಕಾಡುಗೋಡಿ ಸಮೀಪದ ಹಸಿರು ವಲಯದಲ್ಲಿ ಹೂಡಿಕೆ ಮಾಡಿದ ಸಾಫ್ಟ್‌ವೇರ್ ಉದ್ಯೋಗಿ ರಮೇಶ್ ನಾಯಕ್.

ವಿಲ್ಲಾಗಳ ಆಕರ್ಷಣೆ: ಜನರ ಬೇಡಿಕೆಗೆ ಅನುಗುಣವಾಗಿ ಲ್ಯಾಂಡ್ ಡೆವಲಪರ್‌ಗಳು ಸಹ ಹಸಿರು ಪರಿಸರಕ್ಕೆ ಹೆಚ್ಚಿನ ಆದ್ಯತೆ ನೀಡಿ, ಅಪಾರ್ಟ್ಮೆಂಟ್, ವಿಲ್ಲಾಗಳ ನಿರ್ಮಾಣಕ್ಕೆ ಮುಂದಾಗುತ್ತಿದ್ದಾರೆ. ಬೆಂಗಳೂರು ಹೊರವಲಯದ ಬಹುತೇಕ ಪ್ರದೇಶಗಳಲ್ಲಿ ಹೆಚ್ಚಿನ ಪ್ರದೇಶದಲ್ಲಿ ಹಸಿರು ವಾತಾವರಣಕ್ಕೆ ಆದ್ಯತೆ ನೀಡಲಾಗುತ್ತಿದೆ. ವಿಶೇಷವಾಗಿ , ವಿಲ್ಲಾಗಳ ಸುತ್ತ ಹಸಿರು ಗಿಡಗಳು, ಪ್ರತ್ಯೇಕ ಗಾರ್ಡನ್ ಸೌಕರ್ಯವನ್ನು ಒದಗಿಸಲಾಗುತ್ತಿದೆ. ನಗರದಿಂದ ದೂರದ ಪ್ರದೇಶದಲ್ಲಿ ಖಾಸಗಿ ವಿಲ್ಲಾಗಳ ನಿರ್ಮಾಣವೂ ಹೆಚ್ಚಾಗಿದೆ. ಜನ ನಗರ ಪ್ರದೇಶಗಳನ್ನು ಸಂಪೂರ್ಣವಾಗಿ ದೂರವಿಟ್ಟು, ಪರಿಸರದ ಮಡಿಲನ್ನು ಹೆಚ್ಚು ಇಷ್ಟ ಪಡುತ್ತಿರುವುದು ಈ ಟ್ರೆಂಡ್ ಸೃಷ್ಟಿಯಾಗಲು ಮುಖ್ಯ ಕಾರಣ. ಜತೆಗೆ, ಬೇಡಿಕೆಗೆ ತಕ್ಕಂತೆ ಬೆಂಗಳೂರು ಸುತ್ತ ವಿಲ್ಲಾಗಳ ದೊಡ್ಡ ಮಾರುಕಟ್ಟೆ ಸೃಷ್ಟಿಯಾಗಿದೆ.



ಗ್ರೀನ್ ಹಬ್‌ಗಳ ಉದಯ: ಬೆಂಗಳೂರಿನ ಹೊರವಲಯಗಳು ಈಗ ಹೊಸ 'ಗ್ರೀನ್ ಹಬ್'ಗಳಾಗಿ ರೂಪಾಂತರಗೊಳ್ಳುತ್ತಿವೆ. ಇದರಲ್ಲಿ ಪ್ರಮುಖವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಏರ್‌ಪೋರ್ಟ್ ಪ್ರದೇಶ, ಕನಕಪುರ ರಸ್ತೆ, ನೆಲಮಂಗಲ ಪ್ರದೇಶಗಳು ಗುರುತಿಸಿಕೊಂಡಿವೆ. ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪವಿದ್ದರೂ, ಇಲ್ಲಿನ ವಿಶಾಲವಾದ ಕೃಷಿ ಭೂಮಿಗಳು ಮತ್ತು ತೋಟದ ಮನೆಗಳು ಜನರನ್ನು ಆಕರ್ಷಿಸುತ್ತಿವೆ. ವೈಟ್‌ಫೀಲ್ಡ್ ಐಟಿ ವಲಯಕ್ಕೆ ಹತ್ತಿರವಿರುವ ಕಾರಣ, ಹಸಿರು ಪರಿಸರ ಇಷ್ಟಪಡುವ ಟೆಕ್ಕಿಗಳಿಗೆ ಇದು ನೆಚ್ಚಿನ ತಾಣವಾಗಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹತ್ತಿರವಿರುವ ಪ್ರದೇಶಗಳು ಹಾಗೂ ಬಿಡದಿ ಬಳಿ ಸರ್ಕಾರ ಯೋಜಿಸುತ್ತಿರುವ ಹೊಸ ಸ್ಯಾಟಲೈಟ್ ಟೌನ್ ವ್ಯಾಪ್ತಿಯಲ್ಲಿ ನೈಸರ್ಗಿಕ ಹಸಿರು ಭೂಮಿಗೆ ಬೇಡಿಕೆ ತೀವ್ರವಾಗಿದೆ.

ವರ್ಕ್ ಫ್ರಮ್ ಎನಿವೇರ್' ಮತ್ತು ಹೈಬ್ರಿಡ್ ಮಾದರಿಯ ಕೊಡುಗೆ : ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೈಬ್ರಿಡ್ ಕೆಲಸದ ಸಂಸ್ಕೃತಿ (ವಾರದಲ್ಲಿ ಎರಡು ಅಥವಾ ಮೂರು ದಿನ ಮಾತ್ರ ಕಚೇರಿಗೆ ಹೋಗುವುದು) ಮುಂದುವರಿದಿರುವುದು ಈ ಟ್ರೆಂಡ್‌ಗೆ ಮತ್ತಷ್ಟು ವೇಗ ನೀಡಿದೆ. ಪ್ರತಿದಿನ ಕಚೇರಿಗೆ ಪ್ರಯಾಣಿಸುವ ಅನಿವಾರ್ಯತೆ ತಪ್ಪಿರುವುದರಿಂದ, ನಗರದ ಗದ್ದಲದಿಂದ 20-30ಕಿಲೋಮೀಟರ್ ದೂರವಿರುವ ಪ್ರಶಾಂತ ಪ್ರದೇಶಗಳಲ್ಲಿ ವಾಸಿಸುವುದು ಜನರಿಗೆ ಸುಲಭವಾಗಿದೆ. ವಿಶಾಲವಾದ ಜಾಗ ದೊರೆಯುವುದರಿಂದ ಮನೆಯಲ್ಲೇ ಕಚೇರಿಯ ವಾತಾವರಣ ಸೃಷ್ಟಿಸಿಕೊಳ್ಳಲು ಮತ್ತು ಬಿಡುವಿನ ವೇಳೆಯಲ್ಲಿ ಕೈದೋಟದಲ್ಲಿ ತೊಡಗಿಸಿಕೊಳ್ಳಲು ಇದು ಸಹಕಾರಿಯಾಗಿದೆ.


NISCHITHA
PROPERTIES Pvt.Ltd.
More Than Real Estate
Build your Legacy
PREMIUM & LUXURY
PLOTS FOR SALE
@ NORTH BENGALURU
LIVE GRAND. INVEST WISE.
NISCHITHA
JAI DHAMA
Abode of victory
EARLY BIRD OFFER
FOR FIRST 20 PLOTS
₹300/*-
per sqft
OFF
LIMITED
PERIOD
OFFER
₹3,800*
per sqft
NISCHITHA
JAI DHAMA
BMRDA
DPA
Approved
SCAN ME
FOR LOCATION
ಉತ್ತಮ ಭವಿಷ್ಯಕ್ಕಾಗಿ ವಿನ್ಯಾಸಗೊಳಿಸಲಾಗಿದೆ
ಮಕ್ಕಳ ಆಟದ ಪ್ರದೇಶ
ಕ್ರಿಕೆಟ್ ಪಿಚ್
ಉದ್ಯಾನವನ
ನೆಲದಡಿ ವಿದ್ಯುತ್ ವ್ಯವಸ್ಥೆ
ಸ್ಥಳದ ಮುಖ್ಯ ವೈಶಿಷ್ಟ್ಯಗಳು
ದೊಡ್ಡಬಳ್ಳಾಪುರ ಹೆದ್ದಾರಿಯಿಂದ ಕೇವಲ 200 ಮೀಟರ್
ಚಿಕ್ಕ ಮಧುರೇ ದೇವಸ್ಥಾನದ ಎದುರು
ಶಾಲೆ, ಕಾಲೇಜು ಮತ್ತು ಆಸ್ಪತ್ರೆಗಳ ಸಮೀಪ
ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಪ್ರದೇಶ
ಈ ಯೋಜನೆ ಯಾಕೆ ಉತ್ತಮ ಆಯ್ಕೆ?
ನೊಂದಣಿಗೆ ಸಿದ್ಧ
ನಿಮ್ಮ ಕನಸಿನ ಮನೆಗೆ ಅತ್ಯುತ್ತಮ ಸ್ಥಳ
ನಿರ್ಮಾಣಕ್ಕೆ ಸೂಕ್ತ
ಹೂಡಿಕೆಗೆ ಅತ್ಯುತ್ತಮ
ಉತ್ತಮ ಬಾಡಿಗೆ ಆದಾಯದ ಅವಕಾಶ
ಇಂಟರ್ಮಿಡಿಯೇಟ್ ರಿಂಗ್ ರೋಡ್ (IRR) ಸಮೀಪ
1* 2 3 4 5 6 7 8 9
21* 20 19 18 17 16 15 14 13 12 11 10
22* 23 24 25 26 27 28 29 30 31 32 33
ಕ್ವಾಂಟಂ ಸಿಟಿ & ಕ್ವಿನ್ ಸಿಟಿ
ಈ ಯೋಜನೆಯ ಸುತ್ತಮುತ್ತ ಬರಲಿರುವ ಭವಿಷ್ಯದ ಪ್ರಾಜೆಕ್ಟ್‌ಗಳು
ಹೂಡಿಕೆಗಾಗಿ ಅತ್ಯುತ್ತಮ ಆಯ್ಕೆ
100% ಕಾನೂನುಬದ್ಧ ದಾಖಲೆಗಳು
ನಂಬಿಕಸ್ಥ ಡೆವಲಪರ್
ಬ್ಯಾಂಕ್ ಸಾಲ ಸೌಲಭ್ಯ ಲಭ್ಯವಿದೆ
BOOK YOUR
PLOT TODAY!
+91 9164 00 9004
VISIT OUR WEBSITE
www.nischithaproperties.com